ಮಂಗಳವಾರ, ಸೆಪ್ಟೆಂಬರ್ 28, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 270 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಹಲವು ಬಾರಿ ಕೆಮ್ಮಿಗೆ ಕಾರಣ ಕಂಡುಹಿಡಿಯುವುದು ಸಾಧ್ಯವಾಗದೆ ಹೋಗಬಹುದು. ಆದರೆ ಕುಶಲ ವೈದ್ಯನೊಬ್ಬ ರೋಗಿಗೆ ಪ್ರಶ್ನೆಗಳನ್ನು ಕೇಳಿ ಕೇಳಿ ಕಾರಣವನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಗಬಹುದು.



ಆಳ-ಅಗಲ ರೈತ ಹೋರಾಟಕ್ಕೆ 10 ತಿಂಗಳು
ಜೆಡಿಎಸ್‌ನಿಂದ 'ಕಾರ್ಪೊರೇಟ್' ತರಬೇತಿ 4
ಕೋವಿಡ್: ಮರಣ ಪ್ರಮಾಣ ದರ ಏರಿಕೆ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,077 ▲	17,855 ▲	₹47,750 (ಬೆಂಗಳೂರು)	₹62,400 (ಬೆಂಗಳೂರು)	73.83 ▼

ಕೇಂದ್ರದ ವಿರುದ್ಧದ ಪ್ರತಿಭಟನೆಗೆ 10 ತಿಂಗಳು ● ಕೆಲವು ರಾಜ್ಯಗಳು ಬಂದ್ ● ಹಲವೆಡೆ ಪ್ರತಿಭಟನೆ

ದೇಶದೆಲ್ಲೆಡೆ ರೈತರ ಆಕ್ರೋಶ

ನವದೆಹಲಿ/ಚಂಡೀಗಡ (ಪಿಟಿಐ): ಕೇಂದ್ರದ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿರುವ ರೈತರು ನೀಡಿದ ಬಂದ್ ಕರೆಯಿಂದಾಗಿ ರಾಷ್ಟ್ರ ರಾಜಧಾನಿ ದೆಹಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸೋಮವಾರ ಜನಜೀವನ ಅಸ್ತವ್ಯಸ್ತಗೊಂಡಿದೆ. ದೆಹಲಿಯನ್ನು ಸುತ್ತಲಿನ ರಾಜ್ಯಗಳ ಜತೆಗೆ ಸಂಪರ್ಕಿಸುವ ಹೆದ್ದಾರಿಗಳಲ್ಲಿ ಭಾರಿ ವಾಹನ ದಟ್ಟಣೆ ಕಂಡು ಬಂತು.

ಪಂಜಾಬ್, ಹರಿಯಾಣ, ಉತ್ತರ ಪ್ರದೇಶದ ಹಲವು ಜಿಲ್ಲೆಗಳಲ್ಲಿ ಭಾರತ್ ಬಂದ್‌ಗೆ ಕರೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಸಂಚಾರವನ್ನು ತಡೆಯಲಾಗಿದೆ. ಉತ್ತರ ಭಾರತದ ಹಲವೆಡೆ ರೈಲು ಸಂಚಾರಕ್ಕೂ ಅಡ್ಡಿ ಉಂಟಾಗಿತ್ತು. 25ಕ್ಕೂ ಹೆಚ್ಚು ರೈಲುಗಳನ್ನು ರದ್ದುಪಡಿಸಲಾಗಿತ್ತು ಎಂದು ಭಾರತೀಯ ರೈಲ್ವೆ ಹೇಳಿದೆ.

ರೈತರು ತಮ್ಮ ಟ್ರ್ಯಾಕ್ಟರ್‌ಗಳನ್ನೇ ರಸ್ತೆಗೆ ಅಡ್ಡವಾಗಿ ಇರಿಸಿ ರಸ್ತೆ ತಡೆ ನಡೆಸಿದ್ದಾರೆ. ಕೇಂದ್ರ ಸರ್ಕಾರದ ವಿರುದ್ಧದ ಘೋಷಣೆ ಹಲವು ರಾಜ್ಯಗಳಲ್ಲಿ ಮೊಳಗಿದೆ. ಯಾವುದೇ ಸಂಘರ್ಷ ಎಲ್ಲಿಯೂ ನಡೆದಿಲ್ಲ. ಪ್ರತಿಭಟನೆಯು ಶಾಂತಿಯುವಾಗಿಯೇ ಮುಗಿಯಿತು. ಕೇರಳ, ಬಿಹಾರ, ಜಾರ್ಖಂಡ್, ಪಶ್ಚಿಮ ಬಂಗಾಳ ಮತ್ತು ಒಡಿಶಾದ ವಿವಿಧ ಭಾಗಗಳಲ್ಲಿ ಪ್ರತಿಭಟನೆ ತೀವ್ರವಾಗಿತ್ತು.



ರೈತ ಸಂಘಟನೆಗಳು ಕರೆ ನೀಡಿದ್ದ ಭಾರತ್ ಬಂದ್ ಪರಿಣಾಮ ದೆಹಲಿ–ಗುರುಗ್ರಾಮ ಎಕ್ಸ್‌ಪ್ರೆಸ್ ಹೆದ್ದಾರಿಯ ಸಿರ್ಹಾಲ್ ಟೋಲ್ ಪ್ಲಾಜಾದ ಬಳಿ ಸೋಮವಾರ ಭಾರಿ ವಾಹನ ದಟ್ಟಣೆ ಉಂಟಾಗಿತ್ತು –ಪಿಟಿಐ ಚಿತ್ರ

ಜಮ್ಮುವಿನಲ್ಲಿಯೂ ಪ್ರತಿಭಟನೆ ನಡೆದಿದೆ. ರಾಜಸ್ಥಾನದ ಹಲವೆಡೆ ಬಂದ್ ಪರಿಣಾಮ ಕಾಣಿಸಿದೆ. ಕಾಂಗ್ರೆಸ್, ಎಡಪಕ್ಷಗಳು ಮತ್ತು ಟಿಡಿಪಿಯ ಕಾರ್ಯಕರ್ತರು ತೆಲಂಗಾಣದ ವಿವಿಧೆಡೆ ಪ್ರತಿಭಟನೆಗಳನ್ನು ನಡೆಸಿದ್ದಾರೆ. ಆಂಧ್ರ ಪ್ರದೇಶದಲ್ಲಿ ಸರ್ಕಾರವೇ ಬಂದ್‌ಗೆ ಬೆಂಬಲ ಘೋಷಿಸಿತ್ತು.

ಪ್ರಧಾನಿ ನರೇಂದ್ರ ಮೋದಿ ಅವರ ತವರು ರಾಜ್ಯ ಗುಜರಾತ್‌ನಲ್ಲಿ ಬಂದ್ ನಡೆದಿಲ್ಲ. ಆದರೆ, ಹಲವೆಡೆ ರೈತರು ಪ್ರತಿಭಟನೆ ದಾಖಲಿಸಿದ್ದಾರೆ. ರಸ್ತೆ ತಡೆ ನಡೆಸಿ ವಾಹನ ಸಂಚಾರಕ್ಕೆ ಅಡ್ಡಿಪಡಿಸಿದ್ದಾರೆ. ಸೂರತ್–ಮುಂಬೈ ಹೆದ್ದಾರಿ, ಅಹಮದಾಬಾದ್ – ರಾಜಕೋಟ್ ಹೆದ್ದಾರಿಯಲ್ಲಿಯೂ ರೈತರು ಪ್ರತಿಭಟನೆ ನಡೆಸಿದರು.

ಸಂಯುಕ್ತ ಕಿಸಾನ್ ಮೋರ್ಚಾ ನೇತೃತ್ವದಲ್ಲಿ ರೈತರ 40 ಸಂಘಟನೆಗಳು ಕೃಷಿ ಕಾಯ್ದೆಗಳ ವಿರುದ್ಧ ನಡೆಸುತ್ತಿರುವ ಪ್ರತಿಭಟನೆಗೆ 10 ತಿಂಗಳು ತುಂಬಿದ ಸಂದರ್ಭದಲ್ಲಿ ಭಾರತ ಬಂದ್‌ಗೆ ಕರೆ ನೀಡಲಾಗಿತ್ತು. ರೈತರ ಸಂಘಟನೆಗಳು ಮತ್ತು ಸರ್ಕಾರದ ನಡುವೆ ಈವರೆಗೆ 11 ಸುತ್ತಿನ ಮಾತುಕತೆಗಳು ನಡೆದಿವೆ. ಆದರೆ, ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಜನವರಿ 22ರ ನಂತರ ಮಾತುಕತೆ ನಡೆದಿಲ್ಲ. ಜನವರಿ 26ರಂದು ರೈತರು ನಡೆಸಿದ ಟ್ರ್ಯಾಕ್ಟರ್ ರ್‍ಯಾಲಿ ಸಂದರ್ಭದಲ್ಲಿ ವ್ಯಾಪಕ ಹಿಂಸಾಚಾರವೂ ನಡೆದಿತ್ತು.

ರಾಜ್ಯದಾದ್ಯಂತ ಅನ್ನದಾತರ ಪ್ರತಿಭಟನೆ

ಬೆಂಗಳೂರು: ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ಸೋಮವಾರ ರಾಜ್ಯದೆಲ್ಲೆಡೆ ಜನಾಕ್ರೋಶ ವ್ಯಕ್ತವಾಯಿತು. ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿದ್ದ ಭಾರತ ಬಂದ್ ಬೆಂಬಲಿಸಿ ಎಲ್ಲೆಡೆ ರಸ್ತೆಗಿಳಿದ ಅನ್ನದಾತರು, ಕೇಂದ್ರದ ವಿರುದ್ಧ ತಮ್ಮ ಸಿಟ್ಟು ಪ್ರದರ್ಶಿಸಿದರು.

ರೈತ ಸಂಘಟನೆಗಳು, ಕನ್ನಡ ಪರ ಸಂಘಟನೆಗಳು, ಪ್ರಗತಿಪರ ಸಂಘಟನೆಗಳು, ಎಡ ಪಕ್ಷಗಳು, ಕಾಂಗ್ರೆಸ್, ಜೆಡಿಎಸ್, ಎಸ್‌ಡಿಪಿಐ ಕಾರ್ಯಕರ್ತರು ಬಂದ್ ಕರೆಯನ್ನು ಬೆಂಬಲಿಸಿ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಿದರು.

6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 3A,5

ಡಿಜಿಟಲ್ ಆರೋಗ್ಯ ಕಾರ್ಡ್ ವಿತರಣೆಗೆ ಪ್ರಧಾನಿ ಚಾಲನೆ

ನವದೆಹಲಿ (ಪಿಟಿಐ): ವ್ಯಕ್ತಿಯ ಆರೋಗ್ಯ ಕುರಿತ ಸಮಗ್ರ ವಿವರಗಳುಳ್ಳ 'ಡಿಜಿಟಲ್ ಆರೋಗ್ಯ ಕಾರ್ಡ್' ವಿತರಿಸುವ 'ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್' ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಸೋಮವಾರ ಚಾಲನೆ ನೀಡಿದರು.

ಈ ಯೋಜನೆಯ ಪ್ರಾಯೋಗಿಕ ಕಾರ್ಯಕ್ರಮವನ್ನು ಮೋದಿ 2020ರ ಆಗಸ್ಟ್ 15ರಂದು ಪ್ರಕಟಿಸಿದ್ದರು. ಅದನ್ನು ಆರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಜಾರಿಗೊಳಿಸಲಾಗಿತ್ತು. ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಆರೋಗ್ಯ ಯೋಜನೆಯ (ಎಬಿ ಪಿಎಂ ಜೆಎವೈ) 3ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಅದನ್ನು ದೇಶವ್ಯಾಪಿ ವಿಸ್ತರಿಸಲಾಗುತ್ತದೆ.

ಜನ್‌ಧನ್, ಆಧಾರ್ ಸಂಖ್ಯೆ ನೋಂದಣಿ ಮಾದರಿಯಲ್ಲಿಯೇ ಜಾರಿಗೊಳ್ಳುವ ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ ವಿಸ್ತೃತ ವಿವರ, ಮೂಲಸೌಲಭ್ಯ ಸೇವೆ ಒದಗಿಸುವ ಗುರಿ ಹೊಂದಿದೆ. ಇದೇ ವೇಳೆ ಆರೋಗ್ಯಕ್ಕೆ ಸಂಬಂಧಿಸಿದ ವ್ಯಕ್ತಿಗತ ವಿವರಗಳನ್ನು ಗೋಪ್ಯವಾಗಿಡಲೂ ಒತ್ತು ನೀಡಲಾಗುತ್ತದೆ.

ನಾಗರಿಕರ ಸಮ್ಮತಿಯನ್ನು ಆಧರಿಸಿ ಆರೋಗ್ಯ ದಾಖಲೆಗಳ ವಿನಿಮಯಕ್ಕೂ ಅವಕಾಶವಿದೆ ಎಂದು ಪ್ರಧಾನಮಂತ್ರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ.

ಈ ಯೋಜನೆಯ ಪ್ರಮುಖ ಅಂಶವೆಂದರೆ ಡಿಜಿಟಲ್ ಆರೋಗ್ಯ ಗುರುತು ಚೀಟಿಯು ವ್ಯಕ್ತಿಯ ಆರೋಗ್ಯ ಖಾತೆಯಾಗಿರಲಿದೆ. ಅದು ಸಮಗ್ರ ಆರೋಗ್ಯ ವಿವರಗಳನ್ನು ಹೊಂದಿರಲಿದೆ. ಇದನ್ನು ಮೊಬೈಲ್ ಅಪ್ಲಿಕೇಷನ್‌ನಲ್ಲೂ ವೀಕ್ಷಿಸಬಹುದು. ಆಧುನಿಕ ಮತ್ತು ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿಗೆ ನೆರವಾಗುವಂತೆ ಆರೋಗ್ಯಸೇವೆ ವೃತ್ತಿಪರ ನೋಂದಣಿ (ಎಚ್‌ಆರ್‌ಆರ್), ಆರೋಗ್ಯ ಸೇವೆಯ ಸೌಲಭ್ಯ ನೋಂದಣಿ (ಎಚ್‌ಎಫ್‌ಆರ್) ಯಲ್ಲಿಯೂ ಈ ವ್ಯಕ್ತಿಗತ ಮಾಹಿತಿಗಳು ಲಭ್ಯವಿರಲಿವೆ.

ಈ ಕ್ರಮವು ವೈದ್ಯರು, ಆಸ್ಪತ್ರೆಗಳು ಹಾಗೂ ಆರೋಗ್ಯ ಸೇವೆ ಸಂಸ್ಥೆಗಳ ಮೇಲಿನ ಒತ್ತಡವನ್ನು ಕುಗ್ಗಿಸಲಿದೆ. ಜನರೂ ಒಂದು ಕ್ಲಿಕ್ ಮೂಲಕ ಆರೋಗ್ಯಸೇವೆ ಸೌಲಭ್ಯ ಪಡೆಯಬಹುದು ಎಂದು ಪ್ರಕಟಣೆ ಹೇಳಿದೆ.

ಕ್ರಾಂತಿಕಾರಕ ಬದಲಾವಣೆ: ಮೋದಿ



'ದೇಶದಲ್ಲಿ ಆರೋಗ್ಯ ಸೇವೆ ಒದಗಿಸುವ ಕಾರ್ಯದಲ್ಲಿ ಈ ಯೋಜನೆಯು ಕ್ರಾಂತಿಕಾರಕ ಬದಲಾವಣೆ ತರಲಿದೆ. ಆರೋಗ್ಯಸೇವಾ ಕ್ಷೇತ್ರವನ್ನು ಬಲಪಡಿಸುವ ಏಳು ವರ್ಷಗಳ ಪ್ರಯತ್ನದ ಫಲವಾಗಿ ಇದು ಜಾರಿಗೊಳ್ಳುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ ರೋಗಿಗಳ ರಕ್ಷಣೆ, ಉತ್ತಮ ಚಿಕಿತ್ಸೆ ಒದಗಿಸುವುದಕ್ಕೆ ಪೂರಕವಾಗಿ ವಿಶ್ವಾಸಾರ್ಹವಾದ ಮಾಹಿತಿಯನ್ನು ಒದಗಿಸಲಿದೆ. ಆರೋಗ್ಯ ದಾಖಲೆಗಳನ್ನು ಡಿಜಿಟಲ್ ಸ್ವರೂಪದಲ್ಲಿ ರಕ್ಷಿಸಲಾಗುತ್ತದೆ. ದೇಶದ ಬಡ ವರ್ಗದವರು ಈ ಯೋಜನೆಯಿಂದ ಹೆಚ್ಚಿನ ಲಾಭ ಪಡೆಯಲಿದ್ದಾರೆ ಎಂದು ತಿಳಿಸಿದರು.

ಆರೋಗ್ಯಸೇವೆಯಲ್ಲಿ ತಂತ್ರಜ್ಞಾನದ ಪಾತ್ರವನ್ನು ಉಲ್ಲೇಖಿಸಿದ ಅವರು, ಕೊರೊನಾ ಸೋಂಕು ಹರಡುವಿಕೆ ತಡೆಯುವಲ್ಲಿ ಆರೋಗ್ಯ ಸೇತು ಅಪ್ಲಿಕೇಷನ್ ಪಾತ್ರವಿದೆ. ಒಟ್ಟಾರೆ 90 ಕೋಟಿ ಡೋಸ್ ಲಸಿಕೆ ನೀಡಲಾಗಿದ್ದು, ಈ ಪ್ರಕ್ರಿಯೆಯಲ್ಲಿ ಕೋ–ವಿನ್ ಅಪ್ಲಿಕೇಷನ್ ಪಾತ್ರ ಗಣನೀಯವಾದುದು ಎಂದು ಹೇಳಿದರು.

ಪ್ರವಾಸೋದ್ಯಮದೊಂದಿಗೆ ಆರೋಗ್ಯ ಸೇವೆಯು ಅತ್ಯಂತ ಬಲವಾದ ಸಂಬಂಧ ಹೊಂದಿದೆ ಎಂದು ಪ್ರತಿಪಾದಿಸಿದ ಪ್ರಧಾನಿ ಮೋದಿ ಅವರು, ಕೋವಿಡ್ -19ರ ವಿರುದ್ಧ ಹೆಚ್ಚಿನ ಜನರಿಗೆ ಲಸಿಕೆ ಹಾಕಿದ ಮತ್ತು ಉತ್ತಮ ಆರೋಗ್ಯ ಮೂಲಸೌಕರ್ಯ ಹೊಂದಿರುವ ಸ್ಥಳಗಳು ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸುತ್ತವೆ ಎಂದರು.

ನಿವೃತ್ತ ನ್ಯಾ. ಕೇಶವನಾರಾಯಣ ನೇತೃತ್ವ

ಅರ್ಕಾವತಿ 'ರೀಡೂ': ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಅರ್ಕಾವತಿ ಬಡಾವಣೆ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡಿದ್ದ ಜಮೀನುಗಳ ಡಿನೋಟಿಫಿಕೇಷನ್ ಪ್ರಕರಣದಲ್ಲಿ ನಡೆದಿರುವ 'ರೀಡೂ' ಪ್ರಕ್ರಿಯೆ ಬಗ್ಗೆ ಪರಿಶೀಲನೆ ನಡೆಸಲು ಮೂವರು ಸದಸ್ಯರ ಸಮಿತಿಯನ್ನು ಹೈಕೋರ್ಟ್ ನೇಮಿಸಿದೆ.

ಈ ಸಂಬಂಧ ಜಮೀನು ಮತ್ತು ಕಟ್ಟಡ ಮಾಲೀಕರಿಂದ ಸಲ್ಲಿಕೆಯಾಗಿದ್ದ 446 ಅರ್ಜಿಗಳನ್ನು ವಿಲೇವಾರಿ ಮಾಡಿದ ನ್ಯಾಯಮೂರ್ತಿ ಅರವಿಂದ ಕುಮಾರ್ ಅವರಿದ್ದ ಪೀಠ, ಈ ಆದೇಶ ನೀಡಿತು. 16 ಗ್ರಾಮಗಳಲ್ಲಿ ಬಡಾವಣೆ ನಿರ್ಮಾಣದ ಉದ್ದೇಶಕ್ಕೆ ಜಮೀನು ಸ್ವಾಧೀನಪಡಿಸಿಕೊಳ್ಳಲು ಜೂನ್ 2014ರಲ್ಲಿ ಹೊರಡಿಸಿದ ಎರಡನೇ ಅಂತಿಮ ಅಧಿಸೂಚನೆಯನ್ನು ಪೀಠ ಎತ್ತಿ ಹಿಡಿದಿದೆ.



ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಎನ್. ಕೇಶವನಾರಾಯಣ, ನಿವೃತ್ತ ಐಎಎಸ್ ಅಧಿಕಾರಿ ಸಂದೀಪ್ ದವೆ ಮತ್ತು ನಿವೃತ್ತ ಐಪಿಎಸ್ ಅಧಿಕಾರಿ ಎನ್.ಎಸ್. ಮೇಘರಿಕ್ ಈ ಸಮಿತಿಯಲ್ಲಿದ್ದಾರೆ.

ರೀಡೂ ಮತ್ತು ಡಿನೋಟಿಫಿಕೇಶನ್ ಪ್ರಕ್ರಿಯೆಗಳು ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಆದೇಶಗಳಿಗೆ ಅನುಸಾರವಾಗಿ ಇವೆಯೇ ಎಂಬುದನ್ನು ಈ ಸಮಿತಿ ಪರಿಶೀಲಿಸಲಿದೆ. ಈ ಸಮಿತಿ ಸಲ್ಲಿಸುವ ವರದಿ ಆಧರಿಸಿ ಮುಂದುವರಿಯುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ(ಬಿಡಿಎ) ಪೀಠ ಸೂಚಿಸಿದೆ.

2010ರ ಸುಪ್ರೀಂ ಕೋರ್ಟ್ ಆದೇಶದ ಬಳಿಕ 2013ರಲ್ಲಿ 285 ಎಕರೆ ಜಾಗವನ್ನು ಸ್ವಾಧೀನ ಪ್ರಕ್ರಿಯೆಯಿಂದ ಬಿಡಿಎ ಕೈಬಿಟ್ಟಿತ್ತು. ಸ್ವಾಧೀನಕ್ಕೆ ಉದ್ದೇಶಿಸಿದ್ದ ಜಾಗದಲ್ಲಿ ತೋಟಗಾರಿಕೆ ಭೂಮಿ, ಅಭಿವೃದ್ಧಿ ಹೊಂದಿದ ವಸತಿ ಪ್ರದೇಶಗಳು, ಕಾರ್ಖಾನೆಗಳು ಮತ್ತು ಶಿಕ್ಷಣ ಸಂಸ್ಥೆಗಳು ಇವೆ ಎಂಬುದನ್ನು ಗಮನಿಸಿದ್ದ ಸುಪ್ರೀಂ ಕೋರ್ಟ್ ಈ ಆದೇಶ ನೀಡಿತ್ತು. ಬಳಿಕ 2014ರಲ್ಲಿ ಮಾರ್ಪಡಿಸಿದ ಆದೇಶವನ್ನು ಬಿಡಿಎ ಪ್ರಕಟಿಸಿತ್ತು.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ನಿರಾಕರಣೆ

'ತಮಿಳುನಾಡಿಗೆ ನೀರು ಹರಿಸಲಾಗದು'

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಮಳೆಯ ಕೊರತೆಯಿಂದಾಗಿ ರಾಜ್ಯದ ಜಲಾಶಯಗಳಲ್ಲಿ ನೀರಿನ ಸಮರ್ಪಕ ಸಂಗ್ರಹ ವಿಲ್ಲದ್ದರಿಂದ, ತಮಿಳುನಾಡಿಗೆ ನೀರನ್ನು ಹರಿಸುವುದು ಅಸಾಧ್ಯ ಎಂದು ಕರ್ನಾಟಕ ಸ್ಪಷ್ಟಪಡಿಸಿದೆ.

ಸೋಮವಾರ ಇಲ್ಲಿ ನಡೆದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಭಾಗವಹಿಸಿದ್ದ ರಾಜ್ಯದ ಪ್ರತಿನಿಧಿಗಳು, ಬಾಕಿ ಇರುವ ತಮಿಳುನಾಡಿನ ಪಾಲಿನ ನೀರನ್ನು ಹರಿಸಲಾಗದು ಎಂದು ಹೇಳಿದರು.

ಸುಪ್ರೀಂ ಕೋರ್ಟ್ ತೀರ್ಪಿನ ಅನ್ವಯ ಹಂಚಿಕೆ ಮಾಡಲಾದ ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳ ಪಾಲಿನ ನೀರನ್ನು ಕೂಡಲೇ ಹರಿಸಬೇಕು ಎಂದು ತಮಿಳುನಾಡಿನ ಪ್ರತಿನಿಧಿಗಳು ಪಟ್ಟು ಹಿಡಿದರಾದರೂ, ಕರ್ನಾಟಕ ಅದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿತು.

ರಾಜ್ಯದ ರೈತರ ಬೆಳೆಗಳಿಗೆ ಈಗ ನೀರಿನ ಅಗತ್ಯವಿದೆ. ಜನತೆಗೆ ಕುಡಿಯುವ ನೀರು ಪೂರೈಸಲೂ ಆದ್ಯತೆ ನೀಡಬೇಕಿದೆ. ಸಂಗ್ರಹವಾಗಿರುವ ಅತ್ಯಲ್ಪ ಪ್ರಮಾಣದ ನೀರನ್ನು ತಮಿಳುನಾಡಿಗೆ ಹರಿಸಿದರೆ ರಾಜ್ಯದಲ್ಲಿನ ಕಾವೇರಿ ಅಚ್ಚುಕಟ್ಟು ಪ್ರದೇಶದ ರೈತರು ಸಂಕಷ್ಟಕ್ಕೆ ಈಡಾಗಲಿದ್ದಾರೆ ಎಂದು ತಿಳಿಸಲಾಯಿತು.

ಜಲಾಶಯಗಳಲ್ಲಿನ ನೀರಿನ ಸಂಗ್ರಹ, ಇದುವರೆಗೆ ಸುರಿದ ಮಳೆಯ ಪ್ರಮಾಣ, ಕುಡಿಯಲು ಮತ್ತು ಕೃಷಿಗೆ ಇರುವ ನೀರಿನ ಅಗತ್ಯ ಕುರಿತ ಸಮಗ್ರ ವರದಿಯನ್ನು ಸಲ್ಲಿಸುವಂತೆ ಕರ್ನಾಟಕಕ್ಕೆ ಸೂಚಿಸಲಾಯಿತು.

ಮೇಕೆದಾಟು ಯೋಜನೆಗೆ ತಮಿಳುನಾಡು ಮತ್ತು ಪುದುಚೇರಿ ಆಕ್ಷೇಪ ವ್ಯಕ್ತಪಡಿಸಿವೆ. ಆದರೆ, ಕರ್ನಾಟಕವು ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಎಷ್ಟು ಪ್ರಮಾಣದ ನೀರು ಹರಿಸಬೇಕು ಎಂಬ ವಿಷಯದ ಕುರಿತು ಚರ್ಚೆ ನಡೆಸಿದ್ದರಿಂದ ಮೇಕೆದಾಟು ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಿಸಲಾಗಿಲ್ಲ ಎಂದು ಪ್ರಾಧಿಕಾರದ ಅಧ್ಯಕ್ಷ ಎಸ್.ಕೆ. ಹಾಲ್ದಾರ್ ಸಭೆಯ ನಂತರ ಹೇಳಿದರು.


ಕರ್ನಾಟಕವು ನೀರಿನ ಸಂಗ್ರಹ ಮತ್ತು ಅಗತ್ಯತೆ ಕುರಿತ ವರದಿ ಸಲ್ಲಿಸಿದ ನಂತರ ಅಕ್ಟೋಬರ್ 7ರೊಳಗೆ ಪ್ರಾಧಿಕಾರದ ಮುಂದಿನ ಸಭೆಯನ್ನು ಆಯೋಜಿಸಲು ನಿರ್ಧರಿಸಲಾಗಿದೆ. ತಮಿಳುನಾಡಿಗೆ ಎಷ್ಟು ಪ್ರಮಾಣದಲ್ಲಿ ನೀರು ಹರಿಸಬೇಕು ಎಂಬುದನ್ನು ಸಭೆಯಲ್ಲಿ ಸೂಚಿಸಲಾಗುತ್ತದೆ ಎಂದು ಅವರು ವಿವರಿಸಿದರು.

ನೀರು ಹಂಚಿಕೆ ಮಾಡಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಪ್ರಕಾರ ಜೂನ್‌ನಿಂದ ಆಗಸ್ಟ್ ಅಂತ್ಯದವರೆಗೆ ಕರ್ನಾಟಕವು 86.83 ಟಿಎಂಸಿ ಅಡಿ ನೀರನ್ನು ತಮಿಳುನಾಡಿನತ್ತ ಹರಿಸಬೇಕಿತ್ತು. ಮಳೆಯ ಕೊರತೆಯಿಂದಾಗಿ ಈ ವರ್ಷ 57.04 ಟಿಎಂಸಿ ಅಡಿ ನೀರನ್ನು ಮಾತ್ರ ಹರಿಸಲಾಗಿದೆ. ಉತ್ತಮ ಮಳೆ ಸುರಿದಲ್ಲಿ ನೀರು ಹರಿಸಲಾಗುವುದು ಎಂದು ಸೆಪ್ಟೆಂಬರ್ ಮೊದಲ ವಾರ ನಡೆದಿದ್ದ ಪ್ರಾಧಿಕಾರದ ಸಭೆಯಲ್ಲಿ ಕರ್ನಾಟಕ ತಿಳಿಸಿತ್ತು.

ಆದರೆ, ಸೆಪ್ಟೆಂಬರ್‌ನಲ್ಲೂ ನಿರೀಕ್ಷಿತ ಮಳೆ ಸುರಿಯದ್ದರಿಂದ ನೀರಿನ ಸಂಗ್ರಹ ಕಡಿಮೆಯಾಗಿದೆ ಎಂದು ಸೋಮವಾರದ ಸಭೆಯಲ್ಲಿ ಸ್ಪಷ್ಟಪಡಿಸಲಾಯಿತು.

ಜಿಎಸ್‌ಟಿ: ತೆರಿಗೆ ಪರಿಶೀಲನೆ ಸಮಿತಿಗೆ ಬೊಮ್ಮಾಯಿ ನೇತೃತ್ವ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ವಿಧಿಸಲಾಗುತ್ತಿರುವ ತೆರಿಗೆ ಪ್ರಮಾಣ ಹಾಗೂ ಜಿಎಸ್‌ಟಿಯಿಂದ ವಿನಾಯಿತಿ ಪಡೆದಿರುವ ಉತ್ಪನ್ನಗಳ ಬಗ್ಗೆ ಪರಿಶೀಲಿಸಲು ರಾಜ್ಯದ ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಕೇಂದ್ರ ಹಣಕಾಸು ಸಚಿವಾಲಯವು ಸಮಿತಿಯೊಂದನ್ನು ರಚಿಸಿದೆ. ಈ ಸಮಿತಿ ಎರಡು ತಿಂಗಳಲ್ಲಿ ವರದಿ ಸಲ್ಲಿಸಬೇಕಿದೆ.



ಬೊಮ್ಮಾಯಿ

ಜಿಎಸ್‌ಟಿ ಜಾರಿಗೆ ಬಂದ ನಾಲ್ಕು ವರ್ಷಗಳ ನಂತರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 'ಸರಳ ತೆರಿಗೆ ಪ್ರಮಾಣ'ದ ಜಿಎಸ್‌ಟಿ ವ್ಯವಸ್ಥೆಯನ್ನು ರೂಪಿಸಲು ಮುಂದಡಿ ಇರಿಸಿವೆ. ಶೇಕಡ 12 ಹಾಗೂ ಶೇ 18ರ ತೆರಿಗೆ ಪ್ರಮಾಣವನ್ನು ಪರಸ್ಪರ ವಿಲೀನಗೊಳಿಸಬೇಕು ಎಂಬ ಬೇಡಿಕೆ ಇದೆ. ಅಲ್ಲದೆ, ವಿನಾಯಿತಿ ಪಟ್ಟಿಯಲ್ಲಿರುವ ಕೆಲವು ಉತ್ಪನ್ನ, ಸೇವೆಗಳನ್ನು ತೆರಿಗೆ ವ್ಯಾಪ್ತಿಗೆ ತರಬೇಕು ಎಂಬ ಆಗ್ರಹವೂ ಇದೆ.

ತೆರಿಗೆ ವಂಚನೆ ಮೂಲಗಳನ್ನು ಗುರುತಿಸಲು ಇನ್ನೊಂದು ಸಮಿತಿಯನ್ನು ರಚಿಸಲಾಗಿದೆ. ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರು ಇದರ ಅಧ್ಯಕ್ಷರು.

ಅ.11 ರವರೆಗೆ ರಾತ್ರಿ ಕರ್ಫ್ಯೂ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್–19 ಪ್ರಕರಣಗಳನ್ನು ಇನ್ನಷ್ಟು ನಿಯಂತ್ರಣಕ್ಕೆ ತರುವ ಉದ್ದೇಶದಿಂದ ರಾಜ್ಯದಾದ್ಯಂತ ಜಾರಿಯಲ್ಲಿರುವ 'ರಾತ್ರಿ ಕರ್ಫ್ಯೂ'ವನ್ನು ಅಕ್ಟೋಬರ್ 11 ರ ಬೆಳಿಗ್ಗೆ 5 ರವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಈ ಹಿಂದಿನ ಆದೇಶದ ಅನ್ವಯ ಸೋಮವಾರ(ಸೆ.27) ಬೆಳಿಗ್ಗೆ 5 ಗಂಟೆಗೆ 'ರಾತ್ರಿ ಕರ್ಫ್ಯೂ' ಮುಕ್ತಾಯವಾಗಿದೆ. ಇದರ ಬೆನ್ನಲ್ಲೇ ಹೊಸ ಆದೇಶ ಹೊರಡಿಸಲಾಗಿದೆ. ಬೆಂಗಳೂರು ನಗರ ಸೇರಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಈ ಆದೇಶ ಅನ್ವಯವಾಗಲಿದೆ. ರಾತ್ರಿ 10 ರಿಂದ ಬೆಳಿಗ್ಗೆ 5 ರವರೆಗೆ ಕರ್ಫ್ಯೂ ಜಾರಿಯಲ್ಲಿರುತ್ತದೆ.

ಈ ಅವಧಿಯಲ್ಲಿ ಕೋವಿಡ್ ಮಾರ್ಗಸೂಚಿಯಲ್ಲಿ ಈಗಾಗಲೇ ಸೂಚಿಸಿರುವ ಚಟುವಟಿಕೆಗಳನ್ನು ಬಿಟ್ಟು ಉಳಿದ ಎಲ್ಲ ಚಟುವಟಿಕೆಗಳಿಗೂ ನಿರ್ಬಂಧವಿರುತ್ತದೆ. ರಾತ್ರಿ 10 ರ ಬಳಿಕ ಓಡಾಟಕ್ಕೆ ಅವಕಾಶ ಇರುವುದಿಲ್ಲ. ಸಾಲು ಸಾಲು ಹಬ್ಬಗಳು ಬರುವುದರಿಂದ ಕೋವಿಡ್ ಪ್ರಕರಣಗಳು ದಿಢೀರ್ ಏರಿಕೆ ಆಗಬಾರದು ಎಂಬ ಕಾರಣಕ್ಕೆ ಕರ್ಫ್ಯೂ ಮುಂದುವರಿಕೆ ಅಗತ್ಯವಿದೆ ಎಂದು ಈ ಆದೇಶದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ತಿಳಿಸಿದ್ದಾರೆ.

ಅ.3 ರಿಂದ ಪಬ್‌ಗಳನ್ನು ತೆರೆಯಲು ಅನುಮತಿ ನೀಡಿದ್ದು, ಕೋವಿಡ್ ನಿಯಮಾವಳಿಗಳಿಗೆ ಅನುಸಾರವೇ ಕಾರ್ಯ ನಿರ್ವಹಿಸಬೇಕು. ರಾತ್ರಿ ಕರ್ಫ್ಯೂವನ್ನೂ ಪಾಲಿಸಬೇಕು. ಕೋವಿಡ್ ಪ್ರಕರಣಗಳು ಹೆಚ್ಚು ಇರುವ ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳ ಗಡಿಗಳಲ್ಲಿರುವ ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟೆಚ್ಚರ ಮುಂದುವರಿಯಲಿದೆ ಎಂದು ಅವರು ಹೇಳಿದ್ದಾರೆ.

0.8 ಹೆಕ್ಟೇರ್ ಭೂಪರಿವರ್ತನೆ ಪ್ರಸ್ತಾವಕ್ಕೆ ಪರಿಸರ ಹೋರಾಟಗಾರರ ವಿರೋಧ


ಜೋಗ ಬಳಿ ಹೋಟೆಲ್‌ಗೆ ಅರಣ್ಯ ಭೂಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗ ಜಿಲ್ಲೆಯ ಜೋಗ ಜಲಪಾತದ ಬಳಿ ಪರಿಸರ ಸೂಕ್ಷ್ಮ ವಲಯದಲ್ಲಿ ಪಂಚತಾರಾ ಹೋಟೆಲ್ ನಿರ್ಮಿಸುವ ಯೋಜನೆಗಾಗಿ ಅರಣ್ಯ ಭೂಮಿ ಪರಿವರ್ತನೆಗೆ ಪ್ರಸ್ತಾವನೆ ಸಲ್ಲಿಸಿರುವುದಕ್ಕೆ ವನ್ಯಜೀವಿ ಕಾರ್ಯಕರ್ತರು ವಿರೋಧ ವ್ಯಕ್ತಪಡಿಸಿದ್ದಾರೆ.

ಅರಣ್ಯ, ಪರಿಸರ ಹಾಗೂ ವನ್ಯಜೀವಿಗಳ ಸಂರಕ್ಷಣೆಗೆ ಮಾರಕವಾಗಿ ಪರಿಣಮಿಸಲಿರುವ ಈ ಯೋಜನೆಗೆ ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ಒಪ್ಪಿಗೆ ನೀಡಬಾರದು ಹಾಗೂ ತಕ್ಷಣ ಪ್ರಸ್ತಾವನೆಯನ್ನು ಹಿಂಪಡೆಯಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿದ್ದಾರೆ.

ಜೋಗ ಜಲಪಾತದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸುವ ₹165 ಕೋಟಿ ವೆಚ್ಚದ ಯೋಜನೆಯಲ್ಲಿ ಹೋಟೆಲ್ ನಿರ್ಮಾಣವೂ ಸೇರಿದೆ. ಹೋಟೆಲ್ ನಿರ್ಮಾಣಕ್ಕಾಗಿ ಸಾಗರ ತಾಲ್ಲೂಕಿನ ನಾಡವಾಡ ತಲಕಳಲೆ ಗ್ರಾಮದ ಸರ್ವೆ ಸಂಖ್ಯೆ 151ರಲ್ಲಿರುವ 0.8536 ಹೆಕ್ಟೇರ್ ಅರಣ್ಯ ಪ್ರದೇಶದ ಭೂಪರಿವರ್ತನೆ ಮಾಡಲು ಜೋಗ ನಿರ್ವಹಣಾ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯೂ ಆದ ಶಿವಮೊಗ್ಗ ಜಿಲ್ಲಾಧಿಕಾರಿ ಅವರು ಅರಣ್ಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದರು. ಇದಕ್ಕೆ ಸಾಗರ ವಿಭಾಗದ ಡಿಸಿಎಫ್, ಶಿವಮೊಗ್ಗ ವೃತ್ತದ ಸಿಸಿಎಫ್ ಹಾಗೂ ಅರಣ್ಯ ಪಡೆಯ ಮುಖ್ಯಸ್ಥರು (ಪಿಸಿಸಿಎಫ್) ಅನುಮೋದನೆ ನೀಡಿದ್ದಾರೆ. ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು ಒಪ್ಪಿಗೆ ನೀಡಿದ ಬಳಿಕ ಕಡತವು ಕೇಂದ್ರ ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಸಚಿವಾಲಯಕ್ಕೆ ಹೋಗಲಿದೆ.



ಜೋಗ ಜಲಪಾತ –ಸಂಗ್ರಹ ಚಿತ್ರ

ಈ ಯೋಜನಾ ಪ್ರದೇಶವು ಶರಾವತಿ ಕಣಿವೆ ಸಿಂಗಳೀಕ ಅಭಯಾರಣ್ಯದ ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಗೆ ಬರುವುದರಿಂದ ಪಂಚತಾರಾ ಹೋಟೆಲ್ ಯೋಜನೆ ಹಾಗೂ ಇತರೆ ಪ್ರವಾಸೋದ್ಯಮ ಚಟುವಟಿಕೆಗಳನ್ನು ಕೈಗೊಳ್ಳಲು ಅನುಮತಿ ನಿರಾಕರಿಸುವಂತೆ ವನ್ಯಜೀವಿ ಕಾರ್ಯಕರ್ತರು ಆಗ್ರಹಿಸಿದ್ದಾರೆ.

'ಈ ಯೋಜನೆಯು ಅರಣ್ಯ (ಸಂರಕ್ಷಣಾ) ಕಾಯ್ದೆ 1980, ಪರಿಸರ (ಸಂರಕ್ಷಣಾ) ಕಾಯ್ದೆ 1986 ಸೇರಿದಂತೆ ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್ ನೀಡಿರುವ ಆದೇಶಕ್ಕೆ ವಿರುದ್ಧ. 'ಅರಣ್ಯ ಹಾಗೂ ವನ್ಯಜೀವಿ ಪ್ರದೇಶಗಳಲ್ಲಿ ಸುಸ್ಥಿರ ಪರಿಸರ-ಪ್ರವಾಸೋದ್ಯಮ ಕುರಿತು ಮಾರ್ಗದರ್ಶಿ ಸೂತ್ರಗಳು–2021ರ ಪ್ರಕಾರ, ಪರಿಸರ-ಪ್ರವಾಸೋದ್ಯಮ ಸೌಕರ್ಯ ಒದಗಿಸಲು ಅರಣ್ಯ ಭೂಮಿಯ ಮೇಲೆ ಯಾವುದೇ ಶಾಶ್ವತ ರಚನೆ/ ಕಟ್ಟಡ ಕಟ್ಟುವಂತಿಲ್ಲ. ಪರಿಸರ ಸೂಕ್ಷ್ಮ ವಲಯದಲ್ಲಿ ವಾಣಿಜ್ಯೋದ್ಯಮ ಉದ್ದೇಶಕ್ಕಾಗಿ ಹೋಟೆಲ್‌ಗಳನ್ನು ನಿರ್ಮಿಸಲು ಅವಕಾಶವೇ ಇಲ್ಲ' ಎಂಬುದು ಪರಿಸರ ಕಾರ್ಯಕರ್ತ ಸಹದೇವ್ ಶಿವಪುರ ಅವರ ಪ್ರತಿಪಾದನೆ.

ಪ್ರಸ್ತಾವನೆ ತಿರಸ್ಕೃತವಾಗಿತ್ತು: ಇದೇ ಪ್ರದೇಶದಲ್ಲಿ ಆಯುರ್ವೇದ ಕೇಂದ್ರ ಆರಂಭಕ್ಕೆ 0.4 ಹೆಕ್ಟೇರ್ ಅರಣ್ಯ ಪ್ರದೇಶದ ಭೂ ಪರಿವರ್ತನೆ ಮಾಡುವ ಶಿವಮೊಗ್ಗ ಜಿಲ್ಲಾಧಿಕಾರಿ ಅವರ ಪ್ರಸ್ತಾವವನ್ನು ಕೇಂದ್ರ ಪರಿಸರ ಸಚಿವಾಲಯ 2015ರಲ್ಲಿ ತಿರಸ್ಕರಿಸಿತ್ತು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಪಿಸಿಸಿಎಫ್ (ಅರಣ್ಯ ಪಡೆ ಮುಖ್ಯಸ್ಥ) ಸಂಜಯ್ ಮೋಹನ್ ಅವರಿಗೆ ಕರೆ ಮಾಡಲಾಯಿತು. ಅವರು ಪ್ರತಿಕ್ರಿಯೆ ನೀಡಲು ನಿರಾಕರಿಸಿದರು.

ಮುಖ್ಯಾಂಶಗಳು
- 0.8 ಹೆಕ್ಟೇರ್ ಪರಿವರ್ತನೆಗೆ ಶಿವಮೊಗ್ಗ ಜಿಲ್ಲಾಧಿಕಾರಿ ಪ್ರಸ್ತಾವ
- ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳಿಂದಲೂ ಸಹಮತ

'ನೀಟ್–ಎಸ್‌ಎಸ್'ನಲ್ಲಿ ಬದಲಾವಣೆ: 'ಸುಪ್ರೀಂ' ಗರಂ

'ಯುವ ವೈದ್ಯರು ಫುಟ್‌ಬಾಲ್ ಅಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಸೂಪರ್ ಸ್ಪೆಷಾಲಿಟಿ' ಕೋರ್ಸ್‌ಗಳ ಪ್ರವೇಶಕ್ಕಾಗಿ ನವೆಂಬರ್‌ನಲ್ಲಿ ನಡೆಯಲಿರುವ 'ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ'ಯ (ನೀಟ್-ಎಸ್‌ಎಸ್) ಮಾದರಿಯನ್ನು ಕೊನೆಗಳಿಗೆಯಲ್ಲಿ ಬದಲಿಸಿರುವ ಕ್ರಮವನ್ನು ತರಾಟೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್, 'ಆಡಳಿತ ನಡೆಸುವವರು ಯುವ ವೈದ್ಯರನ್ನು ಫುಟ್‌ಬಾಲ್‌ನಂತೆ ಪರಿಗಣಿಸಬಾರದು' ಎಂದು ಸೂಚಿಸಿದೆ.

ಪ್ರತೀಕ್ ರಸ್ತೋಗಿ ಮತ್ತು 40 ಸ್ನಾತಕೋತ್ತರ ಪದವೀಧರ ವೈದ್ಯರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಸೋಮವಾರ ನಡೆಸಿದ ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಬಿ.ವಿ.ನಾಗರತ್ನ ಅವರ ಪೀಠವು, 'ಸಭೆ ನಡೆಸಿ ನಿಮ್ಮ ಮನೆಯನ್ನು ಸರಿಪಡಿಸಿಕೊಳ್ಳಿ. ನಿಮ್ಮ ಅಸೂಕ್ಷ್ಮ ಅಧಿಕಾರಿಗಳ ನಿರ್ಧಾರಗಳಿಂದಾಗಿ ಯುವ ವೈದ್ಯರನ್ನು ತೊಂದರೆಗೆ ಸಿಲುಕಿಸಲು ನಾವು ಬಿಡುವುದಿಲ್ಲ' ಎಂದು ರಾಷ್ಟ್ರೀಯ ವೈದ್ಯಕೀಯ ಮಂಡಳಿ (ಎನ್‌ಎಂಸಿ) ಮತ್ತು ಅದರ ಅಧಿಕಾರಿಗಳಿಗೆ ಹೇಳಿತು.

'ವಿದ್ಯಾರ್ಥಿಗಳು ಸೂಪರ್ ಸ್ಪೆಷಾಲಿಟಿ ಕೋರ್ಸ್‌ಗಳಲ್ಲಿ ಪ್ರವೇಶ ಪಡೆಯಲು ಕೆಲ ತಿಂಗಳು ಮುಂಚಿತವಾಗಿಯೇ ತಯಾರಿ ಆರಂಭಿಸಿರುತ್ತಾರೆ. ಪರೀಕ್ಷೆ ಸಮೀಪಿಸುತ್ತಿರುವಾಗ ಪರೀಕ್ಷಾ ಮಾದರಿಯಲ್ಲಿ ಬದಲಾವಣೆ ಮಾಡುವ ಅಗತ್ಯವೇನಿತ್ತು? ಈ ಬದಲಾವಣೆಗಳನ್ನು ಮುಂದಿನ ವರ್ಷದಿಂದ ಜಾರಿ ಮಾಡಬಹುದಲ್ಲ?' ಎಂದು ನ್ಯಾಯಪೀಠ ಎನ್‌ಎಂಸಿಯನ್ನು ಪ್ರಶ್ನಿಸಿತು.



'ಅಧಿಕಾರದಲ್ಲಿ ಇರುವವರು ಹೇಗಾದರೂ ಅಧಿಕಾರ ಚಲಾಯಿಸಬಹುದು ಎಂದುಕೊಳ್ಳುವುದು ಸರಿಯಲ್ಲ' ಎಂದು ಪೀಠವು ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರದ ಪರ ಹಾಜರಿದ್ದ ಹಿರಿಯ ವಕೀಲ ಮಣಿಂದರ್ ಸಿಂಗ್ ಅವರಿಗೆ ಹೇಳಿತು.

ಬದಲಾವಣೆಗಳನ್ನು ಪರಿಚಯಿಸಿದ ಕುರಿತ ಕಾರಣಗಳು ತೃಪ್ತಿಕರವಾಗಿಲ್ಲದಿದ್ದರೆ ಕಠಿಣ ಕ್ರಮ ಕೈಗೊಳ್ಳುವ ಕುರಿತು ಪೀಠ ಎಚ್ಚರಿಕೆ ನೀಡಿತು.

ಯುವ ವೈದ್ಯರ ಜತೆ ಪ್ರಜ್ಞಾಪೂರ್ವಕವಾಗಿ ವ್ಯವಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ ನ್ಯಾಯಪೀಠ, ಸಂಬಂಧಪಟ್ಟ ಅಧಿಕಾರಿಗಳ ಜತೆ ಸಭೆ ನಡೆಸಿ ಮುಂದಿನ ವಾರ ವರದಿ ಸಲ್ಲಿಸುವಂತೆ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಅವರಿಗೆ ತಿಳಿಸಿತು.

ಇದಕ್ಕೂ ಮುನ್ನ ಅರ್ಜಿದಾರರ ಪರ ವಾದ ಮಾಡಿದ ಹಿರಿಯ ವಕೀಲ ಶ್ಯಾಮ್ ದಿವಾನ್, ಈ ವರ್ಷದ ನವೆಂಬರ್ 13 ಮತ್ತು 14 ರಂದು ನಡೆಯಲಿರುವ ಪರೀಕ್ಷೆಯ ಅಧಿಸೂಚನೆಯನ್ನು ಜುಲೈ 23ರಂದು ಹೊರಡಿಸಲಾಗಿತ್ತು. ಆದರೆ ಆಗಸ್ಟ್ 31ರಂದು ಮತ್ತೊಂದು ಅಧಿಸೂಚನೆ ಹೊರಬಿದ್ದಿತು. ಅದರಲ್ಲಿ ಪರೀಕ್ಷಾ ಮಾದರಿಯ ಬದಲಾವಣೆ ಬಗ್ಗೆ ಹೇಳಲಾಗಿತ್ತು. ಇದಕ್ಕೆ ಪೂರಕವಾಗಿ ಸಿದ್ಧತೆ ನಡೆಸಲು ವಿದ್ಯಾರ್ಥಿಗಳಿಗೆ ಸಮಯದ ಕೊರತೆ ಇದೆ ಎಂದು ನ್ಯಾಯಾಲಯದ ಗಮನಕ್ಕೆ ತಂದರು.

2018ರಿಂದ 2020 ರವರೆಗೆ ಚಾಲ್ತಿಯಲ್ಲಿದ್ದ ಪರೀಕ್ಷಾ ಮಾದರಿಯ ಪ್ರಕಾರ, ಸೂಪರ್ ಸ್ಪೆಷಾಲಿಟಿಗೆ ಸಂಬಂಧಿಸಿದ ಶೇ 60 ಪ್ರಶ್ನೆಗಳು ಹಾಗೂ 'ಫೀಡರ್' ಕೋರ್ಸ್‌ಗಳಿಗೆ ಸಂಬಂಧಿಸಿದ ಶೇ 40ರಷ್ಟು ಪ್ರಶ್ನೆಗಳನ್ನು ಕೇಳಲಾಗಿತ್ತು. ಆದರೆ ಪರಿಷ್ಕೃತ ಪರೀಕ್ಷಾ ಮಾದರಿಯಲ್ಲಿ ಸಾಕಷ್ಟು ಬದಲಾವಣೆಗಳನ್ನು ತರಲಾಗಿದೆ ಎಂದು ಅವರು ನ್ಯಾಯಾಲಯಕ್ಕೆ ತಿಳಿಸಿದರು.

ಅಸ್ಸಾಂ: 7,000ಕ್ಕೂ ಹೆಚ್ಚು ನಿರಾಶ್ರಿತರು

ಧೋಲ್ಪುರ (ಅಸ್ಸಾಂ) (ಪಿಟಿಐ): ಸರ್ಬಾನಂದ ಸೋನೊವಾಲ್ ನೇತೃತ್ವದ ಬಿಜೆಪಿ ಸರ್ಕಾರ ಸೇರಿದಂತೆ ಅಸ್ಸಾಂ ಸರ್ಕಾರಗಳು ದರಂಗ್ ಜಿಲ್ಲೆಯ ಸಿಪಜ್ಹರ್ ಗ್ರಾಮದ ಜನರಿಗಾಗಿ ಅಭಿವೃದ್ಧಿ ಕಾರ್ಯಗಳನ್ನು ನಡೆಸಿದ್ದವು. ಈಗ ಅದೇ ಜನರ ವಿರುದ್ಧ ಸರ್ಕಾರ, ಒತ್ತುವರಿ ಜಮೀನು ತೆರವು ಕಾರ್ಯಾಚರಣೆಯನ್ನು ನಡೆಸುತ್ತಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.


'ಧೋಲ್ಪುರ 1, 2 ಮತ್ತು 3 ಗ್ರಾಮಗಳಲ್ಲಿ ಸ್ಥಳಾಂತರಗೊಂಡಿರುವ ಜನರಿಗಾಗಿ ಅಭಿವೃದ್ಧಿ ಕಾರ್ಯಗಳನ್ನು ನಡೆಸುವ ಮೂಲಕ ಅವರ ನೆಲೆಯನ್ನು ನ್ಯಾಯಸಮ್ಮತಗೊಳಿಸಲಾಯಿತು. ಈಗ ಅದೇ ಜನರನ್ನು ಅತಿಕ್ರಮಣಕಾರರು ಎಂದು ಹೇಳಲಾಗುತ್ತಿದೆ' ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಳೆದ ಎರಡು ವಾರಗಳಲ್ಲಿ ಸುಮಾರು 1,200-1,400 ಮನೆಗಳನ್ನು ತೆರವುಗೊಳಿಸಲಾಗಿದೆ. ಇದರಿಂದಾಗಿ 7,000ಕ್ಕೂ ಹೆಚ್ಚು ಜನರು ನಿರಾಶ್ರಿತರಾಗಿದ್ದಾರೆ ಎಂದು ವರದಿಗಳ ಹಿನ್ನೆಲೆಯಲ್ಲಿ ಬ್ರಹ್ಮಪುತ್ರಾ ನದಿ ತೀರದ ಮೂರು ಗ್ರಾಮಗಳಿಗೆ ಸುದ್ದಿಸಂಸ್ಥೆಯ ವರದಿಗಾರರು ಭೇಟಿ ನೀಡಿದ್ದರು. ಈ ವೇಳೆ ಕೇಂದ್ರ ಸರ್ಕಾರದ 'ಸ್ವಚ್ಛ ಭಾರತ ಮಿಷನ್' ಅಡಿಯಲ್ಲಿ ತಮ್ಮ ಗ್ರಾಮಗಳಲ್ಲಿ ನಿರ್ಮಿಸಲಾದ ಶೌಚಾಲಯಗಳನ್ನು ಗ್ರಾಮಸ್ಥರು ವರದಿಗಾರರಿಗೆ ತೋರಿಸಿದರು.

'ಇಲ್ಲಿನ ಜನರಿಗೆ ಶಾಶ್ವತ ವಿಳಾಸದೊಂದಿಗೆ ಆಧಾರ್ ಕಾರ್ಡ್ ಪೂರೈಸುವ ನಿಟ್ಟಿನಲ್ಲಿ ಸರ್ಕಾರವು ಐದು ಆಧಾರ್ ಕೇಂದ್ರಗಳನ್ನು ನಿರ್ಮಿಸಿವೆ. ಆದರೆ ಸರ್ಕಾರಕ್ಕೆ ಇದೇ ನಾಗರಿಕರು ಈಗ ಅತಿಕ್ರಮಣಕಾರಿಗಳು ಆಗಿದ್ದಾರೆ' ಎಂದು ಸ್ಥಳೀಯರು ತಿಳಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕಕ್ಕೆ ಪೂರ್ಣಕಾಲಿಕ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿಗಳ ನೇಮಕಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಈ ನೇಮಕವು ಮೂರು ವರ್ಷಗಳ ಅವಧಿಯದಾಗಿದೆ. ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಅದರ ವ್ಯಾಪ್ತಿಯ ಸಂಯೋಜಿತ ಕಾಲೇಜುಗಳ ಅರ್ಹ ಪ್ರಾಧ್ಯಾಪಕರು ಅರ್ಜಿ ಸಲ್ಲಿಸಬಹುದು ಎಂದು ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಸಕ್ತ ಅಧ್ಯಾಪಕರು ಅರ್ಜಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ www.bangaloreuniversity.ac.inನಿಂದ ಡೌನ್‌ಲೋಡ್ ಮಾಡಿಕೊಂಡು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಅಥವಾ ಕಾಲೇಜಿನ ಪ್ರಾಂಶುಪಾಲರ ಮೂಲಕ ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನ ಭಾರತಿ, ಬೆಂಗಳೂರು–560056 ಇವರಿಗೆ ಅಕ್ಟೋಬರ್ 18ರ ಒಳಗೆ ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

ಖಾಸಗಿ ಬ್ಯಾಂಕ್‌ನಲ್ಲಿ ಚಾಲ್ತಿ ಖಾತೆ, ಹಣ ವರ್ಗಾವಣೆಯಲ್ಲಿ ವಿಳಂಬ: ಸಿಎಜಿ ವರದಿಯಲ್ಲಿ ಉಲ್ಲೇಖ

ಬೆಂಗಳೂರು ವಿ.ವಿಗೆ ₹55 ಲಕ್ಷ ನಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಬ್ಯಾಂಕ್‌ನಲ್ಲಿ ಚಾಲ್ತಿ ಖಾತೆ ತೆರೆಯುವ ಮೂಲಕ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ₹55.22 ಲಕ್ಷ ಆದಾಯ ನಷ್ಟವಾಗಿದೆ.

ರಾಜ್ಯ ಸರ್ಕಾರದ 2020ರ ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದಂತೆ ಮಹಾಲೇಖಪಾಲರು (ಸಿಎಜಿ) ಸಲ್ಲಿಸಿರುವ ಲೆಕ್ಕಪರಿಶೋಧನಾ ವರದಿಯಲ್ಲಿ ಈ ಬಗ್ಗೆ ಉಲ್ಲೇಖಿಸಲಾಗಿದೆ.

2017, 2018 ಮತ್ತು 2019ರ ಅವಧಿಯಲ್ಲಿ ವಿಶ್ವವಿದ್ಯಾಲಯಕ್ಕೆ ನಷ್ಟವಾಗಿದೆ. ಈ ವಿಷಯದಲ್ಲಿ ರಾಜ್ಯ ಸರ್ಕಾರ ರೂಪಿಸಿದ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಉನ್ನತ ಶಿಕ್ಷಣ ಇಲಾಖೆಗೆ ಸಿಎಜಿ ನಿರ್ದೇಶನ ನೀಡಿದೆ.

ಸಿಎಜಿ ವರದಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ರಾಜ್ಯ ಸರ್ಕಾರ ಒಪ್ಪಿಕೊಂಡಿದೆ. 'ಬೆಂಗಳೂರು ವಿಶ್ವವಿದ್ಯಾಲಯವು ಕಾನೂನುಬದ್ಧವಾಗಿ ಭಾರತೀಯ ಸ್ಟೇಟ್ ಬ್ಯಾಂಕ್‌ನಿಂದ ಆನ್‌ಲೈನ್ ಮೂಲಕ ಶುಲ್ಕವನ್ನು ವಿದ್ಯಾರ್ಥಿಗಳಿಂದ ಸಂಗ್ರಹಿಸಬೇಕಾಗಿತ್ತು. ಟೆಂಡರ್ ಪ್ರಕ್ರಿಯೆಯಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಅತಿ ಕಡಿಮೆ ಬಿಡ್ ಮಾಡಿತ್ತು. ಹೀಗಾಗಿಯೇ, ಎಸ್‌ಬಿಐಗೆ ವಹಿಸಬೇಕಾಗಿತ್ತು. ಆದರೆ, ಬಿಡ್‌ನಲ್ಲಿ ಅನರ್ಹಗೊಂಡಿದ್ದ ಎಕ್ಸಿಸ್ ಬ್ಯಾಂಕ್‌ಗೆ ಈ ಕಾರ್ಯ ವಹಿಸಲಾಗಿದೆ. ವಿಶ್ವವಿದ್ಯಾಲಯದ ಈ ಕ್ರಮ ಕೆಟಿಪಿಪಿ ಕಾಯ್ದೆ–1999ರ ಉಲ್ಲಂಘನೆಯಾಗಿದೆ ಮತ್ತು ನಿಯಮಾನುಸಾರ ವಿಶ್ವವಿದ್ಯಾಲಯದ ವಿರುದ್ಧ ಕ್ರಮ ಕೈಗೊಳ್ಳಲು ಅವಕಾಶವಿದೆ' ಎಂದು ರಾಜ್ಯ ಸರ್ಕಾರ 2021ರ ಮಾರ್ಚ್‌ನಲ್ಲಿ ಹೇಳಿತ್ತು.

ಎಕ್ಸಿಸ್ ಬ್ಯಾಂಕ್‌ನಲ್ಲಿ ಚಾಲ್ತಿ ಖಾತೆ ತೆರೆಯಲು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅನುಮೋದನೆ ನೀಡಿರಲಿಲ್ಲ ಎಂದು ಉನ್ನತ ಶಿಕ್ಷಣ ಇಲಾಖೆ ತಿಳಿಸಿದೆ.

ನಷ್ಟವಾಗಿದ್ದು ಹೇಗೆ: ಒಪ್ಪಂದದಂತೆ ಶುಲ್ಕ ಸಂಗ್ರಹಿಸಿರುವುದನ್ನು ಜಮೆ ಮಾಡಲು ಎಕ್ಸಿಸ್ ಬ್ಯಾಂಕ್ ಕಾಲಮಿತಿಗೆ ಬದ್ಧವಾಗಿರಲಿಲ್ಲ. ಪ್ರತಿನಿತ್ಯದ ಸಂಗ್ರಹವಾಗುವ ಹಣವನ್ನು ವಿಶ್ವವಿದ್ಯಾಲಯದ ಎಸ್‌ಬಿಎಂ ಖಾತೆಗೆ ವರ್ಗಾಯಿಸಲು ಹೆಚ್ಚು ಸಮಯ ತೆಗೆದುಕೊಳ್ಳುತ್ತಿತ್ತು. 2017ರಲ್ಲಿ 12, 2018ರಲ್ಲಿ 15 ಮತ್ತು 2019ರಲ್ಲಿ 9 ದಿನಗಳನ್ನು ತೆಗೆದುಕೊಂಡಿತ್ತು. ಈ ರೀತಿಯ ವಿಳಂಬದಿಂದಾಗಿ ವಿಶ್ವವಿದ್ಯಾಲಯಕ್ಕೆ ₹17.43 ಲಕ್ಷ ಬಡ್ಡಿ ನಷ್ಟವಾಗಿದೆ ಎಂದು ಸಿಎಜಿ ವರದಿಯಲ್ಲಿ ವಿವರಿಸಲಾಗಿದೆ.

ವಿಶ್ವವಿದ್ಯಾಲಯವು ಮುಚ್ಚಿದ ಲಕೋಟೆಯಲ್ಲಿ ಕೊಟೇಷನ್‌ಗಳನ್ನು ಆಹ್ವಾನಿಸಿತ್ತು. ಆದರೆ, ಇತರ ಬ್ಯಾಂಕ್‌ಗಳು ಕೊಟೇಷನ್‌ಗಳಲ್ಲಿ ಪ್ರಸ್ತಾಪಿಸಿದ್ದ ಆಕರ್ಷಕ ಕೊಡುಗೆಗಳನ್ನು ಪರಿಗಣಿಸಿಲ್ಲ. ಖಾಸಗಿ ಬ್ಯಾಂಕ್‌ಗೆ ಮಾತ್ರ ಆದ್ಯತೆ ನೀಡಿರುವ ಬಗ್ಗೆಯೂ ದಾಖಲಿಸಿಲ್ಲ ಎಂದು ವರದಿ ತಿಳಿಸಿದೆ.

ಜತೆಗೆ, 'ಸ್ವೀಪ್–ಇನ್–ಸ್ವೀಪ್ ಔಟ್' ಖಾತೆ ಬದಲು ಚಾಲ್ತಿ ಖಾತೆ ತೆರೆಯುವ ಮೂಲಕ ಸರ್ಕಾರದ ಮಾರ್ಗದರ್ಶಿ ಸೂತ್ರಗಳನ್ನು ಉಲ್ಲಂಘಿಸುವ ಮೂಲಕ ₹ 37.79 ಲಕ್ಷ ಬಡ್ಡಿ ನಷ್ಟವಾಗಿದೆ ಎಂದು ಉಲ್ಲೇಖಿಸಲಾಗಿದೆ.

ಎಕ್ಸಿಸ್ ಬ್ಯಾಂಕ್‌ನಲ್ಲಿ 2017ರ ಫೆಬ್ರುವರಿಯಲ್ಲಿ ವಿಶ್ವವಿದ್ಯಾಲಯವು, ಎಲ್ಲ ರೀತಿಯ ಆನ್‌ಲೈನ್ ಶುಲ್ಕ ಸಂಗ್ರಹಿಸಲು ಚಾಲ್ತಿ ಖಾತೆಯನ್ನು ತೆರೆಯಿತು. ಈ ಹಣವನ್ನು ಕಾಲಮಿತಿಯಲ್ಲಿ ವಿಶ್ವವಿದ್ಯಾಲಯದ ಖಾತೆಗೆ ವರ್ಗಾವಣೆ ಮಾಡುವಂತೆ ಬ್ಯಾಂಕ್ ಜತೆ ಒಪ್ಪಂದ ಸಹ ಮಾಡಿಕೊಳ್ಳಲಾಗಿತ್ತು. ಆದರೆ, ಈ ಬಗ್ಗೆ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಂದ ಅನುಮತಿ ಪಡೆಯದೆಯೇ ಈ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿತ್ತು ಎಂದು ತಿಳಿಸಿದೆ.

ಆಕ್ಷೇಪ ವ್ಯಕ್ತಪಡಿಸಿದ್ದ ಸಿಂಡಿಕೇಟ್ ಸದಸ್ಯರು

ಎಕ್ಸಿಸ್ ಬ್ಯಾಂಕ್‌ನಲ್ಲಿ ಖಾತೆ ತೆರೆದಿರುವ ಬಗ್ಗೆ ಹಲವು ಸಿಂಡಿಕೇಟ್ ಸದಸ್ಯರು ಮತ್ತು ಹಣಕಾಸು ಅಧಿಕಾರಿಗಳು ಸಿಂಡಿಕೇಟ್ ಸಭೆಗಳಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದರು. ಈ ಬಗ್ಗೆ ಪರಿಶೀಲನೆ ನಡೆಸಲು ಕುಲಪತಿ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಸಹ ರಚಿಸಲಾಗಿತ್ತು. ಆದರೆ, ಕಳೆದ ಒಂದು ವರ್ಷದಲ್ಲಿ ಸಮಿತಿಯು ಒಂದೂ ಸಭೆಯನ್ನು ನಡೆಸಿಲ್ಲ.

'ಮೊದಲು ಎಸ್‌ಬಿಐನಲ್ಲಿ ಆನ್‌ಲೈನ್ ಮೂಲಕ ಹಣ ಸಂಗ್ರಹಿಸಲಾಗುತ್ತಿತ್ತು. ಆದರೆ, ವಿಶ್ವವಿದ್ಯಾಲಯು ಆ್ಯಕ್ಸಿಸ್ ಬ್ಯಾಂಕ್‌ಗೆ ಬದಲಾಯಿಸಿತು. ಅಂದಿನಿಂದಲೂ ನಾವು ಆಕ್ಷೇಪ ವ್ಯಕ್ತಪಡಿಸುತ್ತಾ ಬಂದಿದ್ದೇವೆ. ಆದರೆ, ಇಲ್ಲಿಯವರೆಗೆ ಯಾವುದೇ ಕ್ರಮಕೈಗೊಂಡಿಲ್ಲ' ಎಂದು ಸಿಂಡಿಕೇಟ್ ಸದಸ್ಯರೊಬ್ಬರು ತಿಳಿಸಿದ್ದಾರೆ.



ಮಾನವಸರಪಳಿ ನಿರ್ಮಿಸಿ ಪ್ರತಿಭಟನೆ ನಡೆಸಿದ ಕಾರ್ಯಕರ್ತರು, ತಹಶೀಲ್ದಾರ್ ಕೆ.ನರಸಿಂಹಮೂರ್ತಿ ಅವರಿಗೆ ಮನವಿ ಸಲ್ಲಿಸಿದರು

ಭೂಸ್ವಾಧೀನ ಪ್ರಕ್ರಿಯೆ ರದ್ದತಿಗೆ ಒತ್ತಾಯ

ಯಲಹಂಕ: ಉದ್ದೇಶಿತ ಡಾ.ಶಿವರಾಮಕಾರಂತ ಬಡಾವಣೆ ಯೋಜನೆಗಾಗಿ ಬಿಡಿಎ ಕೈಗೊಂಡಿರುವ ಭೂಸ್ವಾಧೀನ ಪ್ರಕ್ರಿಯೆಯನ್ನು ಕೂಡಲೇ ರದ್ದುಗೊಳಿಸುವಂತೆ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಬೇಕೆಂದು ಒತ್ತಾಯಿಸಿ, ದಲಿತ ಸಂಘರ್ಷ ಸಮಿತಿ (ಸಂಯೋಜಕ) ಬೆಂಗಳೂರು ನಗರ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಬಡಾವಣೆ ಯೋಜನೆ ವ್ಯಾಪ್ತಿಯ ವಿವಿಧ ಗ್ರಾಮಗಳ ಸಂತ್ರಸ್ತ ರೈತರು ಪೊಲೀಸ್ ಠಾಣೆ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಕೆಲಕಾಲ ಮಾನವ ಸರಪಳಿ ನಿರ್ಮಿಸಿದ ಪ್ರತಿಭಟನಕಾರರು, ಬಿಡಿಎ ಹಾಗೂ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುವ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ಈ ಭಾಗದ ವಾಹನ ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು.

ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಕರಾಳ ಕೃಷಿ ಕಾಯಿದೆಗಳನ್ನು ರದ್ದುಗೊಳಿಸುವಂತೆ ಒಂದು ವರ್ಷದಿಂದ ದೆಹಲಿಯಲ್ಲಿ ರೈತರು ನಡೆಸುತ್ತಿರುವ ಧರಣಿಗೆ ಬೆಂಬಲ ಸೂಚಿಸಿದರು.

ತಹಶೀಲ್ದಾರ್ ಕೆ.ನರಸಿಂಹಮೂರ್ತಿ ಅವರಿಗೆ ಮನವಿ ಸಲ್ಲಿಸಿದರು. ಸಮಿತಿಯ ರಾಜ್ಯ ಸಂಯೋಜಕ ವಿ.ನಾಗರಾಜ್, ಬೆಂಗಳೂರು ನಗರಜಿಲ್ಲಾ ಸಂಯೋಜಕ ರಾಮಗೊಂಡನಹಳ್ಳಿ ರಮೇಶ್, ಗ್ರಾಮಪಂಚಾಯಿತಿ ಮಾಜಿ ಅಧ್ಯಕ್ಷ ಮುನಿರಾಜು, ಜೆಡಿಎಸ್ ಸೇವಾದಳ ರಾಜ್ಯಘಟಕದ ಅಧ್ಯಕ್ಷ ಬಸವರಾಜ ಪಾದಯಾತ್ರಿ, ಯಲಹಂಕ ಬ್ಲಾಕ್ ಕಾಂಗ್ರೆಸ್ ಎಸ್.ಸಿ ಘಟಕದ ಅಧ್ಯಕ್ಷ ಎಸ್.ಸುರೇಶ್ ಮೃತ್ಯುಂಜಯ ಪಾಲ್ಗೊಂಡಿದ್ದರು.

ಕಾರ್ಡ್ ರಸ್ತೆ ಮೇಲ್ಸೇತುವೆ ಉದ್ಘಾಟನೆಗೆ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಾಜಿನಗರದ ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಶಿವನಗರ ಬಳಿ ನಿರ್ಮಾಣವಾಗುತ್ತಿರುವ ಮೇಲ್ಸೇತುವೆ ಕಾಮಗಾರಿ ಬಹುತೇಕ ಮುಕ್ತಾಯಗೊಂಡಿದ್ದು, ಅಂತಿಮ ಹಂತದ ಕಾಮಗಾರಿಯನ್ನು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸೋಮವಾರ ಪರಿಶೀಲಿಸಿದರು.

ಶಿವನಗರ 1ನೇ ಮುಖ್ಯರಸ್ತೆ ಮತ್ತು 8ನೇ ಮುಖ್ಯ ರಸ್ತೆಯಲ್ಲಿ 655 ಮೀಟರ್ ಉದ್ದದ ಮೇಲ್ಸೇತುವೆಯನ್ನು ₹71.98 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಮೇಲ್ಸೇತುವೆಯಲ್ಲಿ 7.5 ಮೀಟರ್ ಉದ್ದದ 4 ಪಥಗಳಿವೆ. ಬಹುತೇಕ ಡಾಂಬರೀಕರಣ ಕಾಮಗಾರಿ ಮುಗಿದಿದ್ದು, ರ‍್ಯಾಂಪ್ ಬಳಿ ಮಾತ್ರ ಡಾಂಬರು ಕಾಮಗಾರಿ ನಡೆಯಬೇಕಿದೆ.

ಬೀದಿ ದೀಪ ಅಳವಡಿಕೆ, ಸೇತುವೆ ಮೇಲೆ ಮತ್ತು ಕೆಳಗೆ ಸಸಿ ನೆಡುವ ಕಾಮಗಾರಿ ಬಾಕಿ ಇದೆ. ಅವೆಲ್ಲವನ್ನೂ ಕೂಡಲೇ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಸವೇಶ್ವರನಗರ ಜಂಕ್ಷನ್ ಹಾಗೂ 72ನೇ ಕ್ರಾಸ್ ರಾಜಾಜಿನಗರ ಮೇಲುಸೇತುವೆ ಕಾಮಗಾರಿ ಪ್ರಗತಿಯಲ್ಲಿದ್ದು, ಅದನ್ನೂ ತ್ವರಿತವಾಗಿ ಪೂರ್ಣಗೊಳಿಸಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ತಿಳಿಸಿದರು.

ರಾಜಾಜಿನಗರದ ಪೇರೆಂಟ್ಸ್ ಶಾಲೆ ಹತ್ತಿರದ ಪಾಲಿಕೆಯ ಆಟದ ಮೈದಾನ ₹2 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಯಾಗುತ್ತಿದ್ದು, ವೀಕ್ಷಕ ಗ್ಯಾಲರಿ, ಮೈದಾನದ ಸುತ್ತಲೂ ಗೋಡೆ ನಿರ್ಮಾಣ ಕಾಮಗಾರಿ ಮುಗಿದಿದೆ. ಬಾಕಿ ಕಾಮಗಾರಿಗೆ ₹2.50 ಕೋಟಿ ಹೆಚ್ಚುವರಿ ಅನುದಾನ ಅವಶ್ಯಕತೆ ಇದ್ದು, ಬಿಡುಗಡೆ ಮಾಡುವಂತೆ ಆಯುಕ್ತರಿಗೆ ಶಾಸಕ ಎಸ್.ಸುರೇಶ್‌ಕುಮಾರ್ ಮನವಿ ಮಾಡಿದರು.

ಹಾವನೂರು ವೃತ್ತದಿಂದ ಶಂಕರಮಠ ವೃತ್ತದವರೆಗಿನ ರಸ್ತೆ ಹದಗೆಟ್ಟಿದ್ದು, ಕೂಡಲೇ ಡಾಂಬರು ಹಾಕಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಶಂಕರಮಠ ವೃತ್ತದ ಬಳಿ ಬಸವೇಶ್ವರನಗರ ಕಡೆ ದೊಡ್ಡ ವಾಹನಗಳ ತಿರುವಿಗೆ ಕಷ್ಟವಾಗುತ್ತಿದ್ದು, ವಾಹನಗಳ ಸುಗಮ ತಿರುವಿಗೆ ಅನುಕೂಲ ಆಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಶಾಸಕರು ತಿಳಿಸಿದರು.

ರಾಜಾಜಿನಗರ 19ನೇ ಮುಖ್ಯರಸ್ತೆಯಲ್ಲಿ ವಾರ್ಡ್ ಅನುದಾನದಲ್ಲಿ ವಿವಿಧೋದ್ದೇಶ ಕಟ್ಟಡ ನಿರ್ಮಾಣವಾಗುತ್ತಿದ್ದು, ಶೇ 40ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಅನುದಾನ ಕೊರತೆಯಿಂದ ಕಾಮಗಾರಿ ಸ್ಥಗಿತಗೊಂಡಿತ್ತು. ಇದೀಗ ಶಾಸಕರ ಅನುದಾನದಿಂದ ₹3.50 ಕೋಟಿ ನೀಡಿದ್ದು, ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ ಎಂದು ಗೌರವ್ ಗುಪ್ತ ವಿವರಿಸಿದರು.

ದಯಾನಂದನಗರ ವಾರ್ಡ್‌ನಲ್ಲಿ ನಿರ್ಮಾಣ ಹಂತದಲ್ಲಿರುವ ವಿವಿಧೋದ್ದೇಶ ಕಟ್ಟಡ ಕಾಮಗಾರಿಯನ್ನೂ ಆಯುಕ್ತರು ಪರಿಶೀಲಿಸಿದರು. ಇದಕ್ಕೂ ಶಾಸಕರ ನಿಧಿಯಿಂದ ₹3 ಕೋಟಿ ಅನುದಾನ ದೊರೆತಿದೆ ಎಂದರು.

ವಲಯ ಜಂಟಿ ಆಯುಕ್ತ ಶಿವಸ್ವಾಮಿ, ಮುಖ್ಯ ಎಂಜಿನಿಯರ್ (ಯೋಜನೆ) ಲೋಕೇಶ್, ವಲಯ ಮುಖ್ಯ ಎಂಜಿನಿಯರ್ ವಿಶ್ವನಾಥ್ ಇದ್ದರು.



ಕಾರ್ಡ್ ರಸ್ತೆಯಲ್ಲಿ ಶಿವನಗರ ವೃತ್ತದ ಮೇಲ್ಸೇತುವೆ ಕಾಮಗಾರಿ ಪೂರ್ಣಗೊಂಡಿರುವುದು

ನಗರದಲ್ಲಿ ಜೋರು ಮಳೆ

ಬೆಂಗಳೂರು: ನಗರದ ಹಲವೆಡೆ ಸೋಮವಾರ ಸಂಜೆ ಜೋರು ಮಳೆ ಸುರಿಯಿತು. ಗಾಳಿಯೂ ಜೋರಾಗಿ ಬೀಸಿದ್ದರಿಂದ ಕೆಲವೆಡೆ ಮರಗಳು ಉರುಳಿದ್ದವು. ಹಲವೆಡೆ ಕೊಂಬೆಗಳು ಕತ್ತರಿಸಿ ರಸ್ತೆ ಮೇಲೆಯೇ ಬಿದ್ದಿದ್ದವು.

ಹಲವು ದಿನಗಳಿಂದ ಮೋಡ ಕವಿದ ವಾತಾವರಣ ನಗರದಲ್ಲಿದೆ. ಆಗಾಗ ಮಳೆ ಆಗುತ್ತಿದೆ. ಸೋಮವಾರ ಸಂಜೆ ಆರಂಭವಾದ ಮಳೆ ಹಲವೆಡೆ ರಾತ್ರಿಯವರೆಗೂ ಸುರಿಯಿತು. ರಸ್ತೆ ಮೇಲೆಯೇ ನೀರು ಹರಿಯಿತು.

ವಿಜಯನಗರ, ರಾಜರಾಜೇಶ್ವರಿನಗರ, ಕೆಂಗೇರಿ, ಗಿರಿನಗರ, ರಾಜಾಜಿನಗರ, ಮಲ್ಲೇಶ್ವರ, ಯಶವಂತಪುರ, ಪೀಣ್ಯ, ಯಲಹಂಕ, ವಿದ್ಯಾರಣ್ಯಪುರ, ಮಹದೇವಪುರ, ಲಕ್ಕಸಂದ್ರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಅಬ್ಬರ ಜೋರಾಗಿತ್ತು.

ರಾಜರಾಜೇಶ್ವರಿನಗರ, ಕೆಂಗೇರಿ ಹಾಗೂ ವಿದ್ಯಾರಣ್ಯಪುರದಲ್ಲಿ ತಲಾ ಒಂದೊಂದು ಮರಗಳು ಬಿದ್ದಿದ್ದವು. ಅವುಗಳನ್ನು ಸ್ಥಳೀಯರೇ ತೆರವು ಮಾಡಿದರು. ಹಲವೆಡೆ ಮರದ ಕೊಂಬೆಗಳು ಬಿದ್ದಿದ್ದರಿಂದ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಯಿತು. ಇಂಥ ರಸ್ತೆಗಳಲ್ಲಿ ವಾಹನಗಳು ನಿಧಾನಗತಿಯಲ್ಲಿ ಸಾಗಿದವು.

ರಸ್ತೆಯ ಅಕ್ಕ–ಪಕ್ಕದ ಕಾಲುವೆಗಳಲ್ಲಿ ನೀರು ತುಂಬಿ ಹರಿಯಿತು. ಅದೇ ನೀರು ರಸ್ತೆಗೆ ಬಂದಿತ್ತು. ಮೆಜೆಸ್ಟಿಕ್ ಕೆಳಸೇತುವೆಯಲ್ಲಿ ನೀರು ಹರಿಯುತ್ತಿದ್ದ ಹಾಗೂ ಅದರಲ್ಲೇ ವಾಹನಗಳು ಸಂಚರಿಸಿದ ದೃಶ್ಯ ಕಂಡುಬಂತು.

'ಸೋಮವಾರ ಸಂಜೆ ನಗರದಲ್ಲಿ ಬಹುತೇಕ ಕಡೆ ಉತ್ತಮ ಮಳೆ ಆಗಿದೆ. ತೀವ್ರ ಹಾನಿ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ಹೃದಯ ತಪಾಸಣೆ ಶಿಬಿರ ನಾಳೆ

ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ವೈದ್ಯಕೀಯ ಘಟಕವು ಬಸವನಗುಡಿ ವಿಧಾನಸಭಾ ಕ್ಷೇತ್ರದಲ್ಲಿ ಉಚಿತ ಹೃದಯ ತಪಾಸಣಾ ಶಿಬಿರ ಹಮ್ಮಿಕೊಂಡಿದೆ.

'ಇದೇ 29ರಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 1 ಗಂಟೆವರೆಗೆ ನಡೆಯುವ ಈ ಶಿಬಿರದಲ್ಲಿ ಆಸ್ಟರ್ ಆರ್.ವಿ. ಆಸ್ಪತ್ರೆಯ ವೈದ್ಯರು ಭಾಗವಹಿಸಲಿದ್ದು ಇಸಿಜಿ, ರಕ್ತದಲ್ಲಿನ ಸಕ್ಕರೆ ಪ್ರಮಾಣ ಸೇರಿದಂತೆ ಇತರ ತಪಾಸಣೆಗಳನ್ನು ಮಾಡಲಿದ್ದಾರೆ. ದಂತ ತಪಾಸಣೆಯೂ ನಡೆಯಲಿದೆ' ಎಂದು ವೈದ್ಯಕೀಯ ಘಟಕದ ಪ್ರಧಾನ ಕಾರ್ಯದರ್ಶಿ ಡಾ.ಶಂಕರ ದ್ವಾರಕನಾಥ್ ಬೆಳ್ಳೂರ್ ತಿಳಿಸಿದ್ದಾರೆ.

ಶ್ರೀನಗರದ ಕಾಳಿದಾಸ ವೃತ್ತದಲ್ಲಿರುವ ಎಕ್ಸಲೆಂಟ್ ಇಂಗ್ಲಿಷ್ ಪ್ರೌಢಶಾಲೆಯ ಆವರಣದಲ್ಲಿ ಶಿಬಿರ ಆಯೋಜಿಸಲಾಗಿದೆ. ಹೆಸರು ನೋಂದಾಯಿಸಲು 9606809309ಗೆ ಕರೆ ಮಾಡಬಹುದು.

ಎಸ್‌ಟಿಪಿ ಸ್ಥಳಾಂತರ: ತನಿಖೆಗೆ ಆದೇಶ

ಬೆಂಗಳೂರು: ಬೆಳಗಾವಿಯ ಅಲರವಾಡದಲ್ಲಿ ತ್ಯಾಜ್ಯ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ) ನಿರ್ಮಾಣಕ್ಕೆ ₹2 ಕೋಟಿ ವೆಚ್ಚ ಮಾಡಿದ ಬಳಿಕ ಬೇರೆಡೆಗೆ ಸ್ಥಳಾಂತರಿಸಲು ಮುಂದಾಗಿರುವ ಪ್ರಕರಣದ ಬಗ್ಗೆ ಲೋಕಾಯುಕ್ತ ತನಿಖೆಗೆ ಹೈಕೋರ್ಟ್ ಆದೇಶಿಸಿದೆ.

ಬೆಳಗಾವಿ ನಿವಾಸಿಗಳಾದ ನಾರಾಯಣ ಬೈರು ಸಾವಂತ್ ಸೇರಿ ಐವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್‌ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿ ಈ ಆದೇಶ ನೀಡಿತು.

ಬೆಳಗಾವಿ ಪಾಲಿಕೆ ಆಯುಕ್ತರು ಸಲ್ಲಿಸಿದ್ದ ಪ್ರಮಾಣ ಪತ್ರದಲ್ಲಿ ಹಣ ವೆಚ್ಚ ಮಾಡಿಲ್ಲ ಎಂದು ಹೇಳಲಾಗಿದೆ. ಆದರೆ, ಬೇರೆ ದಾಖಲೆಗಳಲ್ಲಿ ಹಣ ಖರ್ಚಾಗಿರುವುದು ಉಲ್ಲೇಖವಾಗಿದೆ. ಹೀಗಾಗಿ, ಈ ಪ್ರಕರಣದಲ್ಲಿ ತನಿಖೆಯ ಅಗತ್ಯವಿದೆ ಎಂದು ತಿಳಿಸಿದ ಪೀಠ, ವಿಚಾರಣೆಯನ್ನು ನ.25ಕ್ಕೆ ಮುಂದೂಡಿತು.

ಅಲರವಾಡದಿಂದ ಹಲಗೆ ಗ್ರಾಮಕ್ಕೆ ಸ್ಥಳಾಂತರ ಮಾಡಿರುವುದಕ್ಕೆ ಕಾರಣ ಒಳಗೊಂಡ ಹೆಚ್ಚುವರಿ ಪ್ರಮಾಣ ಪತ್ರ ಸಲ್ಲಿಸುವಂತೆ ಪಾಲಿಕೆ ಆಯುಕ್ತರಿಗೆ ಪೀಠ ಸೂಚಿಸಿತು.

ಹೊರಮಾವು, ರಾಮಮೂರ್ತಿ ನಗರ ವಾರ್ಡ್ ವ್ಯಾಪ್ತಿಯಲ್ಲಿ ಜನರ ಪಡಿಪಾಟಲು

ಹದಗೆಟ್ಟ ರಸ್ತೆ: ಸವಾರರು ಹೈರಾಣ

• ಶಿವರಾಜ್ ಮೌರ್ಯ

ಕೆ.ಆರ್.ಪುರ: ದಾರಿಯುದ್ದಕ್ಕೂ ನೂರಾರು ಹಳ್ಳಗಳು, ಮಳೆ ಬಂದರೆ ಕೆಸರು ಗದ್ದೆಯಂತಾಗುವ ರಸ್ತೆಗಳು, ರಾತ್ರಿಯಾದರೆ ಸಂಚರಿಸಲು ಆಗದೆ ಪರಿತಪಿಸುವ ಸಾರ್ವಜನಿಕರು...

ಇದು ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ಹೊರಮಾವು ಮತ್ತು ರಾಮಮೂರ್ತಿ ನಗರ ವಾರ್ಡ್ ವ್ಯಾಪ್ತಿಯ ಬಡಾವಣೆಗಳ ರಸ್ತೆಗಳ ಸ್ಥಿತಿ. ಕಳೆದ ಎರಡು ವರ್ಷಗಳ ಹಿಂದೆ 110 ಹಳ್ಳಿಗಳಿಗೆ ಜಲಮಂಡಳಿಯ ಕಾವೇರಿ ನೀರು ಒದಗಿಸುವ ಯೋಜನೆಯ ಕಾಮಗಾರಿಗಳಿಂದಾಗಿ ರಸ್ತೆಗಳು ಪೂರ್ಣ ಹದಗೆಟ್ಟಿವೆ.

ಕಾವೇರಿ ನೀರು ಪೂರೈಕೆ ಕೊಳವೆ ಹಾಗೂ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಯೋಜನೆ ಒಂದು ವರ್ಷದ ಹಿಂದೆ ಪೂರ್ಣಗೊಂಡರೂ ರಸ್ತೆ ಮರು ನಿರ್ಮಾಣ ಮಾತ್ರ ಆಗಿಲ್ಲ. ರಸ್ತೆಗೆ ಡಾಂಬರ್ ಹಾಕಲು ಸ್ಥಳೀಯರು ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನ ಆಗಿಲ್ಲ.

ಕಾವೇರಿ ಪೈಪ್‌ಲೈನ್ ಹಾಗೂ ಒಳಚರಂಡಿ ಕಲ್ಪಿಸಲು ಅಗೆದ ರಸ್ತೆಗಳು ಈಗ ತಗ್ಗು ದಿಣ್ಣೆಗಳಿಂದ ಕೂಡಿವೆ. ಒಳಚರಂಡಿ ಕಲ್ಪಿಸುವ ಸಂಧರ್ಭದಲ್ಲಿ ರಸ್ತೆ ಆಗೆದು ಸಮರ್ಪಕವಾಗಿ ಮುಚ್ಚದ ಕಾರಣ ನೂರಾರು ಹೊಂಡಗಳು ನಿರ್ಮಾಣವಾಗಿ ಅಪಘಾತಗಳು ಸಂಭವಿಸುತ್ತಿವೆ.

ಹೊರಮಾವು –ಅಗರ ಮುಖ್ಯ ರಸ್ತೆಯ ವೃತ್ತದಿಂದ ಕಲ್ಕೆರೆ ಗ್ರಾಮದ ವರೆಗೂ, ಕನಕಗಿರಿ ಬಡಾವಣೆಯ ಮುಖ್ಯ ರಸ್ತೆಗಳು, ಹೊರಮಾವು ಮುಖ್ಯ ರಸ್ತೆಯಿಂದ ಬಂಜಾರ ಬಡಾವಣೆಯ ವೃತ್ತದವರೆಗೂ, ಹೊಯ್ಸಳನಗರ, ಗೆದ್ದಲಹಳ್ಳಿ, ವಿನಾಯಕ ಬಡಾವಣೆಯ ರಸ್ತೆಗಳು ಸಂಪೂರ್ಣವಾಗಿ ಹದಗೆಟ್ಟಿವೆ.

ಮಳೆ ಬಿದ್ದಾಗಲಂತೂ ರಸ್ತೆಗಳಲ್ಲಿ ರಸ್ತೆ ಗುಂಡಿಯಲ್ಲಿ ಬಿದ್ದು ವಾಹನ ಸವಾರರು ತೊಂದರೆ ಅನುಭವಿಸುತ್ತಿದ್ದಾರೆ. ಹೊರಮಾವು, ಜಯಂತಿನಗರ, ಕಲ್ಕೆರೆ, ಚನ್ನಸಂದ್ರ, ಅಗರ, ಜ್ಯೋತಿನಗರ, ಕನಕನಗರ ನಿವಾಸಿಗಳು ದಿನನಿತ್ಯದ ಕೆಲಸಗಳಿಗೆ ಈ ರಸ್ತೆಗಳಲ್ಲಿ ಸಂಚರಿಸಬೇಕಾದ ಅನಿವಾರ್ಯ ಸ್ಥಿತಿ ಇದೆ. ಈ ಹದಗೆಟ್ಟ ರಸ್ತೆಯಲ್ಲಿ ವಾಹನ ಸವಾರರ ಹೈರಾಣಾಗಿದ್ದಾರೆ.

‘ಹಲವಾರು ಬಾರಿ ರಾಜಕೀಯ ಮುಖಂಡರು ಹಾಗೂ ಅಧಿಕಾರಿಗಳು ಸಮಸ್ಯೆ ಆಲಿಸಲು ಬಂದಾಗ ಮಾತ್ರ ಕಾಟಚಾರಕ್ಕೆ ಗುಂಡಿಗಳಿಗೆ ಮಣ್ಣು ಹಾಕಿಸುತ್ತಾರೆ. ಮತ್ತೆ ಒಂದು ವಾರದೊಳಗೆ ಅದೇ ಸ್ಥಿತಿ ಮರುಕಳಿಸುತ್ತದೆ’ ಎಂದು ನಿವಾಸಿಗಳು ಬೇಸರ ವ್ಯಕ್ತಪಡಿಸುತ್ತಾರೆ.

‘ಕಾವೇರಿ ನೀರು ಒದಗಿಸುವ ಯೋಜನೆ ಕೆಲಸ ಪ್ರಗತಿ ಇದ್ದುದರಿಂದ ದುರಸ್ತಿ ಕೆಲಸ ವಿಳಂಬವಾಗಿದೆ. ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಡಿ ₹4 ಕೋಟಿ ವೆಚ್ಚದಲ್ಲಿ ಮುಖ್ಯರಸ್ತೆಗಳ ಅಭಿವೃದ್ಧಿಗೆ ಟೆಂಡರ್ ಪ್ರಗತಿಯಲ್ಲಿದೆ. ತಕ್ಷಣವೇ ಕೆಲಸ ಆರಂಭಿಸಲಾಗುವುದು’ ಎಂದು ಬಿಬಿಎಂಪಿ ಸಹಾಯಕ ಎಂಜಿನಿಯರ್ ರಮೇಶ್ ತಿಳಿಸಿದರು.

ಪ್ರಜಾವಾಣಿ ವಿಶೇಷ



ಹೊರಮಾವು ಮುಖ್ಯರಸ್ತೆಯಿಂದ ಬಂಜಾರ ಬಡಾವಣೆಯ ವೃತ್ತದವರೆಗೂ ಹದಗೆಟ್ಟಿರುವ ಮುಖ್ಯ ರಸ್ತೆ



ಹೊರಮಾವು ಅಗರ ಮುಖ್ಯರಸ್ತೆಯ ವೃತ್ತದಿಂದ ಕಲ್ಕೆರೆ ಗ್ರಾಮದವರೆಗೂ ಹದಗೆಟ್ಟಿರುವ ಮುಖ್ಯ ರಸ್ತೆ



ರಸ್ತೆ ಹಾಳಾಗಿರುವುದರಿಂದ ಅಂಗಡಿಗಳಿಗೆ ಯಾರೂ ಬರುತ್ತಿಲ್ಲ. ಒಂದು ವರ್ಷದಿಂದ ವಹಿವಾಟಿಲ್ಲದೆ ಅಂಗಡಿ ಮುಚ್ಚುವ ಸ್ಥಿತಿ ಒದಗಿದೆ

ಶಿವಪ್ರಸಾದ್ ಅಲ್ಲೂ
ದಿನಸಿ ಅಂಗಡಿ ಮಾಲಿಕ



ರಾಜಕೀಯ ನಾಯಕರು ಸಮಸ್ಯೆ ಅಲಿಸದೆ ಸುಮ್ಮನಾಗುತ್ತಾರೆ. ಮಳೆಗಾಲದಲ್ಲಿ ಈ ರಸ್ತೆಗಳಲ್ಲಿ ಸಂಚರಿಸಲು ಆಗುತ್ತಿಲ್ಲ. ಆದಷ್ಟು ಬೇಗ ಸಮಸ್ಯೆ ಬಗೆಹರಿಸಬೇಕು

ಚೆಲುವ
ಆಟೋ ಚಾಲಕ



ಬಂಜಾರ ಬಡಾವಣೆಯ ರಸ್ತೆ ಹದ ಗೆಟ್ಟಿದೆ. ದಿನನಿತ್ಯ ಅಪಘಾತ ಸಂಭವಿಸಿ ಜನ ಹೈರಾಣಾಗಿದ್ದಾರೆ. ಅಧಿಕಾರಿಗಳು ಸಮಸ್ಯೆ ಬಗೆಹರಿಸದಿದ್ದರೆ ಹೋರಾಟ ಹಮ್ಮಿಕೊಳ್ಳಲಾಗುವುದು

ಸುನೀಲ್ ಕುಮಾರ್, ರಾಮಮೂರ್ತಿನಗರ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಮುಖಂಡ

ಎಸ್‌ಐಟಿ ವರದಿ ಸಲ್ಲಿಸಲು ಅನುಮತಿ ನಿರಾಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕ ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣದಲ್ಲಿ ವಿಶೇಷ ತನಿಖಾ ತಂಡ(ಎಸ್‌ಐಟಿ) ಸಿದ್ಧಪಡಿಸಿರುವ ವರದಿ ಸಲ್ಲಿಸಲು ಅನುಮತಿ ನೀಡಲು ಹೈಕೋರ್ಟ್ ನಿರಾಕರಿಸಿದೆ.

ಎಸ್‌ಐಟಿ ರಚನೆ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಷರತ್ತುಗಳಿಗೆ ಒಳಪಟ್ಟು ಆದೇಶ ಸಲ್ಲಿಸಲು ಅವಕಾಶ ನೀಡಬೇಕು ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ ಕೋರಿದರು. ಇದಕ್ಕೆ ಆಕ್ಷೇಪ ಸಲ್ಲಿಸಿದ ಸಂತ್ರಸ್ತೆ ಪರ ವಕೀಲೆ ಇಂದಿರಾ ಜೈಸಿಂಗ್, ‘ಎಸ್‌ಐಟಿ ರಚನೆಯ ಸಿಂಧುತ್ವವನ್ನೇ ಅರ್ಜಿದಾರರು ಪ್ರಶ್ನಿಸಿದ್ದಾರೆ. ನ್ಯಾಯಾಲಯ ಈ ಪ್ರಕರಣ ಇತ್ಯರ್ಥಪಡಿಸುವ ತನಕ ವರದಿ ಸಲ್ಲಿಸಲು ಅನುಮತಿ ನೀಡಬಾರದು’ ಎಂದು ಕೋರಿದರು.

ವರದಿ ಸಲ್ಲಿಸಲು ಅನುಮತಿ ನೀಡುವ ಮುನ್ನ ಹಲವು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಅಗತ್ಯವಿದೆ ಎಂದು ತಿಳಿಸಿದ ಪೀಠ, ವಿಚಾರಣೆಯನ್ನು ಅ.7ಕ್ಕೆ ಮುಂದೂಡಿತು.



‘ಕನ್ನಡ ಬರವಣಿಗೆ ಲಘುವಾಗಿ ಪರಿಗಣಿಸದಿರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡದ ವಿಚಾರದಲ್ಲಿ ಕನ್ನಡ ಬರವಣಿಗೆಯನ್ನು ಲಘುವಾಗಿ ಕಾಣಬಾರದು’ ಎಂದು ಸಾಹಿತಿ ನಿಡಸಾಲೆ ಪುಟ್ಟಸ್ವಾಮಯ್ಯ ಅಭಿಪ್ರಾಯಪಟ್ಟರು.

ನಗರದ ಕೆಂಪೇಗೌಡ ನಿರ್ವಹಣಾ ಅಧ್ಯಯನ ವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಸದ್ಭಾವನಾ ಪ್ರತಿಷ್ಠಾನ ಭಾನುವಾರ ಆಯೋಜಿಸಿದ್ದ 'ಕನ್ನಡ ಸ್ಪಷ್ಟ ಬರೆವಣಿಗೆ ಕಮ್ಮಟ' ಉದ್ಘಾಟಿಸಿ ಅವರು ಮಾತನಾಡಿದರು.

‘ಗ್ರಾಮೀಣ ಪ್ರದೇಶದ ಜನರು ಇಂದು ಹೆಚ್ಚು ಬಳಸುವುದರಿಂದ ಕನ್ನಡ ಉಳಿದಿದೆ. ನಗರ ಪ್ರದೇಶಗಳಲ್ಲಿ ಇಂಥ ಕಮ್ಮಟಗಳ ಮೂಲಕ ಕನ್ನಡವನ್ನು ಸ್ಪಷ್ಟವಾಗಿ ಬರೆಯುವ ಮತ್ತು ಬಳಸುವ ಮೂಲಕ ಕನ್ನಡವು ಉತ್ಕೃಷ್ಟಗೊಳ್ಳಬೇಕು’ ಎಂದು ಆಶಿಸಿದರು.

ಕಮ್ಮಟದ ನಿರ್ದೇಶಕರಾದ ಕೆ. ರಾಜಕುಮಾರ್, ‘ಕಲಿಯಲಿಕ್ಕೆ ಕತ್ತೆಯಾಗು ಎಂಬ ಮಾತಿದೆ. ಇಂಥ ಕಮ್ಮಟ ಕನ್ನಡ ಸ್ಪಷ್ಟ ಬರವಣಿಗೆ ಕಲಿಯಲು ಉಪಯುಕ್ತ’ ಎಂದು ಅಭಿಪ್ರಾಯಪಟ್ಟರು.

ಸಂಸ್ಥೆಯ ಪ್ರಾಂಶುಪಾಲ ಮಹೇಶ್ ಅಧ್ಯಕ್ಷತೆ ವಹಿಸಿದ್ದರು. ಸದ್ಭಾವನಾ ಪ್ರತಿಷ್ಠಾನದ ಅಧ್ಯಕ್ಷ ಎಂ. ಪ್ರಕಾಶಮೂರ್ತಿ, ಡಾ.ವೆಂಕಟೇಶ್, ಎಂ.ಜಿ. ದಯಾನಂದ ಕಟ್ಟೆ ಇದ್ದರು. ನೂರಕ್ಕೂ ಹೆಚ್ಚು ಶಿಬಿರಾರ್ಥಿಗಳು ಕಮ್ಮಟದಲ್ಲಿ ಭಾಗವಹಿಸಿದ್ದರು.

ಜ್ಞಾನಪೀಠ ಪುರಸ್ಕೃತರು ಅಧ್ಯಯನ ಮಾಡಿದ ಶಾಲೆ

ಸಾಹಿತಿಗಳು ಓದಿದ ಶಾಲೆಗಳಿಗೆ ₹16.88 ಕೋಟಿ ಅನುದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಂಟು ಜ್ಞಾನಪೀಠ ಪುರಸ್ಕೃತರು ಶಿಕ್ಷಣ ಪಡೆದ 11 ಸರ್ಕಾರಿ ಶಾಲೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ₹16.88 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ.

ಈ ಶಾಲೆಗಳ ಅಭಿವೃದ್ಧಿಗಾಗಿ ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದ್ದು, ಇದಕ್ಕೆ ಸಾರ್ವಜನಿಕ ಶಿಕ್ಷಣ ಇಲಾಖೆ ಅನುಮೋದನೆ ನೀಡಿದೆ.

ಎಂಟು ಜ್ಞಾನಪೀಠ ಪುರಸ್ಕೃತರು ಓದಿದ ಶಾಲೆಗಳ ಅಭಿವೃದ್ಧಿಗೆ ₹16 ಕೋಟಿ ಬಿಡುಗಡೆ ಮಾಡಿರುವ ಸರ್ಕಾರದ ಕ್ರಮ ಶ್ಲಾಘನೀಯ ಎಂದು ಸರ್ಕಾರ ಮಾಜಿ ಶಿಕ್ಷಣ ಸಲಹೆಗಾರ ಪ್ರೊ.ಎಂ.ಆರ್. ದೊರೆಸ್ವಾಮಿ ಹೇಳಿದ್ದಾರೆ.

ಸರ್ಕಾರಿ ಶಾಲೆಗಳ ಪುನರುತ್ಥಾನಕ್ಕೆ ಸರ್ಕಾರಕ್ಕೆ ಸಲ್ಲಿಸಿದ ನನ್ನ ಮೊದಲನೇ ಶಿಫಾರಸ್ಸಿಗೆ ಮನ್ನಣೆ ಸಿಕ್ಕಿದೆ. ಶಾಲಾ ದತ್ತು ನೀತಿಗೆ ಬಿ.ಎಸ್. ಯಡಿಯೂರಪ್ಪ ಅವರು ಹೊಸ ಆಯಾಮ ನೀಡಿದರು. ಎಲ್ಲ ಚುನಾಯಿತ ಪ್ರತಿನಿಧಿಗಳಿಗೆ ದತ್ತು ಶಾಲೆಗಳ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಜವಾಬ್ದಾರಿ ಮತ್ತು ಅವುಗಳ ಶೈಕ್ಷಣಿಕ ಅಭಿವೃದ್ಧಿಯನ್ನು ವಿಶ್ವವಿದ್ಯಾಲಯಗಳ ವಹಿಸುತ್ತಿರುವುದು ಕರ್ನಾಟಕದಲ್ಲೇ ಮೊದಲು ಎಂದು ಹೇಳಿದ್ದಾರೆ.

ಯಾವ ಶಾಲೆಗೆ ಎಷ್ಟು ಅನುದಾನ

ಜ್ಞಾನಪೀಠ ಪುರಸ್ಕೃತರು	ವಿದ್ಯಾಭ್ಯಾಸ ಮಾಡಿದ ಶಾಲೆ	ಅನುದಾನ
ಕುವೆಂಪು	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತೀರ್ಥಹಳ್ಳಿ	₹51.50 ಲಕ್ಷ
ದ.ರಾ.ಬೇಂದ್ರೆ	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಧಾರವಾಡ	₹5.89 ಕೋಟಿ
ಶಿವರಾಮ ಕಾರಂತ	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೋಟ	₹1.05 ಕೋಟಿ
ಮಾಸ್ತಿ ವೆಂಕಟೇಶ ಅಯ್ಯಂಗಾರ್	ಸ.ಹಿ.ಪ್ರಾ.ಶಾಲೆ,ಶಿವಾರಪಟ್ಟಣ, ಕೋಲಾರ	₹55 ಲಕ್ಷ
ವಿ.ಕೃ.ಗೋಕಾಕ	ಸರ್ಕಾರಿ ಮಜೀದ ಪ.ಪೂ ವಿದ್ಯಾಲಯ,ಸವಣೂರು, ಹಾವೇರಿ ಜಿಲ್ಲೆ	₹2.45 ಕೋಟಿ
ಯು.ಆರ್. ಅನಂತಮೂರ್ತಿ	ಸ.ಹಿ.ಪ್ರಾ.ಶಾಲೆ, ದೂರ್ವಾಸಪುರ, ತೀರ್ಥಹಳ್ಳಿ ತಾಲ್ಲೂಕು	₹52.50 ಲಕ್ಷ
	ಮತ್ತು ಕರ್ನಾಟಕ ಪಬ್ಲಿಕ್ ಶಾಲೆ (ಅಂದು ಸ.ಹಿ.ಪ್ರಾ.ಶಾಲೆ), ಕೋಣಂದೂರು, ತೀರ್ಥಹಳ್ಳಿ ತಾಲ್ಲೂಕು	₹1ಕೋಟಿ
ಗಿರೀಶ್ ಕಾರ್ನಾಡ್	ರಾಯಪ್ಪ ಹುಲೇಕಲ್ ಸ.ಹಿ.ಪ್ರಾ.ಶಾಲೆ,ಶಿರಸಿ	₹91.25 ಲಕ್ಷ ಮತ್ತು
	ಮಾರಿಕಾಂಬಾ ಸರ್ಕಾರಿ ಪ್ರೌಢಶಾಲೆ ಶಿರಸಿ	₹2.21 ಕೋಟಿ
ಚಂದ್ರಶೇಖರ ಕಂಬಾರ	ಸ.ಹಿ.ಪ್ರಾ.ಶಾಲೆ, ಹುಕ್ಕೇರಿ, ಚಿಕ್ಕೋಡಿ	₹1.20 ಕೋಟಿ

- ಕ್ರಿಯಾ ಯೋಜನೆಯನ್ನು 6 ತಿಂಗಳ ಕಾಲಮಿತಿಯಲ್ಲಿ ಕಾರ್ಯಕ್ರಮ ಅನುಷ್ಠಾನಗೊಳಿಸಬೇಕು
- ಈ ಶಾಲೆಗಳಲ್ಲಿ ಪ್ರಯೋಗಾಲಯ, ಗ್ರಂಥಾಲಯ, ಶೌಚಾಲಯ, ಸ್ಮಾರ್ಟ್, ತರಗತಿ, ಪೀಠೋಪಕರಣಗಳು, ಕುಡಿಯುವ ನೀರು, ಕ್ರೀಡಾ ಸಾಮಗ್ರಿಗಳು, ಶಾಲಾ ಗೋಡೆಗಳಿಗೆ ಬಣ್ಣ ಬಳಿಯಲಾಗುವುದು
- ಜ್ಞಾನಪೀಠ ಪುರಸ್ಕೃತರ ಗೌರವವನ್ನು ಹೆಚ್ಚಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು



ಸನ್ಮಾನ

ಕರ್ನಾಟಕ ರಾಜು ಕ್ಷತ್ರಿಯ ಒಕ್ಕೂಟದಿಂದ ಕೋವಿಡ್ ಸೇನಾನಿಗಳಾದ ಏಟ್ರಿಯಾ ಹೋಟೆಲ್ ಸಮೂಹದ ಕೆ.ನಾಗರಾಜು, ನಂದನ ಪ್ಯಾಲೆಸ್‌ನ ಡಾ.ರವಿಚಂದ್ರನ್, ಡಾ.ಮಧುಸೂದನ್ ರಾಜು ಹಾಗೂ ಡಾ.ದೀಪಾ ರಾಜು ಅವರನ್ನು ಸನ್ಮಾನಿಸಲಾಯಿತು. ಒಕ್ಕೂಟದ ಗೌರವಾಧ್ಯಕ್ಷ ರಾಧಾಕೃಷ್ಣ ರಾಜು, ಅಧ್ಯಕ್ಷ ಕೆ.ಶಾಮರಾಜು, ಉಪಾಧ್ಯಕ್ಷ ಕೆ.ವಿ.ಕುಪ್ಪರಾಜು, ಪ್ರಧಾನ ಕಾರ್ಯದರ್ಶಿ ಆರ್.ಚಂದ್ರಶೇಖರ್ ರಾಜು ಮತ್ತು ರವಿಕುಮಾರ್ ರಾಜು ಇದ್ದರು

ಆರ್‌.ಟಿ.ನಗರಕ್ಕೆ ಉಪನೋಂದಣಾಧಿಕಾರಿ ಕಚೇರಿ: ಸಚಿವ ಅಶೋಕ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೋಳನಾಯಕನಹಳ್ಳಿಯಲ್ಲಿನ ಹೆಬ್ಬಾಳ ಉಪನೋಂದಣಾಧಿಕಾರಿ ಕಚೇರಿಯನ್ನು ಮುಂದಿನ ದಿನಗಳಲ್ಲಿ ಆರ್‌.ಟಿ.ನಗರಕ್ಕೆ ಸ್ಥಳಾಂತರಿಸಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದ್ದಾರೆ.

ಸಬ್ ರಿಜಿಸ್ಟ್ರಾರ್ ಕಚೇರಿಯ ಅವ್ಯವಸ್ಥೆ ಬಗ್ಗೆ ಸೆಪ್ಟೆಂಬರ್ 17ರಂದು ‘ಪ್ರಜಾವಾಣಿ’ಯಲ್ಲಿ ವರದಿ ಪ್ರಕಟವಾಗಿತ್ತು. ವಿಧಾನಸಭಾ ಅಧಿವೇಶನದಲ್ಲಿ ಕಾಂಗ್ರೆಸ್‌ನ ರಾಘವೇಂದ್ರ ಹಿಟ್ನಾಳ್ ಪ್ರಶ್ನೆಗೆ ಉತ್ತರಿಸಿರುವ ಸಚಿವರು, ‘ಕಚೇರಿ ಸ್ಥಳಾಂತರಕ್ಕೆ 2021ರ ಆಗಸ್ಟ್ 24ರಂದು ಅನುಮತಿ ನೀಡಲಾಗಿದೆ’ ಎಂದು ತಿಳಿಸಿದ್ದಾರೆ.

‘ಚೋಳನಾಯಕನಹಳ್ಳಿಯಲ್ಲಿರುವ ಕಚೇರಿಗೆ ಸರಿಯಾದ ಪಾರ್ಕಿಂಗ್ ವ್ಯವಸ್ಥೆ ಇಲ್ಲ. ಈ ಕಚೇರಿಯು ಮುಖ್ಯ ರಸ್ತೆಯಿಂದ ತುಂಬಾ ಒಳಗೆ ಇದ್ದು, ಕಿರಿದಾದ ರಸ್ತೆಗಳ ಮೂಲಕ ಹಾದು ಹೋಗಬೇಕಾಗಿರುವುದರಿಂದ ಜನರಿಗೆ ಸಮಸ್ಯೆಯಾಗುತ್ತಿದೆ. ಎಚ್‌ಎಂಟಿ ಲೇಔಟ್‌ನ ಬಾಡಿಗೆ ಕಟ್ಟಡಕ್ಕೆ ಸ್ಥಳಾಂತರ ಮಾಡಲು ಅನುಮತಿ ನೀಡಲಾಗಿದೆ’ ಎಂದು ಅವರು ಹೇಳಿದ್ದಾರೆ.

ಚೋಳನಾಯಕನಹಳ್ಳಿಯ ಬಾಡಿಗೆ ಕಟ್ಟಡವೊಂದರಲ್ಲಿ ಈ ಕಚೇರಿ ಇದೆ. ಆಸ್ತಿ ನೋಂದಣಿ, ವಿವಾಹ ನೋಂದಣಿಗಾಗಿ ನಿತ್ಯ ಈ ಕಚೇರಿಗೆ ನೂರಾರು ಜನರು ಬರುತ್ತಾರೆ. ರಸ್ತೆ ಬದಿಯಲ್ಲಿರುವ ಕಚೇರಿ ಬಳಿ ವಾಹನ ನಿಲುಗಡೆಗೆ ಜಾಗವೇ ಇಲ್ಲ.

ಸರ್ವರ್ ಸಮಸ್ಯೆ ಹಾಗೂ ದಾಖಲೆಗಳ ಸಂಗ್ರಹ ವಿಳಂಬದಿಂದಾಗಿ ಆಸ್ತಿ ನೋಂದಣಿ ಪ್ರಕ್ರಿಯೆ ದಿನಗಟ್ಟಲೆ ಹಿಡಿಯುತ್ತದೆ. ಬೆಳಿಗ್ಗೆ ಕಚೇರಿಗೆ ಬಂದರೆ ಆಸ್ತಿ ನೋಂದಣಿ ಕಾರ್ಯ ಮುಗಿಸುವಷ್ಟರಲ್ಲಿ ಸಂಜೆಯೇ ಆಗುತ್ತದೆ. ರಸ್ತೆ ಬದಿಯಲ್ಲಿ ನಿಲ್ಲಿಸುವುದರಿಂದ ಮೊದಲೇ ಕಿರಿದಾದ ರಸ್ತೆಯಲ್ಲಿ ಬೇರೆ ವಾಹನ ಮತ್ತು ಪಾದಚಾರಿಗಳ ಸಂಚಾರಕ್ಕೆ ತೊಡಕಾಗುತ್ತಿದೆ. ರಸ್ತೆ ಬದಿಯಲ್ಲೂ ಕೆಲವೇ ವಾಹನಗಳ ನಿಲುಗಡೆಗೆ ಅವಕಾಶ ಇರುವುದರಿಂದ ದ್ವಿಚಕ್ರ ವಾಹನ ಮತ್ತು ಕಾರುಗಳಲ್ಲಿ ಕಚೇರಿಗೆ ಬರುವ ಜನ ಪರದಾಡಬೇಕಾಗಿದೆ ಎಂಬುದು ಸ್ಥಳೀಯರ ಅಳಲು.

‘ಸ್ವಚ್ಛತಾ ಆ್ಯಪ್’ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಎಲ್ಲ ನಾಗರಿಕರಿಗೆ ಸ್ವಚ್ಛ ಭಾರತ ಅಭಿಯಾನದಲ್ಲಿ(ನಗರ) ಪಾಲ್ಗೊಳ್ಳಲು ವೇದಿಕೆಯನ್ನು ಕಲ್ಪಿಸುವ ‘ಸ್ವಚ್ಛತಾ ಆ್ಯಪ್ 2.0’ ಅನ್ನು ಕೇಂದ್ರ ಸರ್ಕಾರದ ವಸತಿ ಮತ್ತು ನಗರಾಡಳಿತ ಇಲಾಖೆ ಸೋಮವಾರ ಅನಾವರಣಗೊಳಿಸಿದೆ.

ಈ ಆ್ಯಪ್ ಅನ್ನು 'ಜನಾಗ್ರಹ ಸೆಂಟರ್ ಫಾರ್ ಸಿಟಿಜನ್‌ಶಿಪ್ ಆ್ಯಂಡ್ ಡೆಮಾಕ್ರಸಿ’ ವತಿಯಿಂದ ವಸತಿ ಮತ್ತು ನಗರಾಡಳಿತ ಇಲಾಖೆಗಾಗಿ ಅಭಿವೃದ್ಧಿಪಡಿಸಲಾಗಿದೆ. ಇದರಲ್ಲಿ ನಾಗರಿಕರು ಸ್ವಚ್ಛತೆಗೆ ಸಂಬಂಧಿಸಿದಂತೆ 17 ವರ್ಗಗಳ ಅಡಿಯಲ್ಲಿ ದೂರುಗಳನ್ನು ಒಂಬತ್ತು ಭಾಷೆಗಳಲ್ಲಿ ದಾಖಲಿಸಬಹುದು.

ಸ್ವಚ್ಛತಾ ಆ್ಯಪ್ 2.0ನಲ್ಲಿ ದೇಶದ ನಾಲ್ಕು ಸಾವಿರ ನಗರಗಳಲ್ಲಿ ವಾಸಿಸುತ್ತಿರುವ ಜನರು ದೂರುಗಳನ್ನು ದಾಖಲಿಸಬಹುದು. ಜತೆಗೆ, ನಾಗರಿಕರು ಸಾರ್ವಜನಿಕ ಶೌಚಾಲಯಗಳಿಗೆ ರೇಟಿಂಗ್ ನೀಡಬಹುದು. ಈಗಿರುವ ಶೌಚಾಲಯಗಳ ಸ್ಥಿತಿಯನ್ನು ಸುಧಾರಿಸಿ, ಹೊಸ ಶೌಚಾಲಯಗಳನ್ನು ನಿರ್ಮಿಸಲು ಸ್ವಚ್ಛತಾ ಆಪ್ 2.0 ಪುರಸಭೆಗಳಿಗೆ ಸಹಾಯ ಮಾಡಲಿದೆ. ಸಮಸ್ಯೆಯನ್ನು ಬಗೆಹರಿಸಿದ ನಂತರ ಇಲ್ಲಿ ಚಿತ್ರ ಲಗತ್ತಿಸಿ ಸಾಕ್ಷಿ ನೀಡುವುದು ಕಡ್ಡಾಯಗೊಳಿಸಲಾಗಿದೆ.

‘ಈ ಆ್ಯಪ್ ಮೂಲಕ ವಾರ್ಡ್ ಮಟ್ಟದ ಅಧಿಕಾರಿಗಳಿಗೆ ತಕ್ಷಣ ದೂರುಗಳು ಲಭ್ಯವಾಗಲಿವೆ. ಇದರಿಂದ ತ್ವರಿಗತಿಯಲ್ಲಿ ಸಮಸ್ಯೆಗಳನ್ನು ಬಗೆಹರಿಸಬಹುದಾಗಿದೆ’ ಎಂದು ಜನಾಗ್ರಹದ ನಾಗರಿಕ ಸಹಭಾಗಿತ್ವ ವಿಭಾಗದ ಮುಖ್ಯಸ್ಥ ಶ್ರೀನಿವಾಸ್ ಅಲವಿಲ್ಲಿ ತಿಳಿಸಿದ್ದಾರೆ.

ಮೂತ್ರ ನೆಕ್ಕಿಸಿದ ಪ್ರಕರಣ: ಪಿಎಸ್‌ಐಗೆ ಜಾಮೀನು ನಿರಾಕರಣೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಪರಿಶಿಷ್ಟ ಜಾತಿಯ ಯುವಕನಿಗೆ ಠಾಣೆಯಲ್ಲಿ ಮೂತ್ರ ನೆಕ್ಕಿಸಿದ ಆರೋಪ ಎದುರಿಸುತ್ತಿರುವ ಪಿಎಸ್‌ಐ ಅರ್ಜುನ್ ಅವರಿಗೆ ಜಾಮೀನು ನೀಡಲು ನಗರದ ಒಂದನೇ ಹೆಚ್ಚುವರಿ ಸೆಷನ್ಸ್ ಕೋರ್ಟ್ ಸೋಮವಾರ ನಿರಾಕರಿಸಿದೆ.

ನ್ಯಾಯಾಧೀಶೆ ಬಿ. ಪುಷ್ಪಾಂಜಲಿ ಅವರು ಅರ್ಜಿ ವಿಚಾರಣೆ ನಡೆಸಿದರು. ಕೆಲ ದಿನಗಳ ಹಿಂದೆ ಮಧ್ಯಂತರ ಜಾಮೀನು ಅರ್ಜಿ ತಿರಸ್ಕೃತವಾಗಿತ್ತು.

ಮೂಡಿಗೆರೆ ತಾಲ್ಲೂಕಿನ ಕಿರಗುಂದದ ಪುನೀತ್ ಎಂಬವರಿಗೆ ಗೋಣಿಬೀಡು ಠಾಣೆಯಲ್ಲಿ ಮೂತ್ರ ನೆಕ್ಕಿಸಿದ್ದಾರೆ ಎಂಬ ದೂರಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಅರ್ಜುನ್‌ನನ್ನು ಬೆಂಗಳೂರಿನಲ್ಲಿ ಸೆ.1ರಂದು ಸಿಐಡಿ ಪೊಲೀಸರು ಬಂಧಿಸಿ, ಚಿಕ್ಕಮಗಳೂರು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದರು.

ಹದಗೆಟ್ಟ ರಸ್ತೆಗಳಲ್ಲಿ ಜನರ ಪರದಾಟ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಬಿಸಿಲಾದರೆ ಧೂಳು, ಮಳೆ ಬಂದರೆ ರಸ್ತೆಗಳೆಲ್ಲಾ ಕೆಸರು ಗದ್ದೆ... ಇದು ಶೆಟ್ಟಿಹಳ್ಳಿ ವಾರ್ಡ್ ಅಬ್ಬಿಗೆರೆ ನಿಸರ್ಗ ಬಡಾವಣೆಯ ದೃಶ್ಯ.

ಈ ಬಡಾವಣೆಯಲ್ಲಿ ಸಾವಿರಾರು ಮನೆಗಳಿದ್ದು, ಹದಗೆಟ್ಟ ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ನಿವಾಸಿಗಳು ತಿಣುಕಾಡುತ್ತಿದ್ದಾರೆ. ಒಳ ಚರಂಡಿ ವ್ಯವಸ್ಥೆ ಇಲ್ಲ. ಬೀದಿ ದೀಪವೂ ಇಲ್ಲ ಎಂದು ಜನ ಆಕ್ರೋಶ ವ್ಯಕ್ತಪಡಿಸುತ್ತಾರೆ.

‘ಈ ಭಾಗದಲ್ಲಿ ಏಳು ವರ್ಷಗಳಿಂದ ವಾಸವಾಗಿದ್ದೇವೆ. ರಸ್ತೆಗಳು ಸಂಪೂರ್ಣ ಹದಗೆಟ್ಟಿವೆ. ಮಳೆ ಬಂದಾಗಲಂತೂ ಬೈಕ್ ಓಡಿಸಲು ಕಷ್ಟವಾಗಿದೆ. ತಳ್ಳುವ ಗಾಡಿಯಲ್ಲಿ ತರಕಾರಿ ಮಾರುವವರು ಈ ರಸ್ತೆಗೆ ಹಾಗೂ ಬಡಾವಣೆಗೆ ಬರುವುದೇ ಇಲ್ಲ’ ಎಂದು ಸ್ಥಳೀಯ ನಿವಾಸಿ ಸರಿತಾ ಅಳಲು ತೋಡಿಕೊಂಡರು.

‘ಈ ಬಡಾವಣೆ ಅವ್ಯವಸ್ಥೆಯ ಆಗರವಾಗಿದೆ. ಮಳೆಗಾಲ ಬಂದರೆ ಮಕ್ಕಳು ಮತ್ತು ಹೆಂಗಸರು ತಿರುಗಾಡಲು ಆಗದ ಸ್ಥಿತಿ ಇದೆ. ಬೀದಿ ದೀಪಗಳು ಸಮರ್ಪಕವಾಗಿಲ್ಲ. ಮಳೆಗಾಲದಲ್ಲಿ ಮನೆಗಳಿಗೆ ನೀರು ನುಗ್ಗುತ್ತದೆ. ನಮ್ಮ ಕಷ್ಟವನ್ನು ರಾಜಕಾರಣಿಗಳು ಪರಿಹರಿಸಬೇಕು’ ಎಂದು ಬಡಾವಣೆಯ ಪ್ರಸನ್ನಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

‘ಮಳೆ ಬಂದಾಗ ಕೆಸರುಗದ್ದೆಯಾಗುವ ರಸ್ತೆಗಳು, ಬಿಸಿಲು ಬಂದಾಗ ಧೂಳಿನಲ್ಲಿ ಜೀವನ ನಡೆಸುವ ಸ್ಥಿತಿ ಇದೆ' ಎಂದು ಸ್ಥಳೀಯ ನಿವಾಸಿ ಅರುಣ್ ಬೇಸರ ವ್ಯಕ್ತಪಡಿಸಿದರು.

ಪತ್ರಿಕೆಯ ‘ಮಾಸ್ಟರ್‌ಮೈಂಡ್’ ಬಿಡುಗಡೆ

‘ಪ್ರಜಾವಾಣಿ ಓದಿ ಉದ್ಯಮಿಯಾದೆ’

ಪ್ರಜಾವಾಣಿ ವಾರ್ತೆ


ನೆಲಮಂಗಲ: ‘ಮಾರುಕಟ್ಟೆ ಸ್ಥಿತಿಗತಿ ಕುರಿತು ‘ಪ್ರಜಾವಾಣಿ’ಯಲ್ಲಿ ಪ್ರಕಟವಾಗುವ ಮಾಹಿತಿ, ಟೆಂಡರ್ ಆಹ್ವಾನಗಳು, ವಾಣಿಜ್ಯ ಪುರವಣಿ ಲೇಖನಗಳು ಮತ್ತು ಧರ್ಮಸ್ಥಳ ರುಡ್‌ಸೆಟ್ ಸಂಸ್ಥೆಯ ಮಾರ್ಗದರ್ಶನದಿಂದ ನಾನು ಯಶಸ್ವಿ ಉದ್ಯಮಿಯಾದೆ’ ಎಂದು ಇಲ್ಲಿನ ಧರ್ಮಸ್ಥಳ ಜನ ಜಾಗೃತಿ ವೇದಿಕೆ ಅಧ್ಯಕ್ಷ ಹಾಗೂ ಸಿಎನ್‌ಆರ್ ಸಮೂಹದ ಅಧ್ಯಕ್ಷ ವಿ.ರಾಮಸ್ವಾಮಿ ತಿಳಿಸಿದರು.

ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಸಹಕಾರಿ ಆಗಿರುವ ‘ಪ್ರಜಾವಾಣಿ’ಯ ‘ಮಾಸ್ಟರ್‌ಮೈಂಡ್’ ಆವೃತ್ತಿಯನ್ನು ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿಡುಗಡೆ ಮಾಡಿ ಮಾತನಾಡಿದ ಅವರು, ‘ಮಾರ್ಗದರ್ಶನ ಇಲ್ಲದೆ ಲಕ್ಷಾಂತರ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುತ್ತಿಲ್ಲ. ಇನ್ನೂ ಹಲವರು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗಲು ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದ್ದಾರೆ’ ಎಂದು ಹೇಳಿದರು.

‘ಮಾಧ್ಯಮ ಕ್ಷೇತ್ರದಲ್ಲೇ ಇದೊಂದು ವಿನೂತನ ಕಾರ್ಯಕ್ರಮವಾಗಿದ್ದು, ಇದರಲ್ಲಿ ಬರುವ ಆಡಿಯೊ ಮತ್ತು ವಿಡಿಯೊ ಸಹಿತ ವಿಷಯಗಳು ಪರೀಕ್ಷೆಗಳಿಗಷ್ಟೆ ಅಲ್ಲದೆ, ಜೀವನಕ್ಕೂ ಸಹಕಾರಿಯಾಗಿವೆ. ‘ಪ್ರಜಾವಾಣಿ’ ಸುದ್ದಿ ಬಿತ್ತರಿಸುವುದಷ್ಟೆ ಅಲ್ಲದೆ ವಿದ್ಯಾರ್ಥಿಗಳಿಗೆ ಸಹಾಯಧನ ಹಾಗೂ ಇನ್ನಿತರೆ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ’ ಎಂದರು.

ಪ್ರಾಂಶುಪಾಲ ಬಾಲಕೃಷ್ಣಯ್ಯ ಮಾತನಾಡಿ, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಇದೊಂದು ಸಂಚಾರಿ ಕೈಪಿಡಿಯಾಗಿದೆ ಎಂದರು.

‘ಪ್ರಜಾವಾಣಿ’ ಪ್ರಸರಣ ವಿಭಾಗದ ಉಪ ಮುಖ್ಯ ವ್ಯವಸ್ಥಾಪಕ ಜಗನ್ನಾಥ್ ಜೋಯಿಸ್ ‘ಮಾಸ್ಟರ್ ಮೈಂಡ್’ ಪಠ್ಯಕ್ರಮಗಳನ್ನು ಎಳೆಎಳೆಯಾಗಿ ವಿವರಿಸಿದರು. ಪ್ರಾಧ್ಯಾಪಕ ಚಂದ್ರಶೇಖರ್ ಇದ್ದರು.



‘ಮಾಸ್ಟರ್‌ಮೈಂಡ್’ ಬಿಡುಗಡೆ ಸಂದರ್ಭದಲ್ಲಿ ಪ್ರಾಂಶುಪಾಲ ಬಾಲಕೃಷ್ಣಯ್ಯ, ವಿ.ರಾಮಸ್ವಾಮಿ, ಜಗನ್ನಾಥ ಜೋಯಿಸ್, ಪ್ರಾಧ್ಯಾಪಕ ಚಂದ್ರಶೇಖರ್ ಇದ್ದರು



ಉದ್ಯೋಗಾವಕಾಶಗಳು, ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಮಾಹಿತಿ ಮತ್ತು ಅದಕ್ಕೆ ಬೇಕಾದ ತಯಾರಿ ಮಾಡಿಕೊಳ್ಳಲು ‘ಮಾಸ್ಟರ್ ಮೈಂಡ್’ ಗುರುವಾಗಿದೆ

ಎಸ್.ಕುಸುಮಾ
ವಿದ್ಯಾರ್ಥಿನಿ

ನಗರದಲ್ಲಿ ಇಂದು

75 ಕಲಾವಿದ, ಕಲಾವಿದೆಯರ ಕಲಾಕೃತಿಗಳ ಪ್ರದರ್ಶನ: ಆಯೋಜನೆ– ಅನಿಶ್ಚಿತತೆ, ಸ್ಥಳ– ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪ ರಸ್ತೆ–ಬೆಳಿಗ್ಗೆ 10.

‘ಎಂಎಸ್‌ಎಂಇ ಕ್ಷೇತ್ರದಲ್ಲಿ ಔದ್ಯೋಗಿಕ ಭದ್ರತೆ, ಆರೋಗ್ಯ ಹಾಗೂ ಸಾಮಾಜಿಕ ಭದ್ರತೆ’ ಕುರಿತು ಒಂದು ದಿನದ ಕಾರ್ಯಾಗಾರ: ಮಾತನಾಡುವವರು– ಕಾರ್ಲ್ ಹಿಂಜ್ ನೊಯೆಟೆಲ್, ಅಕ್ರಂ ಪಾಷಾ, ಆರ್.ಇಳಂಗೋವನ್, ಉಪಸ್ಥಿತಿ–ಪಂಕಜ್‌ಕುಮಾರ್ ಪಾಂಡೆ, ಆಯೋಜನೆ–ಭಾರತ ಸರ್ಕಾರ, ಡಿಜಿಯುವಿ, ಇಂಡೊ ಜರ್ಮನ್ ಫೋಕಲ್ ಪಾಯಿಂಟ್ ಮತ್ತು ಕಾಸಿಯಾ, ಸ್ಥಳ–ಕಾಸಿಯಾ ಸಭಾಂಗಣ, ವಿಜಯನಗರ–ಬೆಳಿಗ್ಗೆ 9.30.

‘ಮೆಕ್ಕೆಜೋಳಕ್ಕೆ ಬಾಧಿಸುವ ಸೈನಿಕ ಹುಳುಗಳ ನಿಯಂತ್ರಣಕ್ಕೆ ಜೈವಿಕ ಕ್ರಮ’ ಕುರಿತು ರೈತ–ವಿಜ್ಞಾನಿಗಳ ನಡುವಣ ಸಂವಾದ: ಭಾಗವಹಿಸುವವರು– ಡಾ.ನಾಗೇಶ್, ಡಾ.ಶೈಲೇಶ್, ಡಾ.ರಂಗೇಶ್ವರನ್, ಡಾ.ವೆಂಕಟೇಶನ್ ಮತ್ತು ಡಾ.ಜೋಶಿ, ಆಯೋಜನೆ– ಐಸಿಎಆರ್, ಸ್ಥಳ–ಐಸಿಎಆರ್ ಸಭಾಂಗಣ, ಯಲಹಂಕ–ಬೆಳಿಗ್ಗೆ 10.15.





ಪ್ರತಿಭಟನೆ ನಡೆಸಲು ಟ್ರ್ಯಾಕ್ಟರ್‌ನಲ್ಲಿ ಬಂದಿದ್ದ ರೈತರು (ಎಡ ಚಿತ್ರ) ಮೆಜೆಸ್ಟಿಕ್ ಕೇಂದ್ರ ನಿಲ್ದಾಣದಲ್ಲಿ ಬಸ್‌ಗಳ ಸಂಚಾರ ಯಥಾಸ್ಥಿತಿಯಲ್ಲಿತ್ತು. ಆದರೆ, ಪ್ರಯಾಣಿಕರ ಸಂಖ್ಯೆ ಕಡಿಮೆ ಇತ್ತು – ಪ್ರಜಾವಾಣಿ ಚಿತ್ರಗಳು

100ಕ್ಕೂ ಹೆಚ್ಚು ಮುಖಂಡರು, ಕಾರ್ಯಕರ್ತರು ವಶಕ್ಕೆ ● ಪ್ರತಿಭಟನಾ ಮೆರವಣಿಗೆ ಯಶಸ್ವಿ

ಭಾರತ್ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳು ಹಾಗೂ ಬೆಲೆ ಏರಿಕೆ ಖಂಡಿಸಿ ರಾಷ್ಟ್ರವ್ಯಾಪಿ ಸೋಮವಾರ ಕರೆ ನೀಡಲಾಗಿದ್ದ 'ಭಾರತ್ ಬಂದ್'ಗೆ ನಗರದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು.

ನಗರದಲ್ಲಿ ಬೆಳಿಗ್ಗೆಯಿಂದಲೇ ವ್ಯಾಪಾರ–ವಹಿವಾಟು ಸ್ಥಗಿತಗೊಳಿಸಿ ಬಂದ್‌ಗೆ ಬೆಂಬಲ ನೀಡಬೇಕೆಂದು ರೈತಪರ ಹಾಗೂ ಕಾರ್ಮಿಕ ಸಂಘಟನೆಗಳು ಕೋರಿದ್ದವು. ಆದರೆ, ಬೆಳಿಗ್ಗೆ ಹಲವೆಡೆ ಅಂಗಡಿಗಳು ತೆರೆದಿದ್ದವು. ಕೆಲವೆಡೆ ಮಾತ್ರ ಅಂಗಡಿಗಳು ಬಂದ್ ಆಗಿದ್ದವು.

ಭಾರತ್ ಬಂದ್ ಬಗ್ಗೆ ಹೆಚ್ಚು ಸುದ್ದಿಯಾಗಿದ್ದರಿಂದ ಬಹುತೇಕ ಜನ, ಮನೆಯಿಂದ ಹೊರಗೆ ಬಂದಿರಲಿಲ್ಲ. ಅಂಗಡಿಗಳು ತೆರೆದಿದ್ದರೂ ಹಲವೆಡೆ ಗ್ರಾಹಕರ ಸುಳಿವು ಕಾಣಿಸಲಿಲ್ಲ.

ರಾಜಾಜಿನಗರ, ವಿಜಯನಗರ, ಮಲ್ಲೇಶ್ವರ, ಶೇಷಾದ್ರಿಪುರ, ಜೆ.ಪಿ. ನಗರ. ಜಯನಗರ, ಬಸವನಗುಡಿ, ಹನುಮಂತನಗರ, ಗಿರಿನಗರ, ಆರ್. ಟಿ. ನಗರ, ಹೆಬ್ಬಾಳ, ಹೆಣ್ಣೂರು, ಬಾಣಸವಾಡಿ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಅಂಗಡಿಗಳು ಭಾಗಶಃ ತೆರೆದಿದ್ದವು.



ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ವೃದ್ಧರೊಬ್ಬರು ಘೋಷಣಾ ಫಲಕವನ್ನು ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

ಮೆಜೆಸ್ಟಿಕ್, ಗಾಂಧಿನಗರ ಹಾಗೂ ಸುತ್ತಮುತ್ತ ಶೇ 75ರಷ್ಟು ಅಂಗಡಿಗಳು ಮಾತ್ರ ಬೆಳಿಗ್ಗೆ ಬಂದ್ ಇದ್ದವು. ಉಳಿದಂತೆ, ಕೆಲವರು ಅರ್ಧ ಬಾಗಿಲು ತೆರೆದು ವ್ಯಾಪಾರ ಮಾಡಿದರು.

ಬಟ್ಟೆ ಅಂಗಡಿಗಳು, ಮೊಬೈಲ್ ಮಳಿಗೆಗಳು, ಎಲೆಕ್ಟ್ರಾನಿಕ್ ವಸ್ತುಗಳ ಮಾರಾಟ ಮಳಿಗೆ, ಪುಸ್ತಕ ಅಂಗಡಿ, ಕಿರಾಣಿ ಅಂಗಡಿ, ಕಿರು ಸೂಪರ್ ಮಾರ್ಕೆಟ್ ಹಾಗೂ ಇತರೆ ಅಂಗಡಿಗಳು ತೆರೆದಿರುವುದು ಕಂಡುಬಂತು.

ಕೆಲ ಸಂಘಟನೆಗಳ ಕಾರ್ಯಕರ್ತರು, ಬೆಳಿಗ್ಗೆ ಅಂಗಡಿ ಬಳಿ ಹೋಗಿ ಬಂದ್ ಮಾಡಿಸಿದರು. ಕೆಲ ಮಾಲೀಕರು, ಸ್ವಯಂಪ್ರೇರಿತವಾಗಿ ಅಂಗಡಿ ಮುಚ್ಚಿದರು. ಮಧ್ಯಾಹ್ನ 1 ಗಂಟೆ ನಂತರ, ಎಲ್ಲ ಪ್ರದೇಶದಲ್ಲಿ ಅಂಗಡಿಗಳು ಪೂರ್ಣ ಪ್ರಮಾಣದಲ್ಲಿ ತೆರೆದುಕೊಂಡವು. ಅಲ್ಲೆಲ್ಲ ವ್ಯಾಪಾರ ವಹಿವಾಟು ಯಥಾಸ್ಥಿತಿಗೆ ಮರಳಿತ್ತು.

'ಪ್ರತಿಭಟನೆಗೆ ಪೊಲೀಸರಿಂದ ಅಡ್ಡಿ'

'ಭಾರತ್ ಬಂದ್ ಬೆಂಬಲಿಸಿ ನಗರದಲ್ಲಿ ನಡೆಸುತ್ತಿದ್ದ ಪ್ರತಿಭಟನೆಗೆ ಪೊಲೀಸರು ಅಡ್ಡಿಪಡಿಸಿದರು. ಅಷ್ಟಾದರೂ ಪ್ರತಿಭಟನಾ ಮೆರವಣಿಗೆ ಯಶಸ್ವಿಯಾಗಿದೆ. ಜನರಿಂದಲೂ ಬೆಂಬಲ ಸಿಕ್ಕಿದೆ. ಇದನ್ನೆಲ್ಲ ನೋಡಿ ಪ್ರಧಾನಿ ನರೇಂದ್ರ ಮೋದಿ ಕೃಷಿ ಕಾಯ್ದೆಗಳನ್ನು ಹಿಂಪಡೆಯಬೇಕು' ಎಂದು ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಹೇಳಿದರು.

ಆಟೊ, ಬಸ್, ಕ್ಯಾಬ್, ಸರಕು ಸಾಗಣೆ ವಾಹನ ಹಾಗೂ ಇತರೆ ವಾಹನಗಳ ಸಂಚಾರ ಯಥಾಸ್ಥಿತಿಯಲ್ಲಿತ್ತು. ಕೆಲವೆಡೆ ದಟ್ಟಣೆ ಉಂಟಾಗಿದ್ದು ಬಿಟ್ಟರೆ, ವಾಹನಗಳ ಸಂಚಾರಕ್ಕೆ ಯಾವುದೇ ಅಡ್ಡಿಯಾಗಲಿಲ್ಲ. ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಹಾಗೂ ವಿಮಾನ ನಿಲ್ದಾಣದಲ್ಲೂ ಜನರ ಓಡಾಟ ಸಾಮಾನ್ಯವಾಗಿತ್ತು. ಪೊಲೀಸರ ಕಾವಲು ಹೆಚ್ಚಿತ್ತು.

100ಕ್ಕೂ ಹೆಚ್ಚು ಮಂದಿ ವಶಕ್ಕೆ: ಮೆಜೆಸ್ಟಿಕ್ ಕೇಂದ್ರ ನಿಲ್ದಾಣ, ಆನಂದರಾವ್ ವೃತ್ತದ ಗಾಂಧಿ ಪ್ರತಿಮೆ ಎದುರು, ಸ್ವಾತಂತ್ರ್ಯ ಉದ್ಯಾನ ಬಳಿ ಪ್ರತಿಭಟನೆ ನಡೆಸಲು ಬೆಳಿಗ್ಗೆಯೇ ಮುಖಂಡರು ಸೇರಿದ್ದರು. ಬಸ್ ಹಾಗೂ ಸಾರ್ವಜನಿಕರ ವಾಹನಗಳನ್ನು ಅಡ್ಡಗಟ್ಟಿ ಪ್ರತಿಭಟಿಸಲು ಯತ್ನಿಸಿದರು.

ಅದನ್ನು ತಡೆದ ಪೊಲೀಸರು, 'ಪ್ರತಿಭಟನೆಗೆ ಅನುಮತಿ ಪಡೆದಿಲ್ಲ. ಕಾನೂನು ಮೀರಿ ನಡೆಯಬೇಡಿ. ವಾಪಸು ಹೋಗಿ' ಎಂದು ಕೋರಿದರು. ಅದಕ್ಕೆ ಪ್ರತಿಭಟನಕಾರರು ಒಪ್ಪಲಿಲ್ಲ. ಮುಖಂಡರು ಹಾಗೂ ಕಾರ್ಯಕರ್ತರು ಸೇರಿದಂತೆ 100ಕ್ಕೂ ಹೆಚ್ಚು ಮಂದಿಯನ್ನು ಪೊಲೀಸರು ವಶಕ್ಕೆ ಪಡೆದು ಸಂಜೆ ಬಿಡುಗಡೆ ಮಾಡಿದರು.

ಬೃಹತ್ ಮೆರವಣಿಗೆ: ಬಂದ್ ಪ್ರಯುಕ್ತ ನಗರದಲ್ಲಿ ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನಾ ಮೆರವಣಿಗೆ ಯಶಸ್ವಿಯಾಯಿತು.

ಆನಂದರಾವ್ ವೃತ್ತದ ಗಾಂಧಿ ಪ್ರತಿಮೆ, ಸ್ವಾತಂತ್ರ್ಯ ಉದ್ಯಾನ, ಕೆ.ಆರ್. ವೃತ್ತ, ನೃಪತುಂಗ ರಸ್ತೆ ಮೂಲಕ ಸಾಗಿ ಮೆರವಣಿಗೆ ಮೈಸೂರು ಬ್ಯಾಂಕ್ ವೃತ್ತ ತಲುಪಿತ್ತು. ಅಲ್ಲಿಯೇ ಬಹಿರಂಗ ಸಭೆ ನಡೆಸಿದ ಪ್ರತಿಭಟನಕಾರರು, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಕೆಲ ರೈತರು, ಟ್ರ್ಯಾಕ್ಟರ್‌ನಲ್ಲಿ ಬಂದಿದ್ದರು.

ಮೆರವಣಿಗೆ ಸಂದರ್ಭದಲ್ಲಿ ರಸ್ತೆಯ ಅಕ್ಕ-ಪಕ್ಕದ ಅಂಗಡಿ, ಸರ್ಕಾರಿ ಕಚೇರಿಗಳಿಗೆ ಮುತ್ತಿಗೆ ಹಾಕಲು ಪ್ರತಿಭಟನಕಾರರು ಯತ್ನಿಸಿದರು. ಕೆಲವರು, ಉರುಳು ಸೇವೆ ಮಾಡಿದರು. ತಮಟೆ ಚಳವಳಿ ನಡೆಸಿದರು. ಭಗತ್ ಸಿಂಗ್ ಅವರ ಜನ್ಮದಿನವಾಗಿದ್ದರಿಂದ, ಪ್ರತಿಭಟನೆಯಲ್ಲಿ ಅವರ ಭಾವಚಿತ್ರಗಳನ್ನು ಪ್ರದರ್ಶಿಸಲಾಯಿತು. ರಾವಣನ ರೂಪದಲ್ಲಿ ನರೇಂದ್ರ ಮೋದಿ ಅವರ ಬ್ಯಾನರ್ ಸಿದ್ಧಪಡಿಸಿದ್ದ ಪ್ರತಿಭಟನಕಾರರು, ಅದಕ್ಕೆ ಬೆಂಕಿ ಹಚ್ಚಿ ಆಕ್ರೋಶ ಹೊರಹಾಕಿದರು.

ಮೆರವಣಿಗೆಯಿಂದಾಗಿ ಮೆಜೆಸ್ಟಿಕ್, ಕಾರ್ಪೋರೇಷನ್ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ವಾಹನಗಳ ದಟ್ಟಣೆ ಉಂಟಾಗಿತ್ತು.

ಪುರಭವನ, ಸುಮನಹಳ್ಳಿ ವೃತ್ತ, ಕೆ.ಆರ್.ಪುರ, ಕನಕಪುರ ರಸ್ತೆ, ಅತ್ತಿಬೆಲೆ ಗಡಿಯಲ್ಲಿ ಕಾರ್ಮಿಕರು ಹಾಗೂ ರೈತ ಸಂಘಟನೆಗಳು ಪ್ರತಿಭಟನೆ ನಡೆಸಿದವು. ಅಲ್ಲಿಯೂ ಕೆಲ ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದರು.



ಗೊರಗುಂಟೆಪಾಳ್ಯ ಬಳಿ ಡಿಸಿಪಿ ಧರ್ಮೇಂದ್ರಕುಮಾರ್ ಅವರ ಕಾಲಿನ ಮೇಲೆ ರೈತ ಮುಖಂಡನ ಕಾರಿನ ಮುಂದಿನ ಚಕ್ರ ಹರಿಯಿತು

ಡಿಸಿಪಿ ಕಾಲ ಮೇಲೆ ಹರಿದ ಕಾರು

ಬೆಂಗಳೂರು: ಗೊರಗುಂಟೆಪಾಳ್ಯ ಬಳಿ ಭದ್ರತೆ ಕರ್ತವ್ಯದಲ್ಲಿದ್ದ ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರ ಕುಮಾರ ಮೀನಾ ಅವರ ಕಾಲಿನ ಮೇಲೆ ರೈತ ಮುಖಂಡನ ಕಾರಿನ ಚಕ್ರ ಹರಿದ ಘಟನೆ ಸೋಮವಾರ ನಡೆಯಿತು.

ತುಮಕೂರು ರಸ್ತೆ ಕಡೆಯಿಂದ ಬೆಂಗಳೂರು ಪ್ರವೇಶಿಸುವ ಪ್ರತಿಭಟನಕಾರರನ್ನು ತಡೆಯಲು ಪೊಲೀಸರು ಗೊರಗುಂಟೆಪಾಳ್ಯ ಬಳಿ ಸೇರಿದ್ದರು. ಭದ್ರತೆ ಉಸ್ತುವಾರಿಯನ್ನು ಡಿಸಿಪಿ ನೋಡಿಕೊಳ್ಳುತ್ತಿದ್ದರು.

'ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷ' ಎಂಬ ಫಲಕವಿದ್ದ ಎಸ್‌ಯುವಿ ಕಾರು (ಕೆಎ 19 ಎಂಕೆ 1565) ಸ್ಥಳಕ್ಕೆ ಬಂದಿತ್ತು. ಡಿಸಿಪಿ ಹಾಗೂ ಸಿಬ್ಬಂದಿ ಅದನ್ನು ತಡೆಯಲು ಮುಂದಾಗಿದ್ದರು. ಆದರೆ, ಚಾಲಕ ಕಾರು ನಿಲ್ಲಿಸಲಿಲ್ಲ.

ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ ಅವರ ಮೇಲೆಯೇ ಕಾರು ಹರಿಸಲು ಚಾಲಕ ಯತ್ನಿಸಿದ್ದ. ಡಿಸಿಪಿ ಪಕ್ಕಕ್ಕೆ ಸರಿಯುತ್ತಿದ್ದಂತೆ, ಅವರ ಎಡಗಾಲಿನ ಪಾದದ ಮೇಲೆಯೇ ಕಾರಿನ ಮುಂದಿನ ಚಕ್ರ ಹರಿದು ಹೋಯಿತು. ಗಾಯಗೊಂಡ ಡಿಸಿಪಿ ಸ್ಥಳದಲ್ಲೇ ಕುಳಿತು ಚೇತರಿಸಿಕೊಂಡರು. ಪ್ರಾಥಮಿಕ ಚಿಕಿತ್ಸೆ ಪಡೆದುಕೊಂಡರು. ನಂತರ, ಕುಂಟುತ್ತಲೇ ಯಥಾಪ್ರಕಾರ ಕರ್ತವ್ಯ ಮುಂದುವರಿಸಿದರು.

ಘಟನೆ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಚಾಲಕನ್ನು ವಶಕ್ಕೆ ಪಡೆದಿದ್ದಾರೆ. ಕಾರು ಜಪ್ತಿ ಮಾಡಿದ್ದಾರೆ.

'ಬಲವಂತದಿಂದ ಬಂಧನ'

'ಪ್ರತಿಭಟನೆ ಮಾಡುತ್ತಿದ್ದ ನಮ್ಮನ್ನು ಪೊಲೀಸರು ಬಲವಂತದಿಂದ ವಶಕ್ಕೆ ಪಡೆದು ಆಡುಗೋಡಿ ಮೈದಾನಕ್ಕೆ ಕರೆದೊಯ್ದಿದ್ದರು' ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಹೇಳಿದರು.

'ಶಾಂತಿಯುತ ಪ್ರತಿಭಟನೆಗೆ ಪೊಲೀಸರು ಅವಕಾಶ ನೀಡಲಿಲ್ಲ. ಏಕಾಏಕಿ ಸ್ಥಳಕ್ಕೆ ಬಂದು ವಾಗ್ವಾದ ನಡೆಸಿದರು. ನಮ್ಮ ಮಾತು ಕೇಳದೇ ದಿಢೀರ್ ಎಲ್ಲರನ್ನೂ ವಶಕ್ಕೆ ಪಡೆದು ಬಸ್ಸಿನಲ್ಲಿ ಕರೆದೊಯ್ದಿದ್ದರು. ಇದು ಪೊಲೀಸರ ಸರ್ವಾಧಿಕಾರಿ ಧೋರಣೆ. ಇದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ' ಎಂದೂ ತಿಳಿಸಿದರು.



ಮನೆಯ ತಾರಸಿಯಲ್ಲಿ ಗಾಂಜಾ ಬೆಳೆದಿರುವುದು

ಮನೆಯ ತಾರಸಿಯಲ್ಲಿ ಹೈಡ್ರೋ ಗಾಂಜಾ ಬೆಳೆದ ಆರೋಪಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬಿಡದಿ: ಇಲ್ಲಿನ ಈಗಲ್‌ಟನ್ ರೆಸಾರ್ಟ್ ಸಮೀಪ ಇರುವ ವಿಲ್ಲಾವೊಂದರ ತಾರಸಿಯಲ್ಲಿ ಹೈಡ್ರೋ ಗಾಂಜಾ ಗಿಡಗಳನ್ನು ಬೆಳೆದಿದ್ದ ಇರಾನ್ ಮೂಲದ ಜಾವಿದ್ ರುಸ್ತಂಪುರಿ (36) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಮನೆಯ ತಾರಸಿ ಹಾಗೂ ಕೊಠಡಿಯಲ್ಲಿದ್ದ 150ಕ್ಕೂ ಹೆಚ್ಚು ಗಿಡಗಳು ಹಾಗೂ ರಾಸಾಯನಿಕಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಮಾರುಕಟ್ಟೆಯಲ್ಲಿ ಇವುಗಳ ಮೌಲ್ಯ ಕೋಟ್ಯಂತರ ರೂಪಾಯಿಗಳಷ್ಟಿದೆ ಎಂದು ಹೇಳಲಾಗಿದೆ.

ಆನ್‌ಲೈನ್ ಮೂಲಕ ಬಿತ್ತನೆ ಬೀಜಗಳನ್ನು ತರಿಸಿಕೊಂಡಿದ್ದ ಆರೋಪಿ ಕಳೆದ ಒಂದೂವರೆ ವರ್ಷದಿಂದ ಇಲ್ಲಿ ಹೈಡ್ರೋ ಗಾಂಜಾ ಬೆಳೆಯುತ್ತಿದ್ದ ಎನ್ನಲಾಗಿದೆ. ಬೆಂಗಳೂರು ಸಿಸಿಬಿ ಪೊಲೀಸರು ಡಿ.ಜೆ. ಹಳ್ಳಿಯಲ್ಲಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ ಸಂದರ್ಭ ಆತ ಬಿಡದಿಯಲ್ಲಿ ಗಿಡಗಳನ್ನು ಬೆಳೆದಿದ್ದಾಗಿ ಸತ್ಯ ಹೇಳಿದ್ದಾನೆ.

ಸೋಮವಾರ ಆರೋಪಿಯೊಂದಿಗೆ ಆತನ ಬಿಡದಿ ನಿವಾಸಕ್ಕೆ ಬಂದ ಪೊಲೀಸರು ಗಿಡಗಳನ್ನು ವಶಕ್ಕೆ ಪಡೆದು ಕೊಂಡೊಯ್ದುರು.

ರೌಡಿ ಜೋಶ್ವಾ ಗಡಿಪಾರು

ಬೆಂಗಳೂರು: ಕೊಲೆ ಯತ್ನ, ಹಲ್ಲೆ, ಜೀವ ಬೆದರಿಕೆ ಸೇರಿದಂತೆ ವಿವಿಧ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುವ ಮೂಲಕ ಸಮಾಜದಲ್ಲಿ ಶಾಂತಿ ಕದಡಲು ಯತ್ನಿಸುತ್ತಿದ್ದ ರೌಡಿಶೀಟರ್ ಜೋಶ್ವಾ (29) ಎಂಬಾತನನ್ನು ಜೆ.ಬಿ.ನಗರ ಪೊಲೀಸರು ಒಂದು ವರ್ಷ ಗಡಿಪಾರು ಮಾಡಿದ್ದಾರೆ.

'ಜೋಶ್ವಾ ಮೇಲೆ 6 ಗಂಭೀರ ಪ್ರಕರಣಗಳಿವೆ. ಈತನಿಂದ ಅನೇಕರಿಗೆ ಜೀವ ಬೆದರಿಕೆ ಇದೆ. ಸಾರ್ವಜನಿಕ ಆಸ್ತಿಪಾಸ್ತಿಗಳಿಗೂ ಹಾನಿಯುಂಟುಮಾಡುವ ಸಾಧ್ಯತೆ ಇದೆ. ಕಾನೂನಿನ ಭಯವಿಲ್ಲದೇ ಈತ ನಿರಂತರವಾಗಿ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾನೆ. ಹೀಗಾಗಿ ನಗರದಿಂದ ಒಂದು ವರ್ಷ ಗಡಿಪಾರು ಮಾಡುವಂತೆ ಹಲಸೂರು ಉಪ ವಿಭಾಗದ ಸಹಾಯಕ ಪೊಲೀಸ್ ಆಯುಕ್ತರಿಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಪೂರ್ವ ವಿಭಾಗದ ಉಪ ಪೊಲೀಸ್ ಆಯುಕ್ತರು ಗಡಿಪಾರು ಆದೇಶ ಹೊರಡಿಸಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಜೆ.ಬಿ.ನಗರ ನಿವಾಸಿಯಾಗಿರುವ ಜೋಶ್ವಾ, ಹಿಂದಿನ 10 ವರ್ಷಗಳಿಂದ ಅನೇಕ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ. ಆತನಿಂದ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗಬಾರದು ಎಂಬ ಉದ್ದೇಶದಿಂದ ಇದೇ 20ರಿಂದ 2022ರ ಸೆಪ್ಟೆಂಬರ್ 19ರವರೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಗಡಿಪಾರು ಮಾಡಲಾಗಿದೆ' ಎಂದು ಆದೇಶದಲ್ಲಿ ತಿಳಿಸಲಾಗಿದೆ.



ರೈಲ್ವೆ ಪೊಲೀಸ್ ಕಾರ್ಯಪಡೆಯ ಮಹಿಳಾ ವಿಭಾಗದೊಂದಿಗೆ ಭಾಸ್ಕರ್ ರಾವ್ ಹಾಗೂ ರೈಲ್ವೆ ಎಸ್ಪಿ ಡಿ.ಆರ್.ಸಿರಿ ಗೌರಿ

ರೈಲ್ವೆ ಪೊಲೀಸ್ ಕಾರ್ಯಪಡೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲುಗಳಲ್ಲಿ ಪ್ರಯಾಣಿಸುವ ಮಹಿಳೆಯರು, ಮಕ್ಕಳು ಹಾಗೂ ಹಿರಿಯ ನಾಗರಿಕರ ಹಿತ ಕಾಯುವ ಸಲುವಾಗಿ ರೈಲ್ವೆ ಪೊಲೀಸ್ ಕಾರ್ಯಪಡೆ ರಚಿಸಲಾಗಿದೆ. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದ ಬಳಿ ಸೋಮವಾರ ನಡೆದ ಸಮಾರಂಭದಲ್ಲಿ ಕಾರ್ಯಪಡೆಗೆ ಚಾಲನೆ ನೀಡಲಾಯಿತು.

'18 ಪೊಲೀಸ್ ಠಾಣೆಗಳಿಂದ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಆಯ್ಕೆ ಮಾಡಿ ಈ ಕಾರ್ಯಪಡೆ ರಚಿಸಲಾಗಿದೆ. ಈ ತಂಡವನ್ನು ವಿಶೇಷ ಕರ್ತವ್ಯಗಳಿಗೂ ನಿಯೋಜಿಸಲಾಗುತ್ತದೆ. 'ಸಾರ್ವಜನಿಕರ ಸಹಾಯಕ್ಕೆ ನಾವು ಸದಾ ಸಿದ್ಧ' ಎಂಬ ಧ್ಯೇಯ ವಾಕ್ಯದೊಂದಿಗೆ ಈ ಕಾರ್ಯಪಡೆ ಕೆಲಸ ಮಾಡಲಿದೆ. ಪತ್ರಕರ್ತ ದಾನೀಶ್ ಮನ್ಸೂರ್ ಅವರು ಕಾರ್ಯಪಡೆಯ ಸಿಬ್ಬಂದಿಗೆ ಸಮವಸ್ತ್ರ ಒದಗಿಸಿದ್ದಾರೆ' ಎಂದು ರೈಲ್ವೆ ಪೊಲೀಸ್ ಎಡಿಜಿಪಿ ಭಾಸ್ಕರ್ ರಾವ್ ತಿಳಿಸಿದರು.

ಸೌತ್ ವೆಸ್ಟರ್ನ್ ರೈಲ್ವೆ ಬೆಂಗಳೂರು ವಿಭಾಗದ ಡಿಆರ್‌ಎಂ ಶ್ಯಾಮ್ ಸಿಂಗ್, ಎಡಿಆರ್‌ಎಂ ಕುಸುಮಾ ಹರಿಪ್ರಸಾದ್, ಹಿರಿಯ ಡಿಪಿಒ ಅರುಳ ರವಿ ಚಟ್ಟು, ಆರ್‌ಪಿಎಫ್‌ನ ಸೀನಿಯರ್ ಡಿವಿಷನಲ್ ಸೆಕ್ಯೂರಿಟಿ ಕಮಿಷನರ್ ದೇವಸ್ಮಿತಾ ಚಟೋಪಾಧ್ಯಾಯ, ಎಫ್‌ಕೆಎಸ್‌ಸಿಸಿಐ ಸದಸ್ಯ ಕಿರಣಕುಮಾರ್ ಇದ್ದರು.

ವಿದ್ಯುತ್ ವ್ಯತ್ಯಯ ಇಂದು, ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಸ್ಕಾಂ ತುರ್ತು ನಿರ್ವಹಣಾ ಕಾಮಗಾರಿ ಕೈಗೆತ್ತಿಕೊಂಡಿರುವ ಕಾರಣ ನಗರದ ವಿವಿಧ ಪ್ರದೇಶಗಳಲ್ಲಿ ಮಂಗಳವಾರ ಮತ್ತು ಬುಧವಾರ ವಿದ್ಯುತ್ ವ್ಯತ್ಯಯವಾಗಲಿದೆ.

ಭೂಗತ ಕೇಬಲ್ ಅಳವಡಿಸುವ ಕಾರ್ಯ ಕೈಗೊಂಡಿರುವುದರಿಂದ ಮಂಗಳವಾರ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಆರ್.ಆರ್. ನಗರ, ವಿಡಿಯಾ, ನೆಲಗೆದರನಹಳ್ಳಿ, ಬ್ಯಾಡರಹಳ್ಳಿ, ಶ್ರೀಗಂಧಕಾವಲ್, ವಿಜಯನಗರ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ವ್ಯತ್ಯಯವಾಗಲಿದೆ.

ಸ್ಥಳಗಳು: ಭೂಮಿಕಾ ಲೇಔಟ್, ಪಟ್ಟಣಗೆರೆ, ಬಿಎಚ್‌ಇಎಲ್ ಲೇಔಟ್, ಮಾರಪ್ಪ ಲೇಔಟ್, ಆಂಧ್ರಹಳ್ಳಿ ಸರ್ಕಾರಿ ಶಾಲೆ, ಆಂಧ್ರಹಳ್ಳಿ ಸರ್ಕಲ್, ಮಾರುತಿ ನಗರ ಬಿಡಬ್ಲ್ಯುಎಸ್‌ಎಸ್‌ಬಿ, ಲಕ್ಷ್ಮಣ್ ನಗರ, ಸಂಜೀವಿನಿ ನಗರ, ವಿಘ್ನೇಶ್ವರ ನಗರ, ಹೆಗ್ಗನಹಳ್ಳಿ, ಹೆಗ್ಗನಹಳ್ಳಿ ಕ್ರಾಸ್, ಸುಂಕದಕಟ್ಟೆ, ಪೈಪ್‌ಲೈನ್ ರೋಡ್ ಸುಂಕದಕಟ್ಟೆ, ಕೊಟ್ಟಿಗೆಪಾಳ್ಯ, ಕೆಜಿಎಚ್‌ಎಸ್ ಲೇಔಟ್, ಪಾಪರೆಡ್ಡಿ ಪಾಳ್ಯ, ಕೆ.ಕೆ. ಲೇಔಟ್, ಬಿನ್ನಿ ಲೇಔಟ್, ಜಯಲಕ್ಷ್ಮಮ್ಮ ಲೇಔಟ್ ಸುತ್ತಮುತ್ತ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ರಾಜಾನುಕುಂಟೆ ಮತ್ತು ಕೆಎಚ್‌ಬಿ ಕಾಲೊನಿಯ ಕೇಂದ್ರ ವ್ಯಾಪ್ತಿಯಲ್ಲಿ ಮಂಗಳವಾರ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ರಾಜಾನುಕುಂಟೆ, ಹೊನ್ನೇನಹಳ್ಳಿ, ಸಿಂಗನಾಯಕನಹಳ್ಳಿ, ಅದ್ದಿಗನಹಳ್ಳಿ, ಸಾದೇನಹಳ್ಳಿ, ಸುರದೇನಪುರ, ಮಾರಸಂದ್ರ, ಅದ್ದೆ ವಿಶ್ವನಾಥಪುರ, ಹನಿಯೂರು, ಚಳ್ಳಹಳ್ಳಿ, ಕಾಕೋಳು, ಸೊನ್ನೇನಹಳ್ಳಿ, ಕರ್ಲಾಪುರ, ದಿಬ್ಬೂರು, ಶಾನುಭೋಗನಹಳ್ಳಿ, ಅರಕೆರೆ, ಬೈರಾಪುರ, ದೊಡ್ಡಬಳ್ಳಾಪುರ ಮುಖ್ಯ ರಸ್ತೆ, ಚಿಕ್ಕಬೊಮ್ಮಸಂದ್ರ, ಶಾರದಾನಗರ, ಬಿ ಸೆಕ್ಟರ್, ಚಿಕ್ಕಮುನಿಯಪ್ಪ ಲೇಔಟ್, ಅಲ್ಲಸಂದ್ರ, ಜಿಕೆವಿಕೆ ಲೇಔಟ್, ಕೈಗಾರಿಕಾ ಪ್ರದೇಶ, ರಾಮಗೊಂಡನಹಳ್ಳಿ, ಐವಿಆರ್‌ಐ ರಸ್ತೆ, ಪುಟ್ಟೇನಹಳ್ಳಿ, ಕೆಎಚ್‌ಬಿ ಕಾಲೊನಿ, ಸುರಭಿ ಲೇಔಟ್, ರೈತರ ಸಂತೆ, ಶಿವನಹಳ್ಳಿ, ಗಾಂಧಿನಗರ, ಬಿ.ಬಿ. ರಸ್ತೆ, ಯಲಹಂಕ ಓಲ್ಡ್ ಟೌನ್ ಸುತ್ತಮುತ್ತ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಣ್ಣೂರು ಉಪ-ಕೇಂದ್ರ ವ್ಯಾಪ್ತಿಯಲ್ಲಿ ಬುಧವಾರ ವಿದ್ಯುತ್ ಸ್ಥಗಿತ: 66/11 ಕೆ.ವಿ ಹೆಣ್ಣೂರು ಉಪ-ಕೇಂದ್ರದಲ್ಲಿ ತುರ್ತುನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುವುದರಿಂದ ಬುಧವಾರ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಹೆಣ್ಣೂರು ಬಂಡೆ, ಸಮುದ್ರಿಕಾ ಎನ್ ಕ್ಲೇವ್, ಗ್ರೇಸ್ ಗಾರ್ಡನ್, ಕ್ರಿಸ್ತ ಜಯಂತಿ ಕಾಲೇಜು, ಕೆ.ನಾರಾಯಣಪುರ, ಬಿಳಿಶಿವಾಲೆ, ಆಶಾ ಟೌನ್‌ಶಿಪ್, ಐಶ್ವರ್ಯ ಲೇಔಟ್, ಮಾರುತಿ ಟೌನ್‌ಶಿಪ್, ನಗರಗಿರಿ ಟೌನ್‌ಶಿಪ್, ಕೆ. ನಾರಾಯಣಪುರ ಕ್ರಾಸ್, ಬಿಡಿಎಸ್ ಗಾರ್ಡನ್, ಕೊತ್ತನೂರು, ಪಟೇಲ್ ರಾಮಯ್ಯ ಲೇಔಟ್, ಅಂಜನಪ್ಪ ಲೇಔಟ್, ಸಿಎಸ್‌ಐ ಗೇಟ್, ಬೈರತಿ ಕ್ರಾಸ್, ಬೈರತಿ ಹಳ್ಳಿ, ಎವರ್ ಗ್ರೀನ್ ಲೇಔಟ್, ಕನಕ ಶ್ರೀ ಲೇಔಟ್, ಗೆದ್ದಲಹಳ್ಳಿ, ಮಂತ್ರಿ ಅಪಾರ್ಟ್‌ಮೆಂಟ್, ಹಿರೇಮಠ ಲೇಔಟ್, ಟ್ರಿನಿಟಿ ಫಾರ್ಚೂನ್, ಮೈಕಲ್ ಸ್ಕೂಲ್, ಬಿಎಚ್‌ಕೆ ಇಂಡಸ್ಟ್ರೀಸ್, ಜಾನಕಿ ರಾಮ್ ಲೇಔಟ್, ವಡ್ಡರ ಪಾಳ್ಯ, ಅನುಗ್ರಹ ಲೇಔಟ್, ಕಾವೇರಿ ಲೇಔಟ್, ಬೈರತಿ ಹಳ್ಳಿ, ಕೆಆರ್‌ಸಿ, ದೊಡ್ಡಗುಬ್ಬಿ ಕ್ರಾಸ್, ಕುವೆಂಪು ಲೇಔಟ್, ಸಂಗಂ ಎನ್‌ಕ್ಲೇವ್, ಬೈರತಿ ಬಂಡೆ, ನಕ್ಷತ್ರ ಲೇಔಟ್, ತಿಮ್ಮೇಗೌಡ ಲೇಔಟ್, ಆಂಧ್ರ ಕಾಲೊನಿ ಮಂಜುನಾಥ್ ನಗರ, ಹೊರಮಾವು ಬಿಬಿಎಂಪಿ, ಅಗರ ಗ್ರಾಮ, ಪಟಾಲಮ್ಮ ದೇವಸ್ಥಾನ, ಎ.ಕೆ.ಆರ್ ಸ್ಕೂಲ್ ಹೊಸ ಮಿಲೇನಿಯಮ್ ಸ್ಕೂಲ್, ಲಕ್ಕಮ್ಮ ಲೇಔಟ್, ಪ್ರಕಾಶ್ ಗಾರ್ಡನ್ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸೋಲದೇವನಹಳ್ಳಿ ಉಪಕೇಂದ್ರ ವ್ಯಾಪ್ತಿಯಲ್ಲಿ ಬುಧವಾರ ಬೆಳಿಗ್ಗೆ 10ರಿಂದ 4ರವರೆಗೆ ವಿದ್ಯುತ್ ಸ್ಥಗಿತವಾಗಲಿದೆ.

ಐಐಎಚ್‌ಆರ್, ಕುಂಬಾರಹಳ್ಳಿ, ಕಸಘಟ್ಟಪುರ, ಕೆಂಪಾಪುರ, ದೊಡ್ಡಬ್ಯಾಲದಕೆರೆ, ಮೇಡಿಅಗ್ರಹಾರ, ಶಿವಕೋಟೆ, ಕೊಂಡಶೆಟ್ಟಿಹಳ್ಳಿ, ಕುರುಬರಹಳ್ಳಿ, ಚಿಕ್ಕಬ್ಯಾಲದಕೆರೆ, ಹುರುಳಿಚಿಕ್ಕನಹಳ್ಳಿ, ಲಿಂಗನಹಳ್ಳಿ, ಮಾದಪ್ಪನಹಳ್ಳಿ ಮುಂತಾದ ಸುತ್ತಮುತ್ತ ಪ್ರದೇಶಗಳಲ್ಲಿ ವ್ಯತ್ಯಯವಾಗಲಿದೆ.

ಐಪಿಎಲ್ ಬೆಟ್ಟಿಂಗ್: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಡುಗೊಂಡನಹಳ್ಳಿ ವ್ಯಾಪ್ತಿಯ ಕುಶಾಲನಗರದ ನೋಬೆಲ್ ಸೆಂಟ್ ಶಾಲೆ ಹತ್ತಿರ ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದ ಆಟೋ ಚಾಲಕ ಶೇಖ್ ಅಕ್ರಂ (38) ಮತ್ತು ಹಾಲು ವ್ಯಾಪಾರಿ ಅನ್ಸರ್ ಷರೀಫ್ (39) ಎಂಬುವರನ್ನು ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಠಾಣೆ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳಿಂದ ₹16,080 ನಗದು ಹಾಗೂ ಎರಡು ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

'ಅಕ್ರಂ, ಕುಶಾಲನಗರದ 6ನೇ ತಿರುವಿನ ನಿವಾಸಿಯಾಗಿದ್ದು, ಅನ್ಸರ್, ಹನೀಫಿಯಾ ಮಸೀದಿ ಎದುರು ನೆಲೆಸಿದ್ದ. ಇದೇ 24ರಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಚೆನ್ನೈ ಸೂಪರ್ ಕಿಂಗ್ಸ್ ನಡುವೆ ಐಪಿಎಲ್ ಪಂದ್ಯ ನಿಗದಿಯಾಗಿತ್ತು. ಆರೋಪಿಗಳು ಶಾಲೆ ಹತ್ತಿರದ ಪಾದಚಾರಿ ಮಾರ್ಗದ ಬಳಿ ಬೆಟ್ಟಿಂಗ್ ನಡೆಸುತ್ತಿದ್ದರು. ಈ ಕುರಿತು ಖಚಿತ ಮಾಹಿತಿ ಲಭಿಸಿದ್ದರಿಂದ ಸ್ಥಳಕ್ಕೆ ಹೋಗಿ ದಾಳಿ ನಡೆಸಲಾಗಿತ್ತು. ಆರ್‌ಸಿಬಿ ಗೆದ್ದರೆ ₹1,000ಕ್ಕೆ ₹1,200, ಸಿಎಸ್‌ಕೆ ಜಯಿಸಿದರೆ ₹1,000ಕ್ಕೆ ₹700 ಹಣ ನೀಡುವುದಾಗಿ ಜನರಿಗೆ ಆಮಿಷ ಒಡ್ಡಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಆರೋಪಿಗಳು ದೂರವಾಣಿಯ ಮೂಲಕವೇ ಬೆಟ್ಟಿಂಗ್ ನಡೆಸುತ್ತಿದ್ದುದು ವಿಚಾರಣೆಯಿಂದ ಗೊತ್ತಾಗಿದೆ. ಅಲಿ, ಖಾಜಾ, ತಬರೇಜ್ ಹಾಗೂ ಇತರರೂ ಬೆಟ್ಟಿಂಗ್ ದಂಧೆಯಲ್ಲಿ ಭಾಗಿಯಾಗಿದ್ದರು ಎಂಬುದು ವಿಚಾರಣೆಯಿಂದ ತಿಳಿದುಬಂದಿದೆ. ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರ ಪತ್ತೆ ಕಾರ್ಯ ಮುಂದುವರಿದಿದೆ' ಎಂದು ಹೇಳಿದ್ದಾರೆ.

ಪೊಲೀಸರ ಮೇಲೆ ಹಲ್ಲೆ: ರೌಡಿಗೆ ಗುಂಡೇಟು

ಬೆಂಗಳೂರು: ಕೊಲೆ ಪ್ರಕರಣದ ಮಹಜರು ವೇಳೆ ಪೊಲೀಸರ ಮೇಲೆ ಹಲ್ಲೆ ಮಾಡಿ ಪರಾರಿಯಾಗಲು ಯತ್ನಿಸಿದ್ದ ರೌಡಿ ಸ್ಟಾಲಿನ್‌ನನ್ನು ಕಾಲಿಗೆ ಗುಂಡು ಹಾರಿಸಿ ಸೆರೆ ಹಿಡಿಯಲಾಗಿದೆ.

'ರೌಡಿ ಅರವಿಂದ್ ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದ ಸ್ಟಾಲಿನ್‌ನನ್ನು ಇತ್ತೀಚೆಗೆ ಅಶೋಕನಗರ ಪೊಲೀಸರು ಬಂಧಿಸಿದ್ದರು. ಪ್ರಕರಣದ ಮಹಜರು ಪ್ರಕ್ರಿಯೆಗಾಗಿ ಸೋಮವಾರ ಆತನನ್ನು ಘಟನಾ ಸ್ಥಳಕ್ಕೆ ಕರೆದೊಯ್ಯಲಾಗಿತ್ತು. ಅದೇ ಸಂದರ್ಭದಲ್ಲೇ ಆತ, ಹೆಡ್ ಕಾನ್‌ಸ್ಟೆಬಲ್ ಮೇಲೆ ಹಲ್ಲೆ ಮಾಡಿ ಪರಾರಿಯಾಗಲು ಯತ್ನಿಸಿದ್ದ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಆರೋಪಿಯನ್ನು ಹಿಡಿಯಲು ಇನ್‌ಸ್ಪೆಕ್ಟರ್ ಹೋಗಿದ್ದರು. ಅವರ ಮೇಲೆ ಆತ ಹಲ್ಲೆಗೆ ಯತ್ನಿಸಿದ್ದ. ಆತ್ಮರಕ್ಷಣೆಗಾಗಿ ಇನ್‌ಸ್ಪೆಕ್ಟರ್, ರೌಡಿ ಸ್ಟಾಲಿನ್ ಕಾಲಿಗೆ ಗುಂಡು ಹೊಡೆದು ಬಂಧಿಸಿದ್ದಾರೆ. ಗಾಯಗೊಂಡಿರುವ ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಹೆಡ್ ಕಾನ್‌ಸ್ಟೆಬಲ್ ಅವರಿಗೆ ಚಿಕಿತ್ಸೆ ಕೊಡಿಸಲಾಗುತ್ತಿದೆ' ಎಂದು ಅವರು ಹೇಳಿದರು.

ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದಿದ್ದ ಕೊಲೆ: 'ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ (ಕೆಎಸ್‌ಎಫ್‌ಎ) ಕ್ರೀಡಾಂಗಣ ರೆಫರಿಗಳ ಕೊಠಡಿಯಲ್ಲಿ ರೌಡಿ ಅರವಿಂದ್‌ನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಸ್ಟಾಲಿನ್ ಸೇರಿ ನಾಲ್ವರನ್ನು ಬಂಧಿಸಲಾಗಿತ್ತು' ಎಂದು ಪೊಲೀಸರು ಹೇಳಿದರು.

'ಸ್ಟಾಲಿನ್ ತಮ್ಮ ಸುಭಾಷ್ ಹಾಗೂ ಹಲವರ ಮೇಲೆ ರೌಡಿ ಅರವಿಂದ್ ಹಲ್ಲೆ ಮಾಡಿದ್ದ. ತಾನೊಬ್ಬ ರೌಡಿ ಎಂದು ಹೇಳಿಕೊಂಡು ಜೀವ ಬೆದರಿಕೆ ಹಾಕುತ್ತಿದ್ದ. ಅದರಿಂದ ಬೇಸತ್ತ ಆರೋಪಿಗಳು, ಅರವಿಂದ್‌ನ ಕೊಲೆಗೆ ಸಂಚು ರೂಪಿಸಿದ್ದರು. ಸೆ. 12ರಂದು ಫುಟ್‌ಬಾಲ್ ಆಡಲು ಬಂದಿದ್ದ ಅರವಿಂದ್, ವಾಟ್ಸ್‌ಆ್ಯಪ್‌ನಲ್ಲಿ ಸ್ಟೇಟಸ್ ಇಟ್ಟಿದ್ದ. ಅದನ್ನು ನೋಡಿದ್ದ ಆರೋಪಿಗಳು, ಸ್ಥಳಕ್ಕೆ ಬಂದು ಅರವಿಂದ್‌ನನ್ನು ಅಟ್ಟಾಡಿಸಿ ಕೊಂದಿದ್ದರು' ಎಂದೂ ಅವರು ತಿಳಿಸಿದರು.

50 ವರ್ಷಗಳ ಹಳೆಯ ಕಟ್ಟಡದಲ್ಲಿತ್ತು ಬಿರುಕು ● ಮಾಲೀಕನ ವಿರುದ್ಧ ಎಫ್‌ಐಆರ್

ಬಹುಮಹಡಿ ಕಟ್ಟಡ ಕುಸಿತ: ಜೀವ ಉಳಿಸಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಲಕ್ಕಸಂದ್ರದಲ್ಲಿ ಬಹುಮಹಡಿ ಕಟ್ಟಡವೊಂದು ಸೋಮವಾರ ಕುಸಿದು ಬಿದ್ದಿದ್ದು, ಅಕ್ಕ-ಪಕ್ಕದ ಕಟ್ಟಡಗಳಿಗೆ ಧಕ್ಕೆಯಾಗಿದೆ.

ಸ್ಥಳೀಯ ನಿವಾಸಿ ಸುರೇಶ್ ಎಂಬುವರಿಗೆ ಸೇರಿದ್ದ ಮೂರು ಅಂತಸ್ತಿನ ಕಟ್ಟಡ ಇದಾಗಿತ್ತು. ಕಟ್ಟಡ ಕುಸಿದಿದ್ದ ದೃಶ್ಯವನ್ನು ಸ್ಥಳೀಯರು ಮೊಬೈಲ್‌ನಲ್ಲಿ ಚಿತ್ರೀಕರಿಸಿ, ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ. 'ಸ್ವಲ್ಪದರಲ್ಲೇ ಹಲವರ ಪ್ರಾಣ ಉಳಿದಿದೆ' ಎಂದು ಹೇಳಿಕೊಂಡಿದ್ದಾರೆ.

'50 ವರ್ಷ ಹಿಂದೆ ನಿರ್ಮಿಸಿದ್ದ ಕಟ್ಟಡದಲ್ಲಿ ಕೆಲ ತಿಂಗಳ ಹಿಂದಷ್ಟೇ ಬಿರುಕು ಕಾಣಿಸಿಕೊಂಡಿತ್ತು. ಕಟ್ಟಡದ ಸಮೀಪದಲ್ಲೇ ಮೆಟ್ರೊ ಕಾಮಗಾರಿ ಸಹ ನಡೆಯುತ್ತಿತ್ತು. ಕಾಮಗಾರಿಗೆ ಬಂದಿದ್ದ 10ಕ್ಕೂ ಹೆಚ್ಚು ಕಾರ್ಮಿಕರು, ಇದೇ ಕಟ್ಟಡದ ಕೊಠಡಿಗಳಲ್ಲಿ ಬಾಡಿಗೆಗೆ ಉಳಿದುಕೊಂಡಿದ್ದರು' ಎಂದು ಸ್ಥಳೀಯರೊಬ್ಬರು ಹೇಳಿದರು.

'ಕಾರ್ಮಿಕರು ಸೋಮವಾರ ಬೆಳಿಗ್ಗೆ ಕೆಲಸಕ್ಕೆ ಹೋಗಿದ್ದರು. ಇದೇ ವೇಳೆ ಕಟ್ಟಡ ಕುಸಿದಿದೆ. ಸಾಮಗ್ರಿ ಹಾಗೂ ಪೀಠೋಪಕರಣಗಳು ಅವಶೇಷಗಳಡಿ ಸಿಲುಕಿವೆ. ಅಕ್ಕ–ಪಕ್ಕದ ಕಟ್ಟಡಗಳಿಗೂ ಹಾನಿಯಾಗಿದೆ. ಮನೆಗಳ ಗೋಡೆಗಳು ಬಿರುಕು ಬಿಟ್ಟಿದ್ದು, ಅಪಾಯದ ಮುನ್ಸೂಚನೆ ನೀಡುತ್ತಿವೆ.



ಲಕ್ಕಸಂದ್ರದಲ್ಲಿ ಸೋಮವಾರ ಕುಸಿದು ಬಿದ್ದಿರುವ ಬಹುಮಹಡಿ ಕಟ್ಟಡದ ಅವಶೇಷ – ಪ್ರಜಾವಾಣಿ ಚಿತ್ರ

ಆದರೆ, ಅವಘಡದಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲವೆಂಬುದು ಸಮಾಧಾನಕರ. ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಕಟ್ಟಡದ ಅವಶೇಷ ತೆರವು ಮಾಡುತ್ತಿದ್ದಾರೆ' ಎಂದೂ ತಿಳಿಸಿದರು.

ನಿಧಾನವಾಗಿ ವಾಲುತ್ತಿದ್ದ ಕಟ್ಟಡ: ಸೋಮವಾರ ಮಧ್ಯಾಹ್ನ ಕಟ್ಟಡ ನಿಧಾನವಾಗಿ ರಸ್ತೆ ಕಡೆಗೆ ವಾಲುತ್ತಿತ್ತು. ಅದನ್ನು ಗಮನಿಸಿದ್ದ ಅಕ್ಕ- ಪಕ್ಕದ ನಿವಾಸಿಗಳು, ತಮ್ಮ ಮನೆಯಿಂದ ಹೊರಗೆ ಓಡಿ ಬಂದು ಸುರಕ್ಷಿತ ಸ್ಥಳದಲ್ಲಿ ನಿಂತುಕೊಂಡಿದ್ದರು. ನೋಡು ನೋಡುತ್ತಿದ್ದಂತೆ ಅವರ ಕಣ್ಣೆದುರೇ ಕಟ್ಟಡ ಕುಸಿದು ಬಿತ್ತು. ಅದರ ಧೂಳು ಇಡೀ ರಸ್ತೆಯನ್ನೇ ಆವರಿಸಿತ್ತು.

'ಕಟ್ಟಡ ಕುಸಿಯುವ ಮುನ್ಸೂಚನೆ ಹಲವು ದಿನಗಳ ಹಿಂದೆಯೇ ಸಿಕ್ಕಿತ್ತು. ಈ ಬಗ್ಗೆ ಮಾಲೀಕರಿಗೆ ಹೇಳಿದರೂ ತಲೆಕೆಡಿಸಿಕೊಳ್ಳಲಿಲ್ಲ. ಪ್ರಾಣಭಯದಲ್ಲಿ ಜೀವನ ಸಾಗಿಸುತ್ತಿದ್ದೆವು. ಈಗ ನಮ್ಮ ಎದುರೇ ಕಟ್ಟಡ ಕುಸಿದಿದೆ' ಎಂದು ಸ್ಥಳೀಯ ನಿವಾಸಿಯೊಬ್ಬರು ಹೇಳಿದರು.

ಕಾರ್ಮಿಕನ ಜೀವ ಉಳಿಸಿದ ನೀರು: 'ಕಟ್ಟಡದ ಮೂರನೇ ಮಹಡಿಯ ಕೊಠಡಿಯಲ್ಲಿ ಸ್ನೇಹಿತರ ಜೊತೆ ವಾಸವಾಗಿದ್ದೆ. ಸೋಮವಾರ ಬೆಳಿಗ್ಗೆ ಎಲ್ಲರೂ ಕೆಲಸಕ್ಕೆ ಹೋಗಿದ್ದರು. ನಾನು ಒಬ್ಬನೇ ಕೊಠಡಿಯಲ್ಲಿದ್ದೆ' ಎಂದು ಕಾರ್ಮಿಕರೊಬ್ಬರು ಪೊಲೀಸರಿಗೆ ಹೇಳಿಕೆ ನೀಡಿದ್ದಾರೆ.

'ಅಡುಗೆ ಮಾಡುವ ಜವಾಬ್ದಾರಿ ನನ್ನ ಮೇಲಿತ್ತು. ಮಧ್ಯಾಹ್ನ ಅಡುಗೆ ಮಾಡಲು ಆರಂಭಿಸಿದ್ದೆ. ನೀರು ಖಾಲಿಯಾಗಿತ್ತು. ನೀರು ತರಲೆಂದು ಕಟ್ಟಡದಿಂದ ಹೊರಬಂದು, ಸಮೀಪದಲ್ಲೇ ಇದ್ದ ಮತ್ತೊಂದು ಕಟ್ಟಡದ ನಳದ ಬಳಿ ಹೋಗಿದ್ದೆ. ಕ್ಯಾನ್‌ನಲ್ಲಿ ನೀರು ತುಂಬಿಸುತ್ತಿದ್ದ ವೇಳೆಯಲ್ಲಿ ಕಟ್ಟಡ ಕುಸಿದು ಬಿತ್ತು' ಎಂದೂ ಹೇಳಿದ್ದಾರೆ.

'ನೀರು ತರಲು ಹೊರಗಡೆ ಬರದಿದ್ದರೆ, ನನ್ನ ಜೀವವೂ ಹೋಗುತ್ತಿತ್ತು. ಕಟ್ಟಡ ಕುಸಿದಿದ್ದರಿಂದ ನಾನು ಮೃತಪಟ್ಟಿರಬಹುದೆಂದು ತಿಳಿದ ಸ್ನೇಹಿತರು, ಸ್ಥಳಕ್ಕೆ ಬಂದು ನನಗಾಗಿ ಹುಡುಕಾಡುತ್ತಿದ್ದರು. ನನ್ನನ್ನು ನೋಡಿದ ಮೇಲೆ ಅವರಿಗೆ ಸಮಾಧಾನವಾಯಿತು' ಎಂದೂ ಕಾರ್ಮಿಕ ಪೊಲೀಸರಿಗೆ ವಿವರಿಸಿದ್ದಾನೆ.

ಕಟ್ಟಡ ಮಾಲೀಕನ ವಿರುದ್ಧ ಎಫ್‌ಐಆರ್: 'ಕಟ್ಟಡ ವಾಲಿ ಕುಸಿಯುವ ಹಂತ ತಲುಪಿದ್ದು ಗೊತ್ತಿದ್ದರೂ ಮೌನವಾಗಿದ್ದುಕೊಂಡು ನಿರ್ಲಕ್ಷ್ಯ ವಹಿಸಿದ್ದ ಆರೋಪದಡಿ ಮಾಲೀಕ ಸುರೇಶ್ ವಿರುದ್ಧ ಆಡುಗೋಡಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಹಳೆಯ ಕಟ್ಟಡದಲ್ಲಿ ಹಲವು ತಿಂಗಳ ಹಿಂದೆಯೇ ಬಿರುಕು ಬಿಟ್ಟಿತ್ತು. ಆದರೆ, ಮಾಲೀಕ ನಿರ್ಲಕ್ಷ್ಯ ವಹಿಸಿದ್ದ. ಕಟ್ಟಡ ತೆರವಿಗೆ ಪ್ರಯತ್ನಿಸಿರಲಿಲ್ಲ. ಬೇರೆ ಕಡೆ ವಾಸವಿದ್ದ ಸುರೇಶ್, ಹಳೆಯ ಕಟ್ಟಡದಲ್ಲಿರುವ ಕೊಠಡಿಗಳನ್ನು ಬಾಡಿಗೆ ಕೊಟ್ಟಿದ್ದ. ಪ್ರತಿ ತಿಂಗಳು ಬಾಡಿಗೆ ವಸೂಲಿ ಮಾಡಲು ಕಟ್ಟಡಕ್ಕೆ ಬಂದು ಹೋಗುತ್ತಿದ್ದ. ಬಿರುಕಿನ ಬಗ್ಗೆ ಬಾಡಿಗೆದಾರರು ಹಲವು ಬಾರಿ ಪ್ರಸ್ತಾಪಿಸಿದ್ದರು. ಏನು ಆಗುವುದಿಲ್ಲವೆಂದು ಆತ ವಾದಿಸುತ್ತಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅವಘಡದಲ್ಲಿ ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಕಟ್ಟಡದಲ್ಲಿ ವಾಸವಿದ್ದ ಕಾರ್ಮಿಕರ ಹೇಳಿಕೆ ಪಡೆಯಲಾಗಿದೆ. ಬಿಬಿಎಂಪಿ ಅಧಿಕಾರಿಗಳೂ ದೂರು ನೀಡಿದ್ದಾರೆ. ಅದರನ್ವಯ ಮಾಲೀಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸದ್ಯ ಆತ ತಲೆಮರೆಸಿಕೊಂಡಿದ್ದಾನೆ' ಎಂದೂ ಮೂಲಗಳು ತಿಳಿಸಿವೆ.

'ತನಿಖೆಗೆ ತಂಡ ರಚನೆ'

'ಕಟ್ಟಡ ಕುಸಿಯುವ ಬಗ್ಗೆ ಮಾಲೀಕ ಸುರೇಶ್‌ಗೆ ಮೊದಲೇ ಗೊತ್ತಿತ್ತು. ಆದರೆ, ಆತ ಮೌನವಾಗಿದ್ದ. ಕಟ್ಟಡ ಕುಸಿಯುತ್ತಿದ್ದಂತೆ ಆತ ತಲೆಮರೆಸಿಕೊಂಡಿದ್ದು, ಹುಡುಕಾಟ ನಡೆಸಲಾಗುತ್ತಿದೆ. ಪ್ರಕರಣದ ತನಿಖೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಟರ್ಮಿನಲ್ 2ರಲ್ಲಿ ರಾಜ್ಯದ ಕಲೆ, ಸಂಸ್ಕೃತಿ ಬಿಂಬಿಸುವ ಯೋಜನೆ ನನೆಗುದಿಗೆ

ವಿಮಾನ ನಿಲ್ದಾಣ: ಕಲಾತ್ಮಕ ಸ್ಪರ್ಶಕ್ಕೆ ಕೋವಿಡ್ ಅಡ್ಡಿ

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 2ರಲ್ಲಿ ರಾಜ್ಯದ ಕಲೆ ಮತ್ತು ಸಂಸ್ಕೃತಿ ಬಿಂಬಿಸುವ ಯೋಜನೆಯು ಕೋವಿಡ್‌ನಿಂದಾಗಿ ನನೆಗುದಿಗೆ ಬಿದ್ದಿದೆ.

ನಗರಕ್ಕೆ ಬರುವ ಪ್ರಯಾಣಿಕರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ. ಸದ್ಯ ವಿಮಾನ ನಿಲ್ದಾಣದಲ್ಲಿ ಒಂದು ಟರ್ಮಿನಲ್ ಕಾರ್ಯಾಚರಣೆ ಮಾಡುತ್ತಿದೆ. ಪ್ರಯಾಣಿಕರ ದಟ್ಟಣೆ ನಿಯಂತ್ರಿಸಲು ಹಾಗೂ ಪ್ರಯಾಣಿಕರಿಗೆ ಉತ್ತಮ ಸೇವೆ ಸಿಗುವಂತೆ ಮಾಡಲು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ (ಬಿಐಎಎಲ್) ಎರಡನೇ ಟರ್ಮಿನಲ್ ನಿರ್ಮಿಸುತ್ತಿದೆ.

ಮೊದಲ ಹಂತದಲ್ಲಿ 2.54 ಲಕ್ಷ ಚದರ ಮೀ. ನಿರ್ಮಾಣ ಪ್ರದೇಶವನ್ನು ಹೊಂದಿರುವ ಕಟ್ಟಡ ನಿರ್ಮಿಸಲಾಗಿದೆ. ಎರಡನೇ ಹಂತದಲ್ಲಿ 4.41 ಲಕ್ಷ ಚದರ ಮೀ. ನಿರ್ಮಾಣ ಪ್ರದೇಶವಿರುವ ಕಟ್ಟಡ ನಿರ್ಮಾಣ ನಡೆದಿದೆ. ಅಮೆರಿಕದ ಸ್ಕಿಡ್‌ಮೋರ್, ಓವಿಂಗ್ ಆ್ಯಂಡ್ ಮೆರಿಲ್ (ಎಸ್‌ಒಎಂ) ವಾಸ್ತುಶಿಲ್ಪ ಸಂಸ್ಥೆಯ ಸಹಾಯದಿಂದ ಎರಡನೇ ಟರ್ಮಿನಲ್ ವಿನ್ಯಾಸ ಸಿದ್ಧಪಡಿಸಲಾಗಿದೆ. ನಾಲ್ಕು ಸ್ತಂಭಗಳನ್ನು ಈ ಟರ್ಮಿನಲ್ ಒಳಗೊಳ್ಳಲಿದೆ. ಇದರಲ್ಲಿ ರಾಜ್ಯದ ಕಲೆ ಮತ್ತು ಸಂಸ್ಕೃತಿಯ ವಿನ್ಯಾಸವೂ ಒಂದಾಗಿದೆ.

ಕಳೆದ ವರ್ಷವೇ ಕಲೆ ಮತ್ತು ಸಂಸ್ಕೃತಿಯ ವಿನ್ಯಾಸಕ್ಕೆ ಸಂಬಂಧಿಸಿದಂತೆ ಕ್ರಿಯಾಯೋಜನೆ ರೂಪಿಸಿ, ಕಲಾವಿದರಿಂದ ಸಲಹೆ ಹಾಗೂ ವಿನ್ಯಾಸಗಳನ್ನು ಆಹ್ವಾನಿಸಲಾಗಿತ್ತು. ಇದಕ್ಕಾಗಿ ಪ್ರತ್ಯೇಕ ಸಮಿತಿಯನ್ನೂ ರಚಿಸಲಾಗಿತ್ತು. ಆದರೆ, ಟರ್ಮಿನಲ್ 2ಕ್ಕೆ ಕಲಾತ್ಮಕ ಸ್ಪರ್ಶ ನೀಡುವ ಕಾರ್ಯಕ್ಕೆ ಕೋವಿಡ್ ಅಡ್ಡಿಯಾಗಿದೆ.



ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

ಕಲೆಗೆ ಆದ್ಯತೆ ಅಗತ್ಯ: 'ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ನಾಡಿನ ಪರಂಪರೆ, ಇತಿಹಾಸ, ಕಲೆ ಮತ್ತು ಸಂಸ್ಕೃತಿಯನ್ನು ಕಟ್ಟಿಕೊಡುವ ಯೋಜನೆ ಕುಂಟುತ್ತಾ ಸಾಗುತ್ತಿದೆ. ಸಮಿತಿಯಲ್ಲಿ ಇಲ್ಲಿನ ಕಲಾವಿದರಿಗೆ ಸ್ಥಾನ ನೀಡಿಲ್ಲ. ಉತ್ತರ ಭಾರತದ ಅಧಿಕಾರಿಗಳನ್ನು ನೇಮಿಸಲಾಗಿದೆ. ಇದರಿಂದಾಗಿ ಟರ್ಮಿನಲ್ 2ರಲ್ಲಿ ಕಲೆ ಮತ್ತು ಸಂಸ್ಕೃತಿಯ ವಿನ್ಯಾಸಕ್ಕೆ ಹಿನ್ನಡೆಯಾಗಿದೆ' ಎಂದು ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷ ಡಿ. ಮಹೇಂದ್ರ ಬೇಸರ ವ್ಯಕ್ತಪಡಿಸಿದರು.

'ದೆಹಲಿ, ಪಂಜಾಬ್ ಸೇರಿದಂತೆ ವಿವಿಧ ರಾಜ್ಯಗಳಲ್ಲಿನ ವಿಮಾನ ನಿಲ್ದಾಣಗಳಲ್ಲಿ ಅಲ್ಲಿನ ಕಲೆ ಮತ್ತು ಸಂಸ್ಕೃತಿ ಚಿತ್ರಿಸಲಾಗಿದೆ. ಆದರೆ, ಇಲ್ಲಿನ ವಿಮಾನ ನಿಲ್ದಾಣದಲ್ಲಿ ಮಾತ್ರ ಈ ಕಾರ್ಯ ಸಾಕಾರಗೊಂಡಿಲ್ಲ. ಕಲೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಅಕಾಡೆಮಿಗಳು, ಸಂಘ–ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿಯನ್ನು ಪುನರ್ ರಚಿಸಬೇಕು' ಎಂದರು.


'4 ಸ್ತಂಭಗಳಲ್ಲಿ ಬದಲಾವಣೆಯಿಲ್ಲ'


'ಟರ್ಮಿನಲ್ 2ರಲ್ಲಿ ನಾಲ್ಕು ಸ್ತಂಭಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಮೊದಲನೇ ಸ್ತಂಭದಲ್ಲಿ ಉದ್ಯಾನ, ಎರಡನೇ ಸ್ತಂಭದಲ್ಲಿ ತಂತ್ರಜ್ಞಾನ, ಮೂರನೇ ಸ್ತಂಭದಲ್ಲಿ ಪರಿಸರ ವ್ಯವಸ್ಥೆ ಹಾಗೂ ನಾಲ್ಕನೇ ಸ್ತಂಭದಲ್ಲಿ ಪರಂಪರೆ ಮತ್ತು ಸಂಸ್ಕೃತಿಯನ್ನು ವಿನ್ಯಾಸಗೊಳಿಸಲಾಗುತ್ತದೆ. ಇದು ಪ್ರಗತಿಯಲ್ಲಿದೆ. ಇಲ್ಲಿನ ಕಲಾವಿದರಿಗೂ ಆದ್ಯತೆ ನೀಡಲಾಗುತ್ತದೆ' ಎಂದು ಬಿಐಎಎಲ್ ಅಧಿಕಾರಿಯೊಬ್ಬರು ತಿಳಿಸಿದರು.

'ಕೋವಿಡ್ ನಿರ್ಬಂಧ ಹಾಗೂ ಕಾರ್ಮಿಕರ ಕೊರತೆಯಿಂದ ಟರ್ಮಿನಲ್ 2ರ ಕಾಮಗಾರಿ ವಿಳಂಬವಾಗಿದೆ. ಇಲ್ಲಿನ ಕಲೆ ಮತ್ತು ಸಂಸ್ಕೃತಿಗೆ ವಿಮಾನ ನಿಲ್ದಾಣದಲ್ಲಿ ಆದ್ಯತೆ ನೀಡಲಾಗುತ್ತದೆ. ನಾಲ್ಕು ಸ್ತಂಭಗಳಲ್ಲಿ ಯಾವುದೇ ಬದಲಾವಣೆ ಮಾಡುವುದಿಲ್ಲ. ಆದರೆ, ಸ್ವಲ್ಪ ವಿಳಂಬವಾಗುತ್ತದೆ' ಎಂದರು.

ಸಾಂಪ್ರದಾಯಿಕ ಕಲೆಗೆ ಆದ್ಯತೆ

ಟರ್ಮಿನಲ್ 2ರಲ್ಲಿ ಕಲೆ ಮತ್ತು ಸಾಂಸ್ಕೃತಿಕ ವಿನ್ಯಾಸಕ್ಕೆ ಸಂಬಂಧಿಸಿದಂತೆ ರೂಪಿಸಲಾದ ಕ್ರಿಯಾಯೋಜನೆಯಲ್ಲಿ ಸಾಂಪ್ರದಾಯಿಕ ಕಲೆಗೆ ಆದ್ಯತೆ ನೀಡಲಾಗಿತ್ತು. ನಿಲ್ದಾಣದಿಂದ ವಿಮಾನಗಳು ಇರುವ ಸ್ಥಳದವರೆಗೆ ಶಿಲ್ಪ ಕಲಾಕೃತಿಗಳು ಹಾಗೂ ಲಲಿತ ಕಲೆಗಳನ್ನು ನಿರ್ಮಿಸುವುದು ಯೋಜನೆಯಲ್ಲಿತ್ತು. ಅದೇ ರೀತಿ, ಡಿಜಿಟಲ್ ಪರದೆಗಳಲ್ಲಿ ನಾಡಿನ ಸಂಸ್ಕೃತಿ, ಐತಿಹಾಸಿಕ ಸ್ಥಳ ಸೇರಿದಂತೆ ವೈವಿಧ್ಯತೆಯನ್ನು ಪ್ರಯಾಣಿಕರಿಗೆ ಪರಿಚಯಿಸಲು ವಿನ್ಯಾಸ ರೂಪಿಸಲಾಗಿತ್ತು.





ಉಗ್ರನ ಹತ್ಯೆ, ಮೂವರು ಯೋಧರಿಗೆ ಗಾಯ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯಲ್ಲಿ ಉಗ್ರರ ಒಳ ನುಸುಳುವಿಕೆ ಯತ್ನವನ್ನು ವಿಫಲಗೊಳಿಸಿದ ಸೇನೆ ಒಬ್ಬ ಉಗ್ರನನ್ನು ಹತ್ಯೆ ಮಾಡಿದ್ದು, ಈ ವೇಳೆ ಮೂವರು ಸೈನಿಕರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

'ಅನುಮಾನಾಸ್ಪದ ಚಲನವಲನ ಕಂಡುಬಂದ ನಂತರ ಉತ್ತರ ಕಾಶ್ಮೀರದ ಉರಿ ಸೆಕ್ಟರ್‌ನಲ್ಲಿ ಗಡಿ ನಿಯಂತ್ರಣ ರೇಖೆಯ ಉದ್ದಕ್ಕೂ ಸೇನೆಯು ಒಳನುಸುಳುವಿಕೆ ತಡೆ ಕಾರ್ಯಾಚರಣೆಯನ್ನು ಆರಂಭಿಸಿದೆ. ಉರಿಯಲ್ಲಿನ ಎಲ್‌ಒಸಿಯಲ್ಲಿ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ಸೈನಿಕರು ಗಾಯಗೊಂಡರೆ, ಒಬ್ಬ ನುಸುಳುಕೋರನನ್ನು ಹೊಡೆದುರುಳಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಾಯಿ–ದೊಡ್ಡಪ್ಪನ ಅನೈತಿಕ ಸಂಬಂಧಕ್ಕೆ ಅಡ್ಡಿ

ಪೋಷಕರಿಂದಲೇ ಮಗಳ ಹತ್ಯೆ

ಪ್ರಜಾವಾಣಿ ವಾರ್ತೆ

ಗೌರಿಬಿದನೂರು: ತಾಲ್ಲೂಕಿನ ವಾಟದ ಹೊಸಹಳ್ಳಿ ಗ್ರಾಮದ ಬಾವಿಯಲ್ಲಿ ಸುಮಾರು 20 ದಿನಗಳ ಹಿಂದೆ ಪರ್ವಿನಾ ಮುಬಾರಕ್ ಎಂಬ ಮಹಿಳೆ ಶವ ಪತ್ತೆಯಾದ ಪ್ರಕರಣಕ್ಕೆ ಹೊಸ ತಿರುವು ದೊರೆತಿದೆ.

ಪರ್ವಿನಾ ಹತ್ಯೆಗೆ ಸಂಬಂಧಿಸಿದಂತೆ ಮೃತಳ ದೊಡ್ಡಪ್ಪ ಪ್ಯಾರೇಜಾನ್ (60), ತಾಯಿ ಗುಲ್ಝಾರಬಾನು (45), ತಂದೆ ಫಯಾಜ್ (50) ಎಂಬುವವರನ್ನು ಗೌರಿಬಿದನೂರು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸೆ.5ರಂದು ಪರ್ವಿನಾ ಶವ ಮಣಿವಾಲ ಗ್ರಾಮದ ರಾಜಶೇಖರ್ ಅವರ ತೋಟದ ಬಾವಿಯಲ್ಲಿ ದೊರೆತಿತ್ತು. ರಾಜಶೇಖರ್ ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದರು.

ಪ್ರಕರಣದ ಹಿನ್ನೆಲೆ: '10 ವರ್ಷಗಳ ಹಿಂದೆ ಪರ್ವಿನಾ ವಿವಾಹ ನಡೆದಿತ್ತು. ಆದರೆ ಆಕೆ ತನ್ನ ಪತಿಯನ್ನು ತೊರೆದು ತಾನು ಪ್ರೀತಿಸುತ್ತಿದ್ದ ಮಣಿವಾಲ ಗ್ರಾಮದ ಶಿವಪ್ಪ ಎಂಬುವವರ ಜತೆ ಸಂಸಾರ ನಡೆಸುತ್ತಿದ್ದರು. ಶಿವಪ್ಪ ಮೃತಪಟ್ಟ ನಂತರ ವಿನಯ್ ಕುಮಾರ್ ಎಂಬುವವರ ಜತೆ ವಾಸಿಸುತ್ತಿದ್ದರು. ಆತನೂ ಮೃತಪಟ್ಟ ನಂತರ ತವರು ಮನೆ ಸೇರಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.



ಆರೋಪಿಗಳಾದ ಪ್ಯಾರೇಜಾನ್, ಗುಲ್ಝಾರ ಬಾನು, ಫಯಾಜ್

'ಪರ್ವಿನಾ ಅವರ ತಾಯಿ ಗುಲ್ಝಾರಬಾನು, ತನ್ನ ಅಕ್ಕನ ಗಂಡ ಪ್ಯಾರೇಜಾನ್ ಜತೆ ಅನೈತಿಕ ಸಂಬಂಧ ಹೊಂದಿದ್ದರು. ತನ್ನ ತಾಯಿಯು ಹೊಂದಿದ್ದ ಅಕ್ರಮ ಸಂಬಂಧ ಪರ್ವಿನಾಗೆ ತಿಳಿಯಿತು. ಈ ವಿಚಾರ ಮತ್ತು ಪರ್ವಿನಾ ಈ ಹಿಂದೆ ಹೊಂದಿದ್ದ ಸಂಬಂಧಗಳ ವಿಚಾರವಾಗಿ ಕುಟುಂಬ ಸದಸ್ಯರ ಮಧ್ಯೆ ಆಗಾಗ್ಗೆ ಜಗಳ ನಡೆಯುತ್ತಿತ್ತು'.

'ಆರೋಪಿಗಳು ಪರ್ವಿನಾ ಅವರನ್ನು ಕೊಲೆ ಮಾಡುವ ಉದ್ದೇಶದಿಂದ ಶ್ರೀನಿವಾಸಚಾರ್ಲಹಳ್ಳಿ ಬಳಿಯ ಮಾವಿನ ತೋಪಿಗೆ ಕರೆದುಕೊಂಡು ಹೋಗಿ ಹತ್ಯೆ ಮಾಡಿದ್ದರು. ಶವವನ್ನು ಮಣಿವಾಲ ಗ್ರಾಮದ ರಾಜಶೇಖರ್ ಅವರ ತೋಟದ ಬಾವಿಗೆ ಎಸೆದಿದ್ದರು. ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ. ಈ ಹಿಂದೆ ಪರ್ವಿನಾ ಸಂಸಾರ ನಡೆಸಿದ್ದ ಶಿವಪ್ಪ ಅವರ ತಂದೆ ವೆಂಕಟರಮಣಪ್ಪ ಈ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದರು. ಇದು ಕೊಲೆ ಎಂದು ಹೇಳಿಕೆ ನೀಡಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.


ಬೈಕ್ ಕಳ್ಳರಿಂದ ಗ್ರಾಮಸ್ಥರ ಮೇಲೆ ಗುಂಡಿನ ದಾಳಿ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಪೆರೇಸಂದ್ರ ಪೊಲೀಸ್ ಠಾಣೆ ವ್ಯಾಪ್ತಿಯ ಮರವೇನಹಳ್ಳಿ ಗ್ರಾಮದಲ್ಲಿ ಕಳ್ಳರು ಗ್ರಾಮಸ್ಥರ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ.

ಇಬ್ಬರು ಕಳ್ಳರು ಗ್ರಾಮದಲ್ಲಿ ಬೈಕ್ ಕಳ್ಳತನಕ್ಕೆ ಯತ್ನಿಸಿದ್ದಾರೆ. ಈ ವೇಳೆ ಅವರನ್ನು ಹಿಡಿಯಲು ಗ್ರಾಮಸ್ಥರು ಮುಂದಾಗಿದ್ದಾರೆ. ಆಗ ಕಳ್ಳರು ಗ್ರಾಮಸ್ಥರ ಮೇಲೆ ಗುಂಡು ಹಾರಿಸಿ ಪರಾರಿ ಆಗಿದ್ದಾರೆ.

ಗ್ರಾಮಸ್ಥ ಗಂಗಾಧರ್ ಅವರ ಹೊಟ್ಟೆಗೆ ಗುಂಡು ತಗುಲಿದ್ದು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರು ಅಪಾಯದಿಂದ ಪಾರಾಗಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ. ಮಿಥುನ್ ಕುಮಾರ್ ತಿಳಿಸಿದ್ದಾರೆ.



ಬಿ.ಎಂ.ಶ್ರೀ. ಪ್ರತಿಷ್ಠಾನ ನಗರದಲ್ಲಿ ಭಾನುವಾರ ಹಮ್ಮಿಕೊಂಡ 'ನಲವತ್ತರ ನಲಿವು' ಕಾರ್ಯಕ್ರಮದಲ್ಲಿ ಬಿಡುಗಡೆಯಾದ 'ಶ್ರೀ ಕೌಸ್ತುಭ', 'ಲೋಚನ ದೀಪ್ತಿ' ಹಾಗೂ 'ಯುದ್ಧಕಾಂಡ' ಕೃತಿಗಳನ್ನು ವಿದ್ವಾಂಸ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ, ಸಾಹಿತಿ ಪ್ರೊ.ಎಂ.ಎಚ್. ಕೃಷ್ಣಯ್ಯ ಹಾಗೂ ಕವಿ ದೊಡ್ಡರಂಗೇಗೌಡ ಪರಿಶೀಲಿಸಿದರು –ಪ್ರಜಾವಾಣಿ ಚಿತ್ರ

'ಹಣದ ಹಿಂದೆ ಓಡುವ ನಾಗರಿಕತೆ ಬೆಳೆಯುತ್ತಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗುಣವನ್ನು ಬದಿಗೆ ಸರಿಸಿ, ಹಣದ ಹಿಂದೆ ಓಡುವ ನಾಗರಿಕತೆಯನ್ನು ಬೆಳೆಸಿಕೊಳ್ಳುತ್ತಿದ್ದೇವೆ. ಹಣವನ್ನು ಪೂಜೆ ಮಾಡುವುದರಿಂದ ಉತ್ತಮ ಗುಣ ಬರುವುದಿಲ್ಲ' ಎಂದು ಕವಿ ದೊಡ್ಡರಂಗೇಗೌಡ ತಿಳಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನ ನಗರದಲ್ಲಿ ಭಾನುವಾರ ಹಮ್ಮಿಕೊಂಡ 'ನಲವತ್ತರ ನಲಿವು' ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು. 'ಹಣದಿಂದ ಮಾತ್ರ ಉತ್ತಮ ಗುಣವನ್ನು ಪಡೆಯಲು ಸಾಧ್ಯವಿಲ್ಲ. ಗುಣವು ಸಂಸ್ಕಾರದಿಂದ ಬರುವಂತಹದ್ದು. ಇದನ್ನು ಅರಿತುಕೊಂಡು ನಡೆಯಬೇಕು' ಎಂದು ಹೇಳಿದರು.

'ಪ್ರತಿಷ್ಠಾನವು ಕಾವ್ಯ ದೇಗುಲವಾಗಿದೆ. ಇದು ಪ್ರತ್ಯೇಕ ವಿಶ್ವವಿದ್ಯಾಲಯವಾಗಿ ಬೆಳವಣಿಗೆ ಹೊಂದಬೇಕು. ಬೆಂಗಳೂರಿನಲ್ಲಿ ಪ್ರಾಚೀನ ಗ್ರಂಥ, ಹಸ್ತಪ್ರತಿಗಳ ಬಗ್ಗೆ ತಪಸ್ಸು ಮಾಡಲು ಶ್ರೇಷ್ಠವಾದ ಸ್ಥಳ ಇದಾಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬಿಜೆಪಿ ಮುಖಂಡ ಕಟ್ಟೆ ಸತ್ಯನಾರಾಯಣ, 'ನಮ್ಮ ಭಾಷೆಗೆ ನಾಡಿನಲ್ಲಿ ನಾವೇ ಹೋರಾಟ ಮಾಡಬೇಕಾದ ಪರಿಸ್ಥಿತಿಯಿದೆ. ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಸಂಘ–ಸಂಸ್ಥೆಗಳನ್ನು ನಡೆಸುವುದು ಕಷ್ಟ ಎಂಬಂತಾಗಿದೆ. ಯಾವುದೇ ಕಾರಣಕ್ಕೂ ಕನ್ನಡ ಸಂಘ–ಸಂಸ್ಥೆ, ಶಾಲೆಗಳ ನವೀಕರಣವನ್ನು ಸರ್ಕಾರ ಹರಾಜಿನ ಮೂಲಕ ಮಾಡಬಾರದು. ನಗರ ಪಾಲಿಕೆಯಲ್ಲಿ ಕೈಗೊಂಡಿರುವ ನಿರ್ಣಯವನ್ನೇ ಅನುಷ್ಠಾನ ಮಾಡಬೇಕು' ಎಂದು ಆಗ್ರಹಿಸಿದರು.

ಪ್ರತಿಷ್ಠಾನದ ಅಧ್ಯಕ್ಷ ಆರ್. ಲಕ್ಷ್ಮೀನಾರಾಯಣ, 'ನಾಡಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಿಗೆ 40 ವರ್ಷಗಳಿಂದ ನಿರಂತರವಾಗಿ ಪ್ರತಿಷ್ಠಾನವು ಕೊಡುಗೆ ನೀಡುತ್ತಿದೆ. 50ಕ್ಕೂ ಅಧಿಕ ದತ್ತಿಯನ್ನು ಸ್ಥಾಪಿಸಲಾಗಿದೆ. 180ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಲಾಗಿದೆ. ದತ್ತಿ ಉಪನ್ಯಾಸಗಳು ವರ್ಷಪೂರ್ತಿ ನಡೆಯುತ್ತವೆ. 9ಕ್ಕೂ ಹೆಚ್ಚು ಪ್ರಶಸ್ತಿಗಳನ್ನು ಸ್ಥಾಪಿಸಲಾಗಿದೆ' ಎಂದು ಹೇಳಿದರು.

ಇದಕ್ಕೂ ಮೊದಲು ಡಾ.ಜಿ.ಎಂ. ಹೆಗಡೆ ಅವರ 'ಶ್ರೀ ಕೌಸ್ತುಭ', ಡಾ.ಸಿ.ಯು. ಮಂಜುನಾಥ್ ಅವರ 'ಲೋಚನ ದೀಪ್ತಿ' ಹಾಗೂ ಡಾ.ಪಿ.ವಿ. ನಾರಾಯಣ ಅವರ 'ಯುದ್ಧಕಾಂಡ' ಕೃತಿಯನ್ನು ಲೋಕಾರ್ಪಣೆ ಮಾಡಲಾಯಿತು.

ರಾಜ್ಯಸಭೆಗೆ ಸುಶ್ಮಿತಾ ಅವಿರೋಧ ಆಯ್ಕೆ

ಕೋಲ್ಕತ್ತ (ಪಿಟಿಐ): ಪಶ್ಚಿಮ-ಬಂಗಾಳದ ರಾಜ್ಯಸಭಾ ಉಪ ಚುನಾವಣೆಯಲ್ಲಿ ಸುಶ್ಮಿತಾ ದೇವ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸೋಮವಾರ ಘೋಷಿಸಲಾಗಿದೆ.

ಇತ್ತೀಚೆಗಷ್ಟೆ ಅವರು ತೃಣಮೂಲ ಕಾಂಗ್ರೆಸ್ ಸೇರಿದ್ದರು.

ಬಿಜೆಪಿ ಈ ಸ್ಥಾನಕ್ಕೆ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿರಲಿಲ್ಲ.

ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾದ ಕಾರಣ ತೃಣಮೂಲ ಕಾಂಗ್ರೆಸ್‌ನ ಮಾನಸ್ ಭುನಿಯಾ ಅವರು ಸಬಂಗ್‌ನಿಂದ ಆಯ್ಕೆಯಾಗಿದ್ದ ರಾಜ್ಯಸಭಾ ಸ್ಥಾನವನ್ನು ತ್ಯಜಿಸಿದ್ದರು.

ಅನುಭವಗಳ ಲೋಕ ಪರಿಚಯಿಸುವ ಕಥೆಗಳು: ಜಯಂತ ಕಾಯ್ಕಿಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಥೆಗಳ ಮೂಲಕ ಅನುಭವ ಪ್ರಪಂಚದ ಜತೆ ನಂಟು ಬೆಳೆಸಲು ಸಾಧ್ಯ' ಎಂದು ಸಾಹಿತಿ ಜಯಂತ ಕಾಯ್ಕಿಣಿ ಅಭಿಪ್ರಾಯಪಟ್ಟರು.

ಅಂಕಿತ ಪುಸ್ತಕ ಪ್ರಕಾಶನವು ಬುಕ್ ಬ್ರಹ್ಮದ ಸಹಯೋಗದಲ್ಲಿ ಆನ್‌ಲೈನ್ ವೇದಿಕೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೆ.ಪಿ. ರಾವ್ ಅವರ 'ವರ್ಣಕ' ಕಾದಂಬರಿ, ವಸುಮತಿ ಉಡುಪ ಅವರ 'ಬೊಗಸೆ ತುಂಬಾ ನಕ್ಷತ್ರಗಳು' ಕಥೆಗಳು ಹಾಗೂ ಸು. ರುದ್ರಮೂರ್ತಿ ಶಾಸ್ತ್ರಿ ಅವರ 'ಅಕ್ಕಮಹಾದೇವಿ' ಕಾದಂಬರಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಕಥೆಗಳ ಉದ್ದೇಶ ನಾನಾ ರೀತಿಯಲ್ಲಿರುತ್ತವೆ. ಪರೀಕ್ಷಾ ಸಮಯದಲ್ಲಿ ಒತ್ತಡ ನಿವಾರಿಸಿಕೊಳ್ಳಲು ಕಥೆಗಳನ್ನು ಓದುತ್ತಿದ್ದೆ. ಕಥೆಗಳ ರುಚಿಯು ಸಹ ಮಹತ್ವದ್ದು. ನಮ್ಮೆಲ್ಲರ ವಾಚನಾಭಿರುಚಿ ಶುರುವಾಗಿದ್ದೇ ನಿಯತಕಾಲಿಕೆಗಳಲ್ಲಿನ ಕಥೆಗಳಿಂದಲೇ ಹೊರತು ಪುಸ್ತಕಗಳಿಂದ ಅಲ್ಲ' ಎಂದು ವಿವರಿಸಿದರು.

'ಅನುಭವದಿಂದ ಬೌದ್ಧಿಕ ಜ್ಞಾನ ಲಭ್ಯವಾಗುತ್ತದೆ. ನಮ್ಮ ಬದುಕಿನ ಅನುಭವ ವೈಯಕ್ತಿಕವಾಗಿ ಸೀಮಿತ-ವಾಗಿರುತ್ತದೆ. ಆದರೆ, ಬೇರೆ, ಬೇರೆ ಕಥೆಗಳನ್ನು ಓದಿದಾಗ ಇನ್ನೊಂದು ರೀತಿಯ ಅನುಭವ ದೊರೆಯುತ್ತದೆ' ಎಂದು ವಿವರಿಸಿದರು.

ವಿಮರ್ಶಕ ಎಚ್.ಎಸ್. ಸತ್ಯನಾರಾಯಣ ಇದ್ದರು.

ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಪೊಲೀಸ್ ಕಾನ್‌ಸ್ಟೆಬಲ್ ಬಂಧನ

ಕಡಬ (ಉಪ್ಪಿನಂಗಡಿ): ಹಿಂದೆ ನಡೆದ ಅತ್ಯಾಚಾರ ಪ್ರಕರಣದ ಸಂತ್ರಸ್ತೆ, ಅಪ್ರಾಪ್ತ ವಯಸ್ಸಿನ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ವಿರುದ್ಧ ಕಡಬ ಪೊಲೀಸ್ ಠಾಣೆಯಲ್ಲಿ ಸೋಮವಾರ ಪ್ರಕರಣ ದಾಖಲಾಗಿದೆ. ಸಂತ್ರಸ್ತೆಯ ತಂದೆ ನೀಡಿರುವ ದೂರಿನ ಮೇಲೆ, ಕಡಬ ಠಾಣೆ ಪೊಲೀಸರು ಆರೋಪಿ ಶಿವರಾಜ್‌ನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದಾರೆ.

'ಎರಡು ವರ್ಷಗಳ ಹಿಂದೆ ನನ್ನ ಮಗಳು ಅತ್ಯಾಚಾರಕ್ಕೆ ಒಳಗಾಗಿದ್ದಳು. ಆ ಪ್ರಕರಣ ಆರು ತಿಂಗಳ ಹಿಂದೆ ಮುಗಿದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಕಡಬ ಠಾಣೆಯ ಪೊಲೀಸ್ ಸಿಬ್ಬಂದಿ, ದಾಖಲೆ, ಸಮನ್ಸ್ ನೀಡುವ ವಿಚಾರಕ್ಕೆ ಮನೆಗೆ ಬರುತ್ತಿದ್ದ. ಆಗ ಪರಿಚಯಸ್ಥನಾಗಿದ್ದು, ಪ್ರಕರಣ ಮುಗಿದಿದ್ದರೂ ಬೇರೆ ಬೇರೆ ನೆಪವೊಡ್ಡಿ ಮನೆಗೆ ಬರುತ್ತಿರುವುದು ನನ್ನ ಗಮನಕ್ಕೆ ಬಂದಿತ್ತು' ಎಂದು ಸಂತ್ರಸ್ತೆಯ ತಂದೆ ಕಡಬ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.



ಶಿವರಾಜ್

'ಮಗಳನ್ನು ವಿಚಾರಿಸಿದಾಗ, ಕಡಬ ಪೊಲೀಸ್ ಸಿಬ್ಬಂದಿ ನನ್ನನ್ನು ಮದುವೆ ಆಗುವುದಾಗಿ ಹೇಳಿ ದೈಹಿಕ ಸಂಪರ್ಕ ಬೆಳೆಸಿದ್ದಾನೆ. ಇದೀಗ ಐದೂವರೆ ತಿಂಗಳ ಗರ್ಭಿಣಿ ಆಗಿರುವುದಾಗಿ ತಿಳಿಸಿದ್ದಾಳೆ. ಈ ಮಧ್ಯೆ ನನ್ನ ಮಗಳು ಹಾಗೂ ಪತ್ನಿಯನ್ನು ಆತ ಮಂಗಳೂರು ಎಲ್ಲಿಯೋ ಅಜ್ಞಾತ ಸ್ಥಳದಲ್ಲಿರಿಸಿದ್ದು, ಅವರನ್ನು ಪತ್ತೆ ಹಚ್ಚಬೇಕು. ಆರೋಪಿಯನ್ನು ಬಂಧಿಸಿ ಆತನನ್ನು ವಿಚಾರಣೆ ನಡೆಸಿ ನನ್ನ ಮಗಳಿಗೆ ನ್ಯಾಯ ಕೊಡಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಕಡಬ ಠಾಣೆಗೆ ಸೋಮವಾರ ಸಂಜೆ ಭೇಟಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಋಷಿಕೇಶ್ ಭಗವಾನ್ ಸೋನಾವಣೆ, 'ಇದು ಗಂಭೀರ ಪ್ರಕರಣವಾಗಿದ್ದು, ಈಗಲೇ ಏನನ್ನೂ ಹೇಳಲು ಸಾಧ್ಯವಿಲ್ಲ. ಸಮಗ್ರ ತನಿಖೆ ಬಳಿಕ ವಿವರ ನೀಡಲಾಗುವುದು' ಎಂದು ಪ್ರತಿಕ್ರಿಯಿಸಿದ್ದಾರೆ.

ಡೋಣಿ ಸೇತುವೆ ಕುಸಿಯುವ ಭೀತಿ

ತಾಳಿಕೋಟೆ: ಇಲ್ಲಿನ ವಿಜಯಪುರ ರಸ್ತೆಯಲ್ಲಿ ಡೋಣಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಸೇತುವೆ ಬಿರುಕು ಬಿಟ್ಟು ಕುಸಿಯುವ ಭೀತಿ ಎದುರಾಗಿದ್ದು, ಈ ಮಾರ್ಗದಲ್ಲಿ ಸೋಮವಾರ ಸಂಜೆಯಿಂದ ವಾಹನಗಳ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ.

ಎರಡು– ಮೂರು ದಿನಗಳಿಂದ ಸೇತುವೆ ಕುಸಿಯುವ ಲಕ್ಷಣ ಕಂಡು-ಬಂದಿರುವುದನ್ನು ಗಮನಿಸಿದ್ದ ಪ್ರಯಾಣಿಕರು ಸೋಮವಾರ ಅಧಿಕಾರಿಗಳ ಗಮನಕ್ಕೆ ತಂದರು. ಸೋಮವಾರ ಸಂಜೆ ಸ್ಥಳಕ್ಕೆ ಭೇಟಿ ನೀಡಿದ ಲೋಕೋಪಯೋಗಿ ಇಲಾಖೆಯ ಹಿರಿಯ ಅಧಿಕಾರಿಗಳು ರಸ್ತೆ ಬಂದ್ ಮಾಡಲು ತಿರ್ಮಾನಿಸಿದರು. ರಾತ್ರಿಯೇ ಬ್ಯಾರಿಕೇಡ್ ಹಾಕಿ ರಸ್ತೆಯನ್ನು ಬಂದ್ ಮಾಡುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು.

ಕಲ್ಯಾಣ ಕರ್ನಾಟಕ ಹಾಗೂ ಉತ್ತರ ಕರ್ನಾಟಕದ ಪ್ರಮುಖ ಸಂಪರ್ಕ ಸೇತುವೆ ಇದಾಗಿದ್ದು, ಜಿಲ್ಲಾ ಕೇಂದ್ರ, ಪ್ರಮುಖ ತಾಲ್ಲೂಕು ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಇಲ್ಲದಂತಾಗಿದೆ.

ಜಿಲ್ಲಾ ಅಧ್ಯಕ್ಷ ಸ್ಥಾನಕ್ಕೆ ಸುರೇಶ್‌ಗೌಡ ರಾಜೀನಾಮೆ

ತುಮಕೂರು: ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರನ್ನು ಅಧಿಕಾರದಿಂದ ಕೆಳಗಿಳಿಸಿದ ನಂತರ ಅವರ ಬೆಂಬಲಿಗರನ್ನು ನಿಯಂತ್ರಿಸುವ ಕೆಲಸಕ್ಕೆ ಬಿಜೆಪಿ ವರಿಷ್ಠರು ಮುಂದಾಗಿದ್ದು, ಅದಕ್ಕೆ ಜಿಲ್ಲೆಯಿಂದಲೇ ಆರಂಭ ಸಿಕ್ಕಿದೆ.

ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ಬಿ. ಸುರೇಶ್‌ಗೌಡ ರಾಜೀನಾಮೆ ಸಲ್ಲಿಸಿದ್ದು, ಈ ಪ್ರಯತ್ನ ಇತರೆಡೆಗಳಿಗೂ ಕಾಲಿಡಲಿದೆ. ಯಡಿಯೂರಪ್ಪ ಅವರನ್ನು ಬದಲಿಸಿದ ನಂತರ ಅವರ ಬೆಂಬಲಿಗರನ್ನು ನಿಧಾನವಾಗಿ ಕೆಳಗಿಳಿಸುವ ಮೂಲಕ ಅವರ ಶಕ್ತಿಯನ್ನು ಕುಂದಿಸಿ, ಪಕ್ಷವನ್ನು ಹಿಡಿತಕ್ಕೆ ತೆಗೆದುಕೊಳ್ಳುವ ಕೆಲಸ ನಡೆದಿದೆ ಎಂದು ಹೇಳಲಾಗುತ್ತಿದೆ.

ಎರಡನೇ ಬಾರಿಗೆ ಜಿಲ್ಲಾ ಘಟಕದ ಅಧ್ಯಕ್ಷರಾಗಿದ್ದ ಸುರೇಶ್‌ಗೌಡ, ಪಕ್ಷದಲ್ಲಿದ್ದ ಸಾಕಷ್ಟು ಆಂತರಿಕ ಗೊಂದಲಗಳನ್ನು ನಿವಾರಿಸಿಕೊಂಡು ಮುನ್ನಡೆಸಿದ್ದರು. ಶಿರಾ ವಿಧಾನಸಭೆ ಉಪ ಚುನಾವಣೆಯನ್ನು ಸವಾಲಾಗಿ ಸ್ವೀಕರಿಸಿ, ಬಿಜೆಪಿ ಅಭ್ಯರ್ಥಿಯಾಗಿದ್ದ ಸಿ.ಎಂ. ರಾಜೇಶ್‌ಗೌಡ ಅವರನ್ನು ಗೆಲುವಿನ ದಡ ಸೇರಿಸಿದ್ದರು. ಜಿಲ್ಲಾ ಪಂಚಾಯಿತಿಯಲ್ಲೂ ಅಧಿಕಾರ ಹಿಡಿಯಲು ಸಾಕಷ್ಟು ಪ್ರಯತ್ನ ನಡೆಸಿದರೂ, ಕೊನೆ ಗಳಿಗೆಯಲ್ಲಿ ಕೈಕೊಟ್ಟಿತ್ತು. ಅಲ್ಪ ಸಮಯದ ಅಧಿಕಾರಕ್ಕಾಗಿ ಹೋರಾಟ ಮುಂದುವರಿಸಲಿಲ್ಲ.



ಬಿ.ಸುರೇಶ್ ಗೌಡ

ಅಧಿಕಾರ ವಹಿಸಿಕೊಂಡ ಒಂದು ವರ್ಷ ಮೂರು ತಿಂಗಳಲ್ಲೇ ನಿರ್ಗಮಿಸುತ್ತಿರುವ ಬಗ್ಗೆ ಪಕ್ಷದ ಮುಖಂಡರು, ಕಾರ್ಯಕರ್ತರು ತಮ್ಮದೇ ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತಿದ್ದಾರೆ.

ಚಿತ್ರಾವಳಿ



ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಅವರು ಆಂಧ್ರಪ್ರದೇಶದ ತಿರುಮಲ ತಿರುಪತಿ ದೇವಸ್ಥಾನಂ ಟ್ರಸ್ಟ್‌ನ (ಟಿಟಿಡಿ) ಸದಸ್ಯರಾಗಿ ಸೋಮವಾರ ಅಧಿಕಾರ ಸ್ವೀಕರಿಸಿದರು. ಟಿಟಿಡಿ ಜಂಟಿ ಕಾರ್ಯನಿರ್ವಹಣಾಧಿಕಾರಿ ಧರ್ಮಾರೆಡ್ಡಿ ಅವರು ಪ್ರತಿಜ್ಞಾವಿಧಿ ಬೋಧಿಸಿದರು. ಈ ವೇಳೆ ವಿಶ್ವನಾಥ್ ಕುಟುಂಬದ ಸದಸ್ಯರು ಇದ್ದರು.



ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ 744ನೇ ರ್‍ಯಾಂಕ್ ಪಡೆದ ದುಬಾಸಿಪಾಳ್ಯದ ಜ್ಞಾನಬೋಧಿನಿ ಪ್ರೌಢಶಾಲೆಯ ಹಳೆಯ ವಿದ್ಯಾರ್ಥಿ ವೈಶಾಖ್ ಬಾಗಿ ಅವರನ್ನು ಶಾಲಾ ಆಡಳಿತ ಮಂಡಳಿ ವತಿಯಿಂದ ಅಭಿನಂದಿಸಲಾಯಿತು. ಶಿಕ್ಷಕರಾದ ಶಾಂತಿ, ಶಂಕರಭಟ್, ಚೌರಿರಾಜ್, ಮುಖ್ಯ ಶಿಕ್ಷಕಿ ಜೆಸಿಂತ ಪಿರೇರಾ, ಸಂಸ್ಥೆಯ ಕಾರ್ಮೆಲಿಟಾ, ಆಶಾ ಸುರೇಶ್, ಶಿವನಗೌಡ ಪಾಟೀಲ ಹಾಗೂ ಕೆ.ಜೆ.ಚಂದ್ರಶೇಖರ ಇದ್ದರು.



ಬೆಂಗಳೂರಿನ ವೇದ ವಿಜ್ಞಾನ ಮಹಾವಿದ್ಯಾಪೀಠವು ವೇದ ಆಗಮ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ 6 ವರ್ಷದ ಶೈವಾಗಮ ಶಿಕ್ಷಣ ಪೂರ್ಣಗೊಳಿಸಿ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾದ 11 ಮತ್ತು 12ನೇ ತರಗತಿ ವಿದ್ಯಾರ್ಥಿಗಳಿಗೆ 'ಶೈವಾಗಮ ವಿದ್ಯಾನಿಧಿ' ಪದವಿ ಪ್ರದಾನ ಮಾಡಲಾಯಿತು. ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಗುರೂಜಿ, ಕರ್ನಾಟಕ ಸಂಸ್ಕೃತ ವಿ.ವಿ ಕುಲಪತಿ ಪ್ರೊ.ಕೆ.ಇ.ದೇವನಾಥನ್, ವೇದ ಆಗಮ ಸಂಸ್ಕೃತ ಮಹಾಪಾಠಶಾಲೆಯ ಪ್ರಾಂಶುಪಾಲ ಶಿವಶ್ರೀ.ಎ.ಎಸ್.ಸುಂದರಮೂರ್ತಿ ಶಿವಾಚಾರ್ಯ, ಪಾಠಶಾಲೆಯ ಮುಖ್ಯಸ್ಥೆ ಭಾನುಮತಿ ನರಸಿಂಹನ್, ವಿ.ಅಭಿರಾಮಸುಂದರ ಇದ್ದರು.

'ಶಾಲಾ ಶುಲ್ಕ ಇಳಿಸಿ; ಮಕ್ಕಳ ಭವಿಷ್ಯ ಉಳಿಸಿ' ಕಾರ್ಯಕ್ರಮದಲ್ಲಿ ಶಾಸಕ ಕೆ.ಆರ್.ರಮೇಶ್‌ಕುಮಾರ್

'ಪ್ರಜಾಪ್ರಭುತ್ವವು ಜನರ ಮನಸ್ಸಿನ ಕನ್ನಡಿಯಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲ ರಾಜಕೀಯ ಪಕ್ಷಗಳು ಅಧಿಕಾರದ ಚುಕ್ಕಾಣಿ ಹಿಡಿಯಲು ಅಗತ್ಯವಿರುವ ಸಂಖ್ಯಾಬಲದತ್ತ ಚಿತ್ತ ಹರಿಸುತ್ತವೆ. ಜನರ ಸಮಸ್ಯೆಗಳನ್ನು ಆಲಿಸುವ ವ್ಯವಧಾನ ಯಾರಿಗೂ ಇರುವುದಿಲ್ಲ. ಜನರ ನೋವು ಕೇಳದ ಜನಪ್ರತಿನಿಧಿಗಳನ್ನು ಮೊದಲು ಮನುಷ್ಯರನ್ನಾಗಿ ಮಾಡಬೇಕು. ಪ್ರಜಾಪ್ರಭುತ್ವವು ಜನರ ಮನಸ್ಸಿನ ಕನ್ನಡಿಯಾಗಬೇಕು. ಸಮಾಜದೆಲ್ಲೆಡೆ ಸ್ಥಾಪಿತ ಹಿತಾಸಕ್ತಿ ದಟ್ಟೈಸಿದೆ. ಅದನ್ನು ದೂರ ಸರಿಸಬೇಕು' ಎಂದು ಕಾಂಗ್ರೆಸ್ ಶಾಸಕ ಕೆ.ಆರ್.ರಮೇಶ್‌ಕುಮಾರ್ ಹೇಳಿದರು.

ಆಮ್ ಆದ್ಮಿ ಪಕ್ಷ (ಆಪ್) ಹಮ್ಮಿಕೊಂಡಿದ್ದ 'ಶಾಲಾ ಶುಲ್ಕ ಇಳಿಸಿ; ಮಕ್ಕಳ ಭವಿಷ್ಯ ಉಳಿಸಿ' ಚಿಂತನ–ಮಂಥನ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದರು.



ಶಾಸಕ ಕೆ.ಆರ್.ರಮೇಶ್‌ಕುಮಾರ್ ಮಾತನಾಡಿದರು. (ಎಡದಿಂದ) ವಿದ್ಯಾರ್ಥಿನಿ ಮಧು, ಸಾಮಾಜಿಕ ಕಾರ್ಯಕರ್ತೆ ನಾಗಜ್ಯೋತಿ, ಪೃಥ್ವಿ ರೆಡ್ಡಿ, ಮೋಹನ್ ದಾಸರಿ ಹಾಗೂ ಪೋಷಕರಾದ ನಂದಿನಿ ಮತ್ತು ಜ್ಯೋತಿ ಇದ್ದಾರೆ–ಪ್ರಜಾವಾಣಿ ಚಿತ್ರ

'ಪ್ರಾಥಮಿಕ ಶಿಕ್ಷಣ ಹಾಗೂ ಪ್ರಾಥಮಿಕ ಆರೋಗ್ಯ ಖಾಸಗಿಯವರ ಕೈಗೆ ಹೋದರೆ ಅಂತಹ ಸಮಾಜದಲ್ಲಿ ನರಕದ ಕೂಪ ಸೃಷ್ಟಿಯಾಗುತ್ತದೆ. ಅರವಿಂದ್ ಕೇಜ್ರಿವಾಲ್ ಅವರು ಮುಖ್ಯಮಂತ್ರಿಯಾದ ಬಳಿಕ ನವದೆಹಲಿಯ ಸರ್ಕಾರಿ ಶಾಲೆಗಳಿಗೆ ಹೊಸ ಮೆರುಗು ನೀಡಿದ್ದಾರೆ. ಅದಕ್ಕೆ ಅವರ ಇಚ್ಛಾಶಕ್ತಿ ಕಾರಣ. ಖಾಸಗಿ ಶಿಕ್ಷಣ ಸಂಸ್ಥೆಗಳ ಪರವಾಗಿ ಮಾತನಾಡುವವರು ಪಕ್ಷದಿಂದಲೇ ಹೊರಹೋಗಲಿ ಎಂದು ಹೇಳಿದ್ದಾರೆ. ಆ ಶಕ್ತಿ ನಮಗಿಲ್ಲ. ನಾವು ಸರ್ಕಾರಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳೆರಡೂ ಇರಲಿ ಎಂದು ಹೇಳುವವರು' ಎಂದರು.

'ಪತಿ ಹಾಗೂ ತಂದೆಯನ್ನು ಕಳೆದುಕೊಂಡಿರುವ ನಾನು ಇಬ್ಬರು ಮಕ್ಕಳನ್ನು ಓದಿಸಲು ಹಲವು ಮನೆಗಳಲ್ಲಿ ಕೆಲಸ ಮಾಡುತ್ತಿದ್ದೇನೆ. ಲಾಕ್‌ಡೌನ್‌ನಿಂದಾಗಿ ಒಂದೂವರೆ ವರ್ಷ ಕೆಲಸವೇ ಇರಲಿಲ್ಲ. ಈಗ ಮಕ್ಕಳ ಶಾಲಾ ಶುಲ್ಕ ಕಟ್ಟಲು ಹಣ ಎಲ್ಲಿಂದ ತರಲಿ' ಎಂದು ಪೋಷಕರಾದ ಪವಿತ್ರ ಪ್ರಶ್ನಿಸಿದರು.

'ಗುಣಮಟ್ಟದ ಹಾಗೂ ಉಚಿತ ಶಿಕ್ಷಣ ಪಡೆಯುವ ಹಕ್ಕು ಪ್ರತಿಯೊಬ್ಬ ಮಗುವಿಗೂ ಇದೆ. ಇದನ್ನು ಬಿಜೆಪಿ ಸರ್ಕಾರ ಅರ್ಥಮಾಡಿಕೊಳ್ಳಬೇಕು. ಪೋಷಕರ ಸಮಸ್ಯೆ ಆಲಿಸಿ, ಅವರ ಬೇಡಿಕೆ ಈಡೇರಿಸಲು ಮುಂದಾಗಬೇಕು' ಎಂದು ಆಪ್ ರಾಜ್ಯ ಸಂಚಾಲಕ ಪೃಥ್ವಿ ರೆಡ್ಡಿ ಆಗ್ರಹಿಸಿದರು.

ಬೆಂಗಳೂರು ನಗರ ಅಧ್ಯಕ್ಷ ಮೋಹನ್ ದಾಸರಿ ಅವರು ಮಾತನಾಡಿ, 'ಎಎಪಿ ಸರ್ಕಾರ ನವದೆಹಲಿಯಲ್ಲಿ ಸರ್ಕಾರಿ ಶಾಲೆಗಳಿಗೆ ಹೊಸ ರೂಪ ನೀಡಿದೆ. ಅದೇ ಮಾದರಿಯಲ್ಲಿ ರಾಜ್ಯದಲ್ಲೂ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿ ಪಡಿಸಬೇಕು' ಎಂದು ಒತ್ತಾಯಿಸಿದರು.

ನಾಯಿಗಳಿಗೆ ಉಚಿತ ರೇಬಿಸ್ ಲಸಿಕೆ ಅಭಿಯಾನ

ಬೆಂಗಳೂರು: ವಿಶ್ವ ರೇಬಿಸ್ ದಿನವಾದ ಅಂಗವಾಗಿ ಪಶು ಸಂಗೋಪನಾ ಇಲಾಖೆಯು ನಾಯಿಗಳಿಗೆ ಉಚಿತವಾಗಿ ರೇಬೀಸ್ ಲಸಿಕೆ ನೀಡುವ 3 ದಿನಗಳ ಅಭಿಯಾನ ಹಮ್ಮಿಕೊಂಡಿದೆ.

ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ್ ಬೀದರ್‌ನಲ್ಲಿ ಮಂಗಳವಾರ ಈ ಅಭಿಯಾನಕ್ಕೆ ಚಾಲನೆ ನೀಡುವರು.

'ಮಂಗಳವಾರ ವಿಶ್ವ ರೇಬಿಸ್ ದಿನ. ಈ ಪ್ರಯುಕ್ತ ರೇಬಿಸ್ ಲಸಿಕೆ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಗುರುವಾರದವರೆಗೂ ರಾಜ್ಯದ ಎಲ್ಲ ಸರ್ಕಾರಿ ಪಶು ಆಸ್ಪತ್ರೆಗಳಲ್ಲಿ ನಾಯಿಗಳಿಗೆ ರೇಬಿಸ್ ಲಸಿಕೆ ನೀಡಲಾಗುವುದು' ಎಂದು ಪ್ರಕಟಣೆ ತಿಳಿಸಿದೆ.

ಚುನಾವಣೆಗೆ ರಣಕಹಳೆ ಊದಿದ ಜೆಡಿಎಸ್; ಅಭ್ಯರ್ಥಿಗಳಿಗೆ 3 ತಿಂಗಳ 'ಮೌಲ್ಯಮಾಪನ'

ಜೆಡಿಎಸ್‌ನಿಂದ 'ಕಾರ್ಪೊರೇಟ್' ತರಬೇತಿ

ಪ್ರಜಾವಾಣಿ ವಾರ್ತೆ

ರಾಮನಗರ: ಜೆಡಿಎಸ್ ಇದೀಗ ರಾಜ್ಯದ 123 ವಿಧಾನಸಭಾ ಕ್ಷೇತ್ರಗಳಲ್ಲಿನ ತನ್ನ ಅಭ್ಯರ್ಥಿಗಳಿಗೆ ಕಾರ್ಪೊರೇಟ್ ಮಾದರಿಯಲ್ಲಿ ಚುನಾವಣಾ ತರಬೇತಿ ಆರಂಭಿಸಿದೆ.

ಪ್ರಾದೇಶಿಕ ಪಕ್ಷವಾದ ಜೆಡಿಎಸ್ ಈ ಮಾದರಿಯಲ್ಲಿ ತನ್ನ ಅಭ್ಯರ್ಥಿಗಳು ಹಾಗೂ ಮುಖಂಡರಿಗೆ ತರಬೇತಿ ನೀಡುತ್ತಿರುವುದು ಇದೇ ಮೊದಲು. ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಹಲವು ಪ್ರಾದೇಶಿಕ ಪಕ್ಷಗಳು ಈ ಮಾದರಿ ಅನುಸರಿಸಿದ್ದು, ಯಶಸ್ಸು ಕಂಡಿವೆ. ಜೆಡಿಎಸ್ ಸಹ ಅದೇ ಉತ್ಸಾಹದೊಂದಿಗೆ ಕಾರ್ಯಾಗಾರ ಆಯೋಜಿಸಿದೆ.

ವೇದಿಕೆಯ ಒಳ-ಹೊರಗೂ ಶಿಸ್ತಿನಿಂದ ತರಬೇತಿ ಆಯೋಜಿಸಿದ್ದು, ಆಯ್ದ ಅಭ್ಯರ್ಥಿಗಳು ಹಾಗೂ ಮುಖಂಡರಿಗೆ ನೋಂದಣಿ ಮಾಡಿಕೊಂಡು 'ಗ್ರೀನ್ ಕಾರ್ಡ್' ಮೂಲಕ ಪ್ರವೇಶ ನೀಡಲಾಯಿತು. ನಾಲ್ಕು ದಿನಗಳ ಕಾರ್ಯಾಗಾರ ಇದಾಗಿದ್ದು, ರಾಜಕೀಯ ವಿದ್ಯಮಾನಗಳು, ಪಕ್ಷ ಸಂಘಟನೆ, ಚುನಾವಣೆ ಸಿದ್ಧತೆ, ವ್ಯಕ್ತಿತ್ವ ವಿಕಸನ ಕುರಿತು ಕಾರ್ಯಾಗಾರ ಆಯೋಜಿಸಲಾಗಿದೆ.

'ಇರುವುದು ಒಂದೇ ಪರಿಹಾರ, ಪ್ರಾದೇಶಿಕ ಪಕ್ಷಕ್ಕೆ ಅಧಿಕಾರ' ಎಂಬ ಧ್ಯೇಯದೊಂದಿಗೆ ಚುನಾವಣಾ ಸಿದ್ಧತೆ ಆರಂಭಿಸಿರುವ ಜೆಡಿಎಸ್, ಆಯ್ದ 123 ವಿಧಾನಸಭಾ ಕ್ಷೇತ್ರಗಳ ಸಂಭಾವ್ಯ ಅಭ್ಯರ್ಥಿಗಳನ್ನು ಇಲ್ಲಿಗೆ ಕರೆ ತಂದಿದೆ. ಪಕ್ಷದ ಹಾಲಿ ಶಾಸಕರೂ ಇದರಲ್ಲಿ ಸೇರಿದ್ದಾರೆ. ಮುಂದಿನ ಮೂರು ತಿಂಗಳ ಕಾಲ ಈ ಅಭ್ಯರ್ಥಿಗಳ ನೇತೃತ್ವದಲ್ಲೇ ಆಯಾ ಕ್ಷೇತ್ರಗಳಲ್ಲಿ ಕಾರ್ಯಕ್ರಮಗಳು ನಡೆಯಲಿವೆ. ಅವರ ಚಾಕಚಕ್ಯತೆ, ಸಂಘಟನೆ ನೋಡಿಕೊಂಡು ಟಿಕೆಟ್ ಖಾತ್ರಿ ಮಾಡುವ ಕೆಲಸ ಮಾಡಲಿದ್ದೇವೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಪ್ರಶ್ನೋತ್ತರ: ಕಾರ್ಯಾಗಾರದ ಮೊದಲ ದಿನ ಅಭ್ಯರ್ಥಿಗಳಿಗೆ 61 ಪ್ರಶ್ನೆಗಳ ಪ್ರಶ್ನೆಪತ್ರಿಕೆ ನೀಡಲಾಯಿತು. ತಮ್ಮ ಕ್ಷೇತ್ರಕ್ಕೆ ನೀಡಿರುವ ಆದ್ಯತೆಗಳು ಹಾಗೂ ಇರುವ ಅಡೆತಡೆಗಳ ಕುರಿತು ಅಭ್ಯರ್ಥಿಗಳು ಉತ್ತರ ಬರೆದರು. ಮಂಗಳವಾರ ಜೆಡಿಎಸ್‌ನ ಪಂಚರತ್ನ ಕಾರ್ಯಕ್ರಮ ಹಾಗೂ 'ಮಿಷನ್ 123 ಪ್ಲಸ್' ಕುರಿತು ಸಮಾಲೋಚನೆ ನಡೆಯಲಿದೆ.

ಚಾಲನೆ: ಬಿಡದಿಯ ಕೇತಗಾನಹಳ್ಳಿಯಲ್ಲಿ ಇರುವ ಎಚ್.ಡಿ. ಕುಮಾರಸ್ವಾಮಿ ತೋಟದ ಆವರಣದಲ್ಲಿ 'ಜನತಾ ಪರ್ವ 1.0' ಕಾರ್ಯಾಗಾರಕ್ಕೆ ಸೋಮವಾರ ಪಕ್ಷದ ವರಿಷ್ಠ ಎಚ್.ಡಿ. ದೇವೇಗೌಡ ಚಾಲನೆ ನೀಡಿದರು. ಎಚ್.ಡಿ. ಕುಮಾರಸ್ವಾಮಿ ಜೊತೆಗೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್.ಕೆ. ಕುಮಾರಸ್ವಾಮಿ, ವೈಎಸ್‌ವಿ ದತ್ತ ಸೇರಿದಂತೆ ಪಕ್ಷದ ನಾಯಕರು ಮಾತನಾಡಿ ಉತ್ಸಾಹ ತುಂಬಿದರು.



ಬಿಡದಿಯಲ್ಲಿ ಸೋಮವಾರ 'ಜನತಾ ಪರ್ವ 1.0' ಕಾರ್ಯಾಗಾರಕ್ಕೆ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಚಾಲನೆ ನೀಡಿದರು. ಪಕ್ಷದ ಶಾಸಕಾಂಗ ನಾಯಕ ಎಚ್.ಡಿ. ಕುಮಾರಸ್ವಾಮಿ, ರಾಜ್ಯ ಘಟಕದ ಅಧ್ಯಕ್ಷ ಎಚ್.ಕೆ. ಕುಮಾರಸ್ವಾಮಿ ಇದ್ದರು

ಸಿದ್ದರಾಮಯ್ಯ ವಿರುದ್ಧ ಕಿಡಿ

'ರಾಜ್ಯದ ಜನರ ಉಸಿರಿನಲ್ಲಿ ಉಸಿರಾಗಿರುವ ಜೆಡಿಎಸ್ ಪಕ್ಷವನ್ನು ಮುಗಿಸಲು ಸಿದ್ದರಾಮಯ್ಯ ಅವರಿಂದ ಮಾತ್ರವಲ್ಲ, ಯಾರಿಂದಲೂ ಸಾಧ್ಯವಿಲ್ಲ' ಎಂದು ಪಕ್ಷದ ವರಿಷ್ಠ ಎಚ್.ಡಿ. ದೇವೇಗೌಡ ಗುಡುಗಿದರು.

ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, 'ಸಿದ್ದರಾಮಯ್ಯ ತಾವು ನಾಯಕರಾಗಿ ಬಂದಿದ್ದು ಎಲ್ಲಿಂದ, ಬೆಳೆದದ್ದು ಎಲ್ಲಿ? ಎಂಬುದನ್ನು ಅರಿತು ಮಾತನಾಡಬೇಕು. ಅವರಿವರ ಜೊತೆ ಹೋಗುವ ಪಕ್ಷ ಎಂದು ದೂರುವ ಮುನ್ನ ಸಮ್ಮಿಶ್ರ ಸರಕಾರ ರಚನೆ ಮಾಡುವುದಕ್ಕೆ ಯಾರು ನಮ್ಮ ಮನೆ ಬಾಗಿಲಿಗೆ ಬಂದರು ಎನ್ನುವುದು ಇಡೀ ದೇಶಕ್ಕೆ ಗೊತ್ತಿದೆ' ಎಂದು ಹೇಳಿದರು.

ಎಚ್.ಡಿ. ಕುಮಾರಸ್ವಾಮಿ ಮಾತನಾಡಿ, 'ಕೆಲವರು ಜೆಡಿಎಸ್ ಪಕ್ಷವನ್ನು 30 ಸೀಟುಗಳ ಪಕ್ಷ ಎಂದು ಲಘುವಾಗಿ ಮಾತನಾಡುತ್ತಿದ್ದಾರೆ. ಅಂಥವರಿಗೆ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ತಕ್ಕ ಉತ್ತರ ನೀಡಲಾಗುವುದು. ಪಕ್ಷ ಬಿಟ್ಟು ಹೋಗುತ್ತೇನೆ ಎಂದು ಬೆದರಿಕೆ ಹಾಕುತ್ತಿರುವವರ ಬಗ್ಗೆಯೂ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಪರ್ಯಾಯ ಅಭ್ಯರ್ಥಿಗಳನ್ನು ರೂಪಿಸುವ ಶಕ್ತಿ ಜೆಡಿಎಸ್‌ಗೆ ಇದೆ' ಎಂದರು.

ಪ್ರಚಾರಕ್ಕಾಗಿ ಸಿದ್ದರಾಮಯ್ಯ ವಿರುದ್ಧ ಟೀಕೆ: ಮಹದೇವಪ್ಪ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಜೆಡಿಎಸ್ ನಾಯಕರಾದ ಎಚ್.ಡಿ. ದೇವೇಗೌಡ ಮತ್ತು ಎಚ್.ಡಿ. ಕುಮಾರಸ್ವಾಮಿ ಪ್ರಚಾರ ಪಡೆಯುವ ಉದ್ದೇಶದಿಂದ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಟೀಕಿಸುತ್ತಿದ್ದಾರೆ. ಅದೊಂದೇ ಅವರಿಗೆ ಉಳಿದಿರುವ ದಾರಿ ಎಂದು ಕಾಂಗ್ರೆಸ್ ಮುಖಂಡ ಡಾ.ಎಚ್.ಸಿ. ಮಹದೇವಪ್ಪ ಹೇಳಿದ್ದಾರೆ.

'ಜೆಡಿಎಸ್ ಮುಗಿಸಲು ಸಿದ್ದರಾಮಯ್ಯ ಅವರಿಂದ ಸಾಧ್ಯವಿಲ್ಲ' ಎಂಬ ದೇವೇಗೌಡರ ಹೇಳಿಕೆ ಕುರಿತು ಸೋಮವಾರ ಪ್ರತಿಕ್ರಿಯಿಸಿರುವ ಅವರು, 'ಚುನಾವಣೆ ಸಮೀಪಿಸುತ್ತಿದ್ದಂತೆಯೇ ದೇವೇಗೌಡರು ಭಾವನಾತ್ಮಕ ವಿಚಾರಗಳ ಪ್ರಸ್ತಾಪ ಹಾಗೂ ಸಿದ್ದರಾಮಯ್ಯ ವಿರುದ್ಧದ ಟೀಕೆಗಳ ಮೊರೆ ಹೋಗಿದ್ದಾರೆ. ಭಾವನಾತ್ಮಕ ವಿಚಾರಗಳ ಮೇಲೂ ಚುನಾವಣಾ ಪ್ರಣಾಳಿಕೆಗಳನ್ನು ರೂಪಿಸಬಹುದು ಎಂಬುದನ್ನು ಜೆಡಿಎಸ್ ತೋರಿಸಿಕೊಟ್ಟಿದೆ' ಎಂದು ಟೀಕಿಸಿದ್ದಾರೆ.

ಕೆಲವು ದಿನಗಳಿಂದ ಕುಮಾರಸ್ವಾಮಿ ಅವರು ಸಿದ್ದರಾಮಯ್ಯ ಅವರನ್ನು ನಿರಂತರ ಟೀಕಿಸುತ್ತಿದ್ದಾರೆ. ಈಗ ದೇವೇಗೌಡರೂ ಅದೇ ಹಾದಿ ಹಿಡಿದಿದ್ದಾರೆ. ಇದು ಜೆಡಿಎಸ್‌ನ ಸಾಂಪ್ರದಾಯಿಕ ತಂತ್ರದಂತೆ ಕಾಣುತ್ತಿದೆ ಎಂದಿದ್ದಾರೆ.

ದಸರೆ: ಅರಮನೆ ಪ್ರವೇಶಕ್ಕೆ ಪ್ರವಾಸಿಗರಿಗೆ ನಿರ್ಬಂಧ

ಮೈಸೂರು: ದಸರಾ ಪ್ರಯುಕ್ತ ರಾಜವಂಶಸ್ಥರು ಧಾರ್ಮಿಕ ಪೂಜಾ ಕಾರ್ಯಕ್ರಮ ನಡೆಸುವುದರಿಂದ ಅ.1, 7, 14, 15 ಹಾಗೂ 31 ರಂದು ಅರಮನೆ ಪ್ರವೇಶಕ್ಕೆ ಪ್ರವಾಸಿಗರಿಗೆ ಸೀಮಿತ ಅವಧಿಯ ನಿರ್ಬಂಧ ವಿಧಿಸಲಾಗಿದೆ.

ಅ.1ರಂದು ಸಿಂಹಾಸನ ಜೋಡಣೆ ಕಾರಣ ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ, 7ರಂದು ಖಾಸಗಿ ದರ್ಬಾರ್ ನಡೆಯಲಿದ್ದು, ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ಗಂಟೆವರೆಗೆ ಪ್ರವೇಶವಿರುವುದಿಲ್ಲ. 14ರಂದು ಆಯುಧ ಪೂಜೆ ಪ್ರಯುಕ್ತ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆವರೆಗೆ, 15ರಂದು ವಿಜಯದಶಮಿ ಕಾರಣ ಸಂಪೂರ್ಣ ದಿನ ಪ್ರವೇಶವಿರುವುದಿಲ್ಲ. ಅ.31ರಂದು ಸಿಂಹಾಸನವನ್ನು ಸ್ವಸ್ಥಾನದಲ್ಲಿ ಇಡುತ್ತಿದ್ದು, ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆವರೆಗೆ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಮಣ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಂಜನಗೂಡು ತಹಶೀಲ್ದಾರ್ ವರ್ಗಾವಣೆ



ನಂಜನಗೂಡು: ತಾಲ್ಲೂಕಿನ ಉಚ್ಚಗಣಿ ಗ್ರಾಮಸ್ಥರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಗ್ರಾಮದೇವತೆ ಮಹದೇವಮ್ಮ ದೇವಾಲಯ ಧ್ವಂಸ ಮಾಡಿದ್ದಾರೆ ಎಂಬ ಆರೋಪಕ್ಕೆ ಗುರಿಯಾಗಿದ್ದ, ನಂಜನಗೂಡು ತಹಶೀಲ್ದಾರ್ ಮೋಹನಕುಮಾರಿ ಅವರನ್ನು ಸರ್ಕಾರ ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ.

ಅವರನ್ನು ಐಎಂಎ ವಂಚನೆ ಪ್ರಕರಣ ಹಾಗೂ ಸಕ್ಷಮ ಪ್ರಾಧಿಕಾರಕ್ಕೆ ವರ್ಗಾಯಿಸಲಾಗಿದೆ. ನಂಜನಗೂಡು ತಹಶೀಲ್ದಾರ್ ಹುದ್ದೆಗೆ ಪ್ರಭಾರ ವ್ಯವಸ್ಥೆ ಮಾಡುವಂತೆ ಮೈಸೂರು ಜಿಲ್ಲಾಧಿಕಾರಿಗೆ ಸೂಚನೆ ನೀಡಿದ್ದಾರೆ.

ತಾಲ್ಲೂಕಿನ ಉಚ್ಚಗಣಿ ಮಹದೇವಮ್ಮ ದೇಗುಲವನ್ನು ಕೆಡವಿದ ಮೇಲೆ ಧಾರ್ಮಿಕ ಭಾವನೆಗಳಿಗೆ ಭಂಗ ತಂದಿದ್ದಾರೆ ಎಂಬ ಆರೋಪಕ್ಕೆ ಮೋಹನಕುಮಾರಿ ಗುರಿಯಾಗಿದ್ದರು. ಆಡಳಿತ ಪಕ್ಷದ ಮುಖಂಡರೇ ಖಂಡಿಸಿದ್ದರಿಂದ ಮುಜುಗರಕ್ಕೀಡಾಗಿದ್ದ ಸರ್ಕಾರ ಕಾರಣ ಕೇಳಿ ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್‌ಗೆ ನೋಟಿಸ್ ಜಾರಿ ಮಾಡಿತ್ತು.

ತಹಶೀಲ್ದಾರ್ ಕೂಡ ವರದಿ ನೀಡಿದ್ದರು ಎನ್ನಲಾಗಿದೆ. ಸೋಮವಾರ ವರ್ಗಾವಣೆ ಮಾಡಿ ಆದೇಶ ಹೊರಡಿಸುವ ಮೂಲಕ ಜನರ ಆಕ್ರೋಶವನ್ನು ತಹಬದಿಗೆ ತರುವಲ್ಲಿ ಸರ್ಕಾರ ಈ ಹೆಜ್ಜೆಯಿಟ್ಟಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸುವಂತೆ ಪ್ರಧಾನಿ ಮೋದಿಗೆ ಒತ್ತಾಯ

ರೈತರ ಹೋರಾಟಕ್ಕೆ ವಿಪಕ್ಷಗಳ ಬೆಂಬಲ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳ ವಿರುದ್ಧ ರೈತ-ಸಂಘಟನೆಗಳು ಕರೆ ನೀಡಿದ್ದ ಭಾರತ್ ಬಂದ್‌ಗೆ ಬಿಜೆಪಿಯೇತರ ರಾಜಕೀಯ ಪಕ್ಷಗಳು ಬೆಂಬಲ ವ್ಯಕ್ತಪಡಿಸಿವೆ. ಕಾಂಗ್ರೆಸ್, ಎಎಪಿ, ಟಿಎಂಸಿ, ಬಿಎಸ್‌ಪಿ, ಎಡಪಕ್ಷಗಳು ಮತ್ತು ಟಿಡಿಪಿ ಬೆಂಬಲ ವ್ಯಕ್ತಪಡಿಸಿವೆ. ಪಕ್ಷಗಳ ಕಾರ್ಯಕರ್ತರು ದೇಶದ ಹಲವೆಡೆ ರೈತರ ಭಾರತ್ ಬಂದ್‌ಗೆ ಬೆಂಬಲ ಸೂಚಿಸಿ ಪ್ರತಿಭಟನೆ ನಡೆಸಿದ್ದಾರೆ.

ಪ್ರತಿಭಟನೆನಿರತ ರೈತರ ಜತೆ ಪ್ರಧಾನಿ ನರೇಂದ್ರ ಮೋದಿ ಅವರು ಮಾತುಕತೆ ನಡೆಸಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ. 'ರೈತರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವ ಬದಲು, ಸರ್ಕಾರವು ಅವರಿಗೆ ವೈರಿಗಳ ಬಣ್ಣ ಬಳಿಯುತ್ತಿದೆ' ಎಂದು ಕಾಂಗ್ರೆಸ್ ಆಕ್ರೋಶ ವ್ಯಕ್ತಪಡಿಸಿದೆ.

'ಈ ಕಾನೂನುಗಳ ಎದುರು ರೈತರು ಅಸಹಾಯಕರಾಗಿದ್ದಾರೆ. ಹೀಗಾಗಿ ಅವರು ಭಾರತ್ ಬಂದ್ ನಡೆಸುತ್ತಿದ್ದಾರೆ. ಆ ರೈತರ ಜತೆಗೆ ನಾವು ನಿಲ್ಲಬೇಕಿದೆ. ದೇಶವು ಈಗಾಗಲೇ ಹತ್ತಾರು ಪ್ರಧಾನಿಗಳನ್ನು ಖಂಡಿದೆ. ಮೋದಿ ಅವರ ನಂತರ ಇನ್ನೂ ಹಲವಾರು ಪ್ರಧಾನಿಗಳು ಬರಲಿದ್ದಾರೆ. ನೀವು ಪ್ರಧಾನಿ ಆಗಿರುವ ಕಾರಣಕ್ಕೆ ಇಷ್ಟು ದಾರ್ಷ್ಟ್ಯ ತೋರಿಸಬೇಕಿಲ್ಲ. ಹೋಗಿ ರೈತರೊಂದಿಗೆ ಮಾತನಾಡಿ' ಎಂದು ಕಾಂಗ್ರೆಸ್ ವಕ್ತಾರ ಪವನ್ ಖೇರಾ ಆಗ್ರಹಿಸಿದ್ದಾರೆ.

'ದೇಶದ ಜನರು ಏನು ಹೇಳುತ್ತಿದ್ದಾರೆ ಎಂಬುದನ್ನು ಕೇಳುವುದು ನಿಮ್ಮ ಕರ್ತವ್ಯ. ದೇಶದ ಶೇ 60ರಷ್ಟು ಜನರು ಈಗ ಮಾತನಾಡುತ್ತಿದ್ದಾರೆ. ದಯವಿಟ್ಟು ಅವರೊಂದಿಗೆ ಮಾತನಾಡಿ' ಎಂದು ಪವನ್ ಒತ್ತಾಯಿಸಿದ್ದಾರೆ.

'ನಿಮ್ಮ ಚುನಾವಣಾ ತಂತ್ರಗಳ ಬಗ್ಗೆ ನಿಮಗೆ ವಿಚಿತ್ರವಾದ ನಂಬಿಕೆ ಇದೆ. ಚುನಾವಣೆಗಳು ಬರುತ್ತವೆ, ನಾವು ಅದನ್ನು ಗೆಲ್ಲುತ್ತೇವೆ ಎಂದುಕೊಂಡಿದ್ದೇವೆ. ಪ್ರತಿ ಬಾರಿ ನಿಜವಾದ ಸಮಸ್ಯೆಗಳನ್ನು ಮರೆಮಾಚಿ ಗಮನ ಬೇರೆಡೆ ಸೆಳೆಯುತ್ತೀರಿ. ಇನ್ನು ಮುಂದೆ ಹಾಗಾಗಲು ನಾವು ಬಿಡುವುದಿಲ್ಲ' ಎಂದು ಅವರು ಹೇಳಿದ್ದಾರೆ.

'ಮೊದಲು ನೀವು ಕೃಷಿ ಸಲಕರಣೆಗಳ ಮೇಲೆ ಜಿಎಸ್‌ಟಿ ಹೇರಿದಿರಿ. ನಂತರ ಯಾರನ್ನೂ ಸಂಪರ್ಕಿಸದೆ, ಚರ್ಚಿಸದೆ ಏಕಪಕ್ಷೀಯವಾಗಿ ಕೃಷಿ ಕಾಯ್ದೆಗಳನ್ನು ಜಾರಿಗೆ ತಂದಿದ್ದೀರಿ. ಅವುಗಳನ್ನು ರದ್ದುಪಡಿಸಿ ಎಂದು ರೈತರು ಕೇಳುತ್ತಿದ್ದಾರೆ. ಆದರೆ ಅದನ್ನು ಮಾಡುವುದನ್ನು ಬಿಟ್ಟು, ನೀವು ರೈತರನ್ನು ದೇಶದ್ರೋಹಿಗಳು ಎಂಬಂತೆ ಬಿಂಬಿಸುತ್ತಿದ್ದೀರಿ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಹರಿಯಾಣದ ಸೋನಿಪತ್‌ನಲ್ಲಿ ರೈಲು ತಡೆ ನಡೆಸಿದ ರೈತರು —ಪಿಟಿಐ ಚಿತ್ರ

ಭಾರತ್ ಬಂದ್‌ಗೆ ವೈಎಸ್‌ಆರ್‌ಸಿಪಿ ಬೆಂಬಲ; ಬಿಜೆಪಿ ಕಿಡಿ

ಹೈದರಾಬಾದ್: ಕಳೆದ ವರ್ಷ ಮೂರು ಕೃಷಿ ಕಾಯ್ದೆಗಳನ್ನು ಜಾರಿ ಮಾಡಲು ಕೇಂದ್ರ ಸರ್ಕಾರಕ್ಕೆ ಸಂಸತ್ತಿನಲ್ಲಿ ಬೆಂಬಲ ನೀಡಿದ್ದ ಆಂಧ್ರ ಪ್ರದೇಶದ ಆಡಳಿತಾರೂಢ ವೈಎಸ್‌ಆರ್‌ಸಿಪಿ ಪಕ್ಷ ಸೋಮವಾರ ಭಾರತ ಬಂದ್‌ಗೆ ಬೆಂಬಲ ಸೂಚಿಸಿ ಆಶ್ಚರ್ಯಕರವಾಗಿ ನಡೆದುಕೊಂಡಿದೆ.

ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿರುವ ಬಂದ್‌ಗೆ ಆಂಧ್ರ ಪ್ರದೇಶ ಸರ್ಕಾರ ಬೆಂಬಲ ನೀಡುವುದಾಗಿ ರಾಜ್ಯದ ಮಾಹಿತಿ ಮತ್ತು ಸಾರಿಗೆ ಸಚಿವ ಪೇರ್ನಿ ವೆಂಕಟರಾಮಯ್ಯ ಶನಿವಾರ ಘೋಷಿಸಿದ್ದರು. ಸರ್ಕಾರ ಮತ್ತು ವೈಎಸ್‌ಆರ್‌ಸಿಪಿ ರೈತರ ಹೋರಾಟವನ್ನು ಬೆಂಬಲಿಸುತ್ತದೆ. ಜೊತೆಗೆ, ವಿಶಾಖಪಟ್ಟಣದ ಉಕ್ಕು ಘಟಕವನ್ನು ಖಾಸಗೀಕರಣ ಮಾಡುವುದರ ವಿರುದ್ಧ ಹೋರಾಡುತ್ತಿರುವ ಕಾರ್ಮಿಕರಿಗೂ ಬೆಂಬಲ ನೀಡುತ್ತದೆ ಎಂದಿದ್ದರು.

ವೈಎಸ್‌ಆರ್‌ಸಿಪಿ ಬಂದ್‌ಗೆ ಬೆಂಬಲ ನೀಡಿರುವ ಕುರಿತು ಬಿಜೆಪಿ ಕಿಡಿಕಾರಿದೆ. ವೈಎಸ್‌ಆರ್‌ಸಿಪಿಯ ಸಂಸದ ವಿಜಯಸಾಯಿ ರೆಡ್ಡಿ ಅವರು ರಾಜ್ಯಸಭೆಯಲ್ಲಿ ಕೃಷಿ ಕಾಯ್ದೆಗಳನ್ನು ಬೆಂಬಲಿಸಿದ ವಿಡಿಯೋವನ್ನು ಆಂಧ್ರ ಪ್ರದೇಶ ರಾಜ್ಯ ಘಟಕದ ಅಧ್ಯಕ್ಷ ಸೋಮು ವೀರರಾಜು ಪೋಸ್ಟ್ ಮಾಡಿದ್ದಾರೆ. ಸಂಸತ್ತಿನಲ್ಲಿ ಕೃಷಿ ಕಾಯ್ದೆಗಳನ್ನು ಬೆಂಬಲಿಸಿದ್ದ ವೈಎಸ್‌ಆರ್‌ಸಿಪಿಗೆ ಭಾರತ ಬಂದ್‌ಗೆ ಬೆಂಬಲ ನೀಡಲು ಯಾವ ಅಧಿಕಾರ ಇದೆ ಎಂದು ಪ್ರಶ್ನಿಸಿದ್ದಾರೆ.

ರೈತರ ಹೋರಾಟವು ಅಹಿಂಸಾತ್ಮಕವಾದುದು ಮತ್ತು ದೃಢನಿಶ್ಚಯದ್ದು. ಆದರೆ ಕೇಂದ್ರದ ಶೋಷಕ ಸರ್ಕಾರಕ್ಕೆ ಇದು ಇಷ್ಟವಿಲ್ಲ. ಹೀಗಾಗಿ ಭಾರತ್ ಬಂದ್ ನಡೆಯುತ್ತಿದೆ
ರಾಹುಲ್ ಗಾಂಧಿ
ಕಾಂಗ್ರೆಸ್ ನಾಯಕ

ರೈತರ ಬೇಡಿಕೆ ನ್ಯಾಯಯುತವಾದುದು. ಅವರ ಬೇಡಿಕೆಗಳನ್ನು ಈಡೇರಿಸುವುದರಿಂದ ಪ್ರಧಾನಿ ಯಾರ ಮುಂದೆಯೂ ತಲೆಬಾಗಿದಂತೆ ಆಗುವುದಿಲ್ಲ.
ಅರವಿಂದ ಕೇಜ್ರಿವಾಲ್
ದೆಹಲಿ ಮುಖ್ಯಮಂತ್ರಿ

ನಾನು ರೈತರಿಂದ ಒಂದು ಫೋನ್ ಕರೆಯಷ್ಟು ದೂರ ಮಾತ್ರ ಇದ್ದೇನೆ ಎಂದು ಮೋದಿ ಅವರು ಜನವರಿಯಲ್ಲಿ ಹೇಳಿದ್ದರು. ರೈತರು ಇನ್ನೂ ಆ ಕರೆಗಾಗಿ ಕಾಯುತ್ತಿದ್ದಾರೆ
ಪವನ್ ಖೇರಾ
ಕಾಂಗ್ರೆಸ್ ವಕ್ತಾರ

'ಅನುದಾನ ಪಡೆಯುವುದು ಶಿಕ್ಷಣ ಸಂಸ್ಥೆಗಳ ಮೂಲಭೂತ ಹಕ್ಕಲ್ಲ'

ಪ್ರಜಾವಾಣಿ ವಾರ್ತೆ



ನವದೆಹಲಿ: ಶಿಕ್ಷಣ ಸಂಸ್ಥೆಗಳು ಸರ್ಕಾರದಿಂದ ಪಡೆಯುವ ಅನುದಾನವನ್ನು ಮೂಲಭೂತ ಹಕ್ಕು ಎಂದು ಪ್ರತಿಪಾದಿಸುವಂತಿಲ್ಲ ಎಂದಿರುವ ಸುಪ್ರೀಂಕೋರ್ಟ್, ಅದು ರಾಜ್ಯದ ಆರ್ಥಿಕ ಇತಿ–ಮಿತಿಗಳಿಗೆ ಒಳಪಟ್ಟ ನೀತಿ ನಿರೂಪಣಾ ವಿಷಯವಾಗಿದೆ ಎಂದು ಹೇಳಿದೆ.

ಅನುದಾನಿತ ಸಂಸ್ಥೆಗಳ ವಿಷಯಕ್ಕೆ ಬಂದಾಗ ಅದು ಅಲ್ಪಸಂಖ್ಯಾತ ಮತ್ತು ಅಲ್ಪಸಂಖ್ಯಾತವಲ್ಲದ ಸಂಸ್ಥೆಗಳ ನಡುವೆ ಯಾವುದೇ ವ್ಯತ್ಯಾಸ ಇರಬಾರದು ಎಂದು ನ್ಯಾಯಾಲಯ ತಿಳಿಸಿದೆ.

ಅನುದಾನದ ನಿರ್ಧಾರವು ಸರ್ಕಾರದ ನೀತಿಯನ್ನು ಅನುಸರಿಸುತ್ತದೆ. ಹೀಗೆ ಮಾಡುವಾಗ ಸರ್ಕಾರವು ಶಿಕ್ಷಣ ಸಂಸ್ಥೆಯ ಹಿತಾಸಕ್ತಿಯ ಜತೆಗೆ ತನ್ನ ಆರ್ಥಿಕ ಸಾಮರ್ಥ್ಯವನ್ನು ಪರಿಗಣಿಸಬೇಕಾಗುತ್ತದೆ ಎಂದು ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ಅಧ್ಯಕ್ಷತೆಯ ಪೀಠ ಹೇಳಿತು.

ಅನುದಾನವನ್ನು ಹಿಂಪಡೆಯುವ ಕುರಿತು ಸರ್ಕಾರ ನೀತಿಯ ಮೂಲಕ ನಿರ್ಧಾರ ತೆಗೆದುಕೊಂಡಲ್ಲಿ, ಯಾವುದೇ ಶಿಕ್ಷಣ ಸಂಸ್ಥೆಯು ಅನುದಾನ ಪಡೆಯುವುದನ್ನು ತನ್ನ ಹಕ್ಕು ಎಂದು ಪ್ರಶ್ನಿಸುವಂತಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಅನುದಾನಿತ ಶಾಲೆಗಳ 4ನೇ ತರಗತಿಯ ಸಿಬ್ಬಂದಿ ನೇಮಕಾತಿಯನ್ನು ರದ್ದುಗೊಳಿಸಿದ್ದ ಉತ್ತರ ಪ್ರದೇಶ ಸರ್ಕಾರದ ನಿರ್ಧಾರವನ್ನು ಅಲಹಾಬಾದ್ ಹೈಕೋರ್ಟ್ 2018ರ ನವೆಂಬರ್ 19ರಂದು ಅಸಾಂವಿಧಾನಿಕ ಎಂದು ಘೋಷಿಸಿ ತೀರ್ಪು ನೀಡಿತ್ತು. ನ್ಯಾಯಮೂರ್ತಿ ಎಂ. ಎಂ. ಸುಂದ್ರೇಶ್ ಅವರನ್ನು ಒಳಗೊಂಡ ಸುಪ್ರೀಂ ಕೋರ್ಟ್ ಪೀಠವು ಅಲಹಾಬಾದ್ ಹೈಕೋರ್ಟ್‌ನ ತೀರ್ಪನ್ನು ಬದಿಗಿರಿಸಿತು.

'2026ಕ್ಕೆ ಜೊಜಿಲಾ ಸುರಂಗಮಾರ್ಗ ಸಿದ್ಧ'

ಪ್ರಜಾವಾಣಿ ವಾರ್ತೆ

ಸೋನಾಮಾರ್ಗ್ (ಜಮ್ಮು-ಕಾಶ್ಮೀರ): ಏಷ್ಯಾದ ಅತ್ಯಂತ ಉದ್ದದ ಮತ್ತು ಅತಿ ಎತ್ತರದಲ್ಲಿರುವ ಜೊಜಿಲಾ ಸುರಂಗ ಮಾರ್ಗವು 2026ರಲ್ಲಿ ಸಂಚಾರಕ್ಕೆ ಮುಕ್ತವಾಗಲಿದೆ. ವರ್ಷದ ಎಲ್ಲಾ ಋತುವಿನಲ್ಲೂ ಸಂಚಾರಕ್ಕೆ ಅವಕಾಶವಿರುವ ಈ ಸುರಂಗಮಾರ್ಗವು ಜಮ್ಮು-ಕಾಶ್ಮೀರ ಮತ್ತು ಲಡಾಖ್ ಪ್ರಾಂತದ ನಡುವೆ ಸಂಪರ್ಕವನ್ನು ಸುಲಭಗೊಳಿಸುತ್ತದೆ.

ಜೊಜಿಲಾ ಪಾಸ್‌ನಲ್ಲಿ ಚಳಿಗಾಲದ ನಂತರವೂ 20 ಅಡಿ ಎತ್ತರದಷ್ಟು ಹಿಮ ಬಿದ್ದಿರುತ್ತದೆ. ಆಗ ರಸ್ತೆ ಸಂಚಾರ ಸಾಧ್ಯವೇ ಇಲ್ಲ. ಈ ಸುರಂಗಮಾರ್ಗವು ಕಾರ್ಯಾರಂಭ ಮಾಡಿದರೆ, ಈ ತೊಂದರೆ ಇಲ್ಲದಂತಾಗುತ್ತದೆ ಎಂದು ರಾಷ್ಟ್ರೀಯ ಹೆದ್ದಾರಿ ಮೂಲಸೌಕರ್ಯ ಅಭಿವೃದ್ಧಿ ನಿಗಮದ ಕಾರ್ಯಕಾರಿ ನಿರ್ದೇಶಕ ಜಿ.ಎಸ್.ಕಾಂಬೊ ಹೇಳಿದ್ದಾರೆ.

ದ್ವಿಮುಖ ಸಂಚಾರ ವ್ಯವಸ್ಥೆ ಇರುವ ಈ ಸುರಂಗ ಮಾರ್ಗದ ನಿರ್ಮಾಣ ಕಾರ್ಯವನ್ನು ಅತ್ಯಂತ ವೇಗವಾಗಿ ನಡೆಸಲಾಗುತ್ತಿದೆ.

ಭವಾನಿಪುರ ಉಪ ಚುನಾವಣೆ ಬಿಜೆಪಿ–ಟಿಎಂಸಿ ಸಂಘರ್ಷ

ಕೋಲ್ಕತ್ತ (ಪಿಟಿಐ): ಭವಾನಿಪುರ ಕ್ಷೇತ್ರದ ಉಪಚುನಾವಣೆಗಾಗಿ ಪ್ರಚಾರ ನಡೆಸುತ್ತಿದ್ದ ರಾಜ್ಯದ ಬಿಜೆಪಿ ಉಪಾಧ್ಯಕ್ಷ ದಿಲೀಪ್ ಘೋಷ್ ಅವರನ್ನು ಎಳೆದಾಡಲಾಗಿದೆ ಮತ್ತು ಪಕ್ಷದ ಸಂಸದ ಅರ್ಜುನ್ ಸಿಂಗ್ ವಿರುದ್ಧ 'ಗೋ ಬ್ಯಾಕ್' ಎಂಬ ಘೋಷಣೆ ಕೂಗಲಾಗಿದೆ ಎಂದು ಬಿಜೆಪಿ ಆರೋಪಿಸಿದೆ. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ಭವಾನಿಪುರ ಕ್ಷೇತ್ರದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿರುವ ಪ್ರಿಯಾಂಕ ತಿಬ್ರೆವಾಲ್ ಪರ ಇವರು ಸೋಮವಾರ ಪ್ರಚಾರ ಮಾಡುತ್ತಿದ್ದಾಗ ಈ ಘಟನೆಗಳು ನಡೆದಿವೆ. ಬಹಿರಂಗ ಪ್ರಚಾರ ಸೋಮವಾರ ಅಂತ್ಯಗೊಂಡಿದೆ.

ಕ್ಷೇತ್ರದ ಜೋದುಬಾಬುರ್ ಬಜಾರ್ ಪ್ರದೇಶದ ಲಸಿಕಾ ಕೇಂದ್ರದ ಒಳಗೆ ಘೋಷ್ ಅವರು ಹೋದ ವೇಳೆ ಟಿಎಂಸಿ ಕಾರ್ಯಕರ್ತರು ಅವರನ್ನು ಎಳೆದಾಡಿದರು ಎಂದು ಬಿಜೆಪಿ ಹೇಳಿದೆ. ಈ ಘಟನೆ ಕುರಿತು ಆಕ್ರೋಶ ವ್ಯಕ್ತಪಡಿಸಿರುವ ಘೋಷ್, ಚುನಾವಣಾ ಆಯೋಗಕ್ಕೆ ದೂರು ನೀಡುವುದಾಗಿ ಹೇಳಿದ್ದಾರೆ.

ಇದಕ್ಕೆ ಪ್ರತಿಕ್ರಿಯೆ ನೀಡಿರುವ ಟಿಎಂಸಿ, ಘೋಷ್ ಜೊತೆ ಲಸಿಕಾ ಕೇಂದ್ರಕ್ಕೆ ಬಂದಿದ್ದ ಅವರ ಸಹಚರರು ಬಂದೂಕುಗಳನ್ನು ತೋರಿಸಿ ಜನರನ್ನು ಚದುರಿಸಲು ಪ್ರಯತ್ನಿಸಿದರು. ಆಗ ಅಲ್ಲಿ ಉಪಸ್ಥಿತರಿದ್ದ ಟಿಎಂಸಿ ಬೆಂಬಲಿಗರು ಘೋಷ್ ಮತ್ತು ಅವರ ಸಹಚರರನ್ನು ಅಲ್ಲಿಂದ ಹೊರಕಳಿಸಿದರು. ರಾಜ್ಯ ಸರ್ಕಾರ ನಡೆಸುತ್ತಿರುವ ಲಸಿಕಾ ಕೇಂದ್ರದಿಂದ ಹೊರಡುವಂತೆ ಘೋಷಣೆ ಕೂಗಿದರು ಎಂದಿದೆ.

ಈ ಕ್ಷೇತ್ರದಲ್ಲಿ ಬಿಜೆಪಿ ಪರ ಪ್ರಚಾರದ ಹೊಣೆ ಹೊತ್ತುಕೊಂಡಿರುವ ಅರ್ಜುನ್ ಸಿಂಗ್ ಅವರು ತಮ್ಮ ವಿರುದ್ಧ ಘೋಷಣೆ ಕೂಗಿದ ಘಟನೆ ಕುರಿತು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಂಸದರು ಮತ್ತು ರಾಷ್ಟ್ರ ಮಟ್ಟದ ವಿಪಕ್ಷ ನಾಯಕರ ಮೇಲೆ ದಾಳಿ ನಡೆಯುತ್ತಿದ್ದರೂ ರಾಜ್ಯದ ಆಡಳಿತ ಮತ್ತು ಪೊಲೀಸರು ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಖಂಡನೀಯ ಎಂದಿದ್ದಾರೆ.

ಇದೇ 30ರಂದು ಉಪಚುನಾವಣೆ ನಡೆಯಲಿದೆ.

ಟಿಎಂಸಿಯಿಂದ ಪ್ರಜಾಪ್ರಭುತ್ವಕ್ಕೆ ಅಪಮಾನ: ಬಿಜೆಪಿ

ಬಿಜೆಪಿ ಮುಖಂಡರಾದ ದಿಲೀಪ್ ಘೋಷ್ ಮತ್ತು ಅರ್ಜುನ್ ಸಿಂಗ್ ವಿರುದ್ಧ ನಡೆದಿರುವ ದಾಳಿಯನ್ನು ಖಂಡಿಸಿರುವ ಬಿಜೆಪಿಯು ಟಿಎಂಸಿ ವಿರುದ್ಧ ಹರಿಹಾಯ್ದಿದೆ. ರಾಜ್ಯದಲ್ಲಿ ಸರ್ಕಾರಿ ಪ್ರಾಯೋಜಿತ ಹಿಂಸಾಚಾರ ನಡೆಯುತ್ತಿದೆ. ಮೂರನೇ ಬಾರಿಗೆ ಜಯಗಳಿಸಿದ ಬಳಿಕ ಟಿಎಂಸಿ ನಡೆಸುತ್ತಿರುವ ದುಷ್ಕೃತ್ಯಗಳು ಪ್ರಜಾಪ್ರಭುತ್ವಕ್ಕೆ ಅಪಮಾನವಾಗುವಂತಿವೆ ಎಂದು ಬಿಜೆಪಿ ದೂರಿದೆ.

'ಎದುರಾಳಿಗಳು ನ್ಯಾಯವಾಗಿ ಸ್ಪರ್ಧಿಸಲು ಟಿಎಂಸಿ ಬಿಡುವುದಿಲ್ಲ. ನಮ್ಮ ನಾಯಕರಿಗೆ ಪಕ್ಷದ ಅಭ್ಯರ್ಥಿ ಪರ ಪ್ರಚಾರ ನಡೆಸಲು ರಾಜ್ಯ ಸರ್ಕಾರ ನೇಮಿಸಿರುವ ಟಿಎಂಸಿ ಗೂಂಡಾಗಳು ಬಿಟ್ಟಿಲ್ಲ. ಉತ್ತಮ ಭದ್ರತೆ ಹೊಂದಿರುವ ಘೋಷ್ ಅವರ ಮೇಲೇ ದಾಳಿ ನಡೆದಿರುವಾಗ, ಪಶ್ಚಿಮ ಬಂಗಾಳದ ಜನ ಸಾಮಾನ್ಯರ ಪರಿಸ್ಥಿತಿಯನ್ನು ಊಹಿಸಲೂ ಸಾಧ್ಯವಿಲ್ಲ' ಎಂದು ಬಿಜೆಪಿ ಪ್ರಮುಖ ವಕ್ತಾರ ಅನಿಲ್ ಬಲೂನಿ ಹೇಳಿದ್ದಾರೆ.

ಐದು ತಿಂಗಳ ಬಳಿಕ ಚಿತ್ರಮಂದಿರಗಳಲ್ಲಿ ಶೇ 100ರಷ್ಟು ಆಸನ ಭರ್ತಿಗೆ ಅವಕಾಶ

ನಾಡಹಬ್ಬದಿಂದ ಮತ್ತೆ ಸಿನಿಮಾ ಸಂಭ್ರಮ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಮಾರು ಐದು ತಿಂಗಳ ಬಳಿಕ ರಾಜ್ಯದಾದ್ಯಂತ ಚಿತ್ರಮಂದಿರಗಳಲ್ಲಿ ಶಿಳ್ಳೆ, ಚಪ್ಪಾಳೆಗಳ ಸದ್ದು ಮತ್ತೆ ಪ್ರತಿಧ್ವನಿಸಲಿದೆ. ಚಿತ್ರಮಂದಿರಗಳಲ್ಲಿ ಶೇ 100ರಷ್ಟು ಆಸನಗಳ ಭರ್ತಿಗೆ ಸರ್ಕಾರ ಅವಕಾಶ ಕಲ್ಪಿಸಿರುವ ಬೆನ್ನಲ್ಲೇ ಸಾಲುಸಾಲು ಚಿತ್ರಗಳು ತಮ್ಮ ಬಿಡುಗಡೆ ದಿನಾಂಕವನ್ನು ಘೋಷಿಸಿವೆ. ಹೀಗಾಗಿ ಈ ಬಾರಿಯ ನಾಡಹಬ್ಬ ರಾಜ್ಯದ ಜನತೆಗೆ ಸಿನಿಮಾ ಸಂಭ್ರಮವನ್ನೂ ಹೊತ್ತುತರಲಿದೆ.

ನಟ ದುನಿಯಾ ವಿಜಯ್ ನಟಿಸಿ ನಿರ್ದೇಶಿಸಿರುವ 'ಸಲಗ' ಚಿತ್ರ ಅ.14ರಂದು ಬೆಳ್ಳಿತೆರೆಗೆ ಲಗ್ಗೆ ಇಡಲಿದೆ. ಅದೇ ದಿನ ನಟ ಸುದೀಪ್ ನಟನೆಯ 'ಕೋಟಿಗೊಬ್ಬ-3' ಸಿನಿಮಾವೂ ತೆರೆಕಾಣಲಿದೆ. ಚಿತ್ರಕ್ಕೆ ಇನ್ನಷ್ಟೇ ಸೆನ್ಸಾರ್ ಆಗಬೇಕಿರುವ ಕಾರಣ ಚಿತ್ರತಂಡವು ಅಧಿಕೃತವಾಗಿ ಬಿಡುಗಡೆ ದಿನಾಂಕವನ್ನು ಇನ್ನಷ್ಟೇ ಘೋಷಿಸಬೇಕಾಗಿದೆ. ಇದಾದ ಎರಡು ವಾರದಲ್ಲಿ ನಟ ಶಿವರಾಜ್‌ಕುಮಾರ್ ನಟನೆಯ, ಎ.ಹರ್ಷ ನಿರ್ದೇಶನದ 'ಭಜರಂಗಿ-2' ಅ.29ರಂದು ತೆರೆಕಾಣಲಿದೆ. ಹೀಗೆ ಸಾಲುಸಾಲು ಬಿಗ್‌ಬಜೆಟ್ ಸಿನಿಮಾ ಸಿನಿರಸಿಕರ ಮುಂದೆ ಬರಲು ಸಜ್ಜಾಗಿದೆ.



ಕೋಟಿಗೊಬ್ಬ 3 ಚಿತ್ರದಲ್ಲಿ ಸುದೀಪ್



ಸಲಗ ಚಿತ್ರದಲ್ಲಿ ದುನಿಯಾ ವಿಜಯ್

ಜೊತೆಗೆ ಅ.8ಕ್ಕೆ ಸೂರಜ್ ಗೌಡ ಹಾಗೂ ಡಾ.ರಾಜ್‌ಕುಮಾರ್ ಅವರ ಮೊಮ್ಮಗಳಾದ ಧನ್ಯಾ ರಾಮ್‌ಕುಮಾರ್ ನಟನೆಯ ಮೊದಲ ಚಿತ್ರ 'ನಿನ್ನ ಸನಿಹಕೆ' ಬಿಡುಗಡೆಯಾಗಲಿದೆ. ಅ.15ರಂದು ಡಾರ್ಲಿಂಗ್ ಕೃಷ್ಣ ಹಾಗೂ ಭಾವನಾ ನಟನೆಯ srikrishna@gmail.com ಸಿನಿಮಾ ಕನ್ನಡ ಹಾಗೂ ಮಲಯಾಳಂನಲ್ಲಿ ತೆರೆಕಾಣಲಿದೆ.

ಬಿಗ್‌ಬಜೆಟ್ ಸಿನಿಮಾಗಳನ್ನೂ ಎರಡೆರಡು ವಾರ ಅಂತರದಲ್ಲಿ ಬಿಡುಗಡೆ ಮಾಡಲು ಆಯಾ ಸಿನಿಮಾದ ನಿರ್ಮಾಪಕರು ಒಟ್ಟಿಗೇ ಕುಳಿತು ಚರ್ಚಿಸಿ ನಿರ್ಧರಿಸಿದ್ದರು. ಇದರಂತೆ ಅ.1ರಂದು 'ಸಲಗ', ಅ.14ಕ್ಕೆ 'ಕೋಟಿಗೊಬ್ಬ-3' ಹಾಗೂ ಅ.29ಕ್ಕೆ 'ಭಜರಂಗಿ-2' ಬಿಡುಗಡೆಯಾಗಬೇಕಿತ್ತು. ಆದರೆ ಸರ್ಕಾರದ ಆದೇಶ ವಿಳಂಬವಾಗಿರುವ ಕಾರಣ, ಪ್ರಚಾರಕ್ಕೆ ಇನ್ನಷ್ಟು ಸಮಯ ಬೇಕೆಂದು ಸಲಗ ಚಿತ್ರದ ನಿರ್ಮಾಪಕ ಕೆ.ಪಿ. ಶ್ರೀಕಾಂತ್ ಅವರು ಚಿತ್ರವನ್ನು ಅ.14ಕ್ಕೆ ಮುಂದೂಡಿದ್ದಾರೆ. 'ಅ.14ಕ್ಕೆ 'ಸಲಗ'ಕ್ಕೆ ಅವಕಾಶ ನೀಡಿ, ಅ.29ರಂದು ಕೋಟಿಗೊಬ್ಬ-3 ಬಿಡುಗಡೆ ಮಾಡಿದರೆ, ಜಯಣ್ಣ ಅವರೂ ಎರಡು ವಾರ ಮುಂದೂಡಬಹುದು ಎನ್ನುವ ಆಶಾಭಾವನೆಯಲ್ಲಿ ನಾವಿದ್ದೆವು. ಆದರೆ ಜಯಣ್ಣ ಒಪ್ಪಲಿಲ್ಲ. ಅಲ್ಲಿಗೆ ಮಾತುಕತೆ ಮುಗಿಯಿತು. ಹೀಗಾಗಿ ಅನಿವಾರ್ಯವಾಗಿ ಎರಡು ಚಿತ್ರಗಳು ಒಂದೇ ದಿನ ಬಿಡುಗಡೆ ಆಗಲಿವೆ' ಎಂದಿದ್ದಾರೆ ನಿರ್ಮಾಪಕ ಸೂರಪ್ಪ ಬಾಬು.

ಇಬ್ಬರು ಸ್ಟಾರ್ ನಟರ ಚಿತ್ರ ಒಂದೇ ದಿನದಂದು ಬಿಡುಗಡೆಯಾಗಲಿದೆ ಎನ್ನುವ ಸುದ್ದಿ ಹರಿದಾಡಿದ ಬೆನ್ನಲ್ಲೇ ಸಾಮಾಜಿಕ ಜಾಲತಾಣದಲ್ಲಿ 'ಸ್ಟಾರ್‌ವಾರ್' ವಿಷಯ ಚರ್ಚೆಯಾಗತೊಡಗಿತ್ತು. ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ನಟ ವಿಜಯ್, 'ಸುದೀಪ್ ಅವರೇ ಟ್ವೀಟ್ ಮಾಡಿ 'ಸಲಗ' ಸಿನಿಮಾಗೆ ಶುಭಕೋರಿದ್ದಾರೆ. ಸ್ಟಾರ್‌ವಾರ್ ಮಾಡುವುದೇ ಬೇಡ. ಇಬ್ಬರೂ ಜವಾಬ್ದಾರಿಯಿಂದ ಸಿನಿಮಾ ಮಾಡಿರುತ್ತೇವೆ. ಜನರಿಗೆ ಸಂದೇಶ, ಮನರಂಜನೆ ನೀಡುವ ಉದ್ದೇಶದಿಂದ, ಬೇರೆ ಬೇರೆ ವಿಷಯದ ಸಿನಿಮಾ ಮಾಡಿದ್ದೇವೆ. ಯಾವ ಸ್ಟಾರ್ಸ್‌ಗೂ ವಾರ್ ಇಲ್ಲ, ವಾರ್ ಆಗುವುದೂ ಬೇಡ. ನಟರಿಗಾಗಲಿ ಅಥವಾ ನಿರ್ಮಾಪಕರಿಗಾಗಲಿ ಯಾರಿಗೂ ಒಬ್ಬರ ಮೇಲೆ ಒಬ್ಬರಿಗೆ ವೈಮನಸ್ಸು ಇಲ್ಲ. ಅಂದು ಸಿನಿಮಾ ಹಬ್ಬ ಎಂದು ನಾನಂದುಕೊಂಡಿದ್ದೇನೆ. ಯಾವುದೇ ಫ್ಯಾನ್‌ವಾರ್ ಬೇಡ' ಎಂದು ಅಭಿಮಾನಿಗಳಿಗೂ ಕಿವಿಮಾತು ಹೇಳಿದ್ದಾರೆ.

ಕೋವಿಡ್ ಬಳಿಕ ಕಂಗಾಲಾಗಿವೆ ಕುಟುಂಬಗಳು • ಅನ್ಯರ ಅವಲಂಬನೆಗೆ ಕೈಚಾಚಬೇಕಾದ ಅರ್ಚಕರು

ದೇವರ ಸೇವಕರಿಗೂ ದೈನೇಸಿ ಸ್ಥಿತಿ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಕೋವಿಡ್ ಕಾಲದ ಕಷ್ಟಕೋಟಲೆಗಳು ದೇವರ ಪೂಜಾ ಕೈಂಕರ್ಯ ನೆರವೇರಿಸುವ ಅರ್ಚಕ ಸಮುದಾಯವನ್ನು, ಮಸೀದಿಗಳ ಮೌಲ್ವಿಗಳನ್ನೂ ಕಾಡಿವೆ. ಭಕ್ತರಿಗೆ ದೇವರು ಹರಸಲೆಂದು ಪ್ರಾರ್ಥಿಸುವವರು ಕೂಡಾ, 'ಭಗವಂತನೂ ನಮ್ಮ ಕಷ್ಟಕ್ಕೆ ಒದಗಲಿಲ್ಲವಲ್ಲ' ಎಂದು ಕಣ್ಣೀರಿಡುವಂತಹ ಕರುಣಾಜನಕ ಸ್ಥಿತಿಯನ್ನು ಎದುರಿಸುತ್ತಿದ್ದಾರೆ.

ದಶಕಗಳಿಂದ ಕೊರಟಗೆರೆ ಚನ್ನರಾಯನದುರ್ಗದ ಮುರಹರಿಸ್ವಾಮಿ ದೇವಸ್ಥಾನದ ಅರ್ಚಕ ವೃತ್ತಿಯನ್ನು ಮಾಡಿಕೊಂಡು ಬಂದಿದ್ದ ಕುಟುಂಬ ಜನಾರ್ದನ ಅವರದು. ಜನಾರ್ಧನ ಅವರು ಕೋವಿಡ್‌ನಿಂದ ಕೊನೆಯುಸಿರೆಳೆದರು. ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಪೂಜಾರಿಯಾಗಿದ್ದ ಅವರ ತಂದೆಯವರು ಇದಾಗಿ ಅಲ್ಪ ದಿನಗಳಲ್ಲೇ ರಸ್ತೆ ಅಪಘಾತದಲ್ಲಿ ಅಸುನೀಗಿದರು. ವರ್ಷಕ್ಕೆ ತಸ್ತೀಕ್ ರೂಪದಲ್ಲಿ ಸಿಗುವ ₹ 48 ಸಾವಿರ ಹಾಗೂ ದಕ್ಷಿಣೆ ಕಾಸಿನಲ್ಲೇ ದೇವಸ್ಥಾನದ ವೆಚ್ಚಗಳನ್ನು ಭರಿಸಿ ಸಂಸಾರದ ಭಾರವನ್ನೂ ಅವರಿಬ್ಬರು ನಿಭಾಯಿಸುತ್ತಿದ್ದರು. ಕುಟುಂಬದ ಆಧಾರ ಸ್ತಂಭಗಳಂತಿದ್ದ ತಂದೆ ಹಾಗೂ ಮಗನನ್ನು ಕಳೆದುಕೊಂಡ ಕುಟುಂಬಕ್ಕೆ ದಿಕ್ಕೇ ತೋಚದ ಸ್ಥಿತಿ ಎದುರಾಗಿದೆ.

'ಜನಾರ್ದನ ಅವರ ಪುತ್ರ ಈ ವರ್ಷವಷ್ಟೇ ಎಸ್ಸೆಸ್ಸೆಲ್ಸಿ ಪೂರ್ಣಗೊಳಿಸಿದ್ದು, ಅವನ ಶೈಕ್ಷಣಿಕ ಭವಿಷ್ಯವೂ ತೂಗುಯ್ಯಾಲೆಯಲ್ಲಿದೆ. ಈ ಕುಟುಂಬಕ್ಕೆ ಸರ್ಕಾರದಿಂದ ಬಿಡಿಗಾಸಿನ ಪರಿಹಾರವೂ ಸಿಕ್ಕಿಲ್ಲ. ಎರಡು ವರ್ಷಗಳಿಂದ ತಸ್ತೀಕ್ ಹಣವೂ ಬಿಡುಗಡೆಯಾಗಿಲ್ಲ. ಪೂಜಾ ಕೈಂಕರ್ಯ ನಿಲ್ಲಿಸಲಾಗದೇ, ಜನಾರ್ದನ ಅವರ ಸಹೋದರ ಮಾರುತಿ ಬೆಂಗಳೂರಿನಲ್ಲಿ ಹೊಂದಿದ್ದ ಉದ್ಯೋಗವನ್ನು ತೊರೆದು ಊರು ಸೇರಿದ್ದಾರೆ. ಅವರ ತಾಯಿಯೂ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಜೀವನೋಪಾಯಕ್ಕೆ ಅನ್ಯ ಕೆಲಸವನ್ನೂ ಮಾಡಲಾಗದ ಸ್ಥಿತಿ ಅವರದ್ದು' ಎಂದು ಈ ಕುಟುಂಬವನ್ನು ಹತ್ತಿರದಿಂದ ಬಲ್ಲವರೊಬ್ಬರು ತಿಳಿಸಿದರು.

ಕೋಲಾರ ಜಿಲ್ಲೆಯ ಕೆಜಿಎಫ್‌ನ ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಾಲಯದ ಅರ್ಚಕ ಸಹೋದರರಾದ ಹರಿ (54) ಹಾಗೂ ವೆಂಕಟೇಶ್ (43) ಅವರಿಬ್ಬರೂ ಕೋವಿಡ್ ಸಂದರ್ಭದಲ್ಲಿ ಅಸುನೀಗಿದ್ದಾರೆ. ಇದೇ ಕೊರಗಿನಲ್ಲಿ ಅವರ ತಾಯಿಯೂ ಕೊನೆಯುಸಿರೆಳೆದಿದ್ದಾರೆ. ವೆಂಕಟೇಶ್ ಅವರ ಮಗ ಇನ್ನೂ ಪ್ರೌಢಶಾಲೆಯ ವಿದ್ಯಾರ್ಥಿ. ಹಿರಿಯ ಮಗಳು ಈ ವರ್ಷ ಪಿ.ಯು ಓದು ಪೂರೈಸಿದ್ದಾರೆ. ಕುಟುಂಬವು ಜೀವನ ನಿರ್ವಹಣೆಗೂ ಸಮಸ್ಯೆ ಎದುರಿಸುತ್ತಿದೆ' ಎಂದು ತಾಲ್ಲೂಕಿನ ಅರ್ಚಕರೊಬ್ಬರು ತಿಳಿಸಿದರು.

ಮುಜರಾಯಿ ಇಲಾಖೆಯ ಸಿ ವರ್ಗದ ದೇವಾಲಯಗಳ ಬಹುತೇಕ ಅರ್ಚಕರ ಹಾಗೂ ಸಿಬ್ಬಂದಿಯ ಕತೆ ಇದಕ್ಕಿಂತ ಭಿನ್ನವಾಗಿಲ್ಲ ಎನ್ನುತ್ತಾರೆ ರಾಜ್ಯ ಮುಜರಾಯಿ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ನೌಕರರ ಸಂಘದ ಅಧ್ಯಕ್ಷ ಶ್ರೀವತ್ಸ.

'ಸಿ -ವರ್ಗದ ದೇವಸ್ಥಾನಗಳ ನಿರ್ವಹಣೆಗೆ ಸರ್ಕಾರ ನೀಡುವ ತಸ್ತೀಕ್‌ನ ಬಹುಪಾಲು ಪೂಜಾ ಪರಿಕರಗಳ ವೆಚ್ಚಕ್ಕೇ ಸರಿಹೊಂದುತ್ತದೆ. ಈ ಹಣ ಬಿಡುಗಡೆಗೂ ಅಧಿಕಾರಿಗಳಿಗೆ ಲಂಚ ನೀಡಬೇಕು. ಈ ದೇವಾಲಯಗಳ ಅರ್ಚಕರಿಗೆ ಸಿಗುವ ದಕ್ಷಿಣೆಯೂ ಅಷ್ಟಕ್ಕಷ್ಟೇ. ದೇವಾಲಯಗಳಿಗೆ ಭಕ್ತರ ಪ್ರವೇಶಕ್ಕೆ ತಿಂಗಳಾನುಗಟ್ಟಲೆ ನಿರ್ಬಂಧ ಹೇರಿ, ಧಾರ್ಮಿಕ ಸೇವೆಗಳನ್ನು ಸ್ಥಗಿತಗೊಳಿಸಿದ್ದ ಸಂದರ್ಭದಲ್ಲಿ ಅರ್ಚಕರು ಹಾಗೂ ದೇವಾಲಯದ ಇತರ ಸಿಬ್ಬಂದಿ ಎದುರಿಸಿದ ಕಷ್ಟ ದೇವರಿಗೇ ಪ್ರೀತಿ' ಎಂದು ಶ್ರೀವತ್ಸ ವಿವರಿಸಿದರು.

'ಕೋವಿಡ್ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕಿದ ಅರ್ಚಕರಿಗೆ ತಲಾ ₹ 3 ಸಾವಿರ ಪರಿಹಾರ ನೀಡುವುದಾಗಿ ಸರ್ಕಾರ ಘೋಷಣೆ ಮಾಡಿತು. ಈಗಲೂ ಬಹುತೇಕ ಅರ್ಚಕರ ಕುಟುಂಬಗಳಿಗೆ ಪರಿಹಾರ ತಲುಪಿಲ್ಲ. ಎ- ವರ್ಗದ ದೇವಾಲಯಗಳ ಮೂಲಕ ಸಿ-ವರ್ಗದ ದೇವಸ್ಥಾನಗಳ ಅರ್ಚಕರು ಮತ್ತು ಸಿಬ್ಬಂದಿಗೆ ಧವಸ ಧಾನ್ಯಗಳ ಕಿಟ್ ನೀಡುವುದಾಗಿ ಸರ್ಕಾರ ಹೇಳಿತು. 10ಕ್ಕೂ ಅಧಿಕ ಜಿಲ್ಲೆಗಳ ಅರ್ಚಕರಿಗೆ ಈ ಸವಲತ್ತೂ ಸಿಕ್ಕಿಲ್ಲ' ಎಂದು ಅವರು ದೂರಿದರು.

ಮುಜರಾಯಿ ಇಲಾಖೆಗೆ ಸೇರದ ದೇವಾಲಯಗಳ ಅರ್ಚಕರಿಗೆ ಸರ್ಕಾರದಿಂದಲೂ ಸವಲತ್ತೂ ಸಿಕ್ಕಿಲ್ಲ. ಅಂತಹ ಕೆಲವು ದೇವಾಲಯಗಳ ಅರ್ಚಕರ ಪರಿಸ್ಥಿತಿಯೂ ಚಿಂತಾಜನಕವಾಗಿದೆ.

ಬದುಕು ಬೀದಿಗೆ ತಂದ ಕೋವಿಡ್

'10 ಸಾವಿರಕ್ಕೂ ಅಧಿಕ ಅರ್ಚಕರಿಗೆ ಸಿಕ್ಕಿಲ್ಲ ಪರಿಹಾರ'

'ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಸೇರಿದ 32,562 ದೇವಸ್ಥಾನಗಳಿವೆ. ಸಿ ಗುಂಪಿನ ದೇವಸ್ಥಾನಗಳ 28,900 ಅರ್ಚಕ ಕುಟುಂಬಗಳು ಕೋವಿಡ್ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದು, ಅವರಿಗೆ ತಲಾ ₹ 3 ಸಾವಿರ ಪರಿಹಾರ ಬಿಡುಗಡೆಗೆ ಸರ್ಕಾರ ₹ 10.81 ಕೋಟಿ ಮಂಜೂರು ಮಾಡಿತ್ತು. ಅದರಲ್ಲಿ ₹ 8.67 ಕೋಟಿ ಬಿಡುಗಡೆಯಾಗಿದೆ. ಇದುವರೆಗೆ 16,300 ಅರ್ಚಕರ ಕುಟುಂಬಗಳಿಗೆ ಪರಿಹಾರ ಒದಗಿಸಲಾಗಿದ್ದು ಇದಕ್ಕಾಗಿ ₹ 5.83 ಕೋಟಿ ಬಳಸಲಾಗಿದೆ. ಇನ್ನುಳಿದ ಕುಟುಂಬಗಳಿಗೆ ಇನ್ನಷ್ಟೇ ಪರಿಹಾರ ತಲುಪಬೇಕಿದೆ' ಎಂದು ಮುಜರಾಯಿ ಇಲಾಖೆಯ ಮೂಲಗಳು ತಿಳಿಸಿವೆ.


'ಮಾಸ್ಕ್ ಖರೀದಿಗೂ ಹಣವಿಲ್ಲ'



ಅರ್ಚಕರು ಹಾಗೂ ದೇವಸ್ಥಾನಗಳ ಸಿಬ್ಬಂದಿಯ ಆಪತ್ತಿಗೆ ಒದಗುವ ಯಾವುದೇ ವ್ಯವಸ್ಥೆಯನ್ನೂ ಸರ್ಕಾರ ಕಲ್ಪಿಸಿಲ್ಲ. ಬಹುತೇಕರಿಗೆ ಸ್ವಂತ ಸೂರಿಲ್ಲ. ಪಿಂಚಣಿ ವ್ಯವಸ್ಥೆಯೂ ಇಲ್ಲ. ಅನೇಕ ಕುಟುಂಬಗಳು ಒಪ್ಪೊತ್ತಿನ ಕೂಳಿಗೂ ತತ್ವಾರ ಎದುರಿಸುತ್ತಿವೆ. ಸರ್ಕಾರವೇ ಅವರಿಗೆ ನೆರವಾಗಬೇಕು

ಶ್ರೀವತ್ಸ, ರಾಜ್ಯ ಮುಜರಾಯಿ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ನೌಕರರ ಸಂಘ


'ಕಂಗೆಟ್ಟ ಕುಟುಂಬಗಳಿಗೆ ನೆರವು ಸಿಗಲಿ'



ಅರ್ಚಕರು ತೀರಿಹೋದಾಗ ಅವರ ಕುಟುಂಬ ಬೀದಿಗೆ ಬೀಳುವಂತಹ ಸ್ಥಿತಿ ಇದೆ. ಈ ರೀತಿ ಸಂಕಷ್ಟಕ್ಕೆ ಸಿಲುಕಿದ ಕುಟುಂಬಗಳನ್ನು ಗುರುತಿಸಿ ಸರ್ಕಾರ ಅವರ ಬದುಕಿಗೆ ಭದ್ರತೆ ಒದಗಿಸಬೇಕು.

ಗುರು ದೀಕ್ಷಿತ್, ಸಂಚಾಲಕರು, ಕರ್ನಾಟಕ ಮುಜರಾಯಿ ದೇವಾಲಯಗಳ ಅರ್ಚಕರ ಮತ್ತು ಆಗಮಿಕರ ಸಂಘ

ಮೌಲ್ವಿಗಳದೂ ಅಸಹಾಯಕ ಸ್ಥಿತಿ



ಲಾಕ್‌ಡೌನ್ ಸಂದರ್ಭದಲ್ಲಿ ಮಸೀದಿಗಳ ಮೌಲ್ವಿಗಳೂ ಜೀವನ ನಿರ್ವಹಣೆಗೆ ತ್ರಾಸಪಟ್ಟಿದ್ದಾರೆ. ವರಮಾನ ಕಡಿಮೆ ಇರುವ ಸಣ್ಣಪುಟ್ಟ ಮಸೀದಿಗಳ ಮೌಲ್ವಿಗಳಂತೂ ನೆರವಿಗಾಗಿ ಅನ್ಯರ ಬಳಿ ಕೈಚಾಚಲೂ ಆಗದೇ, ತಮ್ಮ ಕಷ್ಟವನ್ನು ಹೇಳಿಕೊಳ್ಳಲು ಆಗದೇ ಪಡಿಪಾಟಲು ಅನುಭವಿಸಿದ್ದಾರೆ.

'ಮಸೀದಿ ಅಭಿವೃದ್ಧಿಗೆ ಸಂಗ್ರಹಿಸುವ ದೇಣಿಗೆಯಿಂದ ಬರುವ ಪಾಲು, ಟ್ರಸ್ಟ್ ನೀಡುವ ಹಣ ಹಾಗೂ ಜನ ಹದಿಯ (ಉಡುಗೊರೆ) ರೂಪದಲ್ಲಿ ನೀಡುವ ಹಣದಿಂದಲೇ ನಾವು ಕುಟುಂಬ ನಿರ್ವಹಿಸಬೇಕಿದೆ. ಮಸೀದಿಗಳು ಮುಚ್ಚಿದ್ದಾಗ ಮಕ್ಕಳ ವಿದ್ಯಾಭ್ಯಾಸಕ್ಕೆ ಹಣ ಹೊಂದಿಸುವುದಕ್ಕೂ ಸಮಸ್ಯೆ ಆಯಿತು. ನಮ್ಮ ಸಂಕಷ್ಟವನ್ನು ಯಾರ ಬಳಿ ಹೇಳಿಕೊಳ್ಳುವಂತೆಯೂ ಇರಲಿಲ್ಲ' ಎಂದು ಲಕ್ಕಸಂದ್ರದ ಅಲಿ ಅಬುಲ್ ಹಸ್ನೈನ್ ಮಸೀದಿಯ ಮೌಲ್ವಿ ಎಚ್.ಎಸ್.ನಜೀರ್ ಅಹ್ಮದ್ ತಿಳಿಸಿದರು.

'ಬಹುತೇಕ ಮೌಲ್ವಿಗಳು ಆರ್ಥಿಕ ಬಿಕ್ಕಟ್ಟು ಎದುರಿಸಿದ್ದಾರೆ. ಮಸೀದಿ ಟ್ರಸ್ಟ್‌ಗಳು ಅಲ್ಪಸ್ವಲ್ಪ ನೆರವಾಗಿವೆ. ಸರ್ಕಾರದಿಂದ ಸಹಾಯ ಸಿಗಲಿಲ್ಲ' ಎಂದು ಇನ್ನೊಬ್ಬ ಮೌಲ್ವಿ ವಾಜಿದ್ ಅಲಿ ತಿಳಿಸಿದರು.

ಅಂಕಿ-ಅಂಶಗಳು

34,218 ರಾಜ್ಯದ ಮುಜರಾಯಿ ಇಲಾಖೆಗೆ ಸೇರಿದ ಸಿ ಗುಂಪಿನ ದೇವಾಲಯಗಳು

139 ಬಿ ಗುಂಪಿನ ದೇವಸ್ಥಾನಗಳು

205 ಎ ಗುಂಪಿನ ದೇವಸ್ಥಾನಗಳು

'ಕೋವಿಡ್ ಸಮಯದಲ್ಲಿ ದೇವಸ್ಥಾನಗಳಿಗೆ ಭಕ್ತರಿಗೆ ಪ್ರವೇಶಕ್ಕೆ ಅವಕಾಶವಿಲ್ಲದೆ ನಮ್ಮ ಜೀವನೋಪಾಯಕ್ಕೆ ವರಮಾನವೇ ಇಲ್ಲದ ಸ್ಥಿತಿ ನಿರ್ಮಾಣವಾಯಿತು.

ಯಲ್ಲಪ್ಪ, ಪೂಜಾರಿ, ನಿಟ್ಟುವಳ್ಳಿ ದುರ್ಗಮ್ಮ ದೇವಸ್ಥಾನ, ದಾವಣಗೆರೆ

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **'Deccan Herald--Prajavani Relief Trust'** ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು **dept.fnc@printersmysore.co.in** ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

16 ಸಾವಿರ ಪೊಲೀಸ್ ಸಿಬ್ಬಂದಿ ನೇಮಕ

ಪ್ರಜಾವಾಣಿ ವಾರ್ತೆ



ಹುಬ್ಬಳ್ಳಿ: 'ಪೊಲೀಸ್ ಇಲಾಖೆಯನ್ನು ಬಲಪಡಿಸಲು 16 ಸಾವಿರ ಸಿಬ್ಬಂದಿ ನೇಮಕ ಮಾಡಿಕೊಳ್ಳಲು ಚಿಂತನೆ ನಡೆದಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ಸೋಮವಾರ ಪೊಲೀಸ್ ಇಲಾಖೆಯ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, 'ಪೊಲೀಸ್ ಇಲಾಖೆ ಸಶಕ್ತವಾಗಿದ್ದರೆ ರಾಜ್ಯದಲ್ಲಿ ಶಾಂತಿ- ಸುವ್ಯವಸ್ಥೆ ನೆಲೆಸುತ್ತದೆ. ಬೃಹತ್ ಸಂಖ್ಯೆಯಲ್ಲಿ ಕಾನ್‌ಸ್ಟೆಬಲ್ ಮತ್ತು ಇನ್‌ಸ್ಪೆಕ್ಟರ್‌ಗಳನ್ನು ನೇಮಕ ಮಾಡಿಕೊಳ್ಳುವುದರ ಜೊತೆಗೆ, ಮುಂದಿನ ಐದು ವರ್ಷಗಳಲ್ಲಿ ರಾಜ್ಯದಾದ್ಯಂತ 500 ಪೊಲೀಸ್ ಠಾಣೆ ಹಾಗೂ 10 ಸಾವಿರ ಸಿಬ್ಬಂದಿಗೆ ಪೊಲೀಸ್ ವಸತಿ ಗೃಹಗಳನ್ನು ನಿರ್ಮಿಸಲಾಗುವುದು' ಎಂದರು.

'ಪೊಲೀಸ್ ಸಮವಸ್ತ್ರ ಧರಿಸಿದ ಮೇಲೆ ಎಲ್ಲ ಹಂತದ ಸಿಬ್ಬಂದಿಯೂ ಜನರ ನಡುವೆ ಇದ್ದು ಕೆಲಸ ಮಾಡಬೇಕು. ಇನ್‌ಸ್ಪೆಕ್ಟರ್, ಡಿವೈಎಸ್‌ಪಿ ಹಂತದದ ಅಧಿಕಾರಿಗಳು ಕಚೇರಿಯಲ್ಲಿ ಕುಳಿತು ಆದೇಶ ಹೊರಡಿಸುವುದು ಸರಿಯಲ್ಲ. ಬಹುತೇಕರು ಹೀಗೆ ಮಾಡುತ್ತಿದ್ದು, ಅವರಿಗೆಲ್ಲ ಸೂಕ್ತ ತರಬೇತಿಯ ಅಗತ್ಯವಿದೆ. ಅದಕ್ಕಾಗಿ, ಅವರಿಗೆ ಅಂತರರಾಷ್ಟ್ರೀಯ ಮಟ್ಟದ ತರಬೇತಿ ನೀಡಲು ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್‌ಡಿಎ) ಜೊತೆ ಚರ್ಚಿಸಲಾಗಿದೆ' ಎಂದರು.

'ಅಪರಾಧ ಪ್ರಕರಣಗಳ ತ್ವರಿತ ಪತ್ತೆ ಮತ್ತು ತನಿಖೆಯ ವೇಗ ಹೆಚ್ಚಿಸಲು ಕಲಬುರ್ಗಿ, ಹುಬ್ಬಳ್ಳಿ- ಧಾರವಾಡ, ಮೈಸೂರು ಸೇರಿ ಆರು ನಗರಗಳಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯ ಸ್ಥಾಪಿಸಲಾಗುವುದು. ಈ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಜೊತೆ ಚರ್ಚಿಸಲಾಗಿದೆ' ಎಂದು ತಿಳಿಸಿದರು.

ಗೃಹ ಸಚಿವ ಆರಗ ಜ್ಞಾನೇಂದ್ರ, 'ಅಪರಾಧ ಪಕರಣಗಳನ್ನು ತ್ವರಿತವಾಗಿ ಭೇದಿಸಲು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ 250 ಸಿಬ್ಬಂದಿ ನೇಮಿಸಿಕೊಳ್ಳಲಾಗುವುದು. ಆನ್‌ಲೈನ್ ಲಾಟರಿ ಹಾಗೂ ಜೂಜಿಗೆ ಕಡಿವಾಣ ಹಾಕಲು ಶೀಘ್ರ ಕಾಯ್ದೆ ಜಾರಿಯಾಗಲಿದೆ' ಎಂದರು.

ಕಲಬುರ್ಗಿ, ಕೊಡಗಿನಲ್ಲಿ ಧಾರಾಕಾರ ಮಳೆ

ಮೈಸೂರು/ಮಡಿಕೇರಿ: ಕೊಡಗು ಜಿಲ್ಲೆಯ ಮಡಿಕೇರಿ, ಕಾಲೂರು, ಮದೆನಾಡು, ಚೇರಂಬಾಣೆ, ಅಪ್ಪಂಗಳ, ತಲಕಾವೇರಿ ಹಾಗೂ ಭಾಗಮಂಡಲ ವ್ಯಾಪ್ತಿಯಲ್ಲಿ ಸೋಮವಾರ ಮಧ್ಯಾಹ್ನ ಧಾರಾಕಾರ ಮಳೆ ಸುರಿಯಿತು.

ಮೈಸೂರು ನಗರ ಹಾಗೂ ಸುತ್ತ ಮುತ್ತ ಮಧ್ಯಾಹ್ನ ಬಿರುಸಿನ ಮಳೆಯಾಯಿತು. ಕರಾವಳಿ ಭಾಗದಲ್ಲೂ ಮಳೆಯಾಯಿತು. ಕಲಬುರ್ಗಿ ನಗರ ಸೇರಿದಂತೆ ಚಿಂಚೋಳಿ, ಸೇಡಂ ಹಾಗೂ ಆಳಂದ ತಾಲ್ಲೂಕಿನ ಹಲವೆಡೆ ಧಾರಾಕಾರ ಮಳೆ ಸುರಿಯಿತು.

ಬೆಳಿಗ್ಗೆಯಿಂದ ಜಿಲ್ಲೆಯಾದ್ಯಂತ ಸೆಖೆ ಇತ್ತು. ಕಲಬುರ್ಗಿಯಲ್ಲಿ ಸಂಜೆ ಶುರುವಾದ ಮಳೆ ರಾತ್ರಿಯವರೆಗೂ ಮುಂದುವರಿಯಿತು. ಇದೇ 30ರ ವರೆಗೆ ಕಲಬುರ್ಗಿ ಜಿಲ್ಲೆಯಲ್ಲಿ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	113.35	4,535	7,766
ಹಾರಂಗಿ	2,859	2,857.83	470	1,450
ಕಬಿನಿ	2284.00	2,281.3	1,200	2,500
ಹೇಮಾವತಿ	2,922	2,914.50	1,959	5,247
ಲಿಂಗನಮಕ್ಕಿ	1,819	1,815.80	2501	-
ಸೂಪಾ (ಮೀ)	564	556.83	1,235	5,242
ಮಾಣಿ	594	587.70	788	-
ತುಂಗಭದ್ರಾ	1,633	1,632.84	9,555	10,474
ಮಲಪ್ರಭಾ	2079.5	2,079.00	1,694	1,694
ಘಟಪ್ರಭಾ	2175	2,175.00	828	828
ಭದ್ರಾ	186	185	2,456	3,370
ಆಲಮಟ್ಟಿ (ಮೀ)	519.6	519.60	12,015	12,015
ನಾರಾಯಣಪುರ (ಮೀ)	492.25	492.23	10,865	12,300

* ನೆಲಮಟ್ಟದಿಂದ

'ತಾಲಿಬಾನ್ ಭಾರತದಲ್ಲಿದ್ದಿದ್ದರೆ ಸಿದ್ದರಾಮಯ್ಯ ಬದುಕಲು ಸಾಧ್ಯವಿತ್ತೇ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಂದು ವೇಳೆ ತಾಲಿಬಾನ್ ಭಾರತದಲ್ಲಿ ಇದ್ದಿದ್ದರೆ ಸಿದ್ದರಾಮಯ್ಯ ಬದುಕಲು ಸಾಧ್ಯವಿತ್ತೇ? ಅಂತಹ (ಅಫ್ಗನ್) ಸ್ಥಿತಿ ಇಲ್ಲಿ ಇದ್ದರೆ ಪಂಚೆ ಮಾತ್ರ ನೇತಾಡುತ್ತಿರಲಿಲ್ಲ. ಅವರೂ ನೇತಾಡುವ ಸ್ಥಿತಿ ಇರುತ್ತಿತ್ತು' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಆರ್‌ಎಸ್‌ಎಸ್ ಅನ್ನು ತಾಲಿಬಾನ್ ಎಂದು ವ್ಯಾಖ್ಯಾನಿಸಿರುವುದನ್ನು ಸುದ್ದಿಗೋಷ್ಠಿಯಲ್ಲಿ ತರಾಟೆಗೆ ತೆಗೆದುಕೊಂಡ ರವಿ, 'ತಾಲಿಬಾನ್ ಏನು, ಬಿಜೆಪಿ ಏನು, ಆರ್‌ಎಸ್‌ಎಸ್ ಏನು ಎಂಬುದನ್ನು ಅರ್ಥ ಮಾಡಿಕೊಳ್ಳದಷ್ಟು ಅವರಲ್ಲಿ ಏನಾದರೂ ವ್ಯತ್ಯಾಸ ಆಗಿದೆಯೇ' ಎಂದು ಪ್ರಶ್ನಿಸಿದರು.

'ಸಿದ್ದರಾಮಯ್ಯ ಮತ್ತು ಕಾಂಗ್ರೆಸ್‌ನವರು ಎಸ್‌ಡಿಪಿಐ, ಪಿಎಫ್‌ಐ, ಎಂಐಎಂ ಇವರೆಲ್ಲ ಯಾರಿಗೆ ನೆಂಟರು? ನಮಗಂತೂ ಅಲ್ಲ. ನಾವು ಯಾವತ್ತೂ ಮತಕ್ಕಾಗಿ ರಾಜಕಾರಣ ಮಾಡಿಲ್ಲ. ತುಕ್ಡೇ ಗ್ಯಾಂಗ್ ಜೊತೆ ಯಾರು ರಾಜಕಾರಣ ಮಾಡುತ್ತಿದ್ದಾರೆ' ಎಂದು ರವಿ ಕಿಡಿಕಾರಿದರು.

'ಸುಳ್ಳು ಮತ್ತು ಸಿದ್ದರಾಮಯ್ಯ ಒಂದೇ ನಾಣ್ಯದ ಎರಡು ಮುಖಗಳು. ಅವರು ಸುಳ್ಳುರಾಮಯ್ಯ ಆಗಿದ್ದಾರೆ. ವಯಸ್ಸಾದ ಮೇಲೆ ಕಣ್ಣಿನ ಪೊರೆ ಜಾಸ್ತಿ ಆಗುತ್ತಂತೆ. ಅವರಿಗೆ ಯಾವ್ಯಾವ ಪೊರೆ ಬೆಳೆದಿದೆಯೋ ಗೊತ್ತಿಲ್ಲ. ಅದೇ ಕಾರಣಕ್ಕೆ ತಾಲಿಬಾನ್ ಮತ್ತು ಆರ್‌ಎಸ್‌ಎಸ್ ಒಂದೇ ತರ ಕಾಣುತ್ತಿದೆ. ಪೊರೆ ಸರಿಸಿದರೆ ತಾಲಿಬಾನ್ ಏನೆಂಬುದು ಗೊತ್ತಾಗುತ್ತದೆ' ಎಂದರು.

'ಬಿಜೆಪಿ- ಆರ್‌ಎಸ್‌ಎಸ್ ಇರುವ ಕಾರಣಕ್ಕೆ ದೇಶ ಸ್ವತಂತ್ರವಾಗಿ ಉಳಿದಿದೆ. ಆರ್‌ಎಸ್‌ಎಸ್ ಸಂಸ್ಥಾಪಕ ಡಾ.ಕೇಶವ ಬಲಿರಾಮ್ ಹೆಡಗೇವಾರ್ ಅವರು, ಕಾಂಗ್ರೆಸ್‌ನ ಮಹಾರಾಷ್ಟ್ರ ಘಟಕದ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಕಾಂಗ್ರೆಸ್‌ನವರು ಆರ್‌ಎಸ್‌ಎಸ್ ಟೀಕಿಸುವ ಮೊದಲು ಅವರದೇ ಪಕ್ಷದ ಚರಿತ್ರೆಯನ್ನು ಅಭ್ಯಸಿಸಲಿ. ಜಂಗಲ್ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವ ಮೊದಲು ಹೆಡಗೇವಾರ್ ಅವರು ತಮ್ಮ ಸರಸಂಘ ಚಾಲಕ ಸ್ಥಾನವನ್ನು ಬಿಟ್ಟು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು' ಎಂದು ರವಿ ಹೇಳಿದರು.

ಕಾಂಗ್ರೆಸ್ ಗುಲಾಮಗಿರಿ ಪಾರ್ಟಿ: ಸಿ.ಎಂ ತಿರುಗೇಟು

ಹುಬ್ಬಳ್ಳಿ: 'ಕಾಂಗ್ರೆಸ್ ಗುಲಾಮಗಿರಿ ಪಾರ್ಟಿಯಾಗಿದ್ದು, ಗುಲಾಮಗಿರಿಯಿಂದ ಅವರು ಹೊರಬರುವುದಿಲ್ಲ. ನಮ್ಮ ದೇಶಭಕ್ತಿ ಅವರಿಗೆ ಹಾಗೇನೆ ಕಾಣುತ್ತದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟೀಕಿಸಿದರು.

'ಬಿಜೆಪಿ ತಾಲಿಬಾನ್ ಇದ್ದಂತೆ' ಎಂಬ ಸಿದ್ದರಾಮಯ್ಯ ಹೇಳಿಕೆ ಕುರಿತ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಸಿದ್ದರಾಮಯ್ಯ ಅವರು ಹತಾಶರಾಗಿ ಅಸಂಬದ್ಧ ಹೇಳಿಕೆ ನೀಡುತ್ತಿದ್ದಾರೆ. ಅವರ ಸ್ಥಾನಕ್ಕೆ ಗೌರವ ತರುವುದಿಲ್ಲ' ಎಂದು ತಿರುಗೇಟು ನೀಡಿದರು.

'ಮೆಕಾಲೆ ಶಿಕ್ಷಣ ಪದ್ಧತಿಯಿಂದಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಿಂಚುವ ಅವಕಾಶದಿಂದ ವಂಚಿತವಾಗಿದೆ. ಪ್ರಧಾನಿ ಮೋದಿ ಅವರು ಹೊಸ ಶಿಕ್ಷಣ ನೀತಿ ಮೂಲಕ ಜ್ಞಾನಾಧಾರಿತ ಭಾರತ ಕಟ್ಟಲು ಮುಂದಾಗಿದ್ದಾರೆ' ಎಂದರು.

ರೈತರದ್ದಲ್ಲ ಈ ಹೋರಾಟ: ಶಾಸಕ ಯತ್ನಾಳ

ಬಾಗಲಕೋಟೆ: ಭಾರತ್ ಬಂದ್‌ಗೆ ಕರೆ ನೀಡಿ ನಡೆಸುತ್ತಿರುವ ಈ ಹೋರಾಟ ನಿಜವಾದ ರೈತರದ್ದಲ್ಲ. ಇದು ದೇಶದ್ರೋಹಿಗಳ ಹೋರಾಟ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಜಮಖಂಡಿಯಲ್ಲಿ ಸೋಮವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ತಮಗೆ ಮುಖ್ಯಮಂತ್ರಿ ಹಾಗೂ ಮಂತ್ರಿ ಸ್ಥಾನ ಸಿಗದಿರುವ ಬಗ್ಗೆ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ನೋಡ್ರೀ ಎಷ್ಟೋ ಮಂದಿ ಯೋಗ್ಯರು ಸೂಕ್ತ ಸ್ಥಾನಮಾನ ಸಿಗದೇ ಹಂಗೇ ಸತ್ತಿದ್ದಾರೆ. ಅವರಲ್ಲಿ ನಾನು ಒಬ್ಬ ಅಂತಾ ತಿಳಿದುಕೊಳ್ಳಿರಿ' ಎಂದರು.



ಕೃಷಿ ಕಾಯ್ದೆಗೆ ವಿರೋಧ...

ಕೃಷಿ ಕಾಯ್ದೆಗಳನ್ನು ವಿರೋಧಿಸಿ ವಿವಿಧ ಸಂಘಟನೆಗಳು ಸೋಮವಾರ ಕರೆ ನೀಡಿದ್ದ ಭಾರತ್ ಬಂದ್ ಅಂಗವಾಗಿ ಬೆಂಗಳೂರಿನ ಪುರಭವನ ಬಳಿ ಪ್ರತಿಭಟನೆ ನಡೆಸಲಾಯಿತು

ಪ್ರಜಾವಾಣಿ ಚಿತ್ರ

ಹನೀಫ್, ರಶ್ಮಿ ಸೇರಿ 18 ಮಂದಿಗೆ ಪತ್ರಕರ್ತರ ಸಂಘದ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯುಜೆ) 2019ನೇ ಸಾಲಿನ ವಾರ್ಷಿಕ ದತ್ತಿ ನಿಧಿ ಪ್ರಶಸ್ತಿಗೆ 'ಪ್ರಜಾವಾಣಿ' ಸಹ ಸಂಪಾದಕ ಬಿ.ಎಂ. ಹನೀಫ್ ಮತ್ತು ಹುಬ್ಬಳ್ಳಿ ಬ್ಯೂರೋ ಮುಖ್ಯಸ್ಥೆ ರಶ್ಮಿ ಎಸ್. ಸೇರಿದಂತೆ 14 ಜನರು ಹಾಗೂ ವಿಶೇಷ ಪ್ರಶಸ್ತಿಗೆ ನಾಲ್ವರು ಭಾಜನರಾಗಿದ್ದಾರೆ.

ಎಚ್.ಎಸ್. ದೊರೆಸ್ವಾಮಿ ಪ್ರಶಸ್ತಿಗೆ ಬಿ.ಎಂ. ಹನೀಫ್, ಪಾಟೀಲ ಪುಟ್ಟಪ್ಪ ಪ್ರಶಸ್ತಿಗೆ ಎಸ್.ಕೆ. ಶೇಷಚಂದ್ರಿಕ, ಎಸ್. ವಿ. ಜಯಶೀಲರಾವ್ ಪ್ರಶಸ್ತಿಗೆ ಅ.ಚ. ಶಿವಣ್ಣ, ಡಿವಿಜಿ ಪ್ರಶಸ್ತಿಗೆ ಕನ್ನಡ ಪ್ರಭ ಮತ್ತು ಸುವರ್ಣ ನ್ಯೂಸ್ ಸಂಪಾದಕ ರವಿ ಹೆಗಡೆ ಮತ್ತು ಯಶೋಧಮ್ಮ ಜಿ. ನಾರಾಯಣ ಪ್ರಶಸ್ತಿಗೆ ರಶ್ಮಿ ಎಸ್. ಆಯ್ಕೆಯಾಗಿದ್ದಾರೆ.

ಗೊಮ್ಮಟ ಮಾಧ್ಯಮ ಪ್ರಶಸ್ತಿಗೆ ಗೊಮ್ಮಟವಾಣಿ ಸಂಪಾದಕ ಎಸ್. ಎನ್. ಅಶೋಕ ಕುಮಾರ್, ಪಿ.ಆರ್. ರಾಮಯ್ಯ ಪ್ರಶಸ್ತಿಗೆ ಕುಂದಪ್ರಭದ ಸಂಪಾದಕ ಯು.ಎಸ್. ಶೆಣೈ, ಗರುಡನಗಿರಿ ನಾಗರಾಜ್ ಪ್ರಶಸ್ತಿಗೆ ಮಲೆನಾಡ ಮಂದಾರ ಸಂಪಾದಕ ಕೆ.ಆರ್. ಮಂಜುನಾಥ್ ಅವರನ್ನು ಆಯ್ಕೆ ಮಾಡಲಾಗಿದೆ.

ಎಚ್.ಕೆ. ವೀರಣ್ಣಗೌಡ ಪ್ರಶಸ್ತಿಗೆ ಕೋಡಿ ಹೊಸಳ್ಳಿ ರಾಮಣ್ಣ, ಕಿಡಿ ಶೇಷಪ್ಪ ಪ್ರಶಸ್ತಿಗೆ ಹೊಸಪೇಟೆ ಟೈಮ್ಸ್ ಸಂಪಾದಕಿ ಕೆ.ಎಂ. ರೇಖಾ, ಪಿ. ರಾಮಯ್ಯ ಪ್ರಶಸ್ತಿಗೆ ಶಿಡ್ಲು ಪತ್ರಿಕೆ ಸಂಪಾದಕ ರೇವಣ್ಣ ಸಿದ್ದಯ್ಯ ಮಹಾನುಭವಿಮಠ, ಎಂ. ನಾಗೇಂದ್ರರಾವ್ ಪ್ರಶಸ್ತಿಗೆ ವಿಜಯವಾಣಿ ಶಿವಮೊಗ್ಗ ಬ್ಯೂರೋ ಮುಖ್ಯಸ್ಥ ಎನ್.ಡಿ.ಶಾಂತಕುಮಾರ್, ಮಿಂಚು ಶ್ರೀನಿವಾಸ್ ಪ್ರಶಸ್ತಿಗೆ ವಿಜಯ ಕರ್ನಾಟಕದ ರಾಮಸ್ವಾಮಿ ಹುಲಕೋಡು, ಎಚ್.ಎಸ್. ರಂಗಸ್ವಾಮಿ ಪ್ರಶಸ್ತಿಗೆ 'ಸಿಟಿ ಹೈಲೈಟ್ಸ್' ಬೆಂಗಳೂರು ಸಂಪಾದಕ ಪಿ. ಸುನೀಲ್ ಕುಮಾರ್ ಆಯ್ಕೆಯಾಗಿದ್ದಾರೆ.

ವಿಶೇಷ ಪ್ರಶಸ್ತಿ: ಕನ್ನಡಪ್ರಭದ ರಾಯಚೂರು ವರದಿಗಾರ ಪ್ರಹ್ಲಾದ ಗುಡಿ, ಕೋಲಾರದ ಪತ್ರಕರ್ತ ಮುನಿ ವೆಂಕಟೇಗೌಡ, ವಿಜಯ ಕರ್ನಾಟಕದ ತೀರ್ಥಹಳ್ಳಿಯ ಎಂ.ಕೆ. ರಾಘವೇಂದ್ರ ಮೇಗರವಳ್ಳಿ, ವಾರ್ತಾ ಭಾರತಿಯ ಬೆಂಗಳೂರಿನ ಪ್ರಕಾಶ್ ರಾಮಜೋಗಿಹಳ್ಳಿ ಅವರು ಸಂಘದ ವಿಶೇಷ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಅಕ್ಟೋಬರ್ 3 ರಂದು ಸಂಜೆ 5ಕ್ಕೆ ಶಿವಮೊಗ್ಗದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕೆಯುಡಬ್ಲ್ಯುಜೆ ಅಧ್ಯಕ್ಷ ಶಿವಾನಂದ ತಗಡೂರು ತಿಳಿಸಿದ್ದಾರೆ.

ಬೊಮ್ಮಾಯಿಯಿಂದ ಶೆಟ್ಟರ್ ಅಂತರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹುಬ್ಬಳ್ಳಿಯಲ್ಲಿ ಸೋಮವಾರ ಎರಡು ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದರೂ, ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದ ಶಾಸಕ ಜಗದೀಶ ಶೆಟ್ಟರ್ ಅವರು ಕಾರ್ಯಕ್ರಮಗಳಿಂದ ದೂರ ಉಳಿದಿರುವುದು ಚರ್ಚೆಗೆ ಗ್ರಾಸವಾಗಿದೆ.

ಬಾಣತಿಕಟ್ಟೆಯಲ್ಲಿ ನಡೆದ ವಿವಿಧ ಠಾಣೆಗಳ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ಕಾರ್ಯಕ್ರಮದ ಆಹ್ವಾನಿತರಲ್ಲಿ ಶಾಸಕ ಜಗದೀಶ ಶೆಟ್ಟರ್ ಅವರ ಹೆಸರಿತ್ತು. ಆದರೂ, ಅವರು ಧಾರವಾಡದಲ್ಲಿ ನಡೆದ ಜಿಲ್ಲಾ ಪಂಚಾಯ್ತಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಳ್ಳಲು ಧಾರವಾಡಕ್ಕೆ ತೆರಳಿದ್ದರು.

ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿದ್ದ ಸಚಿವ ಶಂಕರಪಾಟೀಲ ಮುನೇನಕೊಪ್ಪ ಅವರು ಮುಖ್ಯಮಂತ್ರಿ ಬೊಮ್ಮಾಯಿ ಅವರ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ನಂತರ ಸಭೆಗೆ ತೆರಳಿದ್ದರು.

'ಸ್ವಾಭಿಮಾನ ಬಿಟ್ಟು ಬೊಮ್ಮಾಯಿ ಅವರ ಸಚಿವ ಸಂಪುಟದಲ್ಲಿ ಸಚಿವನಾಗುವುದಿಲ್ಲ' ಎಂದು ಶೆಟ್ಟರ್ ಹೇಳಿದ್ದನ್ನೂ ಸ್ಮರಿಸಿಕೊಳ್ಳಬಹುದು.

'ಬಿಜೆಪಿ ಅಂಬಾನಿ, ಅದಾನಿ ಪರ ಇಲ್ಲ'

ಬೆಂಗಳೂರು: 'ನಮ್ಮ ಸರ್ಕಾರ ಮತ್ತು ಯೋಜನೆಗಳು ಅದಾನಿ, ಅಂಬಾನಿ ಪರ ಇಲ್ಲ. ರೈತರು, ಕೃಷಿ ಕಾರ್ಮಿಕರು ಮತ್ತು ಬಡವರ ಪರವಾದ ಯೋಜನೆಗಳನ್ನೇ ಹಮ್ಮಿಕೊಂಡಿದ್ದೇವೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದ್ದಾರೆ.

'ಅಂಬಾನಿ, ಅದಾನಿ ನಿನ್ನೆ-ಮೊನ್ನೆ ಹುಟ್ಟಿದವರೇ? ಮೋದಿಯವರು ಪ್ರಧಾನಿ ಆದ ಮೇಲೆ ಶ್ರೀಮಂತರಾದರೇ, ಕಾಂಗ್ರೆಸ್ ಕಾಲದಲ್ಲೇ ಹುಟ್ಟಿ, ಶ್ರೀಮಂತರಾದವರಲ್ಲವೇ' ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

'ಕೃಷಿ ಮಸೂದೆ ನೆಪದಲ್ಲಿ ಈಗ ನಡೆಯುತ್ತಿರುವ ಹೋರಾಟ ರಾಜಕೀಯ ಪ್ರೇರಿತ. ಪಟ್ಟಭದ್ರ ಹಿತಾಸಕ್ತಿಗಳ, ಅರಾಜಕತೆ ಸೃಷ್ಟಿಸುವ ಬಿಜೆಪಿ ವಿರೋಧಿಗಳ ಷಡ್ಯಂತ್ರದ ಭಾಗ. 19 ಕ್ಕೂ ಹೆಚ್ಚು ರಾಜಕೀಯ ಪಕ್ಷಗಳ, 100 ಕ್ಕೂ ಹೆಚ್ಚು ಸಂಘಟನೆಗಳು ಬಂದ್‌ಗೆ ಕರೆ ನೀಡಿದ್ದವು. ನಿರೀಕ್ಷಿತ ಪ್ರಮಾಣದಲ್ಲಿ ರೈತರ ಬೆಂಬಲ ಸಿಕ್ಕಿಲ್ಲ. ಪ್ರಧಾನಿ ಮೋದಿಯವರ ಕೃಷಿ ಸುಧಾರಣಾ ಕ್ರಮಕ್ಕೆ ರೈತರು ಬೆಂಬಲವಾಗಿ ನಿಂತಿದ್ದಾರೆ. ಬ್ರಿಟಿಷ್ ಕಾಯ್ದೆಗಳಿಂದ ರೈತರಿಗೆ ನಮ್ಮ ಸರ್ಕಾರ ಬಿಡುಗಡೆ ನೀಡುತ್ತಿದೆ' ಎಂದರು.

ಬಿಎಸ್‌ವೈ ಪ್ರವಾಸ ಮತ್ತಷ್ಟು ವಿಳಂಬ

ಬೆಂಗಳೂರು: ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಅವರ ರಾಜ್ಯ ಪ್ರವಾಸಕ್ಕೆ ಇನ್ನೂ ಸಮಯ ನಿಗದಿಯಾಗಿಲ್ಲ. ಅವರು ಇನ್ನೂ ಒಂದು ತಿಂಗಳಿಗೂ ಹೆಚ್ಚು ಸಮಯ ಕಾಯಬೇಕಾಗಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರು 'ಪ್ರಜಾವಾಣಿ'ಗೆ ನೀಡಿರುವ ಮಾಹಿತಿಯ ಪ್ರಕಾರ, 'ದಸರಾ ಕಳೆದ ಬಳಿಕವಷ್ಟೇ ಬಿ.ಎಸ್.ಯಡಿಯೂರಪ್ಪ ಪ್ರವಾಸ ಕಾರ್ಯಕ್ರಮ ನಡೆಸಲು ಉದ್ದೇಶಿಸಲಾಗಿದೆ. ನಾನೂ ಅದರಲ್ಲಿ ಭಾಗವಹಿಸುತ್ತೇನೆ. ಪ್ರವಾಸದ ರೂಪುರೇಷೆ ಸಿದ್ಧವಾಗಬೇಕಿದೆ' ಎಂದು ಹೇಳಿದರು.

ಪಕ್ಷದ ಸಂಘಟನೆಗಾಗಿ ರಾಜ್ಯ ಪ್ರವಾಸ ಮಾಡುವುದಾಗಿ ಮುಖ್ಯಮಂತ್ರಿ ಹುದ್ದೆಯಿಂದ ನಿರ್ಗಮಿಸಿದ ಸಂದರ್ಭದಲ್ಲಿ ಯಡಿಯೂರಪ್ಪ ಪ್ರಕಟಿಸಿದ್ದೂ ಅಲ್ಲದೆ ಅದಕ್ಕಾಗಿ ಸಿದ್ಧತೆ ನಡೆಸಿದ್ದರು. ಗೌರಿ- ಗಣೇಶ ಹಬ್ಬ ಮುಗಿದ ತಕ್ಷಣವೇ ಪ್ರವಾಸ ಆರಂಭವಾಗಬೇಕಿತ್ತು. ಆದರೆ, ಪಕ್ಷದ ಅನುಮತಿ ಸಿಗಲಿಲ್ಲ. ಏಕಾಂಗಿ ರಾಜ್ಯ ಪ್ರವಾಸದ ಬದಲಿಗೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರ ಜತೆ ಸೇರಿ ಪ್ರವಾಸ ನಡೆಸಬೇಕು ಎಂಬ ಸೂಚನೆ ನೀಡಿತ್ತು. ಅದಕ್ಕೆ ಯಡಿಯೂರಪ್ಪ ಅವರೂ ಒಪ್ಪಿಗೆ ನೀಡಿದ್ದರು.

ರಾಜ್ಯದಾದ್ಯಂತ ಅನ್ನದಾತರ ಪ್ರತಿಭಟನೆ

ಒಂದನೇ ಪುಟದಿಂದ...

ರಾಜ್ಯದ ಎಲ್ಲ ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ಬೃಹತ್ ಪ್ರತಿಭಟನೆಗಳು ನಡೆದವು. ಬೆಂಗಳೂರು ನಗರದ ಹಲವು ಕಡೆಗಳಲ್ಲಿ ಬಂದ್ ಬೆಂಬಲಿಸಿ ಪ್ರತಿಭಟನೆಗಳು ನಡೆದಿದ್ದು, ಕೆಲಕಾಲ ಸಂಚಾರ ದಟ್ಟಣೆಯೂ ಸೃಷ್ಟಿಯಾಗಿತ್ತು.

ಹೋಬಳಿ ಕೇಂದ್ರಗಳು, ನಗರ, ಪಟ್ಟಣಗಳು, ಗ್ರಾಮಗಳಲ್ಲೂ ವ್ಯಾಪಕ ಪ್ರತಿಭಟನೆಗಳನ್ನು ನಡೆಸಲಾಯಿತು. ಹಲವೆಡೆ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ವ್ಯಾಪಾರ, ವಹಿವಾಟು ಸ್ಥಗಿತಗೊಳಿಸಿ ಹೋರಾಟ ನಡೆಸಲಾಯಿತು.

ಶೃಂಗೇರಿ, ಗುಂಡ್ಲುಪೇಟೆ ಸೇರಿದಂತೆ ಹಲವು ತಾಲ್ಲೂಕುಗಳಲ್ಲಿ ರೈತ ಹೋರಾಟಕ್ಕೆ ಉತ್ತಮ ಪ್ರತಿಕ್ರಿಯೆ ಕಂಡುಬಂತು. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲೂ ಹಲವೆಡೆ ಪ್ರತಿಭಟನೆಗಳು ನಡೆದಿವೆ.

ಚಿಕ್ಕಮಗಳೂರು, ಮೈಸೂರು, ಕಲಬುರ್ಗಿ ಸೇರಿದಂತೆ ಹಲವು ಜಿಲ್ಲಾ ಕೇಂದ್ರಗಳಲ್ಲಿ ಬಸ್ ನಿಲ್ದಾಣಗಳ ಎದುರು ಪ್ರತಿಭಟನೆ ನಡೆಸಿದ ರೈತರು, ಬೆಳಿಗ್ಗೆ ಕೆಲಕಾಲ ಬಸ್‌ಗಳ ಸಂಚಾರಕ್ಕೆ ಅಡ್ಡಿಪಡಿಸಿದರು. ಕಲಬುರ್ಗಿ ನಗರದಲ್ಲಿ ಐದು ಗಂಟೆಗಳ ಕಾಲ ಬಸ್ ಸಂಚಾರ ಸ್ಥಗಿತವಾಗಿತ್ತು. ಮೈಸೂರಿನಲ್ಲೂ ಒಂದು ಗಂಟೆಗೂ ಹೆಚ್ಚು ಸಮಯ ಬಸ್ ನಿಲ್ದಾಣ ಬಂದ್ ಆಗಿತ್ತು.

ಮಂಡ್ಯ, ರಾಮನಗರ, ಬಾಗಲಕೋಟೆ, ಹಾವೇರಿ, ಶಿಗ್ಗಾವಿ, ಬೆಳಗಾವಿ, ಚೆನ್ನಮ್ಮನ ಕಿತ್ತೂರು, ವಿಜಯಪುರ, ಹೊನ್ನಾವರ ಮತ್ತಿತರ ಕಡೆಗಳಲ್ಲಿ ಹೆದ್ದಾರಿ ಮೇಲೆ ಕುಳಿತು ರೈತರು ಪ್ರತಿಭಟನೆ ನಡೆಸಿದರು. ಇದರಿಂದ ಹಲವು ಕಡೆಗಳಲ್ಲಿ ವಾಹನ ಸಂಚಾರ ಅಸ್ತವ್ಯಸ್ತವಾಯಿತು.

ಆತ್ಮಹತ್ಯೆಗೆ ಯತ್ನ: ಹಾವೇರಿಯ ಹೊಸಮನಿ ಸಿದ್ದಪ್ಪ ವೃತ್ತದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರಿಬ್ಬರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದರು. ಹೊಸಮನಿ ಸಿದ್ದಪ್ಪ ಪ್ರತಿಮೆ ಎದುರು ಹಗ್ಗ ಹಿಡಿದು ನೇಣು ಹಾಕಿಕೊಳ್ಳಲು ಮುಂದಾಗುತ್ತಿದ್ದಂತೆ ಪೊಲೀಸರು ಅವರನ್ನು ವಶಕ್ಕೆ ಪಡೆದು ಕರೆದೊಯ್ದರು.

ಬಳ್ಳಾರಿಯಲ್ಲಿ ಕೃಷಿ ಸಂಬಂಧಿ ಕಾಯ್ದೆಗಳ ಪ್ರತಿಗಳಿಗೆ ಬೆಂಕಿ ಹಚ್ಚಿದ ರೈತರು, ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು. ಹೊಸಪೇಟೆ ನಗರದಲ್ಲಿ ರೈತ ಸಂಘಟನೆಗಳ ಕಾರ್ಯಕರ್ತರು ಅಂಗಡಿ, ಮುಂಗಟ್ಟುಗಳನ್ನು ಮುಚ್ಚಲು ಯತ್ನಿಸಿದ್ದು ವಾಗ್ವಾದಕ್ಕೆ ಕಾರಣವಾಯಿತು. ಕೊಡಗು ಜಿಲ್ಲೆಯಲ್ಲೂ ಪ್ರತಿಭಟನಾಕಾರರು ಮತ್ತು ವ್ಯಾಪಾರಿಗಳ ನಡುವೆ ಮಾತಿನ ಚಕಮಕಿ ನಡೆಯಿತು.

ಈರುಳ್ಳಿ ಹಾರ: ಚಿತ್ರದುರ್ಗದಲ್ಲಿ ಪ್ರತಿಭಟನಾಕಾರರು ಪ್ರಧಾನಿ ನರೇಂದ್ರ ಮೋದಿ ಭಾವಚಿತ್ರಕ್ಕೆ ಈರುಳ್ಳಿ ಹಾರ ಹಾಕಿ ಪ್ರತಿಭಟನೆ ನಡೆಸಿದರು. ಹೊಸದುರ್ಗದಲ್ಲಿ ಈರುಳ್ಳಿಯನ್ನು ರಸ್ತೆಗೆ ಸುರಿದು ಆಕ್ರೋಶ ಹೊರಹಾಕಿದರು.


ಕೋಲಾರ ಜಿಲ್ಲೆಯ ಬಂಗಾರಪೇಟೆಯಲ್ಲಿ ರೈತರ ಸಂಘ ಮತ್ತು ಎಡ ಪಕ್ಷಗಳ ಕಾರ್ಯಕರ್ತರು ರೈಲ್ವೆ ನಿಲ್ದಾಣಕ್ಕೆ ನುಗ್ಗಲು ಯತ್ನಿಸಿದರು. ಯಾದಗಿರಿಯಲ್ಲಿ ಪ್ರತಿಭಟನೆಗೆ ವ್ಯಾಪಕ ಬೆಂಬಲ ವ್ಯಕ್ತವಾಯಿತು.

ಸಾವಿರಾರು ರೈತರ ಬಂಧನ, ಬಿಡುಗಡೆ

ಬೆಂಗಳೂರು ನಗರ ಸೇರಿದಂತೆ ರಾಜ್ಯದ ಹಲವು ಕಡೆಗಳಲ್ಲಿ ಪ್ರತಿಭಟನಾನಿರತ ರೈತರು, ರೈತ ಸಂಘಟನೆಗಳ ಮುಖಂಡರನ್ನು ಪೊಲೀಸರು ಬಂಧಿಸಿದರು. ಕೆಲಕಾಲ ಅವರನ್ನು ವಶದಲ್ಲಿರಿಸಿಕೊಂಡು ಬಿಡುಗಡೆ ಮಾಡಲಾಯಿತು. ಕೆಲವು ಕಡೆಗಳಲ್ಲಿ ಪ್ರತಿಭಟನಾ ಸ್ಥಳಕ್ಕೆ ಬರುವ ಮುನ್ನವೇ ವಶಕ್ಕೆ ಪಡೆದು ಕರೆದೊಯ್ಯಲಾಯಿತು.



ಕೆಮ್ಮಿಗೆ ಸಾವಿರ ಕಾರಣ!



ಡಾ. ರಾಮಪ್ರಸಾದ್ ಕೋಣನೂರ್

ಮನುಷ್ಯನಿಗೆ ಅತಿ ಹೆಚ್ಚು ಕಾಡುವ ಕಾಯಿಲೆ ನೆಗಡಿ ಮತ್ತು ಕೆಮ್ಮು. ಕೆಮ್ಮಿಗೆ ಕಾರಣಗಳ ಪಟ್ಟಿಯೂ ದೊಡ್ಡದು. ಇದರಲ್ಲಿ ಕೆಲವನ್ನು ನೋಡೋಣ.

ಸಾಮಾನ್ಯವಾಗಿ ನೆಗಡಿ ಅಥವಾ ಕೆಮ್ಮು ಕಾಣಿಸಿಕೊಂಡಾಗ ನಾವು ಮೊದಲು ಮಾಡುವುದು ಮನೆಮದ್ದು; ಇಲ್ಲವೇ ಮೆಡಿಕಲ್ ಶಾಪ್‌ಗೆ ಹೋಗಿ ನಾವೇ ಕೇಳಿ ಪಡೆಯುವ 'antihistamine' ಮಾತ್ರೆಗಳು. ಕೆಮ್ಮು ಕಡಿಮೆ ಆಗದಿದ್ದಾಗ ವೈದ್ಯರ ಮೊರೆ ಹೋಗುತ್ತೇವೆ. ವೈದ್ಯರು ತಮ್ಮ ವೃತ್ತಿಜೀವನದಲ್ಲಿ ಅತಿ ಹೆಚ್ಚು ರೋಗಿಗಳನ್ನು ನೋಡುವುದು ಈ 'ಕೆಮ್ಮಿ'ಗಳನ್ನೇ ಎಂದರೆ ನಂಬಲೇ ಬೇಕು! ಈ ಮೊದಲು ಸಾಮಾನ್ಯ ಎಂದುಕೊಂಡ ಕೆಮ್ಮು ಈಗ ವೈದ್ಯನಿಗೊಂದು ಸವಾಲಾಗುತ್ತಿರುವುದು ನಿಜ.

ನೆಗಡಿ ಸಾಮಾನ್ಯವಾಗಿ ತೊಂಬತ್ತು ಪ್ರತಿಶತ ವೈರಸ್‌ನಿಂದಲೇ ಬಂದಿರುತ್ತದೆ. ಮೂಗಿನ ಹಿಂದಿನ ಹೊಳ್ಳೆಯಿಂದ ದ್ರವವು ಗಂಟಲಿಗೆ ಬಂದಾಗ ಆಗುವ ಕಿರಿಕಿರಿಯಿಂದ ಕೆಮ್ಮು ಬಂದು, ಕಫ ಹೊರಹೋಗಲು ಸಹಾಯವಾಗುತ್ತದೆ; ಮತ್ತು ಇದರಿಂದ ಕಫದಲ್ಲಿರುವ ವೈರಸ್/ಬ್ಯಾಕ್ಟಿರಿಯಾದಂತಹ ಕ್ರಿಮಿಗಳು ನಮ್ಮ ದೇಹದಿಂದ ಹೊರಹಾಕಲ್ಪಡುತ್ತದೆ. ಕೆಮ್ಮು ನಮ್ಮ ಶ್ವಾಸಕೋಶದ ರಕ್ಷಣೆಯ ಕವಚ ಇದ್ದ ಹಾಗೆ. ನನ್ನ ಉಪಾಧ್ಯಾಯರು ಡಾ. ಎಡ್ಯೂರಪ್ಪ 'Cough is the watchdog of respiratory system' (ಉಸಿರಾಟ ವ್ಯವಸ್ಥೆಯ ಕಾವಲುಗಾರ ಕೆಮ್ಮು) ಎಂದು ಪದೇಪದೇ ಹೇಳುತ್ತಿದ್ದರು. ಕೆಮ್ಮಿನಿಂದ ರೋಗಿಗೆ ತೊಂದರೆಯಾಗಬಹುದು. ಆದರೆ ಇದು ಯಾವುದೇ ಕ್ರಿಮಿ ಅಥವಾ ವಸ್ತುವನ್ನು ಉಸಿರಾಟದ ನಾಳಗಳಿಂದ ಹೊರಹಾಕುವ ನೈಸರ್ಗಿಕವಾಗಿ ಕ್ರಿಯೆ.

ಕೆಮ್ಮು ವೈರಸ್‌ನಿಂದ ಬಂದಿದ್ದರೆ ತಾನಾಗಿಯೇ ಒಂದು ವಾರದಲ್ಲಿ ಬಂದ ದಾರಿಗೆ ಸುಂಕವಿಲ್ಲದಂತೆ ಹೋಗಬಹುದು; ಅಂತಹ ನೆಗಡಿ ಮತ್ತು ಕೆಮ್ಮಿಗೆ antihistamine ಮಾತ್ರೆಗಳು ಸಾಕಾಗಬಹುದು. ರೋಗಿಯು ತಂಪು ವಾತಾವರಣ ಮತ್ತು ಥಂಡಿಗೆ ಸಹಾಯವಾಗುವ ಪದಾರ್ಥಗಳಿಂದ ದೂರವಾದರೆ ಸಾಕು. ಒಂದು ವಾರದ ನಂತರವೂ ಕೆಮ್ಮು ಕಡಿಮೆಯಾಗದೆ ಜ್ವರ ಮತ್ತು ಹೆಚ್ಚು ಕಫ ಕಾಣಿಸಿಕೊಂಡಾಗ ಬ್ಯಾಕ್ಟೀರಿಯಾ ಸೋಂಕಿನಿಂದ ಕೆಮ್ಮು ಉಂಟಾಗಿರಬಹುದು. ಆಗ ಕಫವನ್ನು ಪರೀಕ್ಷೆಗೆ ಕಳುಹಿಸಬೇಕಾಗುತ್ತದೆ. ಕಫಪರೀಕ್ಷೆಯಿಂದ ಕ್ಷಯರೋಗವನ್ನು ಪತ್ತೆ ಹಚ್ಚಬಹುದು. ಎಕ್ಸ್-ರೇಯಿಂದ ನ್ಯುಮೋನಿಯಾದಂತಹ ಸೋಂಕನ್ನು ಪತ್ತೆ ಹಚ್ಚಬಹುದು. ಕೋವಿಡ್ ಕೂಡ ಒಂದು ವೈರಸ್ ಕಾಯಿಲೆ.

ತಂಬಾಕು ಸೇದುವವರಲ್ಲಿ 'ಸ್ಮೋಕರ್ಸ್ ಕಾಫ್' ಆಗಿರಬಹುದು; ಚಟ ತುಂಬಾ ವರ್ಷಗಳಿಂದ ಇದ್ದರೆ COPD (ಕ್ರಾನಿಕ್ ಅಬಸ್ಟ್ರಕ್ಟೀವ್ ಪುಲ್ಮನರಿ ಡಿಸೀಸ್) ಆಗಿರುವ ಸಾಧ್ಯತೆ ಹೆಚ್ಚು. ಈ ಎರಡು ಕಾಯಿಲೆಗಳಲ್ಲಿ ತಂಬಾಕು ಸೇವನೆ ನಿಲ್ಲಿಸದಿದ್ದರೆ ಕೆಮ್ಮು ಕಡಿಮೆಯಾಗುವುದಿಲ್ಲ. ಕೆಮ್ಮು ಔಷಧಗಳಿಗೆ ಬಗ್ಗದಿದ್ದಾಗ 'ಸಿಟಿ ಸ್ಕ್ಯಾನ್' ಮಾಡಿಸಬೇಕಾಗುತ್ತದೆ.

ಜೀವನೋಪಾಯಕ್ಕೆ ಮಾಡುವ ಕೆಲಸಗಳನ್ನು ರೋಗಿಗಳು ವೈದ್ಯರಿಗೆ ತಿಳಿಸುವುದು ಉತ್ತಮ. ಈ ಮಾಹಿತಿಯು ಕೆಮ್ಮಿನ ಕಾರಣಗಳನ್ನು ಊಹಿಸಲು ವೈದ್ಯರಿಗೆ ನೆರವಾಗುತ್ತದೆ.

ಮನೆಯಲ್ಲಿ ಬೆಕ್ಕು, ನಾಯಿ ಮತ್ತು ಪಕ್ಷಿಗಳನ್ನು ಸಾಕಿದ್ದರೆ ಅವುಗಳ ಕೂದಲು, ಮಲಮೂತ್ರಗಳಿಂದ ಶ್ವಾಸಕೋಶದಲ್ಲಿ ಅಲರ್ಜಿ ತೊಂದರೆಯುಂಟಾಗಿ, ಕೆಮ್ಮು ಕಾಣಿಸಿಕೊಂಡಿರಬಹುದು.

ರೋಗಿಗೆ ರಕ್ತದೊತ್ತಡ ಇದ್ದು 'ACE-Inhibitor' ಗುಂಪಿಗೆ ಸೇರಿದ ಮಾತ್ರೆಗಳನ್ನು ಹಾಕಿದ್ದರೆ, ಅವರ ಕೆಮ್ಮು ಈ ಮಾತ್ರೆಯಿಂದ ಬಂದಿರಬಹುದು.

ಹೃದಯದಲ್ಲಿ ಸಮಸ್ಯೆಯಿದ್ದವರಿಗೆ ಶ್ವಾಸಕೋಶದಲ್ಲಿ ನೀರು ತುಂಬಿಕೊಳ್ಳುವುದರಿಂದ ಕಾಣಿಸುವ ಕೆಮ್ಮಿಗೆ 'ಕಾರ್ಡಿಕ್ ಕಾಫ್' ಎನ್ನುತ್ತೇವೆ. ಈ ಸಮಸ್ಯೆಗೆ ಹೃದ್ರೋಗತಜ್ಞರನ್ನು ಕಾಣುವುದು ಒಳಿತು.

ರೋಗಿಗೆ ಹುಳಿ ತೇಗು ಬರುತ್ತಿದ್ದರೆ ವೈದ್ಯರಲ್ಲಿ ತಿಳಿಸುವುದು ಉತ್ತಮ. ಆಗ ಕೆಮ್ಮಿಗೆ 'ಗ್ಯಾಸ್ಟ್ರೈಟೀಸ್' ತೊಂದರೆಗೆ ಕೊಡುವ ಮಾತ್ರೆಗಳನ್ನು ಕೊಡಬೇಕಾಗುತ್ತದೆ. ಆಹಾರವನ್ನು ನಿಯಮಿತವಾಗಿ ತಿನ್ನುವುದು, ದೇಹದ ತೂಕ ಇಳಿಸುವುದು ಮುಂತಾದ ವಿಧಾನಗಳ ಮೂಕಲ ೆಂಥ ಕೆಮ್ಮನ್ನು ನಿವಾರಣೆಮಾಡಿಕೊಳ್ಳಬಹುದು.

ಕೆಮ್ಮು-ನೆಗಡಿಯಿದ್ದಾಗ ಭ್ರೂಮಧ್ಯಭಾಗದಲ್ಲಿ ತಲೆನೋವು ಬರುತ್ತಿದ್ದು, ನೆಗಡಿ ನಿಲ್ಲದೆ ಕೆಮ್ಮು ಹಾಗೆಯೇ ಇದ್ದರೆ, 'ಸೈನಸ್ ಎಕ್ಸ್‌ರೇ' ಮತ್ತು ಮೂಗಿನ 'ಎಕ್ಸ್-ರೇ' ಮಾಡಿಸಬೇಕಾಗುತ್ತದೆ.

'ಬ್ರಾಂಕೈಲ್ ಚಾಲೇಂಜ್' ಪರೀಕ್ಷೆಯನ್ನು ಮಾಡುವ ಮೂಲಕ ಅಸ್ತಮಾ ಕಾಯಿಲೆಯನ್ನು ಕಂಡುಹಿಡಿಯಬಹುದು. ಇಂಥವರು ದೂಳಿನಿಂದ ದೂರವಿರುವುದು ಒಳ್ಳೆಯದು. ಮಧುಮೇಹಿಗಳಲ್ಲಿ 'ಸ್ಯುಡೋಮೊನಸ್ ಬ್ಯಾಕ್ಟೀರಿಯಲ್' ತೊಂದರೆ ಹೆಚ್ಚು. ಏಡ್ಸ್ ಪೀಡಿತರಲ್ಲಿ ಅವರ CD4 ಸಂಖ್ಯೆಯ ಮೇಲೆ ಬೇರೆ ಬೇರೆ ರೀತಿಯ ಸೋಂಕು ಉಂಟಾಗಬಹುದು. ಮನೆಯಲ್ಲಿ ಏರ್ ಕಂಡೀಶನ್ ಉಪಯೋಗಿಸುತ್ತಿದ್ದರೆ, ಅದರಲ್ಲೇನಾದರೂ ಸೋರುವಿಕೆಯಿದ್ದರೆ 'ಲೀಜಿನಿಯರ್ಸ್' ಎಂಬ ಬ್ಯಾಕ್ಟೀರಿಯಾ ಸೋಂಕು ಉಂಟಾಗುವ ಸಾಧ್ಯತೆ ಹೆಚ್ಚು.

ಮೇಲೆ ಹೇಳಿದ ಅಷ್ಟು ಪರೀಕ್ಷೆ ಮಾಡಿಯೂ ಕೆಮ್ಮಿನ ಕಾರಣ ತಿಳಿಯದಿದ್ದಾಗ 'ಬ್ರಾಂಕೋಸ್ಕೋಪಿ' ಮಾಡಿಸಬೇಕಾಗುತ್ತದೆ. ಶ್ವಾಸಕೋಶದಲ್ಲಿ ಗಡ್ಡೆಯಂತಹದ್ದು ಏನಾದರೂ ಕಾಣಿಸಿದರೆ, ಅದರ ಬಯಾಪ್ಸಿ ಮಾಡಿ, ಅರ್ಬುದ ಪರೀಕ್ಷೆಗೆ ಅದನ್ನು ಕಳುಹಿಸಬೇಕಾಗುತ್ತದೆ.

ಇಷ್ಟೆಲ್ಲಾ ಅಗಿಯು ಕೆಮ್ಮು ನಿಲ್ಲದಿದ್ದರೆ, ವೈದ್ಯರು ಹೇಳಿದ ಸೂಚನೆಗಳನ್ನು ರೋಗಿ ಪಾಲನೆ ಮಾಡುತ್ತಿಲ್ಲವೆಂದು ಗ್ರಹಿಸಬೇಕಾಗುತ್ತದೆ. ಉದಾಹರಣೆಗೆ, ತಂಬಾಕು ಸೇವನೆಯನ್ನು ನಿಲ್ಲಿಸದಿರುವುದು, ಹೇಳಿದಷ್ಟು ದಿನ ಮಾತ್ರೆಗಳನ್ನು ತೆಗೆದು ಕೊಳ್ಳದಿರುವುದು. ಮನೋರೋಗ ಕೂಡ ಇದಕ್ಕೆ ಕಾರಣವಾಗಿರಬಹುದು.

ಹಲವು ಸಂದರ್ಭಗಳಲ್ಲಿ ಕೆಮ್ಮಿಗೆ ಕಾರಣವನ್ನು ಕಂಡುಹಿಡಿಯುವುದು ಸಾಧ್ಯವಾಗದೆ ಹೋಗಬಹುದು. ಆದರೆ ಕುಶಲ ವೈದ್ಯನೊಬ್ಬ ರೋಗಿಗೆ ಪ್ರಶ್ನೆಗಳನ್ನು ಕೇಳಿ ಕೇಳಿ ಕಾರಣವನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಗಬಹುದು.


ಕೆಮ್ಮಿನ ಚಿಕಿತ್ಸೆಗೆ ವೈದ್ಯರ ಹತ್ತಿರ ಹೋದಾಗ ಅವರು ಹಲವಾರು ಪ್ರಶ್ನೆಗಳನ್ನು ಎಸೆಯುತ್ತಾರೆ. ಪ್ರತಿ ಪ್ರಶ್ನೆಯೂ ವೈದ್ಯರಿಗೆ ರೋಗಿಯು ಯಾವ ಕಾಯಿಲೆಯಿಂದ ಬಳಲುತ್ತಿರಬಹುದು ಅಥವಾ ಕೆಮ್ಮು ಆ ಕಾಯಿಲೆಯ ಲಕ್ಷಣವಾಗಿರಬಹುದು ಎಂದು ಗ್ರಹಿಸಲಿಕ್ಕೆ ಸಹಾಯವಾಗುತ್ತದೆ.

ನಾಲಿಗೆ: ರೋಗಸೂಚಕ

ಡಾ. ವಿಜಯಲಕ್ಷ್ಮಿ ಪಿ.

ನಾಲಿಗೆ ನಮ್ಮ ಆರೋಗ್ಯದ ಬಾಗಿಲೂ ಹೌದು. ನಾಲಿಗೆ ಸರಿಯಾಗಿದ್ದರೆ ಆರೋಗ್ಯ ಸರಿ ಇದೆ ಎಂದರ್ಥ.





ಆಚಾರವಿಲ್ಲದ ನಾಲಿಗೆ - ಎಂಬುದು ಪ್ರಸಿದ್ಧ ದಾಸರ ಪದ. ನಾವು ಆಚರಿಸುವುದೆಲ್ಲವೂ ಆಚಾರವೇ. ಊಟ, ಮಾತು, ಚಿಂತನೆಯೂ ಆಚಾರವೇ. ನಾಲಿಗೆ ಎಂಬುದು ನಮ್ಮ ದೇಹದಲ್ಲಿ ಒಂದು ವಿಶಿಷ್ಟವಾದ ಅಂಗ. ಕಾಯ, ವಾಕ್, ಮನಸ್ಸು ಎಲ್ಲಕ್ಕೂ ಕೊಂಡಿಯಾಗಿರುವ ಏಕೈಕ ಅಂಗ ನಾಲಿಗೆ.

ನಾಲಿಗೆ ತಪ್ಪು ಮಾಡಿದರೆ ದೇಹಕ್ಕೂ ಮನಸ್ಸಿಗೂ ಎರಡಕ್ಕೂ ರೋಗ. ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯವಾಗಿ ಕಾರ್ಯನಿರ್ವಹಿಸುವ ಅಂಗ ನಾಲಿಗೆ. ನಾವು ಸೇವಿಸುವ ಆಹಾರದಂತೆ ನಮ್ಮ ಮನೋಭಾವ, ಚಿಂತನೆಗಳು, ಅದಕ್ಕನುಗುಣವಾಗಿ ಮಾತು. ಹೀಗಾಗಿ ನಾಲಿಗೆಯ ಮೇಲೆ ನಮ್ಮ ಆರೋಗ್ಯ, ಯಶಸ್ಸು ಅವಲಂಬಿಸಿದೆ. ಮಾತು, ಆಹಾರ ಯಾವುದೇ ಆದರೂ ಅತಿಯಾಗದೆ, ಕಡಿಮೆಯೂ ಆಗದೆ, ಅಹಿತವಲ್ಲದ ರೀತಿ ಇದ್ದರೆ ಆರೋಗ್ಯ. ರುಚಿಯಾಗಿದೆ ಎಂದು ಹೆಚ್ಚು ಸೇವಿಸಿದರೆ ಅಜೀರ್ಣವಾಗುತ್ತದೆ. ಪಥ್ಯ ಎಂದು ಅತಿ ಕಡಿಮೆ ಸೇವಿಸಿದರೆ ದೇಹ ದುರ್ಬಲವಾಗುತ್ತದೆ. ಇಷ್ಟ ಎಂದು ಕಂಡಕಂಡದ್ದೆಲ್ಲವನ್ನೂ ವಿವೇಚನೆ ಇಲ್ಲದೆ ಸೇವಿಸಿದರೆ ರೋಗಕಾರಕವಾಗುತ್ತದೆ. ಹಾಗಾಗಿ ಯಾವಾಗಲೂ ಹಿತವಾಗುವಂತಹದ್ದನ್ನು ವಿವೇಚನೆಯಿಂದ ಮಿತವಾಗಿ ಸೇವಿಸಬೇಕು.

ವಿವೇಚನೆ ಎಂಬುದು ನಮ್ಮ ದೇಹ ಪ್ರಕೃತಿ, ಆಯಾ ಪ್ರದೇಶದ ಹವಾಮಾನ, ಅವರವರ ಉದ್ಯೋಗ, ಬದುಕುವ ಪರಿಸರವನ್ನು ಅವಲಂಬಿಸಿರುತ್ತದೆ. ಆದ್ದರಿಂದ ಎಲ್ಲರಿಗೂ ಎಲ್ಲ ಆಹಾರಗಳೂ ಹಿತವಾಗುವುದಿಲ್ಲ. ಶರೀರ ಪುಷ್ಟಿಯಾಗಬೇಕಾದರೆ ಸಮತೋಲನ ಆಹಾರವನ್ನು ಸೇವಿಸಬೇಕು ಎನ್ನುವುದು ನಿರ್ವಿವಾದ. ಆದರೆ ಸಮತೋಲನ ಎಂದರೇನು ಎಂದರೆ ಪಿಷ್ಟ ಅಥವಾ ಪೋಷಕಾಂಶ, ಕೊಬ್ಬು, ಪ್ರೊಟೀನ್‌ಗಳ ಹಾಗೂ ವಿಟಮಿನ್‌ಗಳು ಪೂರಕವಾಗಿ ಹೊಂದಿಕೆಯಾಗುವಂತಹ ಆಹಾರ. ಇಷ್ಟು ಮಾತ್ರವೇ ಎಂದರೆ ಇವು ಇರುವಂತಹ ಆಹಾರವು ಸಿಹಿ, ಹುಳಿ, ಉಪ್ಪು, ಖಾರ, ಕಹಿ, ಒಗರು ಹೀಗೆ ಆರು ರಸಗಳಿಂದ ಕೂಡಿದ್ದರೆ ನಾವು ಸೇವಿಸಿದ ಆಹಾರವು ದೇಹದ ಭಾಗವಾಗಲು ಸಾಧ್ಯ; ಅದು ಆರೋಗ್ಯಪ್ರದವೂ ಆಗುತ್ತದೆ. ಅದಲ್ಲದೆ ಕೇವಲ ಸಿಹಿ, ಕೇವಲ ಕಹಿ – ಹೀಗೆ ಒಂದೇ ರಸದಿಂದ ಕೂಡಿದ ಆಹಾರವನ್ನು ಹೆಚ್ಚು ಸೇವಿಸುವುದು ಅಥವಾ ಖಾರವನ್ನೋ ಕಹಿಯನ್ನೋ ಸೇವಿಸದೆಯೇ ಇರುವುದು – ಇಂತಹವು ಆಹಾರ ಪರಿಪೂರ್ಣವಾಗಿ ದೇಹಧಾತುವಾಗಿ ಪರಿಣಾಮ ಹೊಂದಲು ಒಂದು ಆಡಚಣೆ ಎಂದೇ ಹೇಳಬೇಕು.

ನಾಲಿಗೆಗೆ ರುಚಿ ಎಂದು ಆಯಾ ಪ್ರದೇಶದ್ದಲ್ಲದ ಆಹಾರವನ್ನು ನಿರಂತರ ಸೇವಿಸುವುದೂ ಅನಾರೋಗ್ಯಕ್ಕೆ ನಾಂದಿ ಹಾಡಿದಂತೆಯೇ. ಆಯಾ ಪ್ರದೇಶದಲ್ಲಿ ಬೆಳೆಯುವ ಹಣ್ಣು, ತರಕಾರಿ, ದವಸಧಾನ್ಯಗಳ ಸೇವನೆ, ಆ ಪ್ರದೇಶದ ವಾತಾವರಣಕ್ಕೆ ಪೂರಕವಾದ ಪೋಷಕಾಂಶಗಳನ್ನು ಹೊಂದಿದ್ದು ಆರೋಗ್ಯಕರವಾಗುವುದಲ್ಲದೆ, ಅನಾರೋಗ್ಯವು ಬಾಧಿಸದಂತೆಯೂ ತಡೆಗಟ್ಟುತ್ತದೆ. ರುಚಿ ಎಂದು ದೇಶ ಕಾಲಗಳ ಪರಿವೆ ಇಲ್ಲದೆ ಎಲ್ಲಾ ದೇಶದ ಆಹಾರವನ್ನು, ಎಲ್ಲಾ ಕಾಲಗಳಲ್ಲಿಯೂ ಸೇವಿಸುವುದು ಒಳಿತಲ್ಲ. ಕೇರಳಕ್ಕೆ ತೆಂಗಿನೆಣ್ಣೆಯಾದರೆ ಕರ್ನಾಟಕಕ್ಕೆ ಕಡಲೆ ಎಣ್ಣೆ, ಮಹಾರಾಷ್ಟ್ರಕ್ಕೆ ಕುಸುಬೆ ಎಣ್ಣೆಯಾದರೆ ಆಂಧ್ರಕ್ಕೆ ಎಳ್ಳೆಣ್ಣೆ; ಹಾಗೆಯೇ ಉತ್ತರ ಭಾರತಕ್ಕೆ ಸಾಸಿವೆ ಎಣ್ಣೆ, ಅತಿ ಚಳಿ ಇರುವ ಪ್ರದೇಶದಲ್ಲಿ ಆಲೀವ್ ಎಣ್ಣೆ ಹಿತಕರ. ಹಾಗೆಯೇ ಧಾನ್ಯಗಳೂ ಸಹ. ರುಚಿಕರವೆಂದು ತನ್ನ ಪ್ರದೇಶಕ್ಕೆ ಒಗ್ಗದ ಅಕಾಲದ ಧಾನ್ಯ ತರಕಾರಿ, ಹಣ್ಣು, ಹಾಗೂ ತಯಾರಿಸಿ ಶೇಖರಿಸಿದ ಪದಾರ್ಥಗಳು ಅನಾರೋಗ್ಯ ಕಾರಕವೇ.

ನಾಲಿಗೆ ನಮ್ಮ ಆರೋಗ್ಯಸೂಚಕವೂ ಹೌದು. ನಾಲಿಗೆಯ ಮೇಲೆ ಬಿಳಿ ಪದರವೊಂದು ಕಾಣುತ್ತಿದ್ದರೆ ಹೊಟ್ಟೆಯಲ್ಲಿ ಅಜೀರ್ಣ ಇದೆ ಎಂಬುದನ್ನು ಸೂಚಿಸಿದರೆ, ಪದೇ ಪದೇ ಬಾಯಿ ಹುಣ್ಣಾಗುವುದು ಕರುಳಿನ ಆರೋಗ್ಯ ಸರಿ ಇಲ್ಲ ಎಂಬುದನ್ನು ಸೂಚಿಸುತ್ತದೆ. ಇನ್ನು ಕೆಲವೊಮ್ಮೆ ದೇಹಕ್ಕೆ ಬೇಕಾಗುವ ಪೋಷಕಾಂಶಗಳಾದ ಬಿ ಕಾಂಪ್ಲೆಕ್ಸ್ ಇತ್ಯಾದಿಗಳ ಕೊರತೆಯನ್ನೂ ಸೂಚಿಸುತ್ತದೆ. ಬಾಯಿ ರುಚಿ ಇಲ್ಲದಿರುವಿಕೆಯು ಜ್ವರ ಇತ್ಯಾದಿ ರೋಗದ ಮುನ್ಸೂಚನೆಯೂ ಆಗಿದೆ. ಕೆಲವು ಸಂದರ್ಭಗಳಲ್ಲಿ ಮೂಗು ಕಟ್ಟಿದ್ದರೂ, ವಿಪರೀತ ಹಳೇ ನೆಗಡಿಯಾದರೂ, ಸೈನಸ್‌ಗಳ ಉರಿಯೂತ ಇದ್ದರೂ, ಉಸಿರಾಟದ ತೊಂದರೆಯಿಂದಾಗಿಯೂ ಬಾಯಿ ರುಚಿ ಇರುವುದಿಲ್ಲ.

ಪ್ರಸಕ್ತ ಕೋವಿಡ್ ಸಂದರ್ಭದಲ್ಲಿ ಪ್ರಮುಖ ಲಕ್ಷಣವೇ ಬಾಯಿರುಚಿ ಇಲ್ಲದಿರುವುದು ಎಂದಾಗಿತ್ತು. ಬಾಯಿರುಚಿ ಇಲ್ಲದಿದ್ದರೆ ಕಾಮಾಲೆ ಮುಂತಾದ ಯಕೃತ್ ಸಂಬಂಧಿ ರೋಗದಿಂದ ಹಿಡಿದು ಸಂಪೂರ್ಣ ಬಾಯಿಯಿಂದ ಹಿಡಿದು ಎಲ್ಲಾ ಜೀರ್ಣಾಂಗಗಳ ಮತ್ತು ಶ್ವಾಸಾಂಗಗಳಲ್ಲಿ ಎಲ್ಲಿ ತೊಂದರೆ ಇದೆ, ಕ್ಯಾನ್ಸರ್ ಮುಂತಾದ ರೋಗಗಳ ಮುನ್ಸೂಚನೆಯೋ ಎಂದು ಗಮನಿಸುವುದು ಬಹಳ ಮುಖ್ಯವಾಗುತ್ತದೆ. ಹಾಗಾಗಿ ಬಾಯಿ ರುಚಿ ಇಲ್ಲದಿರುವುದವ್ನು ಒಂದು ಸಾಮಾನ್ಯ ಲಕ್ಷಣ ಎಂದು ಉದಾಸೀನ ಮಾಡುವುದು ತರವಲ್ಲ. ಹಾಗೆಯೇ ನಾಲಿಗೆ ಹಳದಿಯಾಗಿದ್ದರೆ ಪಿತ್ತಸಂಬಂಧಿ ರೋಗಗಳನ್ನು, ಬೆಳ್ಳಗಿದ್ದರೆ ರಕ್ತಹೀನತೆ, ಇತರೆ ಪೋಷಕಾಂಶಗಳ ಕೊರತೆ ಹಾಗೂ ಕಫಸಂಬಂಧಿ ರೋಗಗಳನ್ನು, ನಾಲಿಗೆ ಕಪ್ಪು ಅಥವಾ ನೀಲಿಯಾಗಿದ್ದರೆ, ವಾತವ್ಯಾಧಿಯೋ ಅಥವಾ ಹೃದಯಸಂಬಂಧಿ ರೋಗಗಳನ್ನೂ ಚಿಂತಿಸಬೇಕು. ಆದ್ದರಿಂದ ನಾಲಿಗೆ ನಮ್ಮ ಆರೋಗ್ಯದ ಬಾಗಿಲೂ ಹೌದು. ನಾಲಿಗೆ ಸರಿಯಾಗಿದ್ದರೆ ಆರೋಗ್ಯ ಸರಿ ಇದೆ ಎಂದರ್ಥ.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 66

896. ಮಧ್ಯಭಾರತದ ಕಾಲದಲ್ಲಿ 'ತಕಾವಿ' ಏನನ್ನು ಸೂಚಿಸುತ್ತಿತ್ತು?
ಎ) ಕಂದಾಯ ತೆರಿಗೆ ಬಿ) ಕೃಷಿ ಸಾಲ
ಸಿ) ನೌಕಾ ಪಡೆ
ಡಿ) ಸೈನಿಕರಿಗೆ ನೀಡುತ್ತಿದ್ದ ಕಂದಾಯ ಭೂಮಿ

897. ಶಿವಾಜಿಯು ತನಗೆ ಸಹಾಯಕವಾಗಿ ಈ ಕೆಳಕಂಡ ಹೆಸರಿನ ಸಚಿವ ಮಂಡಲಿಯನ್ನು ಹೊಂದಿದ್ದ
ಎ) ಅಷ್ಟ ದಿಗ್ಗಜರು ಬಿ) ಸಮಿತಿ
ಸಿ) ಅಷ್ಟ ಪ್ರಧಾನ್ ಡಿ) ಮಂತ್ರಿ ಪರಿಷದ್

898. 'ಹಂದಿ ಜ್ವರ'ಕ್ಕೆ ಕಾರಣವಾಗುವ ವೈರಸ್ ಯಾವುದು?
ಎ) H1N1 ವೈರಸ್ ಬಿ) ಎಂಟಿರೊ ವೈರಸ್
ಸಿ) ಮೈಕ್ರೊ ವೈರಸ್ ಡಿ) ವರಿಸ್ಸೆಲ್ಲಾ ವೈರಸ್

899. ನೆಫ್ರಾನ್‌ಗಳು ಈ ಕೆಳಗಿನ ಯಾವ ಅಂಗಕ್ಕೆ ಸಂಬಂಧಿಸಿವೆ?
ಎ) ಹೃದಯ ಬಿ) ಮೂತ್ರಕೋಶ
ಸಿ) ಪಿತ್ತಕೋಶ ಡಿ) ಮೆದುಳು

900. ಓಝೋನ್ ರಾಸಾಯನಿಕ ಸೂತ್ರ ಏನು?
ಎ) O2 ಬಿ) O3 ಸಿ) O4 ಡಿ) CO2

901.ಭಾರತದ ಪುರಾತತ್ವ ಇಲಾಖೆ ಯಾವಾಗ ಸ್ಥಾಪನೆಯಾಯಿತು?
ಎ.1861 ಬಿ.1866
ಸಿ.1868 ಡಿ.1961

902.ಕಾಲಿಬಂಗನ್ ನಗರವನ್ನು ಶೋಧಿಸಿದವರು?
ಎ. ದಯಾರಾಂ ಸಹಾನಿ ಬಿ. ಆರ್. ಡಿ. ಬ್ಯಾನರ್ಜಿ
ಸಿ. ಎ. ಘೋಷ್ ಡಿ. ಎಸ್. ಆರ್. ರಾವ್

903.ಹರಪ್ಪ ಜನರಿಗೆ ಪರಿಚಯವಿರದ ವಸ್ತು ಯಾವುದು?
ಎ. ತಾಮ್ರ ಬಿ. ಗಾಜು
ಸಿ. ಕಂಚು ಡಿ. ಕಲ್ಲಂಗಡಿ

904.ಉತ್ತರ ವೈದಿಕಕಾಲದಲ್ಲಿ 'ವ್ರಹಿ' ಎಂದರೆ?
ಎ. ಚಿನ್ನ ಬಿ. ಹತ್ತಿ
ಸಿ. ಕಬ್ಬಿಣ ಡಿ. ಭತ್ತ

905. 2ನೇ ಬೌದ್ಧ ಸಮ್ಮೇಳನದ ಅಧ್ಯಕ್ಷರು ಯಾರು?
ಎ. ಸಬಕಾಮಿ ಬಿ. ಭಹಾಕಶ್ಯಪ
ಸಿ. ಅಶೋಕ ಡಿ. ವಸುಮಿತ್ರ

906.ಬುದ್ಧನಿಗೆ ದೀಕ್ಷೆ ನೀಡಿದ ಇಬ್ಬರು ಗುರುಗಳು ಯಾರು?
ಎ. ಅಲಲಕಮಲ, ಉದ್ರಕರಾಮ ಪುತ್ರ
ಬಿ. ಪಿಂಡಾರಿ, ಉಂಗುಲಿಬಾಬಾ
ಸಿ. ಗುರುನಾನಕ, ಮಹಾವೀರ
ಡಿ. ಶಿತಮುನಿ, ಚನ್ನ

907.ಕರ್ನಾಟಕದಲ್ಲಿ ಕಂಡುಬಂದ ಅಶೋಕನ ಮೊದಲ ಶಾಸನ?
ಎ. ಮಸ್ಕಿ ಶಾಸನ ಬಿ. ಬ್ರಹ್ಮಗಿರಿ
ಸಿ. ಸನ್ನತಿ ಡಿ. 1ನೇ ಕಳಿಂಗ ಶಾಸನ

908.ಮೌರ್ಯ ಸಾಮ್ರಾಜ್ಯದಲ್ಲಿ 'ನಗರಗಳ ಮೇಲಿನ ಕರ' ಯಾವುದು?
ಎ. ಬಲಿ ಬಿ. ತ್ರೈತ
ಸಿ. ಬಾಗ ಡಿ. ಸೇನಾಭಕ್ತಂ

909.ಅಶ್ವಘೋಷ, ವಸುಮಿತ್ರ, ಸುಸ್ರೂತ ಇವರು ಯಾರ ಆಸ್ಥಾನದಲ್ಲಿದ್ದರು?
ಎ. ಅಶೋಕ ಬಿ. ಕನಿಷ್ಕ
ಸಿ. ಅಕ್ಬರ್ ಡಿ. ಸಮುದ್ರಗುಪ್ತ

910.ಗುಪ್ತರ ನಾಣ್ಯ ಯಾವುದು?
ಎ. ಹೊನ್ನು ಬಿ. ಗದ್ಯಾಣಕ
ಸಿ. ಸುವರ್ಣ ಡಿ. ದಿನಾರ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 65ರ ಉತ್ತರಗಳು: 886. ಬಿ, 887. ಬಿ, 888. ಡಿ, 889. ಬಿ, 890. ಡಿ, 891. ಸಿ, 892. ಡಿ, 893. ಸಿ, 894. ಸಿ, 895. ಎ

ಏಕಾಂಗಿತನಕ್ಕೆ ಉಪಾಯ ಧ್ಯಾನ



ಡಾ. ಕಿರಣ್ ವಿ. ಎಸ್.

ಮಾನವ ಮೂಲತಃ ಸಮಾಜಜೀವಿ. ಮಾನಸಿಕ ಸಾಂಗತ್ಯಕ್ಕೆ ಮನುಷ್ಯನ ಮನಸ್ಸು ಸದಾ ಹಾತೊರೆಯುತ್ತದೆ. ದೈಹಿಕ ಮತ್ತು ಮಾನಸಿಕ ಆರೋಗ್ಯದಲ್ಲಿ ನಾವು ಜೀವಿಸುವ ಪರಿಸರದ, ಅಲ್ಲಿನ ವ್ಯಕ್ತಿಗಳ ಪಾತ್ರ ಗಣ್ಯ. ಆತ್ಮೀಯ ಭಾವಕ್ಕಾಗಿ ಹಂಬಲಿಸುವ ಮನಸ್ಸಿಗೆ ಮುಕ್ತ ಮಾತುಕತೆಗಳ ಅಗತ್ಯವಿದೆ. ಬದುಕಿನಲ್ಲಿ ಇಂತಹ ಸಾಮಾಜಿಕ ಸಂಬಂಧ ಸಾಧ್ಯವಾಗದಿದ್ದಾಗ ಒಂಟಿತನ ಅಥವಾ ಏಕಾಂಗಿಭಾವ ಕಾಡುತ್ತದೆ. ವಯಸ್ಸಿನ ಅಂತರವಿಲ್ಲದೆ ಒಂಟಿತನ ಯಾರನ್ನಾದರೂ ಬಾಧಿಸಬಹುದು. ಹದಿನೆಂಟು ವರ್ಷ ವಯಸ್ಸಿನವರಿಗಿಂತ ಕಡಿಮೆ ಮತ್ತು 65 ವರ್ಷಗಳಿಗಿಂತ ವಯಸ್ಸಿನವರಲ್ಲಿ ಏಕಾಂಗಿಭಾವದ ಸಮಸ್ಯೆ ಹೆಚ್ಚು. ಸಾಕಷ್ಟು ಜನರ ಗುಂಪಿನಲ್ಲಿ ಇದ್ದರೂ ಮನಸ್ಸಿಗೆ ಹೊಂದಿಕೆಯಾಗದ ವ್ಯಕ್ತಿಗಳೇ ತುಂಬಿದ್ದರೆ, ಆಗಲೂ ಏಕಾಂಗಿಭಾವ ಆವರಿಸಬಹುದು. ತಮ್ಮದೇ ಮನೆಯ ಇತರ ಸದಸ್ಯರ ಮನೋಭಾವ ತಮಗೆ ಹೊಂದದೆ ಒಂಟಿತನ ಅನುಭವಿಸುವವರಿದ್ದಾರೆ. ಏಕಾಂಗಿಭಾವ ಅನುಭವಿಸುವ ಅನೇಕ ಮಂದಿ ಈಚೆಗೆ ಸಾಮಾಜಿಕ ಜಾಲತಾಣಗಳ ಮೇಲೆ ವಿಪರೀತ ಅವಲಂಬಿತರಾಗಿ, ಕಾಲಕ್ರಮೇಣ ಅದರಿಂದಲೂ ಮತ್ತಷ್ಟು ನಿರಾಸೆ ಪಟ್ಟಿದ್ದಾರೆ.

ಮೂರು ಬಗೆಯ ಏಕಾಂಗಿಭಾವವನ್ನು ತಜ್ಞರು ಗುರುತಿಸುತ್ತಾರೆ.


ಸಾಂದರ್ಭಿಕ ಒಂಟಿತನದಲ್ಲಿ ಪರಿಸರದ ಪ್ರಭಾವ ಇರುತ್ತದೆ. ಮನಸ್ಸಿಗೆ ಹಿತಕರವಲ್ಲದ ಅನುಭವಗಳು; ಬಯಕೆ ಮತ್ತು ವಾಸ್ತವಗಳ ನಡುವಿನ ಅಂತರ; ಗೆಳೆಯರ ಅಗಲಿಕೆ; ಕುಟುಂಬದ ಸದಸ್ಯರ ಜೊತೆಗಿನ ಭಿನ್ನಾಭಿಪ್ರಾಯಗಳು; ಅಪಘಾತ, ಅವಘಡಗಳು ಏಕಾಂಗಿಭಾವವನ್ನು ಪ್ರೇರೇಪಿಸುತ್ತವೆ. ಬೆಳವಣಿಗೆಯ ಒಂಟಿತನದಲ್ಲಿ ವೈಯಕ್ತಿಕ ನ್ಯೂನತೆಗಳು; ವಿಕಸನದ ಕೊರತೆಗಳು; ಕುಟುಂಬ ಛಿದ್ರವಾಗುವಿಕೆ; ಆತ್ಮೀಯರ ಮರಣ; ಬಡತನ; ವಾಸ್ತವ್ಯದ ಸಮಸ್ಯೆಗಳು; ದೈಹಿಕ ಯಾ ಮಾನಸಿಕ ತೊಂದರೆಗಳು ಪಾತ್ರ ವಹಿಸುತ್ತವೆ. ಆಂತರಿಕ ಒಂಟಿತನದಲ್ಲಿ ವ್ಯಕ್ತಿತ್ವದ ಅಂಶಗಳು; ಸ್ವನಿಯಂತ್ರಣದ ಲೋಪಗಳು; ಮಾನಸಿಕ ಉದ್ವೇಗ; ಕೀಳರಿಮೆ; ಅಪರಾಧಿಭಾವ; ಹೊಂದಾಣಿಕೆ ಇಲ್ಲದಿರುವಿಕೆ ಇತ್ಯಾದಿ ಕಾರಣಗಳಿರುತ್ತವೆ.

ಏಕಾಂಗಿತನ ದೈಹಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ನಿದ್ರಾಹೀನತೆ, ಆಹಾರಸೇವನೆಯಲ್ಲಿ ಏರುಪೇರು, ಬೊಜ್ಜು, ರೋಗನಿರೋಧಕ ಶಕ್ತಿ ಕುಂಠಿತವಾಗುವಿಕೆ, ಅಧಿಕ ರಕ್ತದೊತ್ತಡ, ಹೃದಯಸಂಬಂಧಿ ಕಾಯಿಲೆಗಳು, ನೆನಪಿನ ಶಕ್ತಿಯ ಕ್ಷೀಣತೆ, ಸಮಸ್ಯಾಪರಿಹಾರ ತರ್ಕದಲ್ಲಿ ತೊಂದರೆಗಳು ಕಾಣಬಹುದು. ಒಂಟಿತನ ಮಾನಸಿಕವಾಗಿ ಹೆಚ್ಚು ಕುಗ್ಗಿಸುತ್ತದೆ. ಖಿನ್ನತೆ, ಕುಡಿತ, ಅಸಹಜ ವರ್ತನೆಯಂತಹ ಸಮಸ್ಯೆಗಳು ಗಾಢವಾದ ಪ್ರಭಾವ ಬೀರಬಹುದು. ಮಾನಸಿಕ ತುಮುಲ ತೀವ್ರವಾದಾಗ ಆತ್ಮಹತ್ಯೆಯ ಆಲೋಚನೆಗಳೂ ಬರಬಹುದು.

ಏಕಾಂಗಿಭಾವದ ಪರಿಹಾರದಲ್ಲಿ ವಿವಿಧ ವಿಧಾನಗಳಿವೆ. ಸಾಮಾಜಿಕ ಕೌಶಲಗಳನ್ನು ರೂಪಿಸಿಕೊಂಡು, ಯಾವುದೋ ಒಂದು ಚಟುವಟಿಕೆಯಲ್ಲಿ ನಿರತವಾಗಿದ್ದರೆ ಒಂಟಿತನ ಕಾಡುವುದಿಲ್ಲ. ಏಕಾಂಗಿಭಾವದ ದೈಹಿಕ ಅಥವಾ ಮಾನಸಿಕ ಚಿಹ್ನೆಗಳು ಕಂಡುಬರುತ್ತಿದ್ದಂತೆ, ಅದನ್ನು ಗುರುತಿಸಿ ನಿವಾರಿಸುವ ಪ್ರಯತ್ನವನ್ನು ಬಂಧು-ಬಳಗದವರು, ಸ್ನೇಹಿತರು ಮಾಡಬೇಕು; ಯಾವುದಾದರೂ ಕೌಶಲಗಳ ಬೆಳವಣಿಗೆಯನ್ನು ಪ್ರಚೋದಿಸಬೇಕು. ಒಂಟಿತನ ಅನುಭವಿಸುವವರಿಗೆ ಸಾಮಾಜಿಕ ಬೆಂಬಲ ಅಗತ್ಯ. ಅಂತಹವರ ಜೊತೆಗಿನ ಸಾಂಗತ್ಯಕ್ಕೆ ಸಮಾಜ ಇಂಬು ನೀಡಬೇಕು; ಇತರರೊಡನೆ ಬೆರೆಯಲು ಬೇಕಾದ ಅವಕಾಶಗಳನ್ನು ವಿಪುಲವಾಗಿ ಒದಗಿಸಬೇಕು. ಇದರಿಂದ 'ಸಮಾಜ ತನ್ನ ಬಗ್ಗೆ ಕಾಳಜಿ ವಹಿಸುತ್ತಿದೆ' ಎಂಬ ಭಾವನೆ ಬಂದು, ಒಂಟಿತನದ ಲಕ್ಷಣಗಳು ಕಡಿಮೆಯಾಗುತ್ತವೆ. ಸರಿಯಾದ ಸಮಯದಲ್ಲಿ ಪರಿಹಾರೋಪಾಯಗಳನ್ನು ಯೋಜಿಸಿದರೆ ಏಕಾಂಗಿಭಾವ ಕಾಡುವುದನ್ನು, ಅದರ ಪ್ರತಿಕೂಲ ಪರಿಣಾಮಗಳನ್ನು ತಡೆಯಬಹುದು.

ಒಂಟಿತನದ ನಿವಾರಣೆಯ ಮುಖ್ಯವಾದ ಉಪಾಯ ಧ್ಯಾನ ಮತ್ತು ಆಧ್ಯಾತ್ಮ. ಮನಸ್ಸಿನ ಚಾಂಚಲ್ಯವನ್ನು ನಿವಾರಿಸಲು ಗಮನವನ್ನು ಯಾವುದೋ ಒಂದು ವಿಷಯದತ್ತ ಕೇಂದ್ರೀಕರಿಸುವುದು ಉತ್ತಮ ಮಾರ್ಗ. ಗಮನಕ್ಕೆ ಇಂತಹುದೇ ವಿಷಯ ಆಗಿರಬೇಕೆಂಬ ಕಡ್ಡಾಯವಿಲ್ಲ. ಆಸ್ತಿಕರು ದೇವರ ಬಗ್ಗೆ ಆಲೋಚಿಸಬಹುದು; ಕರ್ಮಯೋಗಿಗಳು ತಾವು ಮಾಡುವ ಕೆಲಸದ ಬಗ್ಗೆ ಚಿತ್ತವನ್ನು ಹರಿಸಬಹುದು; ವಿಜ್ಞಾನಿಗಳು ತಮ್ಮ ಪ್ರಯೋಗದ ಬಗ್ಗೆ ಚಿಂತಿಸಬಹುದು – ಒಟ್ಟಾರೆ, ಏಕಚಿತ್ತವಾಗಿ ಮನಸ್ಸನ್ನು ಕಾರ್ಯೋನ್ಮುಖಗೊಳಿಸುವುದು ಫಲಕಾರಿ.

ಒಂಟಿತನದ ನಿವಾರಣೆಯ ಮುಖ್ಯವಾದ ಉಪಾಯ ಧ್ಯಾನ ಮತ್ತು ಆಧ್ಯಾತ್ಮ. ಮನಸ್ಸಿನ ಚಾಂಚಲ್ಯವನ್ನು ನಿವಾರಿಸಲು ಗಮನವನ್ನು ಯಾವುದೋ ಒಂದು ವಿಷಯದತ್ತ ಕೇಂದ್ರೀಕರಿಸುವುದು ಉತ್ತಮ ಮಾರ್ಗ.



ಒಂಟಿತನ ಋಣಾತ್ಮಕ ಚಿಂತನೆಗಳನ್ನು ಪ್ರಚೋದಿಸುತ್ತದೆ. ಕೋವಿಡ್-19ರ ಜಾಗತಿಕ ವಿಪತ್ತು ಏಕಾಂಗಿಭಾವವನ್ನು ಮತ್ತಷ್ಟು ಹೆಚ್ಚಿಸಿದರೆ, ಕಾಯಿಲೆಗೆ ಸಂಬಂಧಿಸಿದ ಸುದ್ದಿಗಳು, ಆತಂಕಗಳು, ಊಹಾಪೋಹಗಳು, ವದಂತಿಗಳು ಋಣಾತ್ಮಕ ಮನೋಭಾವವನ್ನು ಬೆಳೆಸುತ್ತಿವೆ. ಒಂದಕ್ಕೆ ಮತ್ತೊಂದು ಇಂಬು ನೀಡುವಂತೆ, ಇವೆರಡೂ ಮಾನಸಿಕ ಸ್ಥಿತಿಯನ್ನು ಕುಗ್ಗಿಸುತ್ತವೆ. ಧ್ಯಾನ ಮತ್ತು ಆಧ್ಯಾತ್ಮಿಕ ಚಿಂತನೆಯಿಂದ ಆಗುವ ಒಳಿತಿನ ಪರಿಣಾಮಗಳನ್ನು ಸಂಶೋಧಕರು ವಿವೇಚಿಸಿದ್ದಾರೆ. ಧ್ಯಾನದಿಂದ ಮಾನಸಿಕ ಏಕಾಗ್ರತೆ ಹೆಚ್ಚುವುದನ್ನು ಸಂಶೋಧನೆಗಳು ಧೃಢಪಡಿಸಿವೆ. ಇದರಿಂದ ತಂತಮ್ಮ ಮಾನಸಿಕ ಸ್ಥಿತಿಗಳ ಬಗ್ಗೆ ಕಾರ್ಯ-ಕಾರಣ ಸಂಬಂಧವನ್ನು ಪತ್ತೆ ಮಾಡುವುದು ಸರಳವಾಗುತ್ತದೆ. ಸಮಸ್ಯೆಯ ಅಸ್ತಿತ್ವವನ್ನು ಒಪ್ಪಿಕೊಳ್ಳುವುದು ಅದರ ಪರಿಹಾರದಲ್ಲಿನ ಮೊದಲ ಹೆಜ್ಜೆ. ಈ ಪ್ರಕ್ರಿಯೆಯನ್ನು ಧ್ಯಾನ ಮತ್ತು ಆಧ್ಯಾತ್ಮಿಕ ಚಿಂತನೆಗಳು ಸರಳಗೊಳಿಸುತ್ತವೆ. ಧ್ಯಾನದಿಂದ ಜೀನ್ ಮಟ್ಟದಲ್ಲಿ ಬದಲಾವಣೆಗಳು ಆಗುತ್ತವೆಂದು ಅನೇಕ ಸಂಶೋಧನೆಗಳು ತೋರಿವೆ.

ಏಕಾಂಗಿಭಾವದ ನಿರ್ಮೂಲನದಲ್ಲಿ ಆಯಾ ವ್ಯಕ್ತಿಯ ಪಾತ್ರವೂ ಮುಖ್ಯ. ಎಲ್ಲಿಯವರೆಗೆ ನಮ್ಮ ಬಗೆಗಿನ ಗ್ರಹಿಕೆ ಇತರರ ಅಭಿಪ್ರಾಯದ ಮೇಲೆ ನಿಂತಿರುತ್ತದೋ, ಅಲ್ಲಿಯವರೆಗೆ ಸ್ವಂತಿಕೆ ಬೆಳೆಯುವುದು ಕಷ್ಟ. ಇತರರಿಗೆ ನಾವು ಬೇಡವಾಗಿದ್ದೇವೆ ಎಂಬ ಭಾವನೆಯನ್ನು ಮನಸ್ಸಿನಿಂದ ತೊಡೆದುಹಾಕಬೇಕು. ಮನಸ್ಸಿಗೆ ಹಿತವೆನಿಸುವ ಹವ್ಯಾಸವನ್ನು ಹಚ್ಚಿಕೊಳ್ಳಬೇಕು. ಮತ್ತೊಬ್ಬರ ವರ್ತನೆಗಳನ್ನು ವಿಮರ್ಶೆ ಮಾಡುವ ಗೋಜಿಗೆ ಹೋಗಬಾರದು. ಬಹಳ ಆತ್ಮೀಯರಾದವರಲ್ಲಿ ಮನಸ್ಸಿನ ಭಾವನೆಗಳನ್ನು ಹಂಚಿಕೊಳ್ಳುವುದು ತಪ್ಪಲ್ಲ. 'ನಮಗೆ ಬೇಕಾದವರು ಸದಾ ನಮ್ಮೊಂದಿಗೆ ಇರುತ್ತಾರೆ' ಎನ್ನುವ ಖಾತ್ರಿಯಿಲ್ಲ. ಪ್ರಪಂಚವಾಗಲೀ ಸಂಬಂಧಗಳಾಗಲೀ ಸ್ಥಾಯಿಯಲ್ಲ. ಹೀಗಾಗಿ, ನಮ್ಮ ಪರಿಚಯದ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳಬೇಕು. ನಮಗೆ ಆಪ್ಯಾಯವಾಗುವ ಹೊಸಹೊಸ ಸಾಧ್ಯತೆಗಳತ್ತ ಮನಸ್ಸನ್ನು ತೆರೆದುಕೊಳ್ಳಬೇಕು. ನಮ್ಮ ಸಂತಸದ ಕಾರಣವನ್ನು ಯಾರೋ ಒಬ್ಬರ ಅಸ್ತಿತ್ವದ ಮೇಲೆ ನಿಲ್ಲಿಸಲಾಗದು. ಹೀಗಾಗಿ, ಸಂಬಂಧಗಳ, ಗೆಳೆತನದ ಪರಿಧಿಯನ್ನು ವಿಸ್ತರಿಸಬೇಕು. ನಮ್ಮ ಅಗತ್ಯಗಳ ಸಲುವಾಗಿ ಕಾಲವನ್ನು ವ್ಯಯಿಸಬೇಕು. ಮನಸ್ಸಿನಲ್ಲಿ ಸುಪ್ತವಾಗಿರುವ ಕಲಿಕೆಯೊಂದನ್ನು ಸಾಕರಗೊಳಿಸುವ ಸಾಧ್ಯತೆಗಳನ್ನು ಪರಿಶೀಲಿಸಬೇಕು. ಇಂತಹ ಸ್ಥಿತಿಯನ್ನು ತಲುಪಲು ಧ್ಯಾನ ಅತ್ಯಂತ ಸಹಕಾರಿ. ಇದರಿಂದ ನಿಧಾನವಾಗಿ ಏಕಾಂಗಿಭಾವ ದೂರವಾಗುತ್ತದೆ. ವ್ಯಕ್ತಿಯ ಮತ್ತು ವ್ಯಕ್ತಿತ್ವದ ವಿಕಸನದಲ್ಲಿ ಆತ್ಮಸಂತೋಷ ಪ್ರಮುಖವಾದದ್ದು.



❦ ಸುಭಾಷಿತ ❦

ಕೋಪದಿಂದಾಗುವ ತ್ರಿದೋಷಗಳೆಂದರೆ, ದುಷ್ಟಮಾತು, ದ್ರವ್ಯನಾಶ ಮತ್ತು ಕ್ರೂರ ಶಾಸನ.

-ಚಾಣಕ್ಯ

ವಿಐಪಿ ಸಂಸ್ಕೃತಿಗೆ ಶಾಸಕರು ಮರುಳಾಗುವುದು ಬೇಡ

ಶಾಸಕರು ಹಾಗೂ ಇತರ ಅತಿಗಣ್ಯ ವ್ಯಕ್ತಿಗಳಿಗೆ (ವಿಐಪಿ) ಸುಗಮವಾಗಿ ಸಂಚರಿಸಲು ಅನುಕೂಲ ಆಗುವಂತೆ ಟೋಲ್ ಕೇಂದ್ರಗಳಲ್ಲಿ ಸೂಕ್ತ ವ್ಯವಸ್ಥೆ ಮಾಡಿಕೊಡಲಾಗುವುದು ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಅವರು ವಿಧಾನಸಭೆಯಲ್ಲಿ ಭರವಸೆ ನೀಡಿದ್ದಾರೆ. ಅಲ್ಲದೆ, ಆಂಬುಲೆನ್ಸ್ ಸಂಚಾರಕ್ಕೆ ಇರುವ ಪ್ರತ್ಯೇಕ ಲೇನ್‌ನಲ್ಲಿ ಶಾಸಕರು ಹಾಗೂ ಇತರ ವಿಐಪಿಗಳ ಸುಗಮ ಸಂಚಾರಕ್ಕೆ ಸಹ ಅವಕಾಶ ಕಲ್ಪಿಸಲು ಕಟ್ಟುನಿಟ್ಟಿನ ಸೂಚನೆ ನೀಡಲಾಗುವುದು ಎಂದು ಸದನದಲ್ಲೇ ಭರವಸೆ ನೀಡಿದ್ದಾರೆ. ಟೋಲ್ ಕೇಂದ್ರಗಳಲ್ಲಿ ತಮಗೆ ವಿಶೇಷ ಮನ್ನಣೆ ಇರಬೇಕು ಎಂದು ಕೆಲವು ಶಾಸಕರು ಸದನದಲ್ಲಿ ಒತ್ತಾಯಿಸಿದ್ದು, ಸರ್ಕಾರವು ಅವರ ಒತ್ತಾಯಕ್ಕೆ ಮಣಿದಿದ್ದು ಸರಿಯೇ ಎಂಬುದು ಆತ್ಮಾವಲೋಕನಕ್ಕೆ ಸೂಕ್ತವಾದ ವಿಷಯ. ಮಳವಳ್ಳಿ ಕ್ಷೇತ್ರದ ಶಾಸಕ, ಜೆಡಿಎಸ್‌ನ ಕೆ. ಅನ್ನದಾನಿ ಅವರ ಗಮನ ಸೆಳೆಯುವ ಸೂಚನೆಗೆ ಪ್ರತಿಯಾಗಿ ಸಚಿವ ಪಾಟೀಲ ಅವರು, ಆಂಬುಲೆನ್ಸ್‌ಗೆ ಮೀಸಲಾದ ಲೇನ್ ಅನ್ನು ಶಾಸಕರು ಹಾಗೂ ಇತರ ವಿಐಪಿಗಳು ಬಳಸಬಹುದು ಎಂದು ಹೇಳಿದ್ದಾರೆ. ಅನ್ನದಾನಿ ಅವರ ಆಗ್ರಹವನ್ನು ಅವರ ಪಕ್ಷದ ಇತರ ಕೆಲವು ಶಾಸಕರೂ ಬೆಂಬಲಿಸಿದ್ದರು. ವಾಹನಗಳು ಟೋಲ್ ಕೇಂದ್ರಗಳನ್ನು ದಾಟಿ ಹೋಗಲು ಈಗ ಮೊದಲಿನಷ್ಟು ಸಮಯ ತೆಗೆದುಕೊಳ್ಳುತ್ತಿಲ್ಲ. ಫಾಸ್ಟ್‌ಟ್ಯಾಗ್ ವ್ಯವಸ್ಥೆಯು ಎಲ್ಲ ಕಡೆ ಜಾರಿಗೆ ಬಂದ ನಂತರ ಆಗಿರುವ ಸುಧಾರಣೆ ಇದು. ಈ ಮಾತಿಗೆ ಕೆಲವು ಅಪವಾದಗಳು ಇರಬಹುದು. ಆದರೆ, ಟೋಲ್ ಕೇಂದ್ರಗಳಲ್ಲಿ ಸರತಿ ಸಾಲಿನಲ್ಲಿ ವಾಹನಗಳನ್ನು ನಿಲ್ಲಿಸಿಕೊಳ್ಳುವುದು ತಮ್ಮ ಘನತೆಗೆ ತಕ್ಕುದಲ್ಲ ಎಂದು ಕೆಲವು ಶಾಸಕರಿಗೆ ಅನ್ನಿಸಿದೆ. ಚುನಾಯಿತ ಪ್ರತಿನಿಧಿಗಳಿಗೆ ಟೋಲ್ ಪಾವತಿಯಿಂದ ವಿನಾಯಿತಿ ಇದೆ. ಆದರೆ ಅವರು ಟೋಲ್ ಕೇಂದ್ರಗಳಲ್ಲಿ ತಮ್ಮ ಗುರುತಿನ ಚೀಟಿಯನ್ನು ತೋರಿಸಬೇಕು. ಚುನಾಯಿತ ಪ್ರತಿನಿಧಿಗಳ ಸ್ಥಾನಮಾನವನ್ನು ಇತರರು ದುರುಪಯೋಗ ಮಾಡಿಕೊಳ್ಳಬಾರದು ಎಂಬ ಉದ್ದೇಶದಿಂದ ಈ ಕ್ರಮ. ಆದರೆ, ಗುರುತಿನ ಚೀಟಿಯನ್ನು ತೋರಿಸುವುದು ಹಾಗೂ ಆ ಚೀಟಿಯನ್ನು ಟೋಲ್ ಸಿಬ್ಬಂದಿ ಪರಿಶೀಲಿಸುವುದು ಚುನಾಯಿತ ಪ್ರತಿನಿಧಿಗಳಿಗೆ ಅವಮಾನಕರ ಎಂಬ ಅರ್ಥ ಬರುವ ಮಾತುಗಳನ್ನು ಕೆಲವು ಶಾಸಕರು ಆಡಿದ್ದಾರೆ.



ತಮಗೆ ವಿಶೇಷ ಮನ್ನಣೆ ಬೇಕು ಎಂದು ತಾವು ಬಯಸುವುದನ್ನು ಕಂಡು ಜನ ಏನೆಂದುಕೊಂಡಾರು ಎಂಬ ಬಗ್ಗೆ ಜನಪ್ರತಿನಿಧಿಗಳು ಆಲೋಚಿಸಿದಂತೆ ಕಾಣುತ್ತಿಲ್ಲ

ತಮಗೆ ವಿಶೇಷ ಮನ್ನಣೆ ಬೇಕು ಎಂದು ಜನಪ್ರತಿನಿಧಿಗಳು ಬಯಸುವುದನ್ನು ಕಂಡು ಜನ ಏನೆಂದುಕೊಂಡಾರು ಎಂಬ ಬಗ್ಗೆ ಆಡಳಿತ ಪಕ್ಷದ ಸದಸ್ಯರಾಗಲೀ ಸರ್ಕಾರದ ಪ್ರತಿನಿಧಿಗಳಾಗಲೀ ವಿರೋಧ ಪಕ್ಷಗಳ ಹಿರಿಯರಾಗಲೀ ಆಲೋಚಿಸಿದಂತೆ ಕಾಣುತ್ತಿಲ್ಲ. ವಿಐಪಿ ಸಂಸ್ಕೃತಿಯ ಬಗ್ಗೆ ಜನರಲ್ಲಿ ಮೂಡುತ್ತಿರುವ ಸಿಟ್ಟಿನ ಬಗ್ಗೆಯೂ ಅವರಿಗೆ ಅರಿವು ಇದ್ದಂತಿಲ್ಲ. ಆದರೆ, ಸದನದಲ್ಲಿ ಈ ಕುರಿತು ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ವಿಧಾನಸಭೆಯ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಜನರ ಅನಿಸಿಕೆಗಳಿಗೆ ದನಿ ಕೊಡುವಂತಹ ಮಾತುಗಳನ್ನು ಆಡಿದ್ದಾರೆ. ‘ಇಲ್ಲಿ (ಸದನದಲ್ಲಿ) ಜನರ ಸಮಸ್ಯೆಗಳ ಬಗ್ಗೆ ಚರ್ಚಿಸೋಣ. 224 ಜನರ (ವಿಧಾನಸಭೆ ಸದಸ್ಯರ) ಸಮಸ್ಯೆಯ ಬಗ್ಗೆ ಪ್ರತ್ಯೇಕವಾಗಿ ಕುಳಿತು ಚರ್ಚೆ ಮಾಡೋಣ’ ಎಂದು ಕಾಗೇರಿ ಹೇಳಿದ್ದಾರೆ. ಈ ಕಿವಿಮಾತು ಹೇಳುವ ಮೂಲಕ, ಪ್ರತ್ಯೇಕ ಲೇನ್ ಬಯಸಿ ನಡೆಯುತ್ತಿದ್ದ ಚರ್ಚೆಗೆ ಒಂದು ಅಂತ್ಯ ಹೇಳುವ ಯತ್ನ ನಡೆಸಿದ್ದಾರೆ. ದೇಶದಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಹತ್ತುಹಲವು ವಿಶೇಷ ಸೌಲಭ್ಯಗಳು ಈಗಾಗಲೇ ಇವೆ. ಆದರೆ, ಅವು ಯಾವುವೂ ಅವರಿಗೆ ಪೂರ್ತಿ ಸಮಾಧಾನ ನೀಡಿದಂತೆ ಕಾಣುತ್ತಿಲ್ಲ. ಬೇಡಿಕೆಗಳು ಹೊಸ ರೂಪವನ್ನು ಹೊತ್ತು ಬರುತ್ತಲೇ ಇರುತ್ತವೆ. ಅವರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ತಮ್ಮ ಕೈಯಲ್ಲೇ ಇರುವ ಅಧಿಕಾರವನ್ನು ಬಳಸಿಕೊಳ್ಳುತ್ತಾ ಇರುತ್ತಾರೆ.

ಕೋವಿಡ್ ಸಾಂಕ್ರಾಮಿಕದ ಕಾರಣದಿಂದಾಗಿ ರಾಜ್ಯದಲ್ಲಿ ವಿಧಾನಮಂಡಲದ ಎರಡೂ ಸದನಗಳು ಬಹಳ ಕಾಲದ ನಂತರ ಕಲಾಪ ನಡೆಸಿದ್ದವು. ಜನರನ್ನು ತೀವ್ರವಾಗಿ ಕಾಡುತ್ತ ಇರುವ ಹತ್ತು ಹಲವು ಸಮಸ್ಯೆಗಳನ್ನು ಶಾಸಕರು ಅಲ್ಲಿ ಪ್ರಸ್ತಾಪಿಸಬೇಕಾಗಿತ್ತು. ಸರ್ಕಾರದ ಕಿವಿ ಹಿಂಡಿ, ಸಂಬಂಧಪಟ್ಟ ಸಚಿವರಿಂದ ಉತ್ತರ ಪಡೆದುಕೊಳ್ಳಬೇಕಿತ್ತು. ತಮ್ಮನ್ನು ಮಾತ್ರ ಕಾಡುತ್ತಿರುವ ಸಮಸ್ಯೆಯ ಬಗ್ಗೆ ಸದನದಲ್ಲಿ ಪ್ರಸ್ತಾಪಿಸುವ ಅಗತ್ಯ ಇತ್ತೇ? ಟೋಲ್ ಕೇಂದ್ರಗಳಲ್ಲಿ ವಿಐಪಿಗಳಿಗೆ ಮನ್ನಣೆ ನೀಡುವ ಕುರಿತ ಚರ್ಚೆಯಿಂದ ಜನಸಾಮಾನ್ಯರಿಗೆ ಯಾವ ಪ್ರಯೋಜನವೂ ಆದಂತಿಲ್ಲ. ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಐಪಿ ಸಂಸ್ಕೃತಿ ಬಗ್ಗೆ ಒಲವು ಹೊಂದಿಲ್ಲ ಎಂಬುದು ಅವರ ಕೆಲವು ನಡೆಗಳಿಂದ ಗೊತ್ತಾಗುತ್ತದೆ. ಬೊಮ್ಮಾಯಿ ಅವರ ಕೆಲವು ನಡೆಗಳು ಇತರ ಜನಪ್ರತಿನಿಧಿಗಳಿಗೆ ಮಾದರಿ ಆಗಬಹುದು. ಹಾಗೆಯೇ, ವಿಧಾನಸಭಾಧ್ಯಕ್ಷ ಕಾಗೇರಿ ಅವರು ಹೇಳಿದ ‘ಇಲ್ಲಿ (ಸದನದಲ್ಲಿ) ನಾವು ಉಳಿದವರ (ಜನರ) ಸಮಸ್ಯೆಗಳ ಬಗ್ಗೆ ಚರ್ಚಿಸೋಣ’ ಎನ್ನುವ ಮಾತು ಕೂಡ ಎಲ್ಲ ಶಾಸಕರಿಗೆ ಒಂದು ಒಳ್ಳೆಯ ಕಿವಿಮಾತು ಆಗಬಹುದು. ತಮಗೆ ತಾವೇ ಪ್ರಾಧಾನ್ಯ ಕೊಟ್ಟುಕೊಳ್ಳುವ ವಿಐಪಿ ಸಂಸ್ಕೃತಿಯಿಂದ ಸಮುದಾಯಕ್ಕೆ ಹೆಚ್ಚಿನ ಪ್ರಯೋಜನವೇನೂ ಇಲ್ಲ.

ದಿನದ ಟ್ವೀಟ್



ಕನ್ನಡ ಸಿನಿಮಾ ಅಸ್ತಿತ್ವ...

ಕನ್ನಡ ಚಿತ್ರರಂಗದ ಅಸ್ತಿತ್ವ ನಿಂತಿರುವುದೇ ಕನ್ನಡಿಗರು ಕನ್ನಡದಲ್ಲಿ ಮನರಂಜನೆ ಪಡೆಯುವ ವಿಷಯದ ಮೇಲೆ. ಕನ್ನಡಿಗರನ್ನು ಕನ್ನಡಕ್ಕೆ ಹಿಡಿದು ಇಟ್ಟುಕೊಳ್ಳುವುದು ಬಹಳ ಮುಖ್ಯ. ಕನ್ನಡ ಚಿತ್ರ ಅಂದರೆ ಕನ್ನಡ ಚಿತ್ರರಂಗದಲ್ಲಿ ಮಾಡಿದ ಚಿತ್ರ ಮತ್ತು ಕನ್ನಡಕ್ಕೆ ಡಬ್ ಆದ ಚಿತ್ರವೂ ಹೌದು. ಇವೆಲ್ಲವೂ ಸತತ ಬಿಡುಗಡೆ ಕಾಣಬೇಕು.
#JamesBondInKannada

ನರೇನ್ ಮರೋಲ್, ನಾಗರಿಕ

ಕಿಡಿನುಡಿ

ನಾನು ಚಡ್ಡಿ ಹಾಕಿಕೊಳ್ಳುವ ಕಾಲದಲ್ಲಿ ಲೀಟರ್ ಪೆಟ್ರೋಲ್‌ಗೆ 50 ಪೈಸೆ ಇತ್ತು. ಪ್ಯಾಂಟ್ ಹಾಕುವ ಕಾಲಕ್ಕೆ ಜಾಸ್ತಿ ಆಗಿತ್ತು. ಕ್ವಿಂಟಲ್ ಗೋಧಿಗೆ ₹ 30, ಜೋಳಕ್ಕೆ ₹ 30 ಇತ್ತು. ಈಗ ₹ 3 ಸಾವಿರ ದಾಟಿದೆ. ಆಗ ಕೂಲಿ ₹ 5 ಇತ್ತು. ಅದನ್ನೆಲ್ಲ ಈಗ ಕೇಳುತ್ತಾ ಕೂರೋಕ್ಕಾಗುತ್ತಾ?



ಜಿ.ಎಂ.ಸಿದ್ದೇಶ್ವರ, ಸಂಸದ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಶನಿವಾರ, 28-9-1996

- **ಸರ್ಕಾರಿ ಹುದ್ದೆಯಲ್ಲಿ ಗ್ರಾಮೀಣ ಅಭ್ಯರ್ಥಿಗೆ ಶೇ 10 ಕೃಪಾಂಕ ಸಂಪುಟ ನಿರ್ಧಾರ**

ಬೆಂಗಳೂರು, ಸೆ. 27– ಸರ್ಕಾರಿ ಹುದ್ದೆಗಳ ನೇಮಕಾತಿಗೆ ಹಾಗೂ ವೃತ್ತಿಪರ ಶಿಕ್ಷಣ ಪ್ರವೇಶಕ್ಕೆ ಗ್ರಾಮೀಣ ಪ್ರದೇಶಗಳ ಅಭ್ಯರ್ಥಿಗಳಿಗೆ ಅನುಕೂಲ ಆಗುವಂತೆ ಮಾಡಲು ಶೇ 10ರಷ್ಟು ಕೃಪಾಂಕ ನೀಡಲು ರಾಜ್ಯ ಸಚಿವ ಸಂಪುಟ ಇಂದು ಇಲ್ಲಿ ತೀರ್ಮಾನಿಸಿದೆ.

ರಾಜ್ಯದಲ್ಲಿ 50,000ದವರೆಗೆ ಮತ್ತು ಅದಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪ್ರದೇಶಗಳಲ್ಲಿ 1ರಿಂದ 10ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುವವರನ್ನು ಗ್ರಾಮೀಣ ಅಭ್ಯರ್ಥಿಗಳ ವ್ಯಾಪ್ತಿಗೆ ತರಲು ಸಚಿವ ಸಂಪುಟ ನಿರ್ಧರಿಸಿದೆ.

- **ಅಫ್ಗಾನಿಸ್ತಾನದ ಮಾಜಿ ಅಧ್ಯಕ್ಷ ನಜೀಬುಲ್ಲಾ ಹತ್ಯೆ: ಅಧ್ಯಕ್ಷ ರಬ್ಬಾನಿ, ಪ್ರಧಾನಿ ಪರಾರಿ**

ಕಾಬೂಲ್, ಸೆ. 27 (ಎಪಿ, ಪಿಟಿಐ, ಎಎಫ್‌ಪಿ, ರಾಯಿಟರ್ಸ್)– ಅಫ್ಗಾನಿಸ್ತಾನದ ರಾಜಧಾನಿ ಕಾಬೂಲ್ ನಗರವನ್ನು ತಾಲಿಬ್ ಇಸ್ಲಾಂ ಉಗ್ರಗಾಮಿಗಳು ಇಂದು ಮುಂಜಾನೆ ಕ್ಷಿಪ್ರ ದಾಳಿ ನಡೆಸಿ ವಶಪಡಿಸಿಕೊಂಡಿದ್ದಾರೆ. ಮಾಜಿ ಅಧ್ಯಕ್ಷ ನಜೀಬುಲ್ಲಾ ಅವರನ್ನು ಭೀಕರವಾಗಿ ಕೊಲ್ಲಲಾಗಿದೆ. ಹಾಲಿ ಅಧ್ಯಕ್ಷ ಬುರ್ಹಾನುದ್ದೀನ್ ರಬ್ಬಾನಿ ಹಾಗೂ ಪ್ರಧಾನಿ ಗುಲ್ಬುದ್ದೀನ್ ಹೆಕ್‌ಮತಿಯಾರ್ ಅವರು ಪರಾರಿಯಾಗಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 28-9-1971

- **ಕೇಂದ್ರ- ರಾಜ್ಯಗಳ ಬಾಂಧವ್ಯದ ಬಗ್ಗೆ ಅನಗತ್ಯ ತಪ್ಪು ಅಭಿಪ್ರಾಯ: ಇಂದಿರಾ**

ಮದ್ರಾಸ್, ಸೆ. 27– ‘ರಾಜ್ಯಗಳ ಸ್ವಾಯತ್ತತೆ ಬೇಡಿಕೆ ಮುಖ್ಯವಾಗಿ ಆರ್ಥಿಕ ಪ್ರಶ್ನೆ. ಎಲ್ಲ ಅಧಿಕಾರ ಕೇಂದ್ರ ಸರ್ಕಾರಕ್ಕೇ ಇದೆ, ರಾಜ್ಯಗಳಿಗೆ ಯಾವ ಅಧಿಕಾರವೂ ಇಲ್ಲ ಎಂಬ ಮಿಥ್ಯಾಭಾವನೆಯನ್ನು ಸೃಷ್ಟಿಸಲಾಗುತ್ತಿದೆ’ ಎಂದು ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರು ಅಭಿಪ್ರಾಯ ಪಟ್ಟಿದ್ದಾರೆ.

‘ಕೇಂದ್ರ- ರಾಜ್ಯಗಳ ಬಾಂಧವ್ಯದ ಬಗೆಗೆ ಅನವಶ್ಯಕವಾದ ತಪ್ಪು ಅಭಿಪ್ರಾಯಗಳು ಹೇರಳವಾಗಿ ಪ್ರಚಲಿತವಾಗಿವೆ. ಎಲ್ಲ ರಾಜ್ಯಗಳೂ ಹೇರಳವಾಗಿ ಹಣವನ್ನು ಕೇಳುತ್ತಿವೆ. ಇಷ್ಟು ಹೇರಳವಾಗಿ ಹಣ ನೀಡಿದರೂ ಅದರಿಂದ ಗೊಂದಲವೇ ಉದ್ಭವಿಸುತ್ತದೆ ಎಂದು ಅವರು ಹೇಳಿದ್ದಾರೆ.

- **ರಾಜ್ಯ ಸಂಕೇತದ ಬದಲು ರಾಷ್ಟ್ರದ ಸಂಕೇತವಾಗಿ ಭಾರತಮಾತೆ**

ಬೆಂಗಳೂರು, ಸೆ. 27– ರಾಜ್ಯ ಸಂಕೇತದ ಸ್ಥಾನದಲ್ಲಿ ರಾಷ್ಟ್ರೀಯ ಸಂಕೇತವನ್ನಿಡುವ ಉದ್ದೇಶದಿಂದ ಮೈಸೂರಿನ ದಸರಾ ಮೆರವಣಿಗೆಯಲ್ಲಿ ಭಾರತಮಾತೆಯ ಚಿತ್ರವನ್ನು ಒಯ್ಯಲು ನಿರ್ಧರಿಸಲಾಗಿದೆ ಎಂದು ರಾಜ್ಯಪಾಲ ಶ್ರೀ ಧರ್ಮವೀರ ಅವರು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

ಭಾರತಮಾತೆಯ ಬದಲು ಶ್ರೀ ಚಾಮುಂಡೇಶ್ವರಿ ಚಿತ್ರದ ಮೆರವಣಿಗೆಯನ್ನು ನಡೆಸಬೇಕೆಂದು ಕೆಲವರು ಮಾಡಿರುವ ಸಲಹೆಯನ್ನು ಪ್ರಸ್ತಾಪಿಸಿದಾಗ ರಾಜ್ಯಪಾಲರು ಈಗ ಬದಲಾವಣೆಗೆ ಕಾಲವಲ್ಲವೆಂದರು.

ಕಟ್ಟಡಗಳ ನಿರ್ಮಿಸುವುದು ಮತ್ತು ಒಡೆಯುವುದು ಆಧುನಿಕತೆಯ ಅಹಂಕಾರ

ಗಾಂಧೀಜಿಗೆ ಮುಚ್ಚಿದ ಸಾಬರಮತಿ ಬಾಗಿಲು



ಪಡಸಾಲೆ

ರಘುನಾಥ ಚ.ಹ.

ಅಮೆರಿಕ ಭೇಟಿ ಕೈಗೊಂಡ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸ್ವಾಗತಿಸುವ ಸಂದರ್ಭದಲ್ಲಿ ಆತಿಥೇಯ ರಾಷ್ಟ್ರದ ಅಧ್ಯಕ್ಷ ಜೋ ಬೈಡನ್ ಅವರಿಗೆ ಗಾಂಧಿ ನೆನಪಾಗಿದ್ದಾರೆ. ಗಾಂಧೀಜಿ ಅನುಸರಿಸಿದ ಅಹಿಂಸೆ, ಸಹಿಷ್ಣುತೆ ಹಾಗೂ ಹ್ಯೂಮನ್ ಟ್ರಸ್ಟಿಶಿಪ್ ಮೌಲ್ಯಗಳು ಹಿಂದೆಂದಿಗಿಂತಲೂ ಇಂದು ಹೆಚ್ಚು ಮಹತ್ವದ್ದೆನ್ನಿಸಿವೆ ಎಂದು ಬೈಡನ್ ಹೇಳಿದ್ದಾರೆ. ಅಮೆರಿಕದ ನಿಕಟಪೂರ್ವ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 2020ರಲ್ಲಿ ಸಾಬರಮತಿಗೆ ಭೇಟಿ ನೀಡಿದಾಗ, ‘ಈ ಅದ್ಭುತ ಭೇಟಿಗಾಗಿ ನನ್ನ ಅತ್ಯುತ್ತಮ ಗೆಳೆಯ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದಗಳು’ ಎಂದು ಸಂದರ್ಶಕರ ಪುಸ್ತಕದಲ್ಲಿ ಬರೆದಿದ್ದರು. ಅಮೆರಿಕದ ಹಾಲಿ ಹಾಗೂ ಮಾಜಿ ಅಧ್ಯಕ್ಷರ ಮಾತುಗಳು, ಮಹಾತ್ಮನ ಸಾಂದರ್ಭಿಕತೆಯನ್ನು ಮೀರಿ ಸರಳತೆಯ ಸೌಂದರ್ಯ ಮತ್ತು ಅದ್ದೂರಿತನದ ವೈಭವದ ಕವಲು ದಾರಿಗಳನ್ನು ಸೂಚಿಸುವಂತಿವೆ.

ಸಾಬರಮತಿಯ ಆಶ್ರಮದ ಮಣ್ಣಿನಲ್ಲಿ ನಿಂತಾಗ ಟ್ರಂಪ್ ಅವರಿಗೆ ಗಾಂಧಿಸ್ಮೃತಿಗಳು ಕಾಡಬೇಕಾಗಿತ್ತು. ಆದರೆ, ಆಶ್ರಮಕ್ಕೆ ಆಗಮಿಸುವ ಮುನ್ನ ಅಹಮದಾಬಾದ್‌ನಲ್ಲಿ 22 ಕಿ.ಮೀ. ಉದ್ದದ ರೋಡ್ ಶೋನಲ್ಲಿ ಭಾಗಿಯಾಗಿದ್ದ ಅವರಿಗೆ, ಆ ಸಂಭ್ರಮವನ್ನು ಆಯೋಜಿಸಿದ ಗೆಳೆಯನೇ ಮುಖ್ಯನೆನ್ನಿಸಿರಬೇಕು.

ಅಮೆರಿಕ ಭೇಟಿ ಸಂದರ್ಭದಲ್ಲಿ ಮೋದಿ ಅವರು ಕೂಡ ಸಾಮಾಜಿಕ ನ್ಯಾಯದ ಗುರಿಯನ್ನು ಹೊಂದಿರುವ ಗಾಂಧೀಜಿಯ ಸಾಮಾಜಿಕ ಮತ್ತು ಆರ್ಥಿಕ ತತ್ವಶಾಸ್ತ್ರವನ್ನು ನೆನಪಿಸಿಕೊಂಡಿದ್ದಾರೆ. ಭೂಮಿಯನ್ನು ಮುಂದಿನ ಪೀಳಿಗೆಗೆ ಸುರಕ್ಷಿತವಾಗಿ ಹಸ್ತಾಂತರಿಸುವುದಕ್ಕಾಗಿ ಗಾಂಧೀಜಿಯ ಧರ್ಮದರ್ಶಿತ್ವ ಪರಿಕಲ್ಪನೆ ಪೂರಕವಾಗಿದೆ ಎನ್ನುವುದು ಮಾತಿನ ಸಾರ. ಹಾಗಾದರೆ, ಗಾಂಧಿ ಮೌಲ್ಯಗಳನ್ನು ಅವರು ತಮ್ಮ ಆಡಳಿತದಲ್ಲಿ ಹಾಗೂ ವಿಚಾರಧಾರೆಯಲ್ಲಿ ಆಚರಣೆಗೆ ತರಲು ಪ್ರಯತ್ನಿಸಿದ್ದಾರೆಯೇ? ಇದಕ್ಕೆ ಉತ್ತರವಾಗಿ ಸಾಬರಮತಿ ಆಶ್ರಮದ ಪುನರುಜ್ಜೀವನ ಹಾಗೂ ಜಲಿಯನ್ ವಾಲಾಬಾಗ್ ಸ್ಮಾರಕಕ್ಕೆ ಹೊಸರೂಪು ನೀಡಿರುವ ಪ್ರಯತ್ನಗಳನ್ನು ಗಮನಿಸಬಹುದು.

ನೂರು ವರ್ಷಗಳು ತುಂಬಿರುವ ಸಾಬರಮತಿ ಆಶ್ರಮದ ಪುನರುಜ್ಜೀವನಕ್ಕೆ, ಮೋದಿ ಅವರ ಮಾರ್ಗದರ್ಶನದಲ್ಲೇ ನಡೆಯುತ್ತಿರುವ ಗುಜರಾತ್ ಸರ್ಕಾರ ಮುಂದಾಗಿದೆ. ಆಶ್ರಮದ ಜಾಗದಲ್ಲಿ ಆಧುನಿಕ ಕಟ್ಟಡ ಸಮುಚ್ಚಯಗಳು ತಲೆಯೆತ್ತಲಿವೆ. ಆಶ್ರಮವಾಸಿಗಳ ಸ್ಥಳಾಂತರ ಪ್ರಯತ್ನ ಆರಂಭವಾಗಿದ್ದು, ಅವರಿಗೆ ಹಂಚಲು ಫ್ಲ್ಯಾಟ್‌ಗಳನ್ನು ಖರೀದಿಸಲಾಗುತ್ತಿದೆ.

ಪುನರುಜ್ಜೀವನದ ಮೂಲಕ ವಿಶ್ವ ಪ್ರವಾಸಿನಕ್ಷೆಯಲ್ಲಿ ಸಾಬರಮತಿಗೆ ಪ್ರಮುಖ ಸ್ಥಾನ ದೊರಕಿಸಿಕೊಡುವುದು ಸರ್ಕಾರದ ಉದ್ದೇಶ. ಆಶ್ರಮದ ಪುನರುಜ್ಜೀವನದ ಯೋಜನೆ ಮೇಲ್ನೋಟಕ್ಕೆ ಆಕರ್ಷಕವಾಗಿದೆ. ಪ್ರಶ್ನೆ ಇರುವುದು ಈ ಕೆಡವಿ ಕಟ್ಟುವ ಪ್ರಯತ್ನ ಗಾಂಧಿ ಅವರ ಆಶಯ-ನಂಬಿಕೆಗಳಿಗೆ ಪೂರಕವಾಗಿದೆಯೇ ಎನ್ನುವುದರಲ್ಲಿ.


ಗಾಂಧೀಜಿ ಪಾಲಿಗೆ ಸಾಬರಮತಿ ಆಶ್ರಮ ಕೇವಲ ನೆಲೆಯಾಗಿರಲಿಲ್ಲ; ಹದಿಮೂರು ವರ್ಷಗಳ ಕಾಲ ಅವರು ನಂಬಿದ ಸತ್ಯ ಮತ್ತು ಅಹಿಂಸೆಗಳ ಅನುಷ್ಠಾನದ ಪ್ರಯೋಗಶಾಲೆಯಾಗಿತ್ತು. ಕೃಷಿ ಮತ್ತು ಪಶುಪಾಲನೆ ಚಟುವಟಿಕೆಗಳಿಗೆ ಒಡಲಾಗಿತ್ತು.

ಸಾಬರಮತಿ ನದಿ ದಂಡೆಯಲ್ಲಿ ಆಶ್ರಮ ರೂಪುಗೊಂಡಿದ್ದು 1917ರ ಜೂನ್ 17ರಂದು. ಅದಕ್ಕೆ ಎರಡು ವರ್ಷ ಮೊದಲೇ (1915, ಮೇ 2) ಅಹಮದಾಬಾದ್‌ಗೆ ಸಮೀಪದಲ್ಲಿ ಭಾರತದಲ್ಲಿನ ತಮ್ಮ ಮೊದಲ ಆಶ್ರಮವನ್ನು ಗಾಂಧೀಜಿ ಆರಂಭಿಸಿದ್ದರು. ಅವರ ಸ್ನೇಹಿತ ಮತ್ತು ಬ್ಯಾರಿಸ್ಟರ್ ಆಗಿದ್ದ ಜೀವನ್‌ಲಾಲ್ ದೇಸಾಯಿ ನೀಡಿದ ಜಾಗದಲ್ಲಿ ರೂಪುಗೊಂಡಿದ್ದ ‘ಕೊಚಾರ್ಬ್ ಆಶ್ರಮ’ವನ್ನು ‘ಸತ್ಯಾಗ್ರಹ ಆಶ್ರಮ’ ಎಂದೂ ಕರೆಯಲಾಗುತ್ತಿತ್ತು. ಪಶುಪಾಲನೆ ಮತ್ತು ಕೃಷಿಯ ಉದ್ದೇಶಕ್ಕಾಗಿ ಗಾಂಧೀಜಿ ಅವರಿಗೆ ಹೆಚ್ಚಿನ ಜಾಗದ ಅವಶ್ಯಕತೆ ಕಂಡಿದ್ದರಿಂದಾಗಿ, ಸಾಬರಮತಿ ನದಿ ದಂಡೆಗೆ ಆಶ್ರಮವನ್ನು (36 ಎಕರೆ ಪ್ರದೇಶ) ಸ್ಥಳಾಂತರಿಸಲಾಯಿತು.

ಸಾಬರಮತಿ ನದಿ ದಂಡೆಗೆ ಪುರಾಣಪ್ರಭೆಯೂ ಇದೆ. ಇಂದ್ರನ ವಜ್ರಾಯುಧಕ್ಕೆ ತನ್ನ ಬೆನ್ನುಮೂಳೆಯನ್ನು ದಾನವಾಗಿ ಕೊಟ್ಟ ದಧೀಚಿ ಮಹರ್ಷಿಯ ಆಶ್ರಮ ತಾಣಗಳಲ್ಲಿ ಸಾಬರಮತಿಯೂ ಒಂದೆನ್ನುವುದು ನಂಬಿಕೆ. ಜೈಲು ಮತ್ತು ಶವಾಗಾರದ ನಡುವೆ ಈ ಆಶ್ರಮವಿದೆ. ಈ ಎರಡೂ ಸ್ಥಳಗಳಿಗೆ ಸತ್ಯಾಗ್ರಹಿ ಏಕರೂಪದಲ್ಲಿ ಹೋಗಬಲ್ಲ ಎನ್ನುವುದು ಗಾಂಧೀಜಿ ನಂಬಿಕೆಯಾಗಿತ್ತು.

1930ರ ಮಾರ್ಚ್ 12ರಂದು ಸಾಬರಮತಿ ಆಶ್ರಮದಿಂದ ಹೊರಟ ಗಾಂಧೀಜಿ, ಏಪ್ರಿಲ್ 5ರಂದು ದಂಡಿಯಲ್ಲಿ ಉಪ್ಪು ತಯಾರಿಸುವ ಮೂಲಕ ಬ್ರಿಟಿಷ್ ಪ್ರಭುತ್ವದ ವಿರುದ್ಧ ಸ್ಪಷ್ಟ ಬಂಡಾಯ ಸಾರಿದ್ದರು. ಆ ‘ದಂಡಿ ಯಾತ್ರೆ’ ಲಕ್ಷಾಂತರ ಭಾರತೀಯರಲ್ಲಿ ಸ್ವಾತಂತ್ರ್ಯದ ಜಾಗೃತಿ ಮೂಡಿಸಿತು. ಅದರಿಂದ ತಲ್ಲಣಗೊಂಡು ಕೆರಳಿದ ಬ್ರಿಟಿಷರು ಸಾಬರಮತಿ ಆಶ್ರಮವನ್ನು ಸ್ವಾಧೀನಪಡಿಸಿಕೊಂಡರು. ಇದು ಸಾಬರಮತಿಯ ತ್ಯಾಗ-ಸತ್ಯಾಗ್ರಹ-ಅಹಿಂಸೆ-ಸ್ವಾತಂತ್ರ್ಯಪ್ರೇಮದ ಇತಿಹಾಸ.

ಸಾಬರಮತಿ ಎನ್ನುವುದು ಗಾಂಧೀಜಿಯ ಸತ್ಯನಿಷ್ಠೆ ಮತ್ತು ಸರಳತೆಗೆ ಕಾರ್ಯಕ್ಷೇತ್ರವಾಗಿ ಒದಗಿಬಂದ ಮಣ್ಣು. ಅದನ್ನು ಆಧುನಿಕಗೊಳಿಸಲು ನಡೆಯುತ್ತಿರುವ ಪ್ರಯತ್ನಗಳ ಹಿಂದಿರುವುದು ಅಗ್ಗದ ಪ್ರದರ್ಶನಪ್ರಿಯತೆಯೇ ಹೊರತು ಗಾಂಧಿಯ ಸರಳತೆ-ಸತ್ಯನಿಷ್ಠೆಯಲ್ಲ.




ಕಟ್ಟಡಗಳನ್ನು ನಿರ್ಮಿಸುವುದು ಮತ್ತು ಒಡೆಯುವುದು ಆಧುನಿಕತೆಯ ಅಹಂಕಾರವನ್ನು ತಣಿಸುವ ಮಾರ್ಗಗಳು. ಆದರೆ, ರಾಜಕಾರಣದೊಂದಿಗೆ ಗಾಂಧಿ ಬೆಸೆದ ಅಧ್ಯಾತ್ಮ ಪರಂಪರೆ, ಕಟ್ಟುವ ಇಲ್ಲವೇ ಕೆಡಹುವ ಕ್ರಿಯೆಗಳ ಪೊಳ್ಳುತನದ ಕುರಿತು ಮಾತನಾಡುತ್ತದೆ. ನೆಹರೂಗೆ ಬರೆದ ಪತ್ರವೊಂದರಲ್ಲಿ, ‘ಹಳ್ಳಿಗಳ ಸರಳತೆಯಲ್ಲಿ ಮಾತ್ರವೇ ಸತ್ಯ ಹಾಗೂ ಅಹಿಂಸೆಯ ದರ್ಶನವನ್ನು ಪಡೆದುಕೊಳ್ಳಲು ಸಾಧ್ಯ’ ಎಂದು ಗಾಂಧಿ ಹೇಳಿದ್ದಾರೆ. ಸಾಬರಮತಿಯೂ ಒಂದು ಹಳ್ಳಿ. ಗಾಂಧಿಯ ಬದುಕಿನ ಸರಳತೆ ಮತ್ತು ಸತ್ಯಪಾಲನೆಯ ದರ್ಶನ, ಆಶ್ರಮದ ಕುಟೀರಗಳಲ್ಲಿ ಮತ್ತು ಬಯಲಿನಲ್ಲಿ ಸಾಧ್ಯವೇ ಹೊರತು ಭವ್ಯ ಕಟ್ಟಡಗಳಲ್ಲಲ್ಲ. ಈ ವಿರೋಧಾಭಾಸದ ಕಾರಣದಿಂದಾಗಿಯೇ, ಬೈಡನ್‌ರೊಂದಿಗೆ ಜುಗಲ್‌ಬಂದಿ ಹಾಡುವಂತೆ ಗಾಂಧಿಯನ್ನು ನೆನಪಿಸಿಕೊಂಡಿರುವ ಮೋದಿ ಅವರಿಗಿಂತಲೂ, ಗಾಂಧಿ ಆಶ್ರಮದಲ್ಲಿ ಗೆಳೆಯನ ಕೃತಜ್ಞತೆಗೆ ಪಾತ್ರರಾದ ಪ್ರಧಾನಿಯೇ ಹೆಚ್ಚು ಸತ್ಯವೆನ್ನಿಸುತ್ತಾರೆ.

ಸಾಬರಮತಿ ಆಶ್ರಮಕ್ಕೆ ಹೈಟೆಕ್ ಸ್ಪರ್ಶ ನೀಡುವ ಪ್ರಯತ್ನದ ಜೊತೆಗೆ ಜಲಿಯನ್ ವಾಲಾಬಾಗ್ ಸ್ಮಾರಕದ ಸೌಂದರ್ಯಸ್ಪರ್ಶ ವಿದ್ಯಮಾನವನ್ನೂ ಒಟ್ಟಿಗೆ ನೋಡಬೇಕು. 1919ರ ಏಪ್ರಿಲ್ 13ರಂದು ಜಲಿಯನ್ ವಾಲಾಬಾಗ್‌ನಲ್ಲಿ ನಡೆದ ಹತ್ಯಾಕಾಂಡದಲ್ಲಿ ಸಾವಿರಾರು ಸ್ವಾತಂತ್ರ್ಯಪ್ರೇಮಿಗಳು ಬ್ರಿಟಿಷ್ ಪ್ರಭುತ್ವದ ಗುಂಡುಗಳಿಗೆ ಬಲಿಯಾಗಿದ್ದರು. ಆ ಹತ್ಯಾಕಾಂಡವನ್ನು ವಿರೋಧಿಸಿ ಗಾಂಧೀಜಿ ಅಹಮದಾಬಾದ್‌ನಲ್ಲಿ ಮೂರು ದಿನಗಳ ಉಪವಾಸ ಮಾಡಿದ್ದರು. ಹುತಾತ್ಮರ ಪಿಸುಮಾತುಗಳನ್ನು ಕೇಳಿಸಿಕೊಳ್ಳಬೇಕಾದ, ನತದೃಷ್ಟರ ಸ್ಮೃತಿಗಳನ್ನು ಅನುಭವಕ್ಕೆ ತಂದುಕೊಂಡು ಮನಸ್ಸುಗಳನ್ನು ಆರ್ದ್ರಗೊಳಿಸಬೇಕಾದ ಜಲಿಯನ್ ವಾಲಾಬಾಗ್ ಈಗ ಮೇಕಪ್ ಮೆತ್ತಿಕೊಂಡು ನಿಂತಿದೆ. ಸಾವು ಅಥವಾ ಹಸಿವೆಯನ್ನು ರಮ್ಯವಾಗಿ ತೋರಿಸುವ ವ್ಯಾಪಾರಿ ಸಿನಿಮಾದಂತೆ ಹುತಾತ್ಮರ ಉದ್ಯಾನ ಕಾಣಿಸುತ್ತಿದೆ; ಆ ದಾರಿಯಲ್ಲಿ ಸಾಬರಮತಿ ಆಶ್ರಮವೂ ನಡೆದಿದೆ.

ಸಾಬರಮತಿಯ ಸ್ಮೃತಿಗಳ ಮೇಲೆ ದಾಳಿ ನಡೆಯುತ್ತಿರುವುದು ಇದು ಮೊದಲೇನಲ್ಲ. ದಂಡಿಯಾತ್ರೆಗೆ ಪ್ರತೀಕಾರ ರೂಪದಲ್ಲಿ ಬ್ರಿಟಿಷ್ ಸರ್ಕಾರವು ಸಾಬರಮತಿ ಆಶ್ರಮವನ್ನು ವಶಪಡಿಸಿಕೊಂಡಿತ್ತು. ಆಗ ಗಾಂಧಿ ಹೇಳಿದ್ದು: ‘ಸ್ವಾತಂತ್ರ್ಯ ಬರುವವರೆಗೂ ಸಾಬರಮತಿ ಆಶ್ರಮ ಪ್ರವೇಶಿಸುವುದಿಲ್ಲ’. ಸಾಬರಮತಿ ಆಶ್ರಮದ ವಿಸರ್ಜನೆಯ ಬಗ್ಗೆಯೂ ಗಾಂಧೀಜಿ ಯೋಚಿಸಿದ್ದರು. ಸ್ವಾತಂತ್ರ್ಯಾನಂತರ ಸಾಬರಮತಿಗೆ ಹೋಗುವುದೋ ಬೇಡವೋ ಎಂದು ಗಾಂಧೀಜಿ ಯೋಚಿಸುವ ಮೊದಲೇ ಅವರು ಹುತಾತ್ಮರಾಗಿದ್ದರು. ರಾಮ ಬರುವನೆಂದು ಸಂವತ್ಸರಗಳ ಕಾಲ ಕಾದ ಶಬರಿಯ ನಿರೀಕ್ಷೆ ಹುಸಿಯಾಗಲಿಲ್ಲ. ಆದರೆ, ರಾಮಭಕ್ತ ಮರಳುವನೆಂದು ಕಾಯುತ್ತಿರುವ ಸಾಬರಮತಿ ಆಶ್ರಮದ ನಿರೀಕ್ಷೆ ನಿಜವಾಗಲಿಲ್ಲ. ಕನಿಷ್ಠ ಅವರ ಸ್ಮೃತಿಗಳನ್ನಾದರೂ ಸಾಬರಮತಿಯಲ್ಲಿ ಜೀವಂತವಾಗಿ ಉಳಿಸಿಕೊಳ್ಳುವ ಪ್ರಯತ್ನಗಳಿಗೂ ಸಂಚಕಾರ ಒದಗಿದೆ.

ವೀರಗಲ್ಲು- ಮಾಸ್ತಿಗಲ್ಲುಗಳಿಗೆ ಅಥವಾ ಶಾಸನಗಳ ಶಿಲೆಗಳಿಗೆ ದನಕರುಗಳನ್ನು ಕಟ್ಟುವ ಗ್ರಾಮೀಣರ ಬಗ್ಗೆ ಲಘುವಾಗಿ ಮಾತನಾಡುತ್ತೇವೆ. ಸಾಬರಮತಿ ಆಶ್ರಮವನ್ನು ಹೈಟೆಕ್‌ಗೊಳಿಸುವ, ಜಲಿಯನ್ ವಾಲಾಬಾಗ್ ಉದ್ಯಾನವನ್ನು ರಮ್ಯಗೊಳಿಸುವ ಪ್ರಯತ್ನಗಳು ಶಾಸನಗಳಿಗೆ ದನ ಕಟ್ಟುವ ಕೆಲಸಕ್ಕಿಂತ ಮಿಗಿಲಾದುವೇನಲ್ಲ.

ಚುರುಮುರಿ



ಕೆರಿಟೇಜ್ ವಾಕ್

• ಲಿಂಗರಾಜು ಡಿ.ಎಸ್.

‘ನೋಡಿ ಸಾ, ಕನ್ನಡ ಕಲಿಯಕಾಗಕುಲ್ಲ ಅಂತ ಹತ್ತೊರ್ಸದ ಹುಡುಗ ಹೈಕೋರ್ಟಿಗೆ ಅರ್ಜಿ ಹಾಕ್ಯವನಂತೆ. ಇದರಿಂದ ಭಾರಿ ತೊಂದರಾಗ್ಯದೆ ಅಂತ ಅಂದವನಂತೆ. ಆ ಚಿಕ್ಕುಡುಗ ಭಾರಿ ಬುದುವಂತ ಇರಬೇಕು ಅಲ್ಲುವರಾ?’ ತುರೇಮಣೆಗೆ ಕೇಳಿದೆ.

‘ನಮ್ಮ ರಾಜ್ಯಪಾಲರೇ ಕನ್ನಡ ಕಲೀತಿನಿ ಅಂತ ಹೊಂಟವ್ರೆ! ಆ ಪಡ್ಡೆಗೇನು ಬಂದದೆ? ಹಿಂಗಾಗೇ ನೋಡಪ್ಪ ಕನ್ನಡ ಹೋಗಿ ಕಾಡು ಸೇರಿಕ್ಯಂಡದೆ!’ ಯಂಟಪ್ಪಣ್ಣ ಬೇಜಾರು ಮಾಡಿಕ್ಯತ್ತು.

‘ಕಾಡು ಅಂದಾಗ ಜ್ಞಪ್ತಿಗೆ ಬಂತು. ಬನ್ನೇರು ಘಟ್ಟದೇಲಿ ಚಿರತೆ ಸಫಾರಿ ಮಾಡ್ಯಾರಂತೆ. ಅವುಗುಳ ಪಾಡಿಗೆ ಅವು ಕಾಡಲ್ಲಿರತವೆ. ನಾವು ರಾವುಗೆಟ್ಟೋರಂಗೆ ಹೋಗಿ ಅವುನ್ನ ಕಾಡಬೇಕಾ?’ ಇದು ನನ್ನ ಪ್ರಶ್ನೆಯಾಗಿತ್ತು.

‘ನೋಡ್ಲಾ ಬೊಡ್ಡಿಹೈದ್ನೆ, ಈಗ ಮಾಡಬೇಕಾದ್ದು ಕಾಡಲ್ಲಿ ಚಿರತೆ ಸಫಾರಿ ಅಲ್ಲಾ ಕಲಾ. ವನ್ಯಜೀವಿಗಳ ಸಂಖ್ಯೆ ಜಾಸ್ತಿಯಾಗ್ಯದೆ ಅಂತ ಸಚಿವರೇ ಹೇಳ್ಯವುರೆ! ಇವೆಲ್ಲಾ ಕಾಡಲ್ಲಿ ಜಾಗಿಲ್ದೆ ಬಂದು ನಮ್ಮ ಮಧ್ಯೆ ಸೇರಿಕ್ಯಂಡವೆ ಅಂತ ಜನಕ್ಕೆ ತೋರಿಸೋ ಮೃಗಯಾವಿಹಾರ ಮಾಡಬೇಕು ಕನ್ರೋ!’ ಅಂದ್ರು ತುರೇಮಣೆ.

‘ಇವೆಲ್ಲಾ ಬ್ಯಾರೆ ರೂಪದೇಲಿ ನಮ್ಮ ಬಡ್ಡೆಲೇ ಕುತುಗಂಡು ಅಡ್ಡಿಸಡ್ಡಿ ಇಲ್ದೆ ಮರಿತಾವೆ ಅಂತೋ ನೀವನ್ನದು?’ ಸೋಗು ಹಾಕಿದೆ.

‘ನೋಡ್ಲಾ, ಕಾಸಿಲ್ದೆ ಕಂಗೆಟ್ಟರೋ ಸರ್ಕಾರ ಆದಾಯ ಜಾಸ್ತಿ ಮಾಡಿಕ್ಯಬಕು ಅಂದ್ರೆ ಲೋಕ ಸೇವಾ ಆಯೋಗದೇಲಿ ಉಂಡೆದ್ದೋರು, ಐದು ವರ್ಸದೇಲಿ ರೋಡಿಗೆ 20,000 ಕೋಟಿ ತಿಂದು ತೇಗಿದೋರು, ಇಲಾಖೆಗಳನ್ನು ಮಾರಿ ಮಸಾಲೆದೋಸೆ ತಿಂದೋರು, ಬೆಂಗಳೂರು ಪಾಲಾಕ್ಯಂಡಿರೋ ಬಿಬಿಎಂಪಿ, ಬಿಡಿಎ ಉಂಡಾಡಿಗಳು, ರಾಜಕೀಯದ ಸ್ವಯಂಜೂ ವಿಧಾನಸೌಧ, ವಿಕಾಸಸೌಧದೇಲಿ ಇರೋ ಕೇಡು ಪ್ರಾಣಿಗಳ ತೋರಿಸಿ ಸಫಾರಿ ಮಾಡ್ತೀವಿ ಅಂದ್ರೆ ಜನ ಅಡ್ವಾನ್ಸ್ಡ್ ಬುಕಿಂಗ್ ಮಾಡಿಕ್ಯಂದು ಬತ್ತರೆ!’ ಅಂದ್ರು.

‘ಹೌದೇಳ್ರಿ ಸಾ! ಸ್ವಾಹಾಲಂಬಿಗಳನ್ನ ತೋರಿಸೋ ಕೆರಿಟೇಜ್ ವಾಕಿಗೆ ಆಷಾಢಭೂತಿ ಟ್ರಾನ್ಸ್‌ಪೋರ್ಟ್ ಬಸ್ಸೇ ಬೇಕಾಯ್ತದೆ!’ ಅಂತ ಕುಶಾಲು ಮಾಡಿದೆ.

ಸಂಗತ

ಶ್ವಾನ ಸಾಕಬೇಕೆ? ತುಸು ತಾಳಿ!

ಸಾಕುಪ್ರಾಣಿಯ ಮನಸ್ಸು ಅರಿತು ಅದಕ್ಕೆ ವರ್ತನಾ ತರಬೇತಿ ನೀಡಿದರಷ್ಟೇ ಅದರೊಂದಿಗಿನ ನಿರ್ವ್ಯಾಜ ಪ್ರೇಮವನ್ನು ಅನುಭವಿಸಲು ಸಾಧ್ಯ

• ಡಾ. ಮುರಳೀಧರ ಕಿರಣಕೆರೆ

ಕರೆ ಮಾಡಿದ ಆ ಪರಿಚಿತ ವ್ಯಕ್ತಿ ತುಂಬಾ ಮುಜುಗರದಿಂದಲೇ ತಮ್ಮ ಸಮಸ್ಯೆಯನ್ನು ತೋಡಿಕೊಂಡಿದ್ದರು. ಪ್ರೀತಿಯಿಂದ ಸಾಕಿದ ಡಾಬರ್ಮನ್ ಶ್ವಾನದಲ್ಲಿ ಇತ್ತೀಚೆಗೆ ಕಾಣಿಸಿಕೊಂಡ ವಿಚಿತ್ರ ವರ್ತನೆಯಿಂದ ಮನೆಯವರು ರೋಸಿಹೋಗಿದ್ದರು. ಏನೇ ಪ್ರಯತ್ನಪಟ್ಟರೂ ಆ ಕೆಟ್ಟ ಚಾಳಿಯನ್ನು ಬಿಡಿಸಲಾಗದ ಅಸಹಾಯಕತೆ ಅವರ ಮಾತಿನಲ್ಲಿ ಎದ್ದು ತೋರುತ್ತಿತ್ತು! ಯಾವುದೇ ಬಟ್ಟೆ ಸಿಕ್ಕಿದರೂ ಆ ನಾಯಿ ಹರಿದು ಚೂರು ಮಾಡುತ್ತಿತ್ತು. ಮನೆಯವರ ಉಡುಪು, ಸಾಕ್ಸ್, ಸೋಫಾ ಕವರ್, ನೆಲಹಾಸು ಅದರ ಬಾಯಿಗೆ ಸಿಕ್ಕಿ ಛಿದ್ರ ಛಿದ್ರ!

ಹಾಗಂತ ಈ ದುರ್ಗುಣ ಅದಕ್ಕೆ ಮೊದಲಿನಿಂದೇನೂ ಇರಲಿಲ್ಲ. ಈಗ್ಗೆ ಒಂದೆರಡು ತಿಂಗಳ ಹಿಂದೆ ಏಕಾಏಕಿ ಕಾಣಿಸಿಕೊಂಡಿದ್ದು. ಬೆದರಿಕೆ, ಹೊಡೆತ, ಬಡಿತ, ಉಪವಾಸದ ಪ್ರಯೋಗ ವಿಫಲವಾಗಿದ್ದವು. ಮನೆಯಲ್ಲೇ ಸಾಕಿ ಸಲಹಿದ ಪ್ರೀತಿಯ ನಾಯಿಯನ್ನು ಯಾರಿಗಾದರೂ ಕೊಟ್ಟು ಕೈತೊಳೆದುಕೊಳ್ಳಲು ಮಕ್ಕಳು ಬಿಡುತ್ತಿಲ್ಲ. ಮಂಡೆಬಿಸಿಯನ್ನು ಮತ್ತಷ್ಟು ಹೆಚ್ಚಿಸುವಂತೆ ಬಿಸಿಲಿಗೆ ಹಾಕಿದ ಬಟ್ಟೆಗೆ ಬಾಯಿ ಹಾಕುವುದನ್ನು ತಪ್ಪಿಸಲು ಹೋದ ಇವರ ಹೆಂಡತಿಗೆ ಕಚ್ಚಿಬಿಟ್ಟದೆ!


ನಾಯಿಗೆ ರೇಬಿಸ್ ಲಸಿಕೆ ಮೊದಲೇ ಹಾಕಿದ್ದರಿಂದ ಕಡಿತದಿಂದ ಸಮಸ್ಯೆಯೇನೂ ಇಲ್ಲವೆಂದು ಆ ಯಜಮಾನರಿಗೆ ಮನವರಿಕೆ ಮಾಡಿ, ಆಳ ಗಾಯವಾದ್ದರಿಂದ ಟಿ.ಟಿ ಇಂಜಕ್ಷನ್ ತೆಗೆದುಕೊಳ್ಳುವಂತೆ ಸಲಹೆಯಿತ್ತಿದ್ದೆ. ಆದರೆ ಉಡುಪು ಹರಿಯುವ ನಾಯಿಯ ನಡತೆಗೆ ಪರಿಹಾರವೇನು?

ಒಂದಷ್ಟು ವಿಚಾರಣೆಯ ನಂತರ, ದಿಢೀರೆಂದು ಕಾಣಿಸಿಕೊಂಡ ಈ ಚಾಳಿಗೆ ಕಾರಣ ಸಿಕ್ಕಿತ್ತು. ಪಟ್ಟಣದಲ್ಲಿ ಕೆಲಸ ಮಾಡುತ್ತಿದ್ದ ಅವರ ಮಕ್ಕಳಿಬ್ಬರು ಕೋವಿಡ್ ಕಾರಣದಿಂದ ಹಳ್ಳಿಗೆ ಮರಳಿದ್ದರು. ಹೆಚ್ಚುಕಮ್ಮಿ ಒಂದು ವರ್ಷ ಮುದ್ದು ಶ್ವಾನದ ಜೊತೆಗೆ ಪೂರ್ಣ ಪ್ರಮಾಣದಲ್ಲಿ ಕಾಲ ಕಳೆದಿದ್ದರು. ಎರಡು ತಿಂಗಳ ಹಿಂದೆ ಅವರು ಪಟ್ಟಣಕ್ಕೆ ಮರಳಿದ ನಂತರ ಈ ಸಮಸ್ಯೆ ಕಾಣಿಸಿಕೊಂಡಿದೆ. ಒಂಟಿತನ, ಬೇಸರ, ಆಪ್ತರ ಅಗಲಿಕೆಯಿಂದಾದ ಒತ್ತಡದ ಕಾರಣ ನಾಯಿಯ ಮನಃಸ್ಥಿತಿಯಲ್ಲಿ ಏರುಪೇರಾಗಿ ಹೀಗೊಂದು ದುರ್ಗುಣ ಅಂಟಿಕೊಂಡಿತ್ತು! ಇಂತಹದ್ದೊಂದು ವ್ಯಸನವನ್ನು ಬಿಡಿಸಲು ಬೇಕಾದ ತಾಳ್ಮೆ, ನಿರಂತರ ಪ್ರಯತ್ನದ ಬಗ್ಗೆ ತಿಳಿ ಹೇಳಿ ತಂತ್ರಗಳನ್ನು ವಿವರಿಸಿದ್ದೆ.

ಹೌದು, ಕೊರೊನಾ ಪ್ರಕರಣಗಳ ಇಳಿಮುಖದೊಂದಿಗೆ ಎಲ್ಲಾ ಚಟುವಟಿಕೆಗಳು ಮತ್ತೆ ಗರಿಗೆದರಿವೆ. ಇಷ್ಟು ದಿನ ಮಕ್ಕಳು, ದೊಡ್ಡವರ ಕಂಪನಿಯ ಖುಷಿಯಲ್ಲಿದ್ದ ಮುದ್ದುಪ್ರಾಣಿಗಳಿಗೆ ಮತ್ತೆ ಸಾಂಗತ್ಯ ತಪ್ಪಿದೆ. ಒಮ್ಮೆಲೇ ಆವರಿಸಿರುವ ಏಕಾಂಗಿತನ, ಬೇಸರ, ಒತ್ತಡದ ಕಾರಣ ಪ್ರಾಣಿಗಳ ವರ್ತನೆಯಲ್ಲಿ ಬದಲಾವಣೆ ಕಾಣಿಸುತ್ತಿದೆ. ಮನೆಯವರ ಒಡನಾಟ ಇಲ್ಲದೆ ಹಲವು ಶ್ವಾನಗಳನ್ನು ಮಂಕು ಆವರಿಸಿದೆ. ಕೂದಲು ಉದುರುವಿಕೆ, ದದ್ದು, ಗಾಯದಂತಹ ತ್ವಚೆಯ ಸಮಸ್ಯೆಗಳಿಗೆ ಅವುಗಳನ್ನು ಬಾಧಿಸುವ ಒತ್ತಡವೇ ಪ್ರಮುಖ ಕಾರಣ!

ಚಪ್ಪಲಿ ತಿನ್ನುವುದು, ಬಟ್ಟೆ ಹರಿಯುವುದು, ವಾಹನಗಳ ವೈರು, ಪೈಪುಗಳನ್ನು ತುಂಡರಿಸುವುದು, ಮನೆಯೊಳಗೆ ಮಲಮೂತ್ರ ವಿಸರ್ಜನೆ, ಅವುಗಳನ್ನು ತಿನ್ನುವುದು... ಇಂತಹದ್ದೇ ಅವುಗಳ ಹತ್ತಾರು ದುರ್ವ್ಯಸನಗಳಿಂದ ಸಾಕಿದವರು ಹೈರಾಣಾಗುತ್ತಿದ್ದಾರೆ.

ಶ್ವಾನಗಳು ತುಂಬಾ ಸೂಕ್ಷ್ಮ ಮನಸ್ಸುಳ್ಳವು. ಎಳವೆಯಲ್ಲಿಯೇ ಸೂಕ್ತ ತರಬೇತಿಯ ಮೂಲಕ ಪಳಗಿಸಿದರೆ ಅಸಹ್ಯ ವರ್ತನೆಗಳನ್ನು ಖಂಡಿತಾ ತಡೆಯಬಹುದು. ಅವುಗಳ ಮನಸ್ಸು ಅರಿತುಕೊಂಡು, ತಾಳ್ಮೆಯಿಂದ ತಿದ್ದಿ ಸಂಸ್ಕಾರ ಕಲಿಸಿದಾಗ ಮಾತ್ರ ಒಡನಾಟ ಮುದ ತರಬಲ್ಲದು.



ಬಾಡಿಗೆ ಮನೆಯಲ್ಲಿರುವ ನಮ್ಮ ಎದುರಿನವರು ಚಿಕ್ಕಮಕ್ಕಳ ಒತ್ತಾಯದ ಕಾರಣ ಮುದ್ದಾದ ಬೀದಿನಾಯಿ ಮರಿ ಸಾಕಿದ್ದರು. ಮೊದಲೇ ಚಿಕ್ಕ ಮನೆ, ಬಾಗಿಲು ತೆಗೆದರೆ ರಸ್ತೆ. ಹಾಗಾಗಿ ನಾಯಿ ಸದಾ ಮನೆಯೊಳಗೆ ಬಂದಿ. ಅದು ಬೆಳೆದು ದೊಡ್ಡದಾಯಿತು. ಮನೆಯೊಳಗೆ ಜಾಗ ಸಾಕಾಗಲಿಲ್ಲ. ಸದಾ ಉದ್ರೇಕದಿಂದ ಕೂಗಾಡುವ ಆ ಗಂಡುನಾಯಿಯನ್ನು ಸಂಬಾಳಿಸಲಾಗದೆ ಈಗ ಬೀದಿಗೆ ಬಿಟ್ಟಿದ್ದಾರೆ. ಮನೆಯೊಳಗೆ ಇದ್ದು ಅಭ್ಯಾಸವಾದ ಅದು ಈಗ ಯಾರ ಮನೆ ಬಾಗಿಲು ತೆರೆದಿದ್ದರೂ ಒಂದಿನಿತೂ ಅಳುಕಿಲ್ಲದೆ ಒಳಗೆ ಹೋಗಿ ಪೆಟ್ಟು ತಿನ್ನುತ್ತಿದೆ. ಕೆಲವರಿಗೆ ಕಡಿದಿದೆ. ಸದಾ ಕುಂಟುತ್ತಾ ಓಡಾಡುತ್ತಿರುವ ಆ ನಾಯಿಯನ್ನು ನೋಡುವಾಗ ಮಾಲೀಕ ಮಾಡಿದ ಎಡವಟ್ಟಿಗೆ ಅಮಾಯಕ ಪ್ರಾಣಿ ನರಳುವುದನ್ನು ಕಂಡು ನೋವಾಗುತ್ತದೆ.

ನಾಯಿ ಕಡಿತದ ಪ್ರಕರಣಗಳ ಏರುಗತಿಯ ನಡುವೆ ಮತ್ತೊಂದು ‘ವಿಶ್ವ ರೇಬಿಸ್ ದಿನ’ (ಸೆ. 28) ಬಂದಿದೆ. ಹುಚ್ಚುನಾಯಿ ರೋಗಕ್ಕೆ ಚುಚ್ಚುಮದ್ದು ಕಂಡುಹಿಡಿದ ಶ್ರೇಷ್ಠ ಸೂಕ್ಷ್ಮಾಣುಜೀವಿ ತಜ್ಞ ಲೂಯಿ ಪ್ಯಾಸ್ಚರ್‌ನ ಪುಣ್ಯತಿಥಿಯ ದಿವಸವಿದು. ನಾಯಿಗಳಿಗೆ ವರ್ತನಾ ತರಬೇತಿ ನೀಡಿ ಕಾಲಕಾಲಕ್ಕೆ ಅಗತ್ಯ ಲಸಿಕೆ ಹಾಕಿಸಿ, ಸೂಕ್ತ ರೀತಿಯಲ್ಲಿ ಪಾಲನೆ, ಪೋಷಣೆ ಮಾಡಿದರೆ ಮಾನವನ ಅತ್ಯುತ್ತಮ ಸಂಗಾತಿಯೊಂದಿಗಿನ ನಿರ್ವ್ಯಾಜ ಪ್ರೇಮವನ್ನು ಅನುಭವಿಸಬಹುದು.

ಮುದ್ದು ಪ್ರಾಣಿಗಳನ್ನು ಸಾಕಲು ಮುಂದಡಿ ಇಡುವ ಮುನ್ನ, ಹೊಂದುವ ತಳಿಯ ಆಯ್ಕೆ, ಮನೆಯಲ್ಲಿನ ಸ್ಥಳಾವಕಾಶ, ಕುಟುಂಬದವರ ಸಹಕಾರ, ಒಡನಾಟಕ್ಕೆ ಸಿಗುವ ಸಮಯ, ಅಗತ್ಯಗಳ ಪೂರೈಕೆ ಜೊತೆಯಲ್ಲಿ ಕೊನೆಯವರೆಗೂ ಅವುಗಳನ್ನು ಪ್ರೀತಿಯಿಂದ ನೋಡಿಕೊಳ್ಳಲು ಸಾಧ್ಯವೇ ಎಂದು ತುಸು ಯೋಚಿಸಿ ನಿರ್ಧರಿಸುವುದು ಒಳಿತು.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ
ಸರ್ಕಾರಿ ಪಶು ಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ಪ್ರಶಸ್ತಿಗೆ ವಯಸ್ಸು ನಿಗದಿ: ಹಾಸ್ಯಾಸ್ಪದ ಮಾನದಂಡ

ರಾಜ್ಯೋತ್ಸವ ಪ್ರಶಸ್ತಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ, ಸಾರ್ವಜನಿಕರ ಶಿಫಾರಸಿಗೆ ಅವಕಾಶ ಒದಗಿಸಿಕೊಟ್ಟಿರುವುದು ಉತ್ತಮ ನಿರ್ಧಾರ. ಆದರೆ, ಕ್ರೀಡೆ ಹೊರತುಪಡಿಸಿ ಉಳಿದ ಸಾಧಕರಿಗೆ ಕನಿಷ್ಠ 60 ವರ್ಷವಾಗಿರಬೇಕು ಎಂದು ವಯೋಮಿತಿ ನಿಗದಿ ಮಾಡಿರುವುದು ಮಾತ್ರ ಹಾಸ್ಯಾಸ್ಪದವಾಗಿ ಕಾಣುತ್ತದೆ. 25-30 ವರ್ಷ ವಯಸ್ಸು ಪ್ರಧಾನಿ ಆಗಲು, 35 ವರ್ಷ ರಾಷ್ಟ್ರಪತಿ ಆಗಲು ಇರುವಾಗ, ಅತ್ಯುತ್ತಮ ಸಾಧನೆ ಮಾಡಿದವರನ್ನು ಆಯ್ಕೆ ಮಾಡಿ ಗೌರವಿಸಲು ವಯಸ್ಸನ್ನು ಮಾನದಂಡ ಮಾಡಿರುವುದು ಸರಿಕಾಣದು.

ಅರ್ಹತೆಗೆ ವಿವಿಧ ಕ್ಷೇತ್ರಗಳಲ್ಲಿನ ಸಾಧನೆ ಮತ್ತು ಸೇವೆಗಳಷ್ಟೇ ಮಾನದಂಡವಾಗಲಿ. 32 ವರ್ಷ ಆಯಸ್ಸಿನ ಶಂಕರಾಚಾರ್ಯರು, 39 ವರ್ಷ ಮಾತ್ರ ಬದುಕಿದ್ದ ಸ್ವಾಮಿ ವಿವೇಕಾನಂದರ ಸಾಧನೆ ಮರೆಯಲಾದೀತೇ? ಆದ್ದರಿಂದ ವಯಸ್ಸಿನ ಮಾನದಂಡ ಕೈಬಿಡಲಿ.

ಚಂದ್ರಶೇಖರ ಪುಟ್ಟಪ್ಪ, ಬೆಂಗಳೂರು

ಕೊಡಚಾದ್ರಿ ತುದಿಗೆ ರಸ್ತೆ: ಬೇಡ ಉಮೇದು

ಮೂಕಾಸುರನ ವಧೆ ಮಾಡಿದ ಸ್ಥಳ ಹಾಗೂ ಶಂಕರಾಚಾರ್ಯರು ಭೇಟಿ ನೀಡಿದ ಸ್ಥಳವೆಂದು ಪ್ರತೀತಿಯಿರುವ, ವಿನಾಶದ ಅಂಚಿನಲ್ಲಿರುವ ಸಿಂಗಳೀಕ ಜಾತಿಯ ಪ್ರಾಣಿಗಳನ್ನು ಹೊಂದಿರುವ ಹಾಗೂ ಜೀವವೈವಿಧ್ಯದಿಂದ ಕೂಡಿರುವ ಬೆಟ್ಟವೇ ಕೊಡಚಾದ್ರಿ. ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮವು ಕಟ್ಟಿನಹೊಳೆ ಪ್ರದೇಶದಿಂದ ಕೊಡಚಾದ್ರಿಯ ತುದಿಯವರೆಗೆ ಮಣ್ಣಿನ ರಸ್ತೆಯ ಬದಲಾಗಿ ಸಿಮೆಂಟ್ ರಸ್ತೆಯನ್ನು ನಿರ್ಮಿಸಲು ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಇತ್ತೀಚೆಗೆ ಮನವಿ ಸಲ್ಲಿಸಿದ್ದು, ಅನುಮೋದನೆ ಕೂಡಾ ದೊರೆತಿದೆ ಎಂಬ ಮಾಹಿತಿ ಪರಿಸರ ಹೋರಾಟಗಾರರಲ್ಲಿ ಆತಂಕ ಮೂಡಿಸಿದೆ.

ಶಿವಮೊಗ್ಗ, ಕುದುರೆಮುಖ, ಮಂಗಳೂರು ವಲಯ ಅರಣ್ಯ ವಿಭಾಗದಲ್ಲಿ ಹಂಚಿಹೋಗಿರುವ ಕೊಡಚಾದ್ರಿ ಬೆಟ್ಟದಲ್ಲಿ ರಸ್ತೆ ನಿರ್ಮಿಸಿ ವಾಹನ ಸೌಲಭ್ಯಗಳನ್ನು ಅಧಿಕೃತವಾಗಿ ಘೋಷಿಸಿದ ಪಕ್ಷದಲ್ಲಿ, ಚಾರಣಿಗರ ಸಂಖ್ಯೆ ಇಳಿಮುಖವಾಗಿ ಪ್ರವಾಸಿಗರ ಸಂಖ್ಯೆ ಹೆಚ್ಚುವುದರಲ್ಲಿ ಯಾವುದೇ ಅನುಮಾನವಿಲ್ಲ. ಸಹಜವಾಗಿ ವ್ಯಾಪಾರದ ಕೇಂದ್ರಗಳು, ಹೋಟೆಲ್‌ಗಳು ಬೆಟ್ಟದ ಮೇಲ್ಭಾಗದಲ್ಲಿ ನಿರ್ಮಾಣವಾಗುವ ಮೂಲಕ ಪರಿಸರ ಮಾಲಿನ್ಯಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ.

ಮಡಿಕೇರಿ ಈಗಾಗಲೇ ಇದೆಲ್ಲವನ್ನೂ ಜೀರ್ಣಿಸಿಕೊಂಡು ನಮ್ಮ ಕಣ್ಣ ಮುಂದೆಯೇ ಯಾವ ಸ್ಥಿತಿಯಲ್ಲಿದೆಯೆಂದು ತಿಳಿದಿದ್ದರೂ ರಾಜ್ಯ ಸರ್ಕಾರವು ರಸ್ತೆ ನಿರ್ಮಿಸಲು ಹೊರಟಿರುವುದು ಆಘಾತಕಾರಿಯಾದ ವಿಷಯ. ಕೊಡಚಾದ್ರಿ ಬೆಟ್ಟದ ತುದಿಗೆ ರಸ್ತೆ ನಿರ್ಮಿಸುವ ಪ್ರಸ್ತಾವವನ್ನು ಕೂಡಲೇ ಕೈಬಿಡಬೇಕು. ಅರಣ್ಯಾಧಿಕಾರಿಗಳ ಸಹಕಾರದೊಂದಿಗೆ ಅನಧಿಕೃತವಾಗಿ ಓಡಾಡುತ್ತಿರುವ ವಾಹನಗಳನ್ನು ಜಪ್ತಿ ಮಾಡಿ, ಇದಕ್ಕೆ ಅನುವು ಮಾಡಿಕೊಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ.

ಟಿ.ಉಮಾ ಶಂಕರ್ ಲಕ್ಷ್ಮೀಪುರ, ಬೆಂಗಳೂರು

ವಿವೇಕಾನಂದ, ಗೋಖಲೆ ಹೆಸರು ಬಿಟ್ಟುಹೋದದ್ದೇಕೆ?

ಮತಾಂತರ ನಿಷೇಧ ಕಾಯ್ದೆಯ ಅಗತ್ಯವನ್ನು ಪ್ರತಿಪಾದಿಸುತ್ತಾ ಬಿ.ಎಸ್.ಜಯಪ್ರಕಾಶ ನಾರಾಯಣ ಅವರು ಬರೆದ ಪತ್ರ (ವಾ.ವಾ., ಸೆ. 25) ಓದಿ ಆಶ್ಚರ್ಯವಾಯಿತು. ಏಕೆಂದರೆ ಅದರಲ್ಲಿ ಹಿಂದೂ ಧರ್ಮ ಸುಧಾರಕರನ್ನು ಹೆಸರಿಸುವಾಗ ಸ್ವಾಮಿ ವಿವೇಕಾನಂದ ಮತ್ತು ಗೋಪಾಲಕೃಷ್ಣ ಗೋಖಲೆಯವರ ಹೆಸರುಗಳು ಬಿಟ್ಟು ಹೋಗಿ ಸಾವರ್ಕರ್, ತಿಲಕ್ ಮತ್ತು ಶಾಮಪ್ರಸಾದ್ ಮುಖರ್ಜಿಯವರ ಹೆಸರುಗಳು ಸೇರಿರುವುದು. ಮುಖರ್ಜಿಯವರ ಹಿಂದೂ ಧರ್ಮ ಸುಧಾರಣೆಯ ಪ್ರಯತ್ನಗಳ ಬಗ್ಗೆ ಬಿಜೆಪಿ ಕಾರ್ಯಕರ್ತರ ಹೊರತಾಗಿ ಸಾಮಾನ್ಯ ಜನರಿಗೆ ಇನ್ನೂ ಅಷ್ಟು ಮಾಹಿತಿ ಇಲ್ಲವಾದರೂ, ತಿಲಕರು ಮತ್ತು ಸಾವರ್ಕರ್ ಅವರು ಹಿಂದೂ ಧರ್ಮ ಸುಧಾರಣೆಗಾಗಿ ನಡೆಸಿದ ಪ್ರಯತ್ನಗಳ ಮಾಹಿತಿ ನಮ್ಮ ಚರಿತ್ರೆಯ ಪುಟಗಳಲ್ಲಿ ಬಹಳಷ್ಟು ದಾಖಲಾಗಿದೆ.

ಬಾಲಗಂಗಾಧರ ತಿಲಕರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ವಹಿಸಿದ ಪಾತ್ರ ಧೀರೋದಾತ್ತವಾದುದಾದರೂ ಹಿಂದೂ ಧರ್ಮ- ಸಮಾಜ ಸುಧಾರಣೆಯ ವಿಷಯದಲ್ಲಿ ಅದು ಅತ್ಯಂತ ವಿವಾದಾಸ್ಪದವಾದುದಾಗಿದೆ. 19ನೆಯ ಶತಮಾನದ ಉತ್ತರಾರ್ಧದಲ್ಲಿ ಬ್ರಿಟಿಷ್ ಸರ್ಕಾರ ಸಾರ್ವಜನಿಕ ಶಿಕ್ಷಣವನ್ನು ಸಮಾಜದ ಎಲ್ಲರಿಗೂ ಮುಕ್ತವಾಗಿ ತೆರೆದಿಟ್ಟಾಗ ತಿಲಕರು ಆಕ್ರೋಶಗೊಂಡರು. ಸಾರ್ವಜನಿಕ ಶಾಲೆಗಳಿಗೆ ಅಸ್ಪೃಶ್ಯರೂ ಸೇರಿದಂತೆ ಬ್ರಾಹ್ಮಣೇತರರು ಮತ್ತು ಮಹಿಳೆಯರಿಗೆ ಪ್ರವೇಶ ನೀಡಬಾರದೆಂದು ಪಟ್ಟು ಹಿಡಿದರು. ಅವರ ಪ್ರಕಾರ, ಅದು ಹಿಂದೂ ಧರ್ಮದಲ್ಲಿನ ಹಸ್ತಕ್ಷೇಪವಾಗಿತ್ತು.

ಪೇಶ್ವೆಗಳ ಬ್ರಾಹ್ಮಣ ಪರಮಾಧಿಕಾರದ ಆಳ್ವಿಕೆಯ ಅಭಿಮಾನಿಯಾಗಿದ್ದ ಅವರು ಫುಲೆ, ಗೋಖಲೆ, ಅಗರ್ಕರ್, ಭಂಡಾರ್ಕರ್ ಮುಂತಾದವರಿಂದ ಕೂಡಿದ್ದ ಅಂದಿನ ಸುಧಾರಕರ ಗುಂಪು ಪ್ರತಿಪಾದಿಸಿದ ಸರ್ವರ ಸಮಾನತೆಯ ತತ್ವವನ್ನು ಒಪ್ಪದೆ, ಸರ್ವರಿಗೂ ಶಿಕ್ಷಣ ನೀಡುವುದು, ಅದೂ ಇಂಗ್ಲಿಷ್ ಶಿಕ್ಷಣಕ್ಕೆ ಅವರನ್ನು ತೆರೆದಿಡುವುದು ಜಾತಿ ವ್ಯವಸ್ಥೆಯ ಶಿಸ್ತು ಭಂಗಕ್ಕೆ ಕಾರಣವಾಗುತ್ತದೆ ಎಂದು ವಾದಿಸಿದರು. ಇದರಿಂದ ಹಿಂದೂ ಸಮಾಜ ಅನೀತಿಯ ಮತ್ತು ಅಶಾಂತಿಯ ಆಗರವಾಗುತ್ತದೆ ಎಂದು ವಿವರಿಸಿದರು. ಇಂಥವರನ್ನು ಹಿಂದೂ ಧರ್ಮ ಸುಧಾರಕರೆಂದು ಹೆಸರಿಸಿ ಮತಾಂತರವನ್ನು ನಿಷೇಧಿಸಬೇಕೆಂದು ಹೇಳುವುದು ಕ್ರೂರ ವ್ಯಂಗ್ಯವೇ ಆಗುತ್ತದೆ.

ಇನ್ನು ವಿ.ಡಿ.ಸಾವರ್ಕರರು ನಾಸ್ತಿಕರಾಗಿದ್ದು ಹಿಂದೂ ಧರ್ಮದ ಎಲ್ಲ ವಿಧಿ-ಕರ್ಮಾಚರಣೆಗಳನ್ನು ಅವು ಅರ್ಥಹೀನವೆಂದು ಅವುಗಳ ವಿರೋಧಿಯಾಗಿದ್ದರು ಮತ್ತು ಗೋವಧೆ ನಿಷೇಧವನ್ನು ಸ್ವಾಮಿ ವಿವೇಕಾನಂದರಂತೆಯೇ ಹಿಂದೂ ಧರ್ಮದ ಭಾಗವೆಂದು ನಂಬಿರಲಿಲ್ಲ ಮತ್ತು ಗೋಮಾಂಸವನ್ನು ಆಹಾರವಾಗಿ ಬಳಸುವುದರ ಬಗ್ಗೆ ಅವರ ವಿರೋಧವಿರಲಿಲ್ಲ. ಸಾವರ್ಕರರ ಹಿಂದೂ ಸಮಾಜ ಸುಧಾರಣೆಯು ಅವರು ಮುಸ್ಲಿಮರ ಪ್ರಾರ್ಥನಾ ಸ್ಥಳಗಳನ್ನು ಧ್ವಂಸ ಮಾಡಿರಿ... ಎಂದು ತಮ್ಮ ಪುಸ್ತಕವೊಂದರಲ್ಲಿ ಹಿಂದೂಗಳಿಗೆ ಕೊಟ್ಟ ಕರೆಯವರೆಗೂ ವಿಸ್ತರಿಸಿತ್ತೆಂಬುದು ಜಯಪ್ರಕಾಶ ನಾರಾಯಣರಿಗೆ ಚೆನ್ನಾಗಿ ಗೊತ್ತು. ಏಕೆಂದರೆ ಅವರು ಕನ್ನಡಕ್ಕೆ ಅನುವಾದಿಸಿರುವ ಸಾವರ್ಕರ್ ಕುರಿತ ವೈಭವ್ ಪುರಂದರೆ ಅವರ ಪುಸ್ತಕದಲ್ಲೇ ಈ ಮಾಹಿತಿ ಇದೆ. ಇದು ಹಿಂದೂ ಸಮಾಜ ಸುಧಾರಣೆಯ ಕ್ರಮವೆಂದು ಅವರು ಭಾವಿಸುವರೋ? ಹೀಗಾಗಿ ಮತಾಂತರ ನಿಷೇಧ ಕುರಿತ ಅವರ ವಾದ ದುರ್ಬಲ ಮಾತ್ರವಲ್ಲ, ಅನುಮಾನಾಸ್ಪದವಾಗಿಯೂ ಕಾಣುತ್ತದೆ.

ಡಿ.ಎಸ್.ನಾಗಭೂಷಣ, ಶಿವಮೊಗ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರೈತ ಹೋರಾಟಕ್ಕೆ 10 ತಿಂಗಳು

ಕೃಷಿ ಉತ್ಪನ್ನಗಳನ್ನು ಎಪಿಎಂಸಿ ಮಾರುಕಟ್ಟೆಯ ಹೊರಗೂ ಮಾರಾಟ ಮಾಡಲು ಅವಕಾಶ ನೀಡುವ, ಕೃಷಿಯಲ್ಲಿ ಕಾರ್ಪೊರೇಟ್ ಕಂಪನಿಗಳ ಹೂಡಿಕೆಗೂ ಅವಕಾಶ ನೀಡುವ ನೂತನ ಕೃಷಿ ನೀತಿಯನ್ನು ಜಾರಿಗೆ ತರಲು ಕೇಂದ್ರ ಸರ್ಕಾರವು 2020ರ ಜೂನ್‌ನಲ್ಲಿ ಮೂರು ಸುಗ್ರೀವಾಜ್ಞೆಗಳನ್ನು ಹೊರಡಿಸಿತು. 2020ರ ಸೆಪ್ಟೆಂಬರ್‌ನಲ್ಲಿ ಈ ಸುಗ್ರೀವಾಜ್ಞೆಗಳಿಗೆ ಸಂಸತ್ತಿನ ಅನುಮೋದನೆ ಪಡೆದು, ರಾಷ್ಟ್ರಪತಿಗಳ ಅಂಕಿತವನ್ನೂ ಪಡೆಯಲಾಯಿತು. ಈ ಕಾಯ್ದೆಗಳು ಕೃಷಿಗೆ, ರೈತರಿಗೆ ಮಾರಕ ಮತ್ತು ಕಾರ್ಪೊರೇಟ್ ಕಂಪನಿಗಳ ಪರವಾಗಿವೆ ಎಂದು ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದ್ದವು. ಆದರೆ ಕೆಲವೇ ದಿನಗಳಲ್ಲಿ ರೈತ ಸಮುದಾಯವೇ ಈ ಕಾಯ್ದೆಗಳ ವಿರುದ್ಧ ಹೋರಾಟ ಆರಂಭಿಸಿತು.

ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಪದ್ಧತಿಗೆ ಸಂಬಂಧಿಸಿದಂತೆ ನೂತನ ಮೂರೂ ಕಾಯ್ದೆಗಳಲ್ಲಿ ಉಲ್ಲೇಖವಿಲ್ಲ. ಬೆಂಬಲ ಬೆಲೆ ಪದ್ಧತಿಯನ್ನು ಈ ಕಾಯ್ದೆಗಳು ರದ್ದುಪಡಿಸುತ್ತವೆ ಎಂಬುದು ರೈತರ ಆಕ್ಷೇಪವಾಗಿತ್ತು. ಆದರೆ ಬೆಂಬಲ ಬೆಲೆ ಪದ್ಧತಿ ತೆಗೆಯುವುದಿಲ್ಲ ಎಂಬುದು ಸರ್ಕಾರದ ಸಮರ್ಥನೆಯಾಗಿತ್ತು. ಬೆಂಬಲ ಬೆಲೆ ಪದ್ಧತಿ ರದ್ದುಪಡಿಸುವುದಿಲ್ಲ ಎಂಬುದು ಕೇವಲ ಮೌಖಿಕ ಭರವಸೆಯಾಗಿದ್ದ ಕಾರಣ, ರೈತರು ಈ ಕಾಯ್ದೆಗಳ ವಿರುದ್ಧ ಬೀದಿಗಿಳಿದರು. 2020ರ ನವೆಂಬರ್ 25ರಂದು ಪಂಜಾಬ್ ಮತ್ತು ಹರಿಯಾಣ ರೈತರು ದೆಹಲಿ ಚಲೋ ಪ್ರತಿಭಟನಾ ಮೆರವಣಿಗೆ ಆರಂಭಿಸಿದರು.

ಈ ಮೆರವಣಿಗೆಯನ್ನು ತಡೆಯಲು ಕೇಂದ್ರ ಸರ್ಕಾರವು ಎಲ್ಲಾ ರೀತಿಯ ಪ್ರಯತ್ನಗಳನ್ನೂ ಮಾಡಿತು. ಪಂಜಾಬ್‌ನ ರೈತರು ಬಿಜೆಪಿ ಆಡಳಿತವಿರುವ ಹರಿಯಾಣ ಪ್ರವೇಶಿಸದಂತೆ ತಡೆ ಒಡ್ಡಲಾಯಿತು. ಆದರೆ ಪೊಲೀಸರನ್ನು ಬದಿಗೊತ್ತಿ, ಅವರ ತಡೆಗೋಡೆಗಳನ್ನು ಮುರಿದು ರೈತರು ಮೆರವಣಿಗೆ ಮುಂದುವರಿಸಿದರು. ಕೊನೆಗೆ ರೈತರು ದೆಹಲಿ ಪ್ರವೇಶಿಸದಂತೆ ದೆಹಲಿ ಗಡಿಯನ್ನು, ದೆಹಲಿ ಪೊಲೀಸರು ಬಂದ್ ಮಾಡಿದರು. ಹೆದ್ದಾರಿಗಳಿಗೆ ಅಡ್ಡಲಾಗಿ ಪೊಲೀಸರು ಕಂದಕ ತೋಡಿದರು, ಮುಳ್ಳುಬೇಲಿ ಹಾಕಿದರು, ಕಾಂಕ್ರೀಟ್ ಗೋಡೆ ನಿರ್ಮಿಸಿದರು, ಮೊಳೆಯ ಬೇಲಿ ನೆಟ್ಟರು. ಆದರೆ ದೆಹಲಿ ಗಡಿಯಲ್ಲಿ ಬೀಡುಬಿಟ್ಟ ರೈತರು ತಮ್ಮ ಹೋರಾಟವನ್ನು ಮತ್ತಷ್ಟು ಹುರಿಗೊಳಿಸಿದರು. ಕಿಸಾನ್ ಸಂಯುಕ್ತ ಮೋರ್ಚಾ ಹೆಸರಿನಲ್ಲಿ ನಡೆದ ಈ ಹೋರಾಟದಲ್ಲಿ ಹಲವು ರೈತ ಸಂಘಟನೆಗಳು ಭಾಗಿಯಾದವು.

ರೈತರ ಜತೆ ಸರ್ಕಾರವು ಹಲವು ಸುತ್ತಿನ ಮಾತುಕತೆ ನಡೆಸಿದರೂ ಅವೆಲ್ಲವೂ ವಿಫಲವಾದವು. ಕಾಯ್ದೆಗಳನ್ನು ರದ್ದುಪಡಿಸಬೇಕು ಎಂಬ ತಮ್ಮ ಪಟ್ಟನ್ನು ರೈತರು ಸಡಿಲಗೊಳಿಸಲಿಲ್ಲ. ಸರ್ಕಾರವೂ ಕಾಯ್ದೆಗಳನ್ನು ರದ್ದುಪಡಿಸಲಿಲ್ಲ. ಹೀಗಾಗಿ ಈವರೆಗೆ ನಡೆದ ಎಲ್ಲಾ ಮಾತುಕತೆಗಳು ವಿಫಲವಾಗಿವೆ. ಇದೇ ಗಣರಾಜ್ಯೋತ್ಸವದ ದಿನ ರೈತರು ದೆಹಲಿಗೆ ಟ್ರ್ಯಾಕ್ಟರ್ ಮೆರವಣಿಗೆ ನಡೆಸಿದರು. ಆ ವೇಳೆ ಪೊಲೀಸರೊಂದಿಗೆ ಘರ್ಷಣೆ ನಡೆಯಿತು. ಹಲವರಿಗೆ ಗಾಯಗಳಾದವು. ಕೆಂಪುಕೋಟೆಯ ಮೇಲೆ ರೈತರು ಪ್ರತಿಭಟನಾ ಧ್ವಜಾರೋಹಣ ನಡೆಸಿದರು. ಇದು ರೈತರ ಹೋರಾಟಕ್ಕೆ ದೊಡ್ಡ ಹಿನ್ನಡೆಯಾದಂತಾಯಿತು.

ಆದರೆ ಉತ್ತರ ಪ್ರದೇಶದ ರಾಕೇಶ್ ಟಿಕಾಯತ್ ಅವರು ಮತ್ತೆ ರೈತ ಹೋರಾಟಕ್ಕೆ ಕರೆ ನೀಡಿದರು. ಅವರು ಇಟ್ಟ ಕಣ್ಣೀರಿಗೆ ಸೋತ ರೈತವರ್ಗ ಮತ್ತೆ ಹೋರಾಟಕ್ಕೆ ಧುಮುಕಿತು. ಪಂಜಾಬ್ ಮತ್ತು ಹರಿಯಾಣ ರೈತರಷ್ಟೇ ನಡೆಸುತ್ತಿದ್ದ ಈ ಹೋರಾಟವು ರಾಜಸ್ಥಾನ, ಹಿಮಾಚಲ ಪ್ರದೇಶ ಮತ್ತು ಉತ್ತರ ಪ್ರದೇಶಕ್ಕೂ ಹರಡಿತು. ದೆಹಲಿಯ ಸಿಂಘು, ಟಿಕ್ರಿ ಮತ್ತು ಗಾಜಿಪುರ ಗಡಿಯಲ್ಲಿ ನಡೆಯುತ್ತಿರುವ ಪ್ರತಿಭಟನೆಗಳಲ್ಲಿ ರೈತರು ಪಾಳಿಯ ಪ್ರಕಾರ ಭಾಗಿಯಾದರು. ಆ ಮೂಲಕ ಪ್ರತಿಭಟನೆ ಮತ್ತು ಕೃಷಿ ಚಟುವಟಿಕೆ ಎರಡನ್ನೂ ನಡೆಸಿದರು. ಈಗಲೂ ಪ್ರತಿಭಟನೆ ಇದೇ ಸ್ವರೂಪದಲ್ಲಿ ನಡೆಯುತ್ತಿದೆ. ಈ ಹೋರಾಟಕ್ಕೆ ಸೋಮವಾರಕ್ಕೆ 10 ತಿಂಗಳು ತುಂಬಿದೆ.



ಹೋರಾಟಕ್ಕೆ ನೂರು ದಿನ ತುಂಬಿದ ಸಂದರ್ಭದಲ್ಲಿ ದೆಹಲಿ–ಹರಿಯಾಣ ಗಡಿಯಲ್ಲಿ ರೈತರು ರಸ್ತೆ ತಡೆ ನಡೆಸಿದ್ದರು –ಪಿಟಿಐ ಚಿತ್ರ

ಬಿಜೆಪಿಯ ಟೀಕಾಪ್ರಹಾರ

ರೈತ ಹೋರಾಟಗಾರರು ಹಾಗೂ ಹೋರಾಟ ಆಯೋಜಿಸಿದ ಸಂಘಟನೆಗಳನ್ನು ಬಿಜೆಪಿಯು ಪ್ರತಿಭಟನೆಯ ಆರಂಭದ ದಿನದಿಂದಲೂ ವಿರೋಧಿಸುತ್ತಿದೆ. ಹೋರಾಟಗಾರರು ರೈತರೇ ಅಲ್ಲ ಎಂದು ಪ್ರತಿಪಾದಿಸಿದ ಬಿಜೆಪಿ, ಇದೊಂದು 'ಪ್ರಾಯೋಜಿತ' ಹೋರಾಟ ಎಂದು ಟೀಕಿಸುತ್ತಾ ಬಂದಿತು. ರೈತ ಹೋರಾಟವು 'ಖಲಿಸ್ತಾನ'ದಿಂದ ಪ್ರೇರಣೆ ಪಡೆದಿದೆ ಎಂಬ ಆರೋಪವನ್ನೂ ಹೊರಿಸಲಾಯಿತು. ರೈತ ನಾಯಕ ರಾಕೇಶ್ ಟಿಕಾಯತ್ ಅವರನ್ನು ಬಿಜೆಪಿ ಸಂಸದ ಅಕ್ಷಯ್ ಲಾಲ್ ಗೊಂಡ್ ಅವರು 'ಡಕಾಯಿತ' ಎಂದು ಮೂದಲಿಸಿದ್ದಾರೆ.

ಬಿಜೆಪಿ ಸಂಸದ ವಿವೇಕ್ ನಾರಾಯಣ ಶೆಜ್‌ವಾಲ್ಕರ್ ಅವರು ರೈತರ ಹೋರಾಟವು ಸುಳ್ಳುಗಳು ಮತ್ತು ತಪ್ಪು-ಮಾಹಿತಿಗಳಿಂದ ಕೂಡಿದೆ ಎಂದಿದ್ದರು. ಕೇಂದ್ರ ಸಚಿವೆ ಮೀನಾಕ್ಷಿ ಲೇಖಿ ಅವರು ಪ್ರತಿಭಟನೆ ನಡೆಸುತ್ತಿರುವವರು ಮಧ್ಯವರ್ತಿಗಳೇ ವಿನಾ ನಿಜವಾದ ರೈತರಲ್ಲ ಎಂದು ಹೇಳಿದ್ದರು. ಕೋವಿಡ್ ಎರಡನೇ ಅಲೆಯ ವೇಳೆ ಆಮ್ಲಜನಕ ಟ್ಯಾಂಕರ್ ಸಾಗಣೆ ವಿಳಂಬವಾಗಲು ರೈತರ ಪ್ರತಿಭಟನೆ ಕಾರಣ ಎಂದು ಬಿಜೆಪಿ ಆರೋಪ ಹೊರಿಸಿತ್ತು.

ಕಾಯ್ದೆ ಜಾರಿಗೆ ಪಟ್ಟು ಹಿಡಿದಿರುವ ಬಿಜೆಪಿ ವಿರುದ್ಧ ಚುನಾವಣೆ ನಡೆಯುವ ರಾಜ್ಯಗಳಲ್ಲಿ ಪ್ರಚಾರ ನಡೆಸಲು ರೈತ ಸಂಘಟನೆ ತೀರ್ಮಾನಿಸಿರುವುದು ಬಿಜೆಪಿಯನ್ನು ಸಿಟ್ಟಿಗೇಳಿಸಿದೆ.

ಗಟ್ಟಿಗೊಂಡ ನೆಲೆ

ಪ್ರತಿಭಟನೆ ಶುರುವಾಗಿ 10 ತಿಂಗಳು ಕಳೆದ ಬಳಿಕವೂ ಬಿಸಿ ಮಾತ್ರ ಹಾಗೆಯೇ ಇದೆ. ರೈತರು ದೇಶದಾದ್ಯಂತ ಹೊಂದಿರುವ ಸುಭದ್ರ ನೆಲೆ ಇದಕ್ಕೆ ಕಾರಣ. ಪಂಜಾಬ್‌ನಲ್ಲಿ ಶುರುವಾದ ಈ ಹೋರಾಟ ಈಗ ಗಟ್ಟಿಯಾದ ವಿಸ್ತೃತ ನೆಲೆ ಗಳಿಸಿಕೊಂಡಿದೆ. ಹರಿಯಾಣ, ಉತ್ತರ ಪ್ರದೇಶ, ರಾಜಸ್ಥಾನಗಳಲ್ಲದೇ, ಕರ್ನಾಟಕ, ಆಂಧ್ರ, ತಮಿಳುನಾಡು ಸೇರಿದಂತೆ ಬಹುತೇಕ ರಾಜ್ಯಗಳಲ್ಲಿ ರೈತರನ್ನು ಒಗ್ಗಟ್ಟಾಗಿಸಿದೆ. ಇಡೀ ದೇಶದ ರೈತರು ಈ ಪ್ರತಿಭಟನೆಗೆ ಬೆಂಬಲವಾಗಿ ನಿಂತಿದ್ದಾರೆ.

ಕಾಂಗ್ರೆಸ್, ಅಕಾಲಿದಳ, ಎಎಪಿ ಮೊದಲಾದ ಪಕ್ಷಗಳು ಮೊದಲ ದಿನದಿಂದಲೇ ರೈತರ ಬೆನ್ನಿಗಿವೆ. ಪಂಜಾಬ್, ಕೇರಳ ಸೇರಿದಂತೆ ಕೆಲವು ರಾಜ್ಯಗಳು ವಿಧಾನಸಭೆಗಳಲ್ಲಿ ಕೃಷಿ ಕಾಯ್ದೆಗಳನ್ನು ವಿರೋಧಿಸುವ ನಿರ್ಣಯ ಕೈಗೊಂಡು ರೈತರ ಕೈ ಬಲಪಡಿಸಿವೆ.

ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ, ಗಾಯಕಿ ರಿಹಾನಾ, ಪರಿಸರ ಕಾರ್ಯಕರ್ತೆ ಗ್ರೆಟಾ ಥುನ್‌ಬರ್ಗ್ ಅವರಂತಹ ಅಂತರರಾಷ್ಟ್ರೀಯ ಪ್ರಸಿದ್ಧ ವ್ಯಕ್ತಿಗಳು ರೈತರ ಪ್ರತಿಭಟನೆಯನ್ನು ಬೆಂಬಲಿಸಿದ್ದರಿಂದ ಹೋರಾಟಕ್ಕೆ ಜಾಗತಿಕ ಮನ್ನಣೆಯೂ ಸಿಕ್ಕಿತು.

ದೆಹಲಿಯ ಸಿಂಘು, ಗಾಜಿಪುರ ಹಾಗೂ ಟಿಕ್ರಿ ಗಡಿಯಲ್ಲಿ ಟೆಂಟ್ ಹಾಕಿರುವ ನೂರಾರು ರೈತರಿಗೆ ಊಟ, ವಸತಿಯಂತಹ ಮೂಲ ಸೌಲಭ್ಯಗಳನ್ನು ಸಾವಿರಾರು ಸಂಘಟನೆಗಳು, ರಾಜಕೀಯ ಪಕ್ಷಗಳು, ವೈದ್ಯರು, ಸ್ವಯಂಸೇವಕರು ಒದಗಿಸುತ್ತಿದ್ದಾರೆ. 2024ರ ಲೋಕಸಭಾ ಚುನಾವಣೆವರೆಗೂ ಧರಣಿ ಕೈಬಿಡುವುದಿಲ್ಲ ಎಂದು ರೈತ ನಾಯಕರು ಈಗಾಗಲೇ ಘೋಷಿಸಿದ್ದು, ಮುಂದಿನ ಹೋರಾಟಕ್ಕೆ ಅಣಿಯಾಗುತ್ತಿದ್ದಾರೆ.

ಕಾಯ್ದೆ ರದ್ದತಿಯೊಂದೇ ಧ್ಯೇಯ

ಕೇಂದ್ರ ಸರ್ಕಾರದ ಮೂರು ವಿವಾದಿತ ಕೃಷಿ ಕಾನೂನುಗಳ ಉದ್ದೇಶ ಕೃಷಿಯ ಖಾಸಗೀಕರಣವೇ ಹೊರತು ಬೇರೇನೂ ಅಲ್ಲ ಎಂಬುದು ಸಂಯುಕ್ತ ಕಿಸಾನ್ ಮೋರ್ಚಾ ವಾದ. ಈ ಕಾನೂನುಗಳ ಮೂಲಕ ಸಣ್ಣ ಹಾಗೂ ಮಧ್ಯಮ ರೈತರನ್ನು ನಾಮಾವಶೇಷ ಮಾಡುವುದು, ಅವರ ಭೂಮಿಯನ್ನು ಕಾರ್ಪೊರೇಟ್ ಕಂಪನಿಗಳ ಪಾಲು ಮಾಡುವುದು ಇದರ ಹಿಂದಿನ ಹುನ್ನಾರ ಎಂಬುದು ಅವರ ಆರೋಪ.

ಹೀಗಾಗಿ, ರೈತ ಹಿತವೊಂದೇ ಆದ್ಯತೆಯಾಗಿರಬೇಕು ಎಂದು ನಿರ್ಧರಿಸಿರುವ ರೈತ ಸಂಘಟನೆಗಳು, ಯಾವ ರಾಜಕೀಯ ಪಕ್ಷವೂ ತನ್ನ ಹೋರಾಟವನ್ನು ಹೈಜಾಕ್ ಮಾಡದಂತೆ ಎಚ್ಚರಿಕೆ ವಹಿಸಿದೆ. ಹೋರಾಟವನ್ನು ಬೆಂಬಲಿಸುವ ರಾಜಕೀಯ ಪಕ್ಷಗಳ ನಡೆಯನ್ನು ಸ್ವಾಗತಿಸಿದರೂ ಎಲ್ಲ ರಾಜಕೀಯ ಪಕ್ಷಗಳಿಂದ ಅಂತರವನ್ನೂ ಕಾಯ್ದುಕೊಂಡಿದೆ. ಸಂಸತ್ತಿನ ಮುಂಗಾರು ಅಧಿವೇಶನದ ಸಂದರ್ಭದಲ್ಲಿ ನವದೆಹಲಿಯ ಜಂತರ್ ಮಂತರ್‌ನಲ್ಲಿ ನಡೆದ 'ಕಿಸಾನ್ ಸಂಸತ್' ವೇದಿಕೆ ಕೂಡ ರೈತರಿಗಷ್ಟೇ ಮೀಸಲಾಗಿತ್ತು. ರೈತರ ಹೋರಾಟ ಬೆಂಬಲಿಸಿ ಜಾಥಾ ಬಂದಿದ್ದ ವಿರೋಧ ಪಕ್ಷಗಳ ಮುಖಂಡರೆಲ್ಲರೂ ಅಲ್ಲಿ ಕೇಳುಗರಷ್ಟೇ ಆಗಿದ್ದರು.

ರಾಜಕೀಯ ಪಕ್ಷಗಳ ಸಹವಾಸವು ತನ್ನ ಹೋರಾಟಕ್ಕೆ ತೊಡಕಾಗಬಹುದು ಎಂದು ತನ್ನದೇ ಆದ ಪಂಚಾಯತ್‌ಗಳನ್ನು ಸಮಾವೇಶ ಮಾಡಿ, ಹೋರಾಟ ಸಂಘಟಿಸುತ್ತಿದೆ.

'ಕೇಂದ್ರ ಸರ್ಕಾರವು ರೈತರೊಂದಿಗೆ ಮಾತುಕತೆಗೆ ಸಿದ್ಧ ಎಂದು ಬಾಯಿಮಾತಿಗೆ ಮಾತ್ರ ಹೇಳುತ್ತಿದೆ. ಎಲ್ಲಿ? ಯಾವಾಗ ಎಂಬುದನ್ನೂ ಹೇಳಬೇಕಲ್ಲವೇ?' ಎಂದು ಕೇಳುತ್ತಿರುವ ಭಾರತೀಯ ಕಿಸಾನ್ ಯೂನಿಯನ್ ಮುಖಂಡ ರಾಕೇಶ್ ಟಿಕಾಯತ್, 'ರೈತರಿಗೆ ಯಾವುದೇ ಷರತ್ತು ಹಾಕದೇ ಚರ್ಚೆಗೆ ಕರೆಯಲಿ; ಬೇಕಿದ್ದರೆ ಅದಕ್ಕೆ ಹತ್ತು ವರ್ಷವಾದರೂ ಹಿಡಿಯಲಿ. ಅಲ್ಲಿಯವರೆಗೆ ನಾವು ಇಲ್ಲಿಂದ ಕದಲುವುದಿಲ್ಲ' ಎನ್ನುತ್ತಿದ್ದಾರೆ.

ಹೀಗಾಗಿ, ಈ ಕಾಯ್ದೆಗಳನ್ನು ಹಿಂಪಡೆಯುವವರೆಗೆ ಹೋರಾಟ ನಿಲ್ಲುವುದಿಲ್ಲ; ಮುಂದೆ ಯಾವುದೇ ಪಕ್ಷದ ಸರ್ಕಾರ ಬಂದರೂ ಈಗ ತಂದಿರುವ ಕಾಯ್ದೆಗಳನ್ನು ರದ್ದು ಮಾಡಬೇಕು ಎಂಬುದು ಅವರ ಆಗ್ರಹ.

ಉತ್ತರ ಪ್ರದೇಶ, ಪಂಜಾಬ್ ಸೇರಿದಂತೆ ಮುಂದಿನ ವರ್ಷ ವಿಧಾನಸಭೆ ನಡೆಯಲಿರುವ ರಾಜ್ಯಗಳಲ್ಲಿ ಬಿಜೆಪಿ ವಿರುದ್ಧ ಪ್ರಚಾರ ನಡೆಸಲು ಸಂಯುಕ್ತ ಕಿಸಾನ್ ಮೋರ್ಚಾ ಸಜ್ಜಾಗಿದೆ.

ರೈತ ಹೋರಾಟವು ಚುನಾವಣೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆಯನ್ನು ಮನಗಂಡೇ ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ ಸರ್ಕಾರವು, ರೈತರ ವಿರುದ್ಧ ದಾಖಲಿಸಲಾದ ಪ್ರಕರಣಗಳನ್ನು ಹಿಂಪಡೆಯುವುದಾಗಿ ಹೇಳಿದೆ.

ಅಲ್ಲದೇ ರೈತ ಹೋರಾಟದಲ್ಲಿ ಮುಂಚೂಣಿಯಲ್ಲಿರುವ ಗುರ್ಜರ್ ಹಾಗೂ ಜಾಟ್ ಸಮುದಾಯದವರ ಓಲೈಕೆಗಾಗಿ ನಾನಾ ಕಸರತ್ತು ನಡೆಸಿದೆ. ಜಾಟ್ ಸಮುದಾಯದ ದೊರೆ ರಾಜಾ ಮಹೇಂದ್ರ ಪ್ರತಾಪ್ ಸಿಂಗ್ ಹೆಸರಿನಲ್ಲಿ ವಿಶ್ವವಿದ್ಯಾಲಯಕ್ಕೆ ಇತ್ತೀಚೆಗಷ್ಟೇ ಶಂಕುಸ್ಥಾಪನೆ ನೆರವೇರಿಸಲಾಗಿದೆ. ಗುರ್ಜರ್ ದೊರೆ ಎನ್ನಲಾದ ಮಿಹಿರ್ ಭೋಜನ ಪ್ರತಿಮೆಯನ್ನೂ ಅನಾವರಣ ಮಾಡಿದೆ. ಆದರೆ, ಪ್ರತಿಮೆಯಲ್ಲಿ 'ಗುರ್ಜರ್ ದೊರೆ' ಎನ್ನುವುದನ್ನು ಉದ್ದೇಶಪೂರ್ವಕವಾಗಿಯೇ ಅಳಿಸಿಹಾಕಲಾಗಿದೆ ಎಂಬುದು, ಯೋಗಿ ಸರ್ಕಾರದ ವಿರುದ್ಧ ಗುರ್ಜರ್ ಸಮುದಾಯದ ಅತೃಪ್ತಿಗೂ ಮತ್ತೊಂದು ಕಿಡಿಗೂ ಕಾರಣವಾಗಿದೆ.

ಕಾಂಗ್ರೆಸ್, ವೈಎಸ್‌ಆರ್ ಕಾಂಗ್ರೆಸ್, ಬಿಎಸ್‌ಪಿ, ಆಮ್‌ಆದ್ಮಿ ಪಕ್ಷ, ತೆಲುಗುದೇಶಂ, ಅಕಾಲಿದಳ, ಆರ್‌ಜೆಡಿ, ಸಿಪಿಎಂ, ಸಿಪಿಐ ಸೇರಿದಂತೆ ಎಡಪಕ್ಷಗಳು ರೈತ ಹೋರಾಟಕ್ಕೆ ಬೆಂಬಲ ನೀಡಿವೆ.

ಮೆರ್ಕೆಲ್ ಬಳಿಕ ಜರ್ಮನಿ ಅಸ್ಥಿರ?

ಫ್ರಾಂಕ್‌ಫರ್ಟ್ (ಎಎಫ್‌ಪಿ): ಜರ್ಮನಿಯಲ್ಲಿ ನಡೆದ ಚುನಾವಣೆಯಲ್ಲಿ ಸೋಷಿಯಲ್ ಡೆಮಾಕ್ರಟ್ ಪಕ್ಷಕ್ಕೆ ಅಲ್ಪ ಮುನ್ನಡೆ ಸಿಕ್ಕಿದೆ. ಆಡಳಿತಾರೂಢ ಸಿಡಿಯು–ಸಿಎಸ್‌ಯು ಮೈತ್ರಿಕೂಟವು ಶೇ 24.1ರಷ್ಟು ಮತಗಳನ್ನು ಪಡೆದುಕೊಂಡಿದೆ. ಎಡಪಂಥೀಯ ಒಲವಿನ ಸೋಷಿಯಲ್ ಡೆಮಾಕ್ರಟ್ ಪಕ್ಷಕ್ಕೆ ಶೇ 25.7ರಷ್ಟು ಮತಗಳು ಸಿಕ್ಕಿವೆ. ಸೋಷಿಯಲ್ ಡೆಮಾಕ್ರಟ್ ಪಕ್ಷಕ್ಕೆ ಅಲ್ಪ ಮುನ್ನಡೆ ಇದ್ದರೂ ಸಿಡಿಯು–ಸಿಎಸ್‌ಯು ಮೈತ್ರಿಕೂಟವು ಸರ್ಕಾರ ರಚನೆಗೆ ಹಕ್ಕು ಮಂಡಿಸುವುದಾಗಿ ಹೇಳಿದೆ. ಸಣ್ಣ ಪಕ್ಷಗಳನ್ನು ಜತೆಗೆ ಸೇರಿಸಿ ಸರ್ಕಾರ ರಚಿಸಲು ಯತ್ನಿಸಲಾಗುವುದು ಎಂದಿದೆ. ಇದರೊಂದಿಗೆ ಜರ್ಮನಿಯು ರಾಜಕೀಯ ಅನಿಶ್ಚಿತ ಸ್ಥಿತಿಗೆ ಒಳಗಾಗುವುದು ಖಚಿತವಾಗಿದೆ.



ಮೆರ್ಕೆಲ್

ಸಿಡಿಯು–ಸಿಎಸ್‌ಯು ಮೈತ್ರಿಕೂಟದ ನಾಯಕಿ, ಜರ್ಮನಿಯ ಕಾಯಂ ಛಾನ್ಸೆಲರ್ ಎಂದೇ ಕರೆಸಿಕೊಳ್ಳುತ್ತಿದ್ದ ಅಂಗೆಲಾ ಮೆರ್ಕೆಲ್ ಅವರು ಸತತ 16 ವರ್ಷ ದೇಶಕ್ಕೆ ಸ್ಥಿರ ನಾಯಕತ್ವ ಒದಗಿಸಿದ್ದರು. ಆದರೆ, ಮುಂದಿನ ದಿನಗಳು ತೀವ್ರವಾಗಿ ಅನಿಶ್ಚಿತವಾಗಿ ಇರಲಿವೆ. ಸೋಷಿಯಲ್ ಡೆಮಾಕ್ರಟ್ ಪಕ್ಷದ ನಾಯಕ ಒಲಾಫ್ ಶೋಲ್ಸ್ ಮತ್ತು ಸಿಡಿಯು ನಾಯಕ ಅರ್ಮಿನ್ ಲಾಷೆಟ್ ಅವರು ಸರ್ಕಾರ ರಚನೆಯ ಉತ್ಸಾಹ ತೋರಿದ್ದಾರೆ. ಇದು ಸಂಘರ್ಷಮಯ ಸ್ಥಿತಿಗೆ ಕಾರಣ ಆಗಬಹುದು ಎನ್ನಲಾಗಿದೆ.

ಐದನೇ ಅವಧಿಗೆ ದೇಶದ ನಾಯಕತ್ವ ವಹಿಸಿಕೊಳ್ಳುವ ಉಮೇದನ್ನು ಅಂಗೆಲಾ ಅವರು ತೋರಲಿಲ್ಲ. ಇದುವೇ ಸಿಡಿಯು ಪಕ್ಷದ ಹಿನ್ನಡೆಗೆ ಮುಖ್ಯ ಕಾರಣ ಎನ್ನಲಾಗುತ್ತಿದೆ. ಅಂಗೆಲಾ ಅವರಿಗೆ ಪರ್ಯಾಯವಾಗಿ ಪಕ್ಷವು ಬಿಂಬಿಸಿದ ಅರ್ಮಿನ್ ಲಾಷೆಟ್ ಅವರಿಗೆ ಅಷ್ಟೊಂದು ಜನಪ್ರಿಯತೆ ಇಲ್ಲ.



ಶೋಲ್ಸ್ ಮತ್ತು ಲಾಷೆಟ್

ಅಧಿಕಾರದಿಂದ ಕೆಳಗೆ ಇಳಿದರೂ ಜರ್ಮನಿಯ ಅತ್ಯಂತ ಜನಪ್ರಿಯ ನಾಯಕಿಯಾಗಿ ಅಂಗೆಲಾ ಉಳಿಯಲಿದ್ದಾರೆ. ಅಂಗೆಲಾ ಅವರು ಅಧಿಕಾರದಲ್ಲಿ ಇಲ್ಲ ಎನ್ನುವುದೇ ಬಹಳ ಬೇಸರದ ಸಂಗತಿ ಎಂದು ಹಲವು ಮಂದಿ ಹೇಳಿದ್ದಾರೆ.

ಈ ಬಾರಿಯ ಚುನಾವಣೆಯಲ್ಲಿ ಅಂಗೆಲಾ ಅವರ ಪಕ್ಷಕ್ಕೆ ಚಾರಿತ್ರಿಕ ಹಿನ್ನಡೆ ಉಂಟಾಗಿದೆ. ಏಳು ದಶಕಗಳ ಇತಿಹಾಸದಲ್ಲಿ ಎಂದೂ ಆ ಪಕ್ಷವು ಶೇ 30ಕ್ಕಿಂತ ಕಡಿಮೆ ಮತಗಳನ್ನು ಪಡೆದಿರಲಿಲ್ಲ.

ಯುರೋಪ್‌ನ ಅಘೋಷಿತ ನಾಯಕ ಸ್ಥಾನದಲ್ಲಿ ಜರ್ಮನಿ ಈವರೆಗೆ ಇತ್ತು. ಐರೋಪ್ಯ ಒಕ್ಕೂಟದ ಯಾವುದೇ ಬಿಕ್ಕಟ್ಟಿನ ಸಂದರ್ಭದಲ್ಲಿ ಎಲ್ಲ ದೇಶಗಳು ಪರಿಹಾರಕ್ಕಾಗಿ ಜರ್ಮನಿಯತ್ತ ನೋಡುತ್ತಿದ್ದವು. ಆದರೆ, ರಾಜಕೀಯ ಪಕ್ಷಗಳ ನಡುವಣ ಸಂಘರ್ಷದಿಂದಾಗಿ ದೇಶವು ಈ ಸ್ಥಾನವನ್ನು ಕಳೆದುಕೊಳ್ಳಬಹುದು. ಜಾಗತಿಕ ಮಟ್ಟದಲ್ಲಿ ಸ್ವಲ್ಪ ಕಾಲ ಜರ್ಮನಿಯು ಕಾಣಿಸಿಕೊಳ್ಳದೇ ಇರಬಹುದು.

ಜರ್ಮನಿಯಲ್ಲಿ ಶೀಘ್ರದಲ್ಲಿಯೇ ಸ್ಥಿರ ಸರ್ಕಾರ ರಚನೆ ಆಗಬೇಕಾದ ಅನಿವಾರ್ಯ ಇದೆ. ಹವಾಮಾನ ಶೃಂಗ ಸಭೆಯು ಸದ್ಯದಲ್ಲೇ ನಡೆಯಲಿದೆ. ಜರ್ಮನಿಯಂತಹ ಪ್ರಮುಖ ದೇಶವು ಹವಾಮಾನ ವೈಪರೀತ್ಯ ತಡೆಗೆ ದೊಡ್ಡ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಅದಲ್ಲದೆ, ಜಿ7 ಗುಂಪಿನ ಅಧ್ಯಕ್ಷತೆಯು ಮುಂದಿನ ವರ್ಷ ಜರ್ಮನಿಗೆ ಸಿಗಲಿದೆ. ಜಿ7 ಗುಂಪಿನ ಕಾರ್ಯಸೂಚಿಯನ್ನು ನಿಗದಿ ಮಾಡಲು ಸಾಮರ್ಥ್ಯ ಇರುವ ಸರ್ಕಾರವು ಸ್ಥಾಪನೆ ಆಗಬೇಕಾದುದು ಅಗತ್ಯ.

ಮೈತ್ರಿ ಕಸರತ್ತು

ಎರಡು ಪಕ್ಷಗಳು ಮೈತ್ರಿಕೂಟ ಮಾಡಿಕೊಂಡು ಸರ್ಕಾರ ರಚಿಸುವ ಕ್ರಮ ಈವರೆಗೆ ಇತ್ತು. ಅಂಗೆಲಾ ನಂತರದ ಯುಗದಲ್ಲಿ ಅದು ಮೂರು ಪಕ್ಷಗಳ ಮೈತ್ರಿಕೂಟದ ಸರ್ಕಾರ ಆಗಬಹುದು ಎಂದು ರಾಜಕೀಯ ವಿಶ್ಲೇಷಕರು ಹೇಳಿದ್ದಾರೆ.

ಶೇ 14.8ರಷ್ಟು ಮತಗಳನ್ನು ಪಡೆದು ಮೂರನೇ ಸ್ಥಾನದಲ್ಲಿರುವ ಗ್ರೀನ್ ಪಾರ್ಟಿಯ (ಇದು ಪರಿಸರಪರ ಹೋರಾಟದ ಪಕ್ಷ) ಬೆಂಬಲದ ಮೇಲೆ ಲಾಷೆಟ್ ಮತ್ತು ಶೋಲ್ಸ್ ಕಣ್ಣಿಟ್ಟಿದ್ದಾರೆ.

ಉದಾರವಾದಿ ಮತ್ತು ಉದ್ಯಮಪರವಾದ ಎಫ್‌ಡಿಪಿ ಪಕ್ಷದ (ಶೇ 11.5ರಷ್ಟು ಮತ) ಬೆಂಬಲವನ್ನೂ ಈ ಇಬ್ಬರು ಎದುರು ನೋಡುತ್ತಿದ್ದಾರೆ. ಆದರೆ, ಎಫ್‌ಡಿಪಿ ಮತ್ತು ಗ್ರೀನ್ ಪಾರ್ಟಿಯ ಸಿದ್ಧಾಂತ ಪರಸ್ಪರ ವ್ಯತಿರಿಕ್ತವಾಗಿದೆ. ಹಾಗಾಗಿ ಎರಡೂ ಪಕ್ಷಗಳನ್ನು ಜತೆಗೂಡಿಸಿ ಮೈತ್ರಿಕೂಟ ರಚಿಸುವುದು ಸುಲಭವಲ್ಲ.

ಬಲಪಂಥೀಯ ಪಕ್ಷ ಆಲ್ಟರ್‌ನೇಟಿವ್ ಫಾರ್ ಜರ್ಮನಿ ಈ ಬಾರಿ ಶೇ 10.3ರಷ್ಟು ಮತ ಪಡೆದಿದೆ. ಆದರೆ, ಆ ಪಕ್ಷದ ಜತೆಗೆ ಮೈತ್ರಿ ಮಾಡಿಕೊಳ್ಳುವ ಒಲವು ಯಾರಿಗೂ ಇಲ್ಲ. ತೀವ್ರ ಎಡಪಂಥೀಯ ಪಕ್ಷ ಲಿಂಕ್ ಪಾರ್ಟಿಗೆ ಶೇ ಐದರಷ್ಟು ಮತ ಸಿಕ್ಕಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256


ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಪ್ರವಾಸದಲ್ಲಿ ವಿಶ್ವಸಂಸ್ಥೆಯಲ್ಲಿ ಭಾಷಣ, ಕ್ವಾಡ್ ನಾಯಕರ ಜೊತೆ ಸಭೆ ನಡೆಸಿದ್ದನ್ನು ಭಾರತದ ಮಾಧ್ಯಮಗಳು ವರದಿ ಮಾಡಿದವು. ಹಾಗೆಯೇ ಅಮೆರಿಕ ಪ್ರತಿಷ್ಠಿತ 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಯು ಸೆ. 26ರ ತನ್ನ ಇಡೀ ಮುಖಪುಟವನ್ನು ಮೋದಿ ಅವರಿಗೆ ಮೀಸಲಿಟ್ಟಿದೆ. 'ಮೋದಿ ಅವರು ಈ ಭೂಮಿಯ ಕೊನೆಯ ಮತ್ತು ಅತ್ಯುತ್ತಮ ಭರವಸೆ' ಎಂಬ ಹೆಡ್‌ಲೈನ್‌ನೊಂದಿಗೆ ಮೋದಿ ಅವರ ದೊಡ್ಡ ಚಿತ್ರವನ್ನು ಪ್ರಕಟಿಸಿದೆ ಎಂಬುದರ ಚಿತ್ರ ಮತ್ತು ವಿವರಗಳು ಸಾಮಾಜಿಕ ಜಾಲ ತಾಣಗಳಲ್ಲಿ ವೈರಲ್ ಆಗಿದೆ.



ನ್ಯೂಯಾರ್ಕ್ ಟೈಮ್ಸ್ ಮುಖಪುಟ ಆವರಿಸಿದರೇ ಮೋದಿ?

ವೈರಲ್ ಆಗಿರುವ ಚಿತ್ರದಲ್ಲಿರುವ ಕೆಲವು ಅಂಶಗಳು ಸಂದೇಹಾಸ್ಪದವಾಗಿವೆ. ಮುಖಪುಟದಲ್ಲಿ 'ಸೆಪ್ಟೆಂಬರ್' ಎಂಬುದರ ಸ್ಪೆಲ್ಲಿಂಗ್ ತಪ್ಪಾಗಿ ಬರೆಯಲಾಗಿದೆ. ಹೆಡ್‌ಲೈನ್‌ನಲ್ಲಿ ಬಳಸಿದ ಅಕ್ಷರದ ಸ್ವರೂಪ ಪತ್ರಿಕೆಯ ಎಂದಿನ ರೀತಿಯಲ್ಲಿಲ್ಲ. ಚಿತ್ರದ ಅಡಿಬರಹವು ನೂರು ವರ್ಷಗಳ ಇತಿಹಾಸ ಹೊಂದಿರುವ ಪತ್ರಿಕೆಗೆ ತಕ್ಕುದಾಗಿಲ್ಲ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ತಂಡ ಅಭಿಪ್ರಾಯಪಟ್ಟಿದೆ. ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯ ಸೆ. 26ರ ಆವೃತ್ತಿಯನ್ನು ಪರಿಶೀಲಿಸಿದಾಗ, ವೈರಲ್ ಆಗಿರುವ ಚಿತ್ರದ ಯಾವ ಅಂಶವೂ ಪತ್ರಿಕೆಯ ಮುಖಪುಟದಲ್ಲಿ ಕಂಡುಬಂದಿಲ್ಲ. ಹೀಗಾಗಿ ಇದು ಕಿಡಿಗೇಡಿಗಳು ಫೋಟೊಶಾಪ್‌ನಲ್ಲಿ ಮಾಡಿದ ದುಷ್ಕೃತ್ಯ ಎಂದು ಅಭಿಪ್ರಾಯಪಟ್ಟಿದೆ.

ಗುಂಡಣ್ಣ



ದಿನ ಭವಿಷ್ಯ

ಮಂಗಳವಾರ ಸೆಪ್ಟೆಂಬರ್ 28, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಹಸ್ತೆ ಸಪ್ತಮೀ ಗಂ. 20-20 (ಹ. 2-23) ಮಂಗಳವಾರ ನಿತ್ಯ ನಕ್ಷತ್ರ ಮೃಗಶಿರ ಗಂ. 30-8 (ಸಾ. 6-18) ವ್ಯತೀಪಾತ ನಾಮ ಯೋಗ ಗಂ. 26-15 ಬವ ಕರಣ ಗಂ. 20-20 ವಿಷ ಗಂ. 53-15 ಅಮೃತ ಗಂ 5-37 : ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30: ಸೂರ್ಯೋದಯ: 6-12 ಸೂರ್ಯಾಸ್ತ: 6-10 ಅದೃಷ್ಟ ಸಂಖ್ಯೆ 3

ಮೇಷ: ವೈಯಕ್ತಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಪಿತ್ರಾರ್ಜಿತ ಆಸ್ತಿ ವಿಷಯದಲ್ಲಿ ನ್ಯಾಯಾಲಯದ ಮೊರೆಹೋಗುವ ಸಾಧ್ಯತೆ. ವಿವಾಹಾಕಾಂಕ್ಷಿಗಳಿಗೆ ವಿವಾಹ ಸಂಬಂಧಗಳು ಕೂಡಿಬರಲಿದೆ.

ವೃಷಭ: ಆತ್ಮೀಯರ ಆಗಮನವಾಗಲಿದೆ. ವಜ್ರ ವೈಢೂರ್ಯಗಳ ವ್ಯಾಪಾರಸ್ಥರಿಗೆ ಲಾಭ. ಕೆಲಸ ಕಾರ್ಯಗಳಲ್ಲಿ ಆಸಕ್ತಿ ಮೂಡಿ ಯಶಸ್ಸು. ರಾಜಕೀಯ ಕ್ಷೇತ್ರದಲ್ಲಿರುವ ಮಹಿಳೆಯರಿಗೆ ಸ್ಥಾನಮಾನ ಪ್ರಾಪ್ತವಾಗಲಿದೆ.

ಮಿಥುನ: ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ವಿಶೇಷ ಕಾಳಜಿ ಅಗತ್ಯ. ಕಲಾವಿದರಿಗೆ ಪ್ರತಿಭಾ ಪ್ರದರ್ಶನಕ್ಕೆ ಅವಕಾಶಗಳು ದೊರಕುವುದರೊಂದಿಗೆ ಗೌರವಾದರಗಳು. ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಹರಿಸುವುದು ಅವಶ್ಯ.

ಕರ್ಕಾಟಕ: ಅನಿರೀಕ್ಷಿತ ವ್ಯಕ್ತಿಯೊಬ್ಬರ ಪರಿಚಯದಿಂದ ಆಧ್ಯಾತ್ಮಕ ವಿಷಯಗಳ ಕುರಿತಾದ ಸಲಹೆಗಳನ್ನು ಪಡೆಯಲಿದ್ದೀರಿ. ಮಕ್ಕಳ ವಿಷಯದಲ್ಲಿ ಗಮನ ಅಗತ್ಯ. ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣುವಿರಿ.

ಸಿಂಹ: ಆರ್ಥಿಕ ಸಂಪನ್ಮೂಲಗಳು ವೃದ್ಧಿಯಾಗಲಿವೆ. ಚಿನ್ನಾಭರಣಗಳ ಖರೀದಿ ಸಾಧ್ಯತೆ ಕಂಡುಬರುವುದು. ಸಹನೆಯಿಂದಾಗಿ ನೆರೆಹೊರೆಯವರೊಂದಿಗಿನ ಸಂಬಂಧ ಉತ್ತಮಗೊಳ್ಳಲಿದೆ. ಮಕ್ಕಳಿಂದ ನೆಮ್ಮದಿಯನ್ನು ನಿರೀಕ್ಷಿಸಬಹುದು.

ಕನ್ಯಾ: ಅತಿಯಾದ ಮಾತುಗಳ ಮೇಲೆ ಹಿಡಿತ ಅಗತ್ಯ. ಸಹೋದರರ ಸಹಕಾರದಿಂದಾಗಿ ಕೈಗೊಂಡ ಕಾರ್ಯಗಳು ಸುಗಮವಾಗಲಿದೆ. ಅನವಶ್ಯಕ ವ್ಯವಹಾರಗಳಿಂದ ದೂರ ಉಳಿಲಯುವುದು ಉತ್ತಮ.

ತುಲಾ: ವ್ಯಾಪಾರ ವ್ಯವಹಾರಗಳ ವಿಷಯದಲ್ಲಿ ಅತಿಯಾದ ಚಿಂತನೆ ಮಾಡದಿರುವುದು ಉತ್ತಮ. ಮೇಲಾಧಿಕಾರಿಗಳಿಂದ ಪ್ರಶಂಸೆಯ ಮಾತುಗಳು. ಬರವಣಿಗೆ ವಿಷಯದಲ್ಲಿ ಅತ್ಯಂತ ಜಾಗರೂಕರಾಗಿರುವುದು ಒಳಿತು.

ವೃಶ್ಚಿಕ: ಆರ್ಥಿಕ ಅಭಿವೃದ್ಧಿಯ ಕಾರ್ಯಗಳಲ್ಲಿ ಅಡೆತಡೆಗಳು ಎದುರಾದೀತು. ಅಪೇಕ್ಷಿತರಿಗೆ ವಿವಾಹ ಸಂಬಂಧಗಳು ಕುದುರಲಿವೆ. ಒಡಹುಟ್ಟಿದವರ ಸಹಕಾರದಿಂದ ಅನುಕೂಲ. ವಾಹನ ಚಾಲನೆ ಮಾಡದಿರುವುದು ಉತ್ತಮ.

ಧನು: ಕೃಷಿ ಕ್ಷೇತ್ರದಲ್ಲಿ ಬಿಡುವಿಲ್ಲದ ಕೆಲಸಗಳು ಎದುರಾಗುವವು. ಯಂತ್ರಾಯುಧಗಳ ವಿಷಯದಲ್ಲಿ ಎಚ್ಚರಿಕೆ ಅಗತ್ಯ. ಮಹಿಳೆಯರಿಗೆ ಸಂಗಾತಿಯಿಂದ ಉತ್ತಮ ಸಹಕಾರದ ನಿರೀಕ್ಷೆ.

ಮಕರ: ವಿದ್ವಾಂಸರು, ಪರಿಣತರುಗಳಿಗೆ ಗೌರವಾದರಗಳು ಪ್ರಾಪ್ತವಾಗಲಿದೆ. ಉದ್ಯೋಗ ಕ್ಷೇತ್ರದಲ್ಲಿ ಹೊಂದಾಣಿಕೆಯಿಂದಾಗಿ ನೆಮ್ಮದಿಯನ್ನು ಹೊಂದುವಿರಿ. ಮಹಿಳೆರಿಗೆ ಸಮಾರಂಭಗಳಲ್ಲಿ ಭಾಗವಹಿಸುವಂತೆ ಆಹ್ವಾನ ನಿರೀಕ್ಷಿಸಬಹುದು.

ಕುಂಭ: ದೈನಂದಿನ ಕೆಲಸ ಕಾರ್ಯಗಳು ಯಶಸ್ವಿಯಾಗಿ ಸಾಗುವವು. ಹಿತಶತ್ರುಗಳ ವಿಚಾರದಲ್ಲಿ ಎಚ್ಚರಿಕೆ ಅಗತ್ಯ. ಆಸ್ತಿ ಸಂಬಂಧದ ವಿವಾದಗಳು ಬಗೆಹರಿಯಲಿವೆ. ಮನರಂಜನಾ ಕಾರ್ಯಕ್ರಮಗಳಲ್ಲಿ ಭಾಗಿ.

ಮೀನ: ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿಯನ್ನು ಕಾಣಲಿದ್ದೀರಿ. ಬೇರೆಯವರಿಗೆ ಸಹಾಯ ಮಾಡುವ ವಿಷಯದಲ್ಲಿ ತೂಗಿ ನೋಡುವುದು ಉತ್ತಮ. ಋಣ ಪರಿಹಾರದಿಂದಾಗಿ ಮಾನಸಿಕ ತೃಪ್ತಿ ನಿಮ್ಮದಾಗಲಿದೆ.

ನಿಮ್ಮ ಜನ್ಮದಿನ 28-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಅತ್ಯಂತ ಜಾಗರೂಕರಾಗಿ ಹಣಕಾಸಿನ ವ್ಯವಹಾರವನ್ನು ನಿರ್ವಹಿಸುವುದು ಒಳಿತು. ಬಟ್ಟೆ ವ್ಯಾಪಾರದಲ್ಲಿ ತೊಡಗಿರುವವರಿಗೆ ಉತ್ತಮ ಆದಾಯ ದೊರಕಲಿದೆ. ಆರೋಗ್ಯದಲ್ಲಿ ಸುಧಾರಣೆಯೊಂದಿಗೆ ನೆಮ್ಮದಿ ಮೂಡಿಬರಲಿದೆ. ರಾಜಕೀಯ ವ್ಯವಹಾರಗಳಲ್ಲಿ ತೊಡಗದಿರುವುದೇ ಸೂಕ್ತವಾದೀತು.

ಬೆರಗಿನ ಬೆಳಕು

ಗುರುರಾಜ ಕರಜಗಿ



ಭಗವಂತನ ವ್ಯಾಖ್ಯಾನ

ಸ್ವರರಾಗ ಗೀತಿಗಳು ನಾಟ್ಯಾಭಿನೀತಿಗಳು |
ಕರೆದೇಳಿಸುವುವು ಮನಸಿನಲಿ ನಿದ್ರಿಸುವಾ ||
ಪರಿಪರಿಯ ಭಾವಗಳ ಗೂಢಸ್ವಭಾವಗಳ |
ಪರಮೇಷ್ಠಿ ಟೀಕು ಕಲೆ – ಮಂಕುತಿಮ್ಮ || 465 ||

ಪದ-ಅರ್ಥ: ಗೀತಿ = ಗೀತೆ, ನಾಟ್ಯಾಭಿನೀತಿ = ನಾಟ್ಯ + ಅಭಿನೀತಿ (ಪ್ರದರ್ಶನ), ಕರೆದೇಳಿಸುವುವು = ಕರೆದು + ಏಳಿಸುವುವು (ಎಚ್ಚರಿಸುವುವು), ಟೀಕು = ಟಿಪ್ಪಣಿ, ವ್ಯಾಖ್ಯಾನ.

ವಾಚ್ಯಾರ್ಥ: ಸ್ವರಗಳು, ರಾಗಗಳು, ಗೀತೆಗಳು, ನಾಟ್ಯಪ್ರದರ್ಶನಗಳು, ನಮ್ಮ ಮನಸ್ಸಿನಲ್ಲಿ ನಿದ್ರಿಸುತ್ತಿರುವ ವಿವಿಧ ಭಾವಗಳನ್ನು, ಗೂಢಸ್ವಭಾವಗಳನ್ನು ಬಡಿದೇಳಿಸುತ್ತವೆ. ಈ ಕಲೆಗಳು ಸೃಷ್ಟಿಕರ್ತನ ಕಾರ್ಯದ ಟಿಪ್ಪಣಿಗಳು, ವ್ಯಾಖ್ಯಾನಗಳು.

ವಿವರಣೆ: ಪ್ರತಿಯೊಬ್ಬ ವ್ಯಕ್ತಿ, ತನ್ನ ಸುತ್ತಮುತ್ತಲೂ ನಡೆಯುವ ಘಟನೆಗಳು, ಜನರು ಅವುಗಳಿಗೆ ಪ್ರತಿಕ್ರಿಯಿಸುವ ವಿಧಾನಗಳಿಂದ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾನೆ. ಈ ಪ್ರಕ್ರಿಯೆಯಲ್ಲಿ ಕಲೆ ವಿಶೇಷ ಸ್ಥಾನವನ್ನು ಪಡೆದುಕೊಂಡಿದೆ. ಪ್ರಸಿದ್ಧ ಫ್ರೆಂಚ್ ಬರಹಗಾರ ಕ್ಲೌಡ್ ಹೆಲ್ವೆಟಿಯಸ್ ಹೇಳಿದರು, 'ಕಲೆಯ ಕಾರ್ಯ ಹೃದಯಗಳನ್ನು ಪ್ರಚೋದಿಸುವುದು'. ನಾವೊಂದು ಸುಂದರವಾದ ಚಿತ್ರವನ್ನು ನೋಡಿದಾಗ, ಅತ್ಯಂತ ಮಧುರವಾದ ಸಂಗೀತವನ್ನು ಕೇಳಿದಾಗ, ಅತ್ಯದ್ಭುತವಾದ ನೃತ್ಯವನ್ನೋ, ನಾಟಕವನ್ನೋ ರಂಗದ ಮೇಲೆ ನೋಡಿದಾಗ ಏನಾಗುತ್ತದೆ? ನಮಗರಿಯದಂತೆ ಮುಖದ ಮೇಲೆ ನಗು ಮೂಡುತ್ತದೆ, ದುಃಖದ ಸನ್ನಿವೇಶಗಳನ್ನು ಕಂಡಾಗ ಕಣ್ಣಲ್ಲಿ ನೀರು ಸುರಿಯುತ್ತದೆ, ಮಧುರಸಂಗೀತಕ್ಕೆ ತಲೆ ತೊನೆಯುತ್ತದೆ.

ಕಲೆಯ ಕಾರ್ಯ ದೇಹದ ಹೊರಗೆ ಆದರೆ ಅದರ ಪರಿಣಾಮವಾಗುವುದು ಅಂತರ್ಯದಲ್ಲಿ. ಇದೆಷ್ಟು ಅದ್ಭುತವಲ್ಲವೇ? ಈ ಕಲೆ ಏನು ಮಾಡುತ್ತದೆ? ಅದು ಬದುಕಿನ ಕಷ್ಟಗಳಿಂದ ನಮ್ಮನ್ನು ಮೇಲೆತ್ತಿ ಬದುಕಿಗೊಂದು ಅರ್ಥವನ್ನು, ಘನತೆಯನ್ನು ಕೊಡುತ್ತದೆ. ಅವು ಮನಸ್ಸಿನಲ್ಲಿ ಅವಿತುಕೊಂಡಿರುವ ಉನ್ನತ ಭಾವನೆಗಳನ್ನು ಬಡಿದೆಬ್ಬಿಸುವುದರೊಂದಿಗೆ, ಕೀಳು ಭಾವನೆಗಳನ್ನು, ನಿರಾಸೆಗಳನ್ನು, ವೈಫಲ್ಯಗಳನ್ನು ಮರೆಸಿ ಬದುಕಿಗೊಂದು ನೆಲೆ ಕಲ್ಪಿಸುತ್ತವೆ. ಜಗತ್ಪ್ರಸಿದ್ಧ ಕಲಾವಿದರಾದ ವಿನ್ಸೆಂಟ್ ವಾನ್ ಗೊಗ್ ಮತ್ತು ಲಿಯೋನಾರ್ಡೊ ಡಾ ವಿನ್ಸಿ ಅವರಿಬ್ಬರೂ ಬಡತನದ ಮೂಸೆಯಲ್ಲಿ ಬೆಂದು ಬಂದವರು, ದಿಕ್ಕುಗಾಣದೆ ಅಲೆದವರು. ಗಾಗ್‌ನಂತೂ ಆತ್ಮಹತ್ಯೆ ಮಾಡಿಕೊಳ್ಳಲು ಎದೆಗೆ ಗುಂಡು ಹೊಡೆದುಕೊಂಡಿದ್ದ. ಆದರೆ ಅವರಲ್ಲಿದ್ದ ಕಲೆ ಅವರನ್ನು ಈ ಕಷ್ಟದ ಕೊರಗಿನಿಂದ ಕೆಲಕ್ಷಣಗಳಾದರೂ ಹೊರತಂದು ಅವರನ್ನು ಪ್ರಪಂಚಕ್ಕೆ ಪರಿಚಯಿಸಿತು. ಅತ್ಯಂತ ವಿಭಿನ್ನ ಪಾತ್ರಗಳಲ್ಲಿ, ಇಡೀ ಪಾತ್ರದ ಚೈತನ್ಯವನ್ನೇ ತನ್ನ ಕಂಗಳಲ್ಲಿ ಹೊಮ್ಮಿಸುವ ಅಪರೂಪದ ರಂಗಕಲಾವಿದೆ ಶ್ರೀಮತಿ ಉಮಾಶ್ರೀ. ಅವರೇ ಒಂದು ಸಂದರ್ಶನದಲ್ಲಿ ತಮ್ಮ ಬಡತನದ ಬಗ್ಗೆ ಹೇಳುತ್ತ, 'ನಾನು ನಾಟಕಕ್ಕೆ ಸೇರಿದ್ದೇ ತಿನ್ನಲು ಚಿತ್ರಾನ್ನ ಸಿಗುತ್ತದೆಂದು' ಎಂದಿದ್ದರು. ಆದರೆ ಅವರಲ್ಲಿ ರಕ್ತಗತವಾದ ಕಲೆ ಬಡತನವನ್ನು ಮೆಟ್ಟಿ ನಿಂತಿತು, ಅವರನ್ನು ಎತ್ತರಕ್ಕೆ ಕರೆದೊಯ್ದಿತು. ಹೀಗೆ ವಿಭಿನ್ನ ಕಲೆಯ ಪ್ರಕಾರಗಳು ನಮ್ಮ ಮನಸ್ಸಿನಲ್ಲಿ ಅಡಗಿ ನಿದ್ರಿಸುವ ಭಾವಗಳನ್ನು ಬಡಿದೆಬ್ಬಿಸುತ್ತವೆ. ಸೃಷ್ಟಿಯಲ್ಲಿ ಕಾಣುವ, ಕೇಳುವ, ಅನುಭವಿಸುವ ಕಲೆ ಕೂಡ ಸೃಷ್ಟಿಕರ್ತನ ಕಾರ್ಯವೇ. ಅದಕ್ಕೇ ನಮ್ಮ ಭಾರತೀಯ ಪರಂಪರೆಯಲ್ಲಿ ಪ್ರತಿಯೊಂದು ಕಲಾ-ಪ್ರದರ್ಶನಕ್ಕೆ ಮೊದಲು ದೇವಪೂಜೆ, ರಂಗಪೂಜೆ ಮಾಡುವುದು ವಾಡಿಕೆ. ಅದನ್ನು ಈ ಕಗ್ಗ ಧ್ವನಿಪೂರ್ಣವಾಗಿ ಹೇಳುತ್ತದೆ. ಈ ಕಲೆಯ ಪ್ರಕಾರಗಳೆಲ್ಲ ಸೃಷ್ಟಿಕರ್ತನ ಟಿಪ್ಪಣಿಗಳು, ಪ್ರತಿಯೊಂದು ಕಲೆ ಆ ಭಗವಂತನ ಶಕ್ತಿಯ ವ್ಯಾಖ್ಯಾನ. ❖

ಪದಬಂಧ 4732


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಾಸ್ಯ ಈ ವಿಧವಾಗಿ ಬಂದಿದೆ (3)
3. ಮಾನಿನಿಯ ಮೇಲೇ ಸಂದೇಹ! (3)
5.ನಗರದಲ್ಲಿರುವ ಮನುಷ್ಯ (2)
6.ಪೇರಿಸಿಕೊಂಡಿರುವ ಸಾಮಾನುಗಳ ದುರಸ್ತಿ! (3)
7. ಈತ ನರಕಾಧಿಪತಿ (2)
9.ಶಿರದೊಳಗೆ ಅಡರಿದ ಚಳಿಗಾಲ! (3)
10.ಹರನ ಮುಂದಿರುವ ದೊಡ್ಡ ಕೊಡ (3)
11.ತಟಕ್ಕನೆ ಕಾಣಿಸಿದ್ದು ತಟಾಕದ ದಡ (2)
13. ಹೂವಿನ ಧೂಳು (3)
15.ಅಸುರನ ಹತ್ತಿರವಿರುವ ದೇವತೆ (2)
16.ಭಾಗಲಬ್ಧ ಗೊತ್ತಿರದ ಜಿಪುಣ! (3)
17. ಹತ್ತನೆಯ ಭಾಗ (3)

ಮೇಲಿಂದ ಕೆಳಕ್ಕೆ

1.ವರ ನೀಡಿದ್ದು ವಿಸ್ತಾರವಾದ ನಿರೂಪಣೆ! (3)
2. ಪ್ರಜ್ವಲಿಸುವ ಬೆಂಕಿಯಿದು (3)
3.ಹಳೇ ವಸ್ತುಗಳನ್ನು ಮಾರುವ ಅಂಗಡಿ (3)
4.ನಿರ್ಧಾರವೂ ಆಗುವ ಗೊತ್ತುವಳಿ (3)
5.ಕಾಲುಗುರಿನಿಂದ ತಲೆಯ ಮುಡಿಯವರೆಗೆ (5)
8. ಚಿತ್ತವಿಕಲ್ಪವನ್ನು ಹೀಗೆನ್ನಿ (5)
12.ಪಾಲು ಕೇಳುವವನ ಕೈಯಲ್ಲಿರುವ ಅಂಚೆ (3)
13.ಹಾಡು ಹೇಳಿ ಗಿಟ್ಟಿಸಿಕೊಂಡಿರುವ ಮೆಡಲು (3)
14. ಬಿಗಿದ ಕಂಠ (3)
15.ಮಗ ಕೊನೆಗೆ ತಿರುಗಿದರೆ ಇದು ಸಲೀಸು! (3)



4731ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅರ್ಧಾಂಗಿ 3.ಮದನಕೈ 5.ಲೀಲಾಜಾಲ 6.ವಟು 7.ಗಗನ 9.ನವೀನ 12.ಜಯ 13.ಮಡಿವಾಳ 15.ಸೆರೆಮನೆ 16.ಕರುಳು

ಮೇಲಿಂದ ಕೆಳಕ್ಕೆ: 1.ಅತ್ತೆ 2.ಗಿಲೀಟು 3.ಮಲರೋಗ 4.ಕೈವಾರ 6.ವರ್ತಮಾನ 8.ನವೋದಯ 10.ನಡುಮನೆ 11.ಹಾವಸೆ 12ಜಳಕ 14.ಅಳು

ಸುಡೊಕು 5118

				6				2
6		2	4		9			
	8					6		9
3	5	7	2			4		
		8		4			3	7
4					3	2		8
		9	8					4
8					4		2	
		3		2		7		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5117 ಸುಡೊಕು

4	5	7	2	6	8	1	9	3
9	2	6	1	3	5	4	7	8
1	8	3	7	4	9	2	5	6
6	3	1	4	5	2	7	8	9
5	7	2	8	9	6	3	4	1
8	9	4	3	7	1	5	6	2
3	6	9	5	1	4	8	2	7
2	1	5	6	8	7	9	3	4
7	4	8	9	2	3	6	1	5

ಅಮೆರಿಕ ನೌಕಾಪಡೆ: ಸಿಖ್ ಯೋಧನಿಗೆ ಟರ್ಬನ್ ಧರಿಸಲು ಅನುಮತಿ

ನ್ಯೂಯಾರ್ಕ್ (ಪಿಟಿಐ): 'ಅಮೆರಿಕದ ನೌಕಾಪಡೆಯಲ್ಲಿ (ಮೆರಿನ್ ಕಾರ್ಪ್) ಸೇವೆ ಸಲ್ಲಿಸುತ್ತಿರುವ ಸಿಖ್ ಸಮುದಾಯಕ್ಕೆ ಸೇರಿದ ಲೆಫ್ಟಿನೆಂಟ್ ಸುಕ್ಬೀರ್ ತೂರ್ ಎಂಬುವವರಿಗೆ ಟರ್ಬನ್ ಧರಿಸಲು ನೌಕಾಪಡೆ ಅನುಮತಿ ನೀಡಿದೆ. 246 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಈ ವಿನಾಯಿತಿ ದೊರೆತಿದೆ.

ಸುಕ್ಬೀರ್ ತೂರ್ (26) ಅವರು ವಾಷಿಂಗ್ಟನ್ ಮತ್ತು ಓಹಿಯೊದಲ್ಲಿ ತಮ್ಮ ಬಾಲ್ಯವನ್ನು ಕಳೆದವರು. ಸೇನೆಯಲ್ಲಿ ಐದು ವರ್ಷಗಳ ಸೇವೆಯ ಬಳಿಕ ಅವರಿಗೆ ಟರ್ಬನ್ ಧರಿಸಲು ಅನುಮತಿ ನೀಡಲಾಗಿದೆ. ಸಾಮಾನ್ಯ ಕರ್ತವ್ಯದ ವೇಳೆ ಅವರು ದೈನಂದಿನ ಸಮವಸ್ತ್ರದೊಂದಿಗೆ ಟರ್ಬನ್ ಧರಿಸಬಹುದು. ಆದರೆ ಸಂಘರ್ಷ ವಲಯದಲ್ಲಿ ಕರ್ತವ್ಯದಲ್ಲಿರುವಾಗ ಮತ್ತು ಸಾರ್ವಜನಿಕರು ನೋಡಬಹುದಾದಂತಹ ಕಾರ್ಯಕ್ರಮದಲ್ಲಿ ಟರ್ಬನ್ ಧರಿಸುವಂತಿಲ್ಲ ಎಂಬ ಷರತ್ತು ವಿಧಿಸಲಾಗಿದೆ.

'ನೌಕಾಪಡೆಗೆ ನಿಜವಾಗಿಯೂ ವೈವಿಧ್ಯತೆ ಸಾಮರ್ಥ್ಯದಲ್ಲಿ ನಂಬಿಕೆಯಿದೆ ಎಂದಾದರೆ, ಸೇನಾ ಸಿಬ್ಬಂದಿ ನೋಡಲು ಹೇಗೆ ಕಾಣಿಸುತ್ತಾರೆ ಎಂಬುದು ಅದಕ್ಕೆ ಮುಖ್ಯವಾಗಬಾರದು. ಅವರ ಕೆಲಸವೇ ಮುಖ್ಯವಾಗಬೇಕು' ಎಂದು ಸುಕ್ಬೀರ್ ಪ್ರಬಲವಾಗಿ ವಾದ ಮಂಡಿಸಿ, ನೌಕಾಪಡೆಯನ್ನೇ ಒಪ್ಪಿಕೊಳ್ಳುವಂತೆ ಮಾಡಿದ್ದಾರೆ.

ಅಮೆರಿಕದ ವಾಯುಪಡೆ ಮತ್ತು ಭೂಸೇನೆಯಲ್ಲಿ 100ರಷ್ಟು ಸಿಖ್ ಯೋಧರಿದ್ದು, ಅವರಿಗೆ ಗಡ್ಡ ಬಿಡಲು ಮತ್ತು ಟರ್ಬನ್ ಧರಿಸಲು ಅವಕಾಶ ನೀಡಲಾಗಿದೆ.

ಕಾಂಗ್ರೆಸ್: ಫಲೆರೊ ಶಾಸಕ ಸ್ಥಾನಕ್ಕೆ ರಾಜೀನಾಮೆ

ಪಣಜಿ (ಪಿಟಿಐ): ಗೋವಾದ ಮಾಜಿ ಮುಖ್ಯಮಂತ್ರಿ ಮತ್ತು ಕಾಂಗ್ರೆಸ್ ನಾಯಕ ಲುಯಿಜಿನೊ ಫಲೆರೊ ಸೋಮವಾರ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷವನ್ನು ಅವರು ಸೇರುವ ಸಾಧ್ಯತೆಯಿದೆ.

ಅವರು ರಾಜೀನಾಮೆಯನ್ನು ವಿಧಾನಸಭಾ ಸ್ಪೀಕರ್ ರಾಜೇಶ್ ಪಟ್ನೇಕರ್ ಅವರಿಗೆ ಸಲ್ಲಿಸಿದರು. ಇವರ ರಾಜೀನಾಮೆಯಿಂದ, 40 ಸದಸ್ಯರುಳ್ಳ ವಿಧಾನಸಭೆಯಲ್ಲಿ ಕಾಂಗ್ರೆಸ್ ಬಲವು 4ಕ್ಕೆ ಇಳಿದಿದೆ.

ಲುಯಿಜಿನೊ ಫಲೆರೊ ನವೇಲಿಂ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು. ಮುಂದಿನ ವರ್ಷ ನಡೆಯಲಿರುವ ರಾಜ್ಯ ವಿಧಾನ ಚುನಾವಣೆಯ ಹಿನ್ನೆಲೆಯಲ್ಲಿ ಇತ್ತೀಚೆಗೆ ಗೋವಾ ಕಾಂಗ್ರೆಸ್ ಪ್ರಚಾರ ಸಮಿತಿ ಮುಖ್ಯಸ್ಥರಾಗಿ ಅವರನ್ನು ನೇಮಿಸಲಾಗಿತ್ತು.

ರಾಜೀನಾಮೆ ನೀಡುವ ಸ್ವಲ್ಪ ಸಮಯದ ಮೊದಲು, ಫಲೇರೋ ಅವರು ನರೇಂದ್ರ ಮೋದಿ ಎದುರಿಸಲು ಮಮತಾ ಬ್ಯಾನರ್ಜಿಯಂತಹ ನಾಯಕರ ಅಗತ್ಯವಿದೆ ಎಂದು ಹೇಳಿದರು.

ಗುಣಮುಖರ ಒಟ್ಟು ಸಂಖ್ಯೆಯು 29.23ಕ್ಕೆ ಏರಿಕೆ

ಕೋವಿಡ್: ಮರಣ ಪ್ರಮಾಣ ದರ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪೀಡಿತರ ಪೈಕಿ ಸೋಮವಾರ 20 ಮಂದಿ ಅಸುನೀಗಿದ್ದಾರೆ. ಈವರೆಗೆ 37,746 ಜನ ಮೃತರಾಗಿದ್ದು, ಮರಣ ಪ್ರಮಾಣ ದರವು ಶೇ 3.96ಕ್ಕೆ ಏರಿಕೆಯಾಗಿದೆ.

ಹೊಸ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದೆ. ಒಂದು ದಿನದಲ್ಲಿ 504 ಜನರಿಗೆ ಸೋಂಕು ತಗುಲಿದೆ. ಈವರೆಗೆ ಸೋಂಕಿತರಾದವರ ಸಂಖ್ಯೆ 29.73 ಲಕ್ಷಕ್ಕೆ ಹೆಚ್ಚಿದೆ. ಕೋವಿಡ್ ದೃಢ ಪ್ರಮಾಣವು ಶೇ 0.48ರಷ್ಟಿದೆ.

ಹಿಂದಿನ 24 ಗಂಟೆಗಳಲ್ಲಿ 893 ಜನರಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆಯು 29.23 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದೆ. ಸದ್ಯ 12,804 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಂಗಳೂರಿನಲ್ಲಿ ಹೊಸ ಪ್ರಕರಣಗಳು ಇಳಿಕೆಯಾಗಿವೆ. ಸೋಮವಾರ 181 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ. ಬಾಗಲಕೋಟೆ, ಚಿಕ್ಕಬಳ್ಳಾಪುರ, ಧಾರವಾಡ, ಗದಗ, ಹಾವೇರಿ, ಕೊಪ್ಪಳ, ರಾಮನಗರ, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. 9 ಜಿಲ್ಲೆಗಳಲ್ಲಿ ಇದು ಒಂದಂಕಿಯಷ್ಟಿದೆ. ಕೇರಳಕ್ಕೆ ಹೊಂದಿಕೊಂಡಂತಿರುವ ಗಡಿ ಜಿಲ್ಲೆಗಳ ಪೈಕಿ ದಕ್ಷಿಣ ಕನ್ನಡದಲ್ಲಿ 83 ಪ್ರಕರಣಗಳು ದಾಖಲಾಗಿವೆ. ಕೊಡಗು ಮತ್ತು ಮೈಸೂರಿನಲ್ಲಿ ಕ್ರಮವಾಗಿ 26 ಮತ್ತು 47 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದೆ. ಏಳು ಜಿಲ್ಲೆಗಳಲ್ಲಿ ಇದು 20ಕ್ಕಿಂತ ಕಡಿಮೆ ಇದೆ.


ಕೋವಿಡ್ ಪೀಡಿತರ ಪೈಕಿ ಬೆಂಗಳೂರಿನಲ್ಲಿ 5 ಜನ ಅಸುನೀಗಿದ್ದಾರೆ. ದಕ್ಷಿಣ ಕನ್ನಡ (4), ಮೈಸೂರು (3) ಮತ್ತು ಮಂಡ್ಯದಲ್ಲಿ (2) ಹೆಚ್ಚು ಮಂದಿ ಮೃತರಾಗಿದ್ದಾರೆ. ಬಾಗಲಕೋಟೆ, ಚಿಕ್ಕಮಗಳೂರು, ಹಾಸನ, ಕೋಲಾರ, ತುಮಕೂರು, ಉಡುಪಿ ಜಿಲ್ಲೆಗಳಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮೃತರ ಪೈಕಿ ಜ್ವರ, ಕೆಮ್ಮು ಹಾಗೂ ಉಸಿರಾಟದ ತೊಂದರೆ ಎದುರಿಸುತ್ತಿದ್ದವರ ಹೆಚ್ಚಿದ್ದಾರೆ. ಕೋವಿಡ್ ಪರೀಕ್ಷೆಗಳ ಗಣನೀಯ ಇಳಿಕೆಯಾಗಿದೆ. ಒಂದು ದಿನದಲ್ಲಿ 1.03 ಲಕ್ಷ ಮಾದರಿಗಳನ್ನಷ್ಟೇ ಪರೀಕ್ಷಿಸಲಾಗಿದೆ.

ದೇಶದಲ್ಲಿ ಸಕ್ರಿಯ ಪ್ರಕರಣ 3 ಲಕ್ಷಕ್ಕಿಂತ ಕಡಿಮೆ

ನವದೆಹಲಿ (ಪಿಟಿಐ): ದೇಶದಲ್ಲಿ ಸೋಮವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳಲ್ಲಿ ಹೊಸದಾಗಿ 26,041 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಈ ಅವಧಿಯಲ್ಲಿ 276 ಮಂದಿ ಮೃತಪಟ್ಟಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ 2,99,620ಕ್ಕೆ ಕುಸಿದಿದ್ದು, ಇದು 191 ದಿನಗಳಲ್ಲೇ ಕನಿಷ್ಠ ಪ್ರಮಾಣವಾಗಿದೆ.

ಈ ಮೂಲಕ ದೇಶದಲ್ಲಿ ಸೋಂಕಿತರ ಒಟ್ಟು ಸಂಖ್ಯೆ 3,36,78,786ಕ್ಕೆ ಏರಿದಂತಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಬಿಡುಗಡೆ ಮಾಡಿರುವ ಪ್ರಕಟಣೆ ತಿಳಿಸಿದೆ.

ಸೋಂಕಿನಿಂದ ಸತ್ತವರ ಸಂಖ್ಯೆ 4,47,194ಕ್ಕೆ ಏರಿಕೆಯಾಗಿದೆ. ಕೋವಿಡ್‌ನಿಂದ ಗುಣಮುಖರಾಗುತ್ತಿರುವವರ ಪ್ರಮಾಣ ಶೇ 97.78ರಷ್ಟಿದೆ ಎಂದು ಸಚಿವಾಲಯ ತಿಳಿಸಿದೆ.



ಸಗೇಂಗ್ ಪ್ರಾಂತ್ಯದ ವಿವಿಧೆಡೆ ಸಂಘರ್ಷ, ಇಂಟರ್‌ನೆಟ್ ಕಡಿತ

ಮ್ಯಾನ್ಮಾರ್: ಸೇನೆಯಿಂದ ವಾಯುದಾಳಿ

ಮ್ಯಾನ್ಮಾರ್ (ರಾಯಿಟರ್ಸ್): ಮ್ಯಾನ್ಮಾರ್‌ನ ಸಗೇಂಗ್ ಪ್ರಾಂತ್ಯಕ್ಕೆ ಸೇನಾ ಅಧಿಕಾರಿಗಳ ಸಮಿತಿ ಪ್ರವೇಶಕ್ಕೆ ವಿರೋಧ, ಸಂಘರ್ಷಕ್ಕೆ ಮುಂದಾದ ಹಿಂದೆಯೇ ಮ್ಯಾನ್ಮಾರ್‌ನ ಸೇನೆ ಇಲ್ಲಿ ವಾಯುದಾಳಿ ನಡೆಸಿದೆ. ಸಂಘರ್ಷದ ಬಳಿಕ ಈ ಪ್ರಾಂತ್ಯದ ವಿವಿಧ ನಗರಗಳಲ್ಲಿ ಫೋನ್ ಹಾಗೂ ಇಂಟರ್‌ನೆಟ್ ಸಂಪರ್ಕ ಕಡಿತಗೊಳಿಸಲಾಗಿದೆ.

ಈ ವರ್ಷದ ಫೆಬ್ರುವರಿ 1ರ ಸೇನಾ ದಂಗೆಯ ಬಳಿಕ ದೇಶದಲ್ಲಿ ಬಿಕ್ಕಟ್ಟು, ಅನಿಶ್ಚಿತ ಸ್ಥಿತಿ ಇದೆ. ಪ್ರಜಾಪ್ರಭುತ್ವ ವ್ಯವಸ್ಥೆ ಸ್ಥಾಪನೆಗೆ ತೀವ್ರ ಒತ್ತಾಯವಿದ್ದು, ಸೇನೆಯನ್ನು ಎದುರಿಸಲು ನಾಗರಿಕರ ರಕ್ಷಣಾ ಪಡೆ ಅಸ್ತಿತ್ವಕ್ಕೆ ಬಂದಿದೆ.

ಮ್ಯಾನ್ಮಾರ್ ಸೇನೆಯು ವಾಯುದಾಳಿ ನಡೆಸಿರುವುದನ್ನು ಸ್ಥಳೀಯ ಡಿವಿಬಿ ಸುದ್ದಿಜಾಲ ಪ್ರಸಾರ ಮಾಡಿದೆ. ದೇಶದ ವಾಯವ್ಯ ಭಾಗದ ಪಿನ್ಲೆಬುವಿನಲ್ಲಿ ದಾಳಿ ನಡೆದಿದೆ. ಫೋನ್, ಇಂಟರ್‌ನೆಟ್ ಸಂಪರ್ಕ ಕಡಿತಕ್ಕೂ ಮೊದಲು ಸ್ಥಳೀಯರು ಯುದ್ಧ ವಿಮಾನಗಳ ಸಂಚಾರ, ಸ್ಫೋಟಕಗಳ ಸದ್ದು ಕೇಳಿಸಿಕೊಂಡಿದ್ದಾರೆ.

ಪಿನ್ಲೆಬು ಪಿಡಿಎಫ್‌ನ ಸದಸ್ಯರೊಬ್ಬರು, ಇಂಟರ್‌ನೆಟ್ ಸಂಪರ್ಕ ಕಡಿತವಾಗಿದ್ದನ್ನು ದೃಢಪಡಿಸಿದ್ದಾರೆ. ಆದರೆ, ಯಾರಿಗೂ ಪೆಟ್ಟಾಗಿಲ್ಲ. ಸಂಪರ್ಕ ಕೊರತೆಯಿಂದ ಸ್ಥಳೀಯರ ಜೊತೆಗೆ ಸಂವಹನವಾಗಿಲ್ಲ ಎಂದು ಹೇಳಿದ್ದಾರೆ. ಆದರೆ, ಈ ಹೇಳಿಕೆಯನ್ನು ದೃಢಪಡಿಸಿಕೊಳ್ಳಲು ಸುದ್ದಿಸಂಸ್ಥೆಗೆ ಸಾಧ್ಯವಾಗಿಲ್ಲ. ಸೇನೆಯ ವಕ್ತಾರರು ಈ ಕುರಿತು ಪ್ರತಿಕ್ರಿಯಿಸಲು ನಿರಾಕರಿಸಿದ್ದಾರೆ.

ಸೇನಾದಂಗೆ ಬಳಿಕ ಅಧಿಕಾರದಿಂದ ಪದಚ್ಯುತರಾದ ಜನಪ್ರತಿನಿಧಿಗಳು ರಚಿಸಿಕೊಂಡಿರುವ ರಾಷ್ಟ್ರೀಯ ಒಕ್ಕೂಟ ಸರ್ಕಾರವು, ಈ ಪ್ರಾಂತ್ಯಕ್ಕೆ ಸೇನಾಧಿಕಾರಿಗಳ ಸಮಿತಿ ಪ್ರವೇಶಕ್ಕೆ ವಿರೋಧ ವ್ಯಕ್ತಪಡಿಸಿತ್ತು. ಘರ್ಷಣೆಯ ವೇಳೆ ಸುಮಾರು 25 ಮಂದಿ ಸೈನಿಕರು ಮೃತಪಟ್ಟಿದ್ದಾರೆ. ಶಸ್ತ್ರಾಸ್ತ್ರಗಳನ್ನು ಜಪ್ತಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಈ ಮೊದಲು ಪ್ರತಿಭಟನೆಯನ್ನು ಹತ್ತಿಕ್ಕುವ ಕ್ರಮವಾಗಿ ಸೇನೆಯು ಈ ಭಾಗದಲ್ಲಿ ಇಂಟರ್‌ನೆಟ್ ಸಂಪರ್ಕ ಕಡಿತಗೊಳಿಸಿತ್ತು.

ಆನ್‌ಲೈನ್ ರಮ್ಮಿ ನಿಷೇಧ ರದ್ದುಗೊಳಿಸಿದ ಕೇರಳ ಹೈಕೋರ್ಟ್



ಕೊಚ್ಚಿ (ಪಿಟಿಐ): ಆನ್‌ಲೈನ್ ರಮ್ಮಿಯನ್ನು ನಿಷೇಧಿಸುವ ಕೇರಳ ರಾಜ್ಯ ಸರ್ಕಾರದ ನಿರ್ಧಾರವನ್ನು ಹೈಕೋರ್ಟ್ ಸೋಮವಾರ ರದ್ದುಪಡಿಸಿದ್ದು, ಸರ್ಕಾರ ಹೇಳುವಂತೆ ಇದು ಜೂಜಾಟಕ್ಕೆ ಸಮನಾದುದು ಅಲ್ಲ ಎಂದು ಹೇಳಿದೆ.

ನ್ಯಾಯಮೂರ್ತಿ ಟಿ.ಆರ್. ರವಿ ಅವರು ಕೇರಳ ಸರ್ಕಾರದ ನಿರ್ಧಾರ ರದ್ದುಪಡಿಸಿದರು ಹಾಗೂ ಸರ್ಕಾರದ ಆದೇಶ ಅಸಾಂವಿಧಾನಿಕ ಎಂದು ಅಭಿಪ್ರಾಯಪಟ್ಟರು.

ಆನ್‌ಲೈನ್ ರಮ್ಮಿಯನ್ನು ನಿಷೇಧಿಸುವ ರಾಜ್ಯ ಸರ್ಕಾರದ ಅಧಿಸೂಚನೆಯ ವಿರುದ್ಧ ಹಲವು ಆನ್‌ಲೈನ್ ಗೇಮಿಂಗ್ ಕಂಪನಿಗಳು ಸಲ್ಲಿಸಿದ ಅರ್ಜಿಗಳನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಈ ತೀರ್ಪು ನೀಡಿದ್ದಾರೆ.

ಆನ್‌ಲೈನ್ ರಮ್ಮಿ ಜೂಜಾಟಕ್ಕೆ ಸಮ. ಹೀಗಾಗಿ ಈ ಆಟವನ್ನು ನಿಷೇಧಿಸಲಾಗಿದೆ ಎಂದು ರಾಜ್ಯ ಸರ್ಕಾರ ಹೇಳಿತ್ತು. ಭೌತಿಕ ಸ್ವರೂಪದ ಕಾರ್ಡ್ ಆಟಕ್ಕೆ ಅನುಮತಿ ನೀಡಿರುವಾಗ ಆನ್‌ಲೈನ್ ರಮ್ಮಿ ಆಟ ಆಡುವುದನ್ನು ನಿಷೇಧಿಸುವುದು ಸರಿಯಲ್ಲ ಎಂದು ಗೇಮಿಂಗ್ ಕಂಪನಿಗಳು ವಾದಿಸಿದ್ದವು.

ತಲಾಖ್ ಕ್ರಮ ಪ್ರಶ್ನಿಸಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ಸಕಾರಣ ಮತ್ತು ಪೂರ್ವಸೂಚನೆ ಇಲ್ಲದೆ ಪತ್ನಿಗೆ ವಿಚ್ಛೇದನ ನೀಡುವುದು ಮುಸ್ಲಿಂ ಪತಿಯ ವಿವೇಚನೆಯಾಗಿದೆ (ತಲಾಖ್ ಉಲ್ ಸುನ್ನತ್) ಎಂಬುದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ವಜಾ ಮಾಡಿದೆ. ಸಂಸತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಕಾಯ್ದೆ ರೂಪಿಸಿದೆ ಎಂದೂ ಕೋರ್ಟ್ ತಿಳಿಸಿದೆ.

ಈ ಅರ್ಜಿಯು ಪೂರ್ಣವಾಗಿ ತಪ್ಪುಗ್ರಹಿಕೆಯಿಂದ ಕೂಡಿದ್ದಾಗಿದೆ. ಹೀಗಾಗಿ, ಅರ್ಜಿಯು ವಿಚಾರಣೆಗೆ ಅರ್ಹವಾದುದಲ್ಲ ಎಂದು ನ್ಯಾಯಮೂರ್ತಿ ವಿಪಿನ್ ಸಂಘಿ ಮತ್ತು ಜಸ್ಮೀತ್ ಸಿಂಗ್ ಅವರಿದ್ದ ಪೀಠ ಹೇಳಿತು.

ಸಂಸತ್ತು ಈಗಾಗಲೇ ಮುಸ್ಲಿಂ ಮಹಿಳೆ (ವೈವಾಹಿಕ ಹಕ್ಕುಗಳ ರಕ್ಷಣೆ) ಕಾಯ್ದೆ 2019 ಅನ್ನು ರೂಪಿಸಿದೆ. ಈ ಕಾರಣದಿಂದ ಅರ್ಜಿಯನ್ನು ವಜಾ ಮಾಡಲಾಗಿದೆ ಎಂದು ಹೇಳಿತು.

ಉಲ್ಲೇಖಿತ ಕಾಯ್ದೆ ಸೆಕ್ಷನ್ 3ರ ಪ್ರಕಾರ, ಮುಸ್ಲಿಂ ಪತಿ ತನ್ನ ಪತ್ನಿಗೆ ಲಿಖಿತವಾಗಿ, ಮೌಖಿಕವಾಗಿ ಅಥವಾ ವಿದ್ಯುನ್ಮಾನ ಸ್ವರೂಪದಲ್ಲಿ ನೀಡುವ ತಲಾಖ್ ಅನೂರ್ಜಿತವಾಗಲಿದ್ದು, ಕಾನೂನುಬಾಹಿರವಾಗಲಿದೆ.



ಕ್ರೀಟ್ ದ್ವೀಪದಲ್ಲಿ ಸಂಭವಿಸಿದ ಭೂಕಂಪನದಲ್ಲಿ ಸಾವಿಗೀಡಾದ ವ್ಯಕ್ತಿಯ ಮೃತದೇಹವನ್ನು ರಕ್ಷಣಾ ಸಿಬ್ಬಂದಿ ಕಟ್ಟಡದ ಅವಶೇಷಗಳಡಿಯಿಂದ ಹೊರತೆಗೆದರು –ಎಎಫ್‌ಪಿ ಚಿತ್ರ

ಗ್ರೀಸ್‌ನ ದಕ್ಷಿಣ ದ್ವೀಪದಲ್ಲಿ ಪ್ರಬಲ ಭೂಕಂಪ

ಅಥೆನ್ಸ್ (ಎಪಿ): 'ಗ್ರೀಸ್‌ನ ದಕ್ಷಿಣ ಭಾಗದ ದ್ವೀಪವಾದ ಕ್ರೀಟ್‌ನಲ್ಲಿ ಸೋಮವಾರ 5.8 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದ್ದು, ವ್ಯಕ್ತಿಯೊಬ್ಬ ಮೃತಪಟ್ಟಿದ್ದು, ಹಲವಾರು ಮಂದಿ ಗಾಯಗೊಂಡಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಈ ಪ್ರದೇಶದಲ್ಲಿ ಭೂಕಂಪದ ಬಳಿಕ ಸುಮಾರು 9 ಬಾರಿ ಲಘು ಕಂಪನಗಳು ಆಗಿವೆ. ಈ ಹಿನ್ನೆಲೆಯಲ್ಲಿ ಶಾಲೆಗಳಿಂದ ವಿದ್ಯಾರ್ಥಿಗಳು, ಸಿಬ್ಬಂದಿಯನ್ನು ಸ್ಥಳಾಂತರಿಸಲಾಯಿತು. ಕೇಂದ್ರ ಬಿಂದು ಪತ್ತೆಯಾದ ಸ್ಥಳದ ಸಮೀಪವಿರುವ ಗ್ರಾಮಗಳು ಹಾನಿಗೊಳಗಾಗಿವೆ' ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಅಮೆಜಾನ್ ವಿರುದ್ಧದ ಹೇಳಿಕೆ ಅಪ್ರಸ್ತುತ

ನವದೆಹಲಿ (ಪಿಟಿಐ): ಆರ್‌ಎಸ್‌ಎಸ್ ವಾರಪತ್ರಿಕೆ ಪಾಂಚಜನ್ಯವು ಅಮೆರಿಕದ ಇ–ಕಾಮರ್ಸ್ ದೈತ್ಯ ಅಮೆಜಾನ್ ಅನ್ನು 'ಈಸ್ಟ್ ಇಂಡಿಯಾ ಕಂಪನಿ 2.0' ಎಂದಿರುವುದು ಅಪ್ರಸ್ತುತ ಎಂದು ಕಾಂಗ್ರೆಸ್ ದೂರಿದೆ.

ರಾಷ್ಟ್ರೀಯ ಸ್ವಯಂ ಸೇವಕ ಸಂಘವು (ಆರ್‌ಎಸ್‌ಎಸ್) ರಾಷ್ಟ್ರೀಯ ಹಿತಾಸಕ್ತಿಗಾಗಿ ಏನನ್ನೂ ಹೇಳವುದಿಲ್ಲ, ಅದಕ್ಕೆ ಏನಿದ್ದರೂ ಆಡಳಿತಾರೂಢ ಬಿಜೆಪಿಯ ಹಿತವಷ್ಟೇ ಮುಖ್ಯ ಎಂದು ಕಾಂಗ್ರೆಸ್ ಹೇಳಿದೆ.

ಆದರೂ, ಅಮೆಜಾನ್ ವಿರುದ್ಧದ ಆರೋಪಗಳು ಗಂಭೀರವಾಗಿದ್ದು ಅದನ್ನು ನಿರ್ಲಕ್ಷಿಸಲಾಗದು ಎಂದು ಕಾಂಗ್ರೆಸ್ ವಕ್ತಾರ ಪವನ್ ಖೇರಾ ಹೇಳಿದ್ದಾರೆ.

ಗ್ವಾದರ್: ಮೊಹಮ್ಮದ್ ಆಲಿ ಜಿನ್ನಾ ಪ್ರತಿಮೆ ಧ್ವಂಸ

ಕರಾಚಿ (ಪಿಟಿಐ): ಬಲೂಚಿಸ್ತಾನ ಪ್ರಾಂತ್ಯದ ಕರಾವಳಿ ನಗರ ಗ್ವಾದರ್‌ನಲ್ಲಿದ್ದ ಪಾಕಿಸ್ತಾನದ ಸಂಸ್ಥಾಪಕ ಮೊಹಮ್ಮದ್ ಆಲಿ ಜಿನ್ನಾ ಅವರ ಪುತ್ಥಳಿಯನ್ನು ಬಲೂಚ್ ಉಗ್ರರು ಬಾಂಬ್ ದಾಳಿ ನಡೆಸಿ ಧ್ವಂಸಗೊಳಿಸಿದ್ದಾರೆ.

ಸುರಕ್ಷಿತ ವಲಯವೆಂದೇ ಗುರುತಿಸಲಾಗಿದ್ದ ನಗರದ ಮೆರೈನ್ ಡ್ರೈವ್ ಪ್ರದೇಶದಲ್ಲಿ ಕಳೆದ ಜೂನ್‌ನಲ್ಲಿ ಸ್ಥಾಪಿಸಿದ್ದ ಜಿನ್ನಾ ಪ್ರತಿಮೆಯನ್ನು, ಉಗ್ರರು ಭಾನುವಾರ ಬೆಳಿಗ್ಗೆ ಪ್ರತಿಮೆಯ ಕೆಳಗೆ ಬಾಂಬ್ ಇಟ್ಟು ಸ್ಫೋಟಿಸಿದ್ದಾರೆ ಎಂದು ಸೋಮವಾರ ಡಾನ್ ಪತ್ರಿಕೆ ವರದಿ ಮಾಡಿದೆ. ಸ್ಫೋಟದಿಂದಾಗಿ ಪ್ರತಿಮೆ ಸಂಪೂರ್ಣವಾಗಿ ನಾಶವಾಗಿದೆ ಎಂದು ವರದಿಯಲ್ಲಿ ಹೇಳಿದೆ.

ನಿಷೇಧಿತ ಭಯೋತ್ಪಾದಕ ಸಂಘಟನೆ ಬಲೂಚ್ ರಿಪಬ್ಲಿಕನ್ ಆರ್ಮಿಯ ವಕ್ತಾರ ಬಾಬ್ಗರ್ ಬಲೂಚ್ ಈ ಸ್ಫೋಟದ ಹೊಣೆ ಹೊತ್ತುಕೊಂಡಿರುವುದಾಗಿ ಟ್ವೀಟ್ ಮಾಡಿದ್ದಾರೆ ಎಂದು ಬಿಬಿಸಿ – ಉರ್ದು ವರದಿ ಮಾಡಿದೆ.

'ಪ್ರತಿಮೆ ಸ್ಫೋಟ ಪ್ರಕರಣ ಕುರಿತು ಉನ್ನತಮಟ್ಟದಲ್ಲಿ ತನಿಖೆ ನಡೆಸಲಾಗುತ್ತಿದೆ' ಎಂದು ಗ್ವಾದರ್ ನಗರದ ಉಪ ಆಯುಕ್ತ ನಿವೃತ್ತ ಮೇಜರ್ ಅಬ್ದುಲ್ ಕಬೀರ್ ಖಾನ್ ಹೇಳಿರುವುದಾಗಿ ವರದಿಯಲ್ಲಿ ಉಲ್ಲೇಖಿಸಿದೆ.

ಪ್ರವಾಸಿಗರ ಸೋಗಿನಲ್ಲಿ ಮೆರೈನ್ ಡ್ರೈವ್ ಪ್ರದೇಶವನ್ನು ಪ್ರವೇಶಿಸಿರುವ ಉಗ್ರರು, ಬಾಂಬ್ ಸ್ಫೋಟಿಸಿ ಜಿನ್ನಾ ಪ್ರತಿಮೆ ಧ್ವಂಸಗೊಳಿಸಿದ್ದಾರೆ ಎಂದು ಖಾನ್ ಹೇಳಿದ್ದಾಗಿ ವರದಿಯಲ್ಲಿ ಉಲ್ಲೇಖವಾಗಿದೆ.

'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿವರೆಗೆ ಯಾರನ್ನೂ ಬಂಧಿಸಿಲ್ಲ. ಆದರೆ, ಒಂದೆರಡು ದಿನಗಳಲ್ಲಿ ತನಿಖೆ ಪೂರ್ಣಗೊಳ್ಳುತ್ತದೆ' ಎಂದು ಕಬೀರ್ ಖಾನ್ ಹೇಳಿದ್ದಾರೆ.

'ಗ್ವಾದರ್‌ನಲ್ಲಿ ಈ ಹಿಂದೆ ಕ್ವಾಯ್ದ್-ಎ-ಅಜಮ್ ಪ್ರತಿಮೆ ಧ್ವಂಸಗೊಳಿಸಿದ್ದ ಆರೋಪಿಗಳ ವಿರುದ್ಧ ಕ್ರಮ ಕೈಗೊಂಡಂತೆ, ಈ ಪ್ರಕರಣದ ಆರೋಪಿಗಳನ್ನು ಶಿಕ್ಷಿಸಬೇಕು ಎಂದು ಅಧಿಕಾರಿಗಳನ್ನು ವಿನಂತಿಸುವುದಾಗಿ ಬಲೂಚಿಸ್ತಾನದ ಮಾಜಿ ಗೃಹ ಸಚಿವ ಮತ್ತು ಹಾಲಿ ಸೆನೆಟರ್ ಸರ್ಫ್ರಾಜ್ ಬುಗ್ತಿ ಟ್ವೀಟ್ ಮಾಡಿದ್ದಾರೆ.

ಇದೇ ಪ್ರಾಂತ್ಯದ ಜೈರಾತ್‌ನಲ್ಲಿ, ಜಿನ್ನಾ ಅವರು ತಮ್ಮ ಕೊನೆಯ ದಿನಗಳನ್ನು ಕಳೆದಿದ್ದ 121 ವರ್ಷಗಳಷ್ಟು ಪುರಾತನ ಕಟ್ಟಡ ಕ್ವಾಯ್ದ್–ಇ–ಅಜಾಮ್ ರೆಸಿಡೆನ್ಸಿ ಮೇಲೆ 2013ರಲ್ಲಿ ಬಲೂಚ್ ಉಗ್ರರು ಗುಂಡಿನ ದಾಳಿ ನಡೆಸಿ, ಸ್ಫೋಟಿಸಿದ್ದರು. ಈ ದಾಳಿಯಿಂದಾಗಿ ಕಟ್ಟಡ ಬೆಂಕಿಗೆ ಆಹುತಿಯಾಯಿತು. ದಿನಗಳನ್ನು ಈ ಪುರಾತನ ಕಟ್ಟಡದಲ್ಲಿ ಕಳೆದಿದ್ದರು. ಅವರ ನಿಧನದ ನಂತರ ಈ ಕಟ್ಟಡವನ್ನು ರಾಷ್ಟ್ರೀಯ ಸ್ಮಾರಕ ಎಂದು ಘೋಷಿಸಲಾಯಿತು.

ಟಿಎಂಸಿ ಸೇರಲು ಮಮ್ಲದರ್ ನಿರ್ಧಾರ

ಪಣಜಿ (ಪಿಟಿಐ): ಮಹಾರಾಷ್ಟ್ರವಾದಿ ಗೋಮಂತಕ ಪಕ್ಷದ (ಎಂಜಿಪಿ) ಮಾಜಿ ಶಾಸಕ ಲಾವು ಮಮ್ಲದರ್ ಅವರು ತೃಣಮೂಲ ಕಾಂಗ್ರೆಸ್ ಪಕ್ಷ ಸೇರುವುದಾಗಿ ತಿಳಿಸಿದ್ದಾರೆ.

ಮಾಜಿ ಪೊಲೀಸ್ ಅಧಿಕಾರಿಯಾದ ಮಮ್ಲದರ್, 2012–2017ರ ಅವಧಿಯಲ್ಲಿ ಪಾಂಡಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು.

'ಮಮತಾ ಬ್ಯಾನರ್ಜಿ ಅವರೊಂದಿಗೆ ಚರ್ಚಿಸಿದ್ದೇನೆ. ಮದಕೈಂ ಕ್ಷೇತ್ರದಿಂದ 2022ರ ಗೋವಾ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಬಯಸಿದ್ದೇನೆ. ಮಂಗಳವಾರ ಕೋಲ್ಕತ್ತದಲ್ಲಿ ತೃಣಮೂಲ ಕಾಂಗ್ರೆಸ್ ಸೇರಲಿದ್ದೇನೆ' ಎಂದು ತಿಳಿಸಿದರು.

ಏಪ್ರಿಲ್–ಜೂನ್ 2021ರ ಅವಧಿಯ ಉದ್ಯೋಗ ಸಮೀಕ್ಷಾ ವರದಿ ಬಿಡುಗಡೆ ಮಾಡಿದ ಕೇಂದ್ರ ಕಾರ್ಮಿಕ ಸಚಿವ

ಲಾಕ್‌ಡೌನ್: 23 ಲಕ್ಷ ಉದ್ಯೋಗಕ್ಕೆ ಕುತ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಮೊದಲನೇ ಅಲೆಯಿಂದ ಲಾಕ್‌ಡೌನ್ ಹೇರಿದ್ದ ಮಾರ್ಚ್–ಜೂನ್ ಅವಧಿಯಲ್ಲಿ ದೇಶದ 9 ಪ್ರಮುಖ ಕೃಷಿಯೇತರ ವಲಯಗಳಲ್ಲಿ 23.6 ಲಕ್ಷ ಜನರು ಉದ್ಯೋಗ ಕಳೆದುಕೊಂಡಿದ್ದಾರೆ ಎಂದು ಕೇಂದ್ರ ಸರ್ಕಾರದ ಸಮೀಕ್ಷೆ ತಿಳಿಸಿದೆ. ಉದ್ಯೋಗ ಕಳೆದುಕೊಂಡವರ ಪೈಕಿ ತಯಾರಿಕಾ ವಲಯದವರ ಪಾಲು ಶೇ 60ರಷ್ಟು. ತಯಾರಿಕಾ ವಲಯವು ಅತಿಹೆಚ್ಚು ಅಂದರೆ 14.2 ಲಕ್ಷ ಉದ್ಯೋಗಿಗಳನ್ನು ಕಳೆದುಕೊಂಡಿದೆ.

ಸಮೀಕ್ಷೆ ನಡೆಸಿದ ಅವಧಿಯಲ್ಲಿ 9 ವಲಯಗಳಲ್ಲಿ 3.07 ಕೋಟಿ ಜನರು ಕೆಲಸ ಮಾಡುತ್ತಿದ್ದರು. ಈ ಪೈಕಿ 2.17 ಕೋಟಿ ಪುರುಷರು ಮತ್ತು 90 ಲಕ್ಷ ಮಹಿಳೆಯರಿದ್ದರು. ಆದರೆ ಲಾಕ್‌ಡೌನ್ ಬಳಿಕ ಅಂದರೆ ಜೂನ್ 1ರ ಮಾಹಿತಿ ಪ್ರಕಾರ, 2.01 ಕೋಟಿ ಪುರುಷರು ಮತ್ತು 83.3 ಲಕ್ಷ ಮಹಿಳೆಯರು ಕೆಲಸ ಮಾಡುತ್ತಿದ್ದರು ಎಂದು ಕೇಂದ್ರ ಸರ್ಕಾರದ ತ್ರೈಮಾಸಿಕ ಉದ್ಯೋಗ ಸಮೀಕ್ಷೆ (ಕ್ಯೂಇಎಸ್) ತಿಳಿಸಿದೆ.

ಕೇಂದ್ರ ಕಾರ್ಮಿಕ ಸಚಿವ ಭೂಪೇಂದ್ರ ಯಾದವ್ ಅವರು ಏಪ್ರಿಲ್–ಜೂನ್ 2021ರ ಸಮೀಕ್ಷಾ ವರದಿಯನ್ನು ಸೋಮವಾರ ಬಿಡುಗಡೆ ಮಾಡಿದರು. ಕಳೆದ ವರ್ಷ ವಿಧಿಸಿದ್ದ ಮೊದಲ ದೇಶವ್ಯಾಪಿ ಲಾಕ್‌ಡೌನ್ ಸಮಯದಲ್ಲಿ ಸಂಸ್ಥೆಗಳ ಕಾರ್ಯಾಚರಣೆ ಸ್ಥಿತಿ, ಉದ್ಯೋಗದ ಸ್ಥಿತಿ ಮತ್ತು ವೇತನದ ಮೇಲೆ ಉಂಟಾದ ಪರಿಣಾಮದ ದತ್ತಾಂಶವನ್ನು ಸಂಗ್ರಹಿಸಲು ಈ ಸಮೀಕ್ಷೆ ಪ್ರಯತ್ನಿಸಿದೆ ಎಂದು ವರದಿ ತಿಳಿಸಿದೆ.



ಸಾಂದರ್ಭಿಕ ಚಿತ್ರ

ಉದ್ಯೋಗಿಗಳ ಸಂಖ್ಯೆ

ವಲಯ	ಲಾಕ್‌ಡೌನ್‌ಗೆ ಮೊದಲು	ಲಾಕ್‌ಡೌನ್ ನಂತರ
ಉತ್ಪಾದನೆ	1.25 ಕೋಟಿ	1.11 ಕೋಟಿ
ನಿರ್ಮಾಣ	7.6 ಲಕ್ಷ	6.6 ಲಕ್ಷ
ವ್ಯಾಪಾರ	20.6 ಲಕ್ಷ	18.8 ಲಕ್ಷ
ಶಿಕ್ಷಣ	67.7 ಲಕ್ಷ	64.9 ಲಕ್ಷ
ಆರೋಗ್ಯ	25.6 ಲಕ್ಷ	24.9 ಲಕ್ಷ
ಐಟಿ/ಬಿಪಿಒ	19.9 ಲಕ್ಷ	18.9 ಲಕ್ಷ

ಈ ಅವಧಿಯಲ್ಲಿ ಶೇ 16.6ರಷ್ಟು ಉದ್ಯೋಗಿಗಳ ವೇತನಕ್ಕೆ ಕತ್ತರಿ ಬಿದ್ದಿದ್ದರೆ, ಶೇ 2.7ರಷ್ಟು ಉದ್ಯೋಗಿಗಳಿಗೆ ಸಂಬಳವನ್ನೇ ನೀಡಲಾಗಿಲ್ಲ. ನಿರ್ಮಾಣ ಮತ್ತು ವಸತಿ–ರೆಸ್ಟೋರೆಂಟ್ ವಲಯದವರಿಗೇ ಹೆಚ್ಚು ತೊಂದರೆ ಆಗಿದೆ. ಒಂಬತ್ತು ಕ್ಷೇತ್ರಗಳಲ್ಲಿ ಶೇ 34.2ರಷ್ಟು ಸಂಸ್ಥೆಗಳು ಮಾತ್ರ ಲಾಕ್‌ಡೌನ್ ಅವಧಿಯಲ್ಲಿ ಬಾಗಿಲು ತೆರೆದಿದ್ದವು.

ಈ ಒಂಬತ್ತು ವಲಯಗಳಲ್ಲಿ ಸುಮಾರು ಶೇ 80.7ರಷ್ಟು ಉದ್ಯೋಗಿಗಳು ಸಂಪೂರ್ಣ ವೇತನವನ್ನು ಪಡೆದಿದ್ದಾರೆ. ಈ ಪೈಕಿ ಆರೋಗ್ಯದಲ್ಲಿ (ಶೇ 90.7) ಹಣಕಾಸು ಸೇವೆಗಳಲ್ಲಿ (ಶೇ 90.4) ಮೊದಲಿಗಿವೆ. ನಿರ್ಮಾಣದಲ್ಲಿ ಶೇ 66ರಷ್ಟು ಕೆಲಸಗಾರರು ಮತ್ತು ವಸತಿ–ರೆಸ್ಟೋರೆಂಟ್ ವಲಯದ ಶೇ 66.2ರಷ್ಟು ಕೆಲಸಗಾರರು ಪೂರ್ಣ ವೇತನ ಪಡೆದಿದ್ದಾರೆ. ಈ ಎರಡೂ ಕ್ಷೇತ್ರಗಳು ಕೋವಿಡ್‌ನಿಂದ ತೀವ್ರ ನಷ್ಟ ಅನುಭವಿಸಿವೆ.

ನಿರ್ಮಾಣ ವಲಯದಲ್ಲಿಯೇ ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಯಾವುದೇ ವೇತನವನ್ನು ಪಡೆಯಲಿಲ್ಲ. ಶೇ 6.7ರಷ್ಟು ಜನರು ಲಾಕ್‌ಡೌನ್ ಸಮಯದಲ್ಲಿ ಒಂದು ಪೈಸೆ ಕೂಡ ಪಡೆದಿಲ್ಲ. ವಸತಿ–ರೆಸ್ಟೋರೆಂಟ್ ವಲಯದಲ್ಲಿ ಶೇ 4.9ರಷ್ಟು ಉದ್ಯೋಗಿಗಳು ಯಾವುದೇ ವೇತನ ಪಡೆದಿಲ್ಲ.

ಲಾಕ್‌ಡೌನ್ ಅವಧಿಯಲ್ಲಿ ಅತಿಹೆಚ್ಚಾಗಿ ಕಾರ್ಯಾಚರಣೆಯಲ್ಲಿದ್ದ ಕ್ಷೇತ್ರಗಳಲ್ಲಿ ಆರೋಗ್ಯ (ಶೇ 88.9) ವಲಯ ಮುಂಚೂಣಿಯಲ್ಲಿದೆ. ನಂತರ ಸ್ಥಾನದಲ್ಲಿ ಹಣಕಾಸು ಸೇವೆ (ಶೇ 71.6) ಇದೆ. ಕಡಿಮೆ ಕಾರ್ಯಾಚರಣೆ ನಡೆಸಿದ ಕ್ಷೇತ್ರಗಳಲ್ಲಿ ಶಿಕ್ಷಣ (ಶೇ 76.5) ಮತ್ತು ವಸತಿ–ರೆಸ್ಟೋರೆಂಟ್ (ಶೇ 72) ಕ್ಷೇತ್ರಗಳಿವೆ.

ಉದ್ಯೋಗದ ವಿಚಾರಕ್ಕೆ ಬಂದರೆ, ಲಾಕ್‌ಡೌನ್ ಸಮಯದಲ್ಲಿ 9 ವಲಯಗಳಲ್ಲಿನ ಶೇ 26.7ರಷ್ಟು ಸಂಸ್ಥೆಗಳಲ್ಲಿ ಉದ್ಯೋಗದಲ್ಲಿ ಇಳಿಕೆ ಕಂಡುಬಂದಿದೆ. ತಯಾರಿಕೆ (ಶೇ 38.1), ನಿರ್ಮಾಣ (ಶೇ 34.5), ವಸತಿ ಮತ್ತು ರೆಸ್ಟೋರೆಂಟ್ (ಶೇ 34.3), ಐಟಿ/ಬಿಪಿಒ (ಶೇ 33.5) ಕ್ಷೇತ್ರಗಳು ಇಳಿಕೆ ದಾಖಲಿಸಿವೆ. ಲಾಕ್‌ಡೌನ್ ನಿರ್ಬಂಧಗಳ ಪ್ರಭಾವವಿದ್ದರೂ, ಹಣಕಾಸು ಸೇವೆ (ಶೇ84.5) ಹಾಗೂ ಶಿಕ್ಷಣ (ಶೇ 78.4) ಕ್ಷೇತ್ರಗಳು ಹೆಚ್ಚು ಪರಿಣಾಮಕ್ಕೆ ಒಳಗಾಗಿಲ್ಲ. ಲಾಕ್‌ಡೌನ್ ಅವಧಿಯಲ್ಲೂ ಉದ್ಯೋಗದಲ್ಲಿ ಏರಿಕೆ ದಾಖಲಿಸಿದ್ದು ಆರೋಗ್ಯ ಕ್ಷೇತ್ರ. ಇಲ್ಲಿ ಶೇ 7ರಷ್ಟು ಉದ್ಯೋಗ ದಾಖಲಾಗಿದೆ.

ಸ್ವ ಉದ್ಯೋಗ ಮತ್ತು ಶಿಕ್ಷಣ

3.08 ಕೋಟಿ ಕಾರ್ಮಿಕರಲ್ಲಿ ಸ್ವಯಂ ಉದ್ಯೋಗಿಗಳ ಪ್ರಮಾಣ 1.6ರಷ್ಟು ಮಾತ್ರ. ಈ ಪೈಕಿ ಮಹಿಳೆಯರ ಭಾಗವಹಿಸುವಿಕೆ ತುಂಬಾ (ಶೇ 11.4) ಕಡಿಮೆಯಿದೆ. ಹೆಚ್ಚಿನ ಸಂಖ್ಯೆಯ ಸ್ವಯಂ ಉದ್ಯೋಗಿಗಳು ವಸತಿ ಮತ್ತು ರೆಸ್ಟೋರೆಂಟ್‌ಗಳಲ್ಲಿದ್ದಾರೆ.

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳನ್ನು ಹೊರತುಪಡಿಸಿ ಉಳಿದ ಏಳು ಕ್ಷೇತ್ರಗಳನ್ನು ಪರಿಗಣಿಸಿದಾಗ, ಶೇ 32.7ರಷ್ಟು ಕೆಲಸಗಾರರು ಪ್ರೌಢಶಿಕ್ಷಣ ಮುಗಿಸಿದ್ದಾರೆ. ಶೇ 31.1ರಷ್ಟು ಮಂದಿ ಪ್ರೌಢಶಿಕ್ಷಣಕ್ಕಿಂತ ಕಡಿಮೆ ವಿದ್ಯಾರ್ಹತೆ ಹೊಂದಿದ್ದಾರೆ. ಶೇ 30.8ರಷ್ಟು ಕಾರ್ಮಿಕರು ಪದವೀಧರರು ಅಥವಾ ಅದಕ್ಕಿಂತ ಹೆಚ್ಚು ಓದಿಕೊಂಡಿದ್ದಾರೆ. ತಯಾರಿಕೆ (ಶೇ 37.1), ನಿರ್ಮಾಣ ವಲಯಗಳ (ಶೇ 34.3) ಕಾರ್ಮಿಕರು ಪ್ರೌಢಶಿಕ್ಷಣಕ್ಕಿಂತ ಕಡಿಮೆ ವಿದ್ಯಾರ್ಹತೆ ಹೊಂದಿದ್ದಾರೆ. ಪದವಿ ಮತ್ತು ಅದಕ್ಕಿಂತ ಹೆಚ್ಚು ಕಲಿತವರು ಐಟಿ/ಬಿಪಿಒ ಹಾಗೂ ಹಣಕಾಸು ಸೇವೆ ವಲಯದಲ್ಲಿ ಕಂಡುಬಂದಿದ್ದಾರೆ.

ವಲಯವಾರು ವೇತನ ಕಡಿತ (ಶೇ)

ವಸತಿ ಮತ್ತು ರೆಸ್ಟೋರೆಂಟ್	28.8
ನಿರ್ಮಾಣ	27.2
ವ್ಯಾಪಾರ	21.9
ತಯಾರಿಕೆ	20.2
ಶಿಕ್ಷಣ	12.8
ಐಟಿ/ಬಿಪಿಒ	12.7
ಸಾರಿಗೆ	10.1
ಆರೋಗ್ಯ	9.1
ಹಣಕಾಸು ಸೇವೆಗಳು	9.1

ಚೀನಾದಲ್ಲಿ ವಿದ್ಯುತ್ ಕಡಿತ ಕಾರ್ಖಾನೆಗಳು ತತ್ತರ

ಬೀಜಿಂಗ್ (ಎಪಿ): ಚೀನಾದಲ್ಲಿ ಸರ್ಕಾರ ಇಂಧನ ಬಳಕೆ ಮಿತಿಗೊಳಿಸಲು ವಿದ್ಯುತ್ ಕಡಿತದ ಕ್ರಮ ಕೈಗೊಂಡಿರುವುದರಿಂದ ಕಾರ್ಖಾನೆಗಳಲ್ಲಿ ಉತ್ಪಾದನೆ ಸ್ಥಗಿತಗೊಂಡಿದೆ. ಇದರಿಂದ ಕ್ರಿಸ್‌ಮಸ್ ವೇಳೆಗೆ ಜಾಗತಿಕ ವ್ಯಾಪಾರಿಗಳು ಸ್ಮಾರ್ಟ್‌ಫೋನ್‌ಗಳು ಮತ್ತು ಇತರ ಸರಕುಗಳ ಕೊರತೆ ಎದುರಿಸುವ ನಿರೀಕ್ಷೆ ಇದೆ.

ಇಂಧನ ಬಳಕೆ ತಗ್ಗಿಸಲು ವಿದ್ಯುತ್ ಕಡಿತ ಮಾಡುತ್ತಿರುವುದರಿಂದ ಮನೆಗಳಲ್ಲೂ ಕತ್ತಲು ಆವರಿಸುವಂತಾಗಿದೆ.

ಆಪಲ್ ಇಂಕ್‌ನ ಐಫೋನ್‌ಗಳ ಬಿಡಿ ಭಾಗಗಳ ಪೂರೈಕೆದಾರರು ಸ್ಥಳೀಯ ಅಧಿಕಾರಿಗಳ ಆದೇಶದ ಮೇರೆಗೆ ಶಾಂಘೈನ ಪಶ್ಚಿಮದಲ್ಲಿರುವ ಕಾರ್ಖಾನೆಯಲ್ಲಿ ಉತ್ಪಾದನೆ ಸ್ಥಗಿತಗೊಳಿಸಿದ್ದಾರೆ.

ಈಶಾನ್ಯ ನಗರ ಲಿಯೊಯಾಂಗ್‌ನಲ್ಲಿ ವಿದ್ಯುತ್ ಕಡಿತದ ನಂತರ ಲೋಹದ ಎರಕದ ಕಾರ್ಖಾನೆಯಲ್ಲಿ ವಾತಾಯನ ಸ್ಥಗಿತಗೊಳಿಸಿದ ನಂತರ ಉಂಟಾದ ವಿಷಾನಿಲದಿಂದ 23 ಜನರು ಆಸ್ಪತ್ರೆಗೆ ದಾಖಲಾಗಿದ್ದಾರೆ. ಯಾವುದೇ ಸಾವು ಸಂಭವಿಸಿಲ್ಲ ಎಂದು ಸರ್ಕಾರಿ ಸ್ವಾಮ್ಯದ ಸಿಸಿಟಿವಿ ತಿಳಿಸಿದೆ.

‘ಇಂಧನ ಬಳಕೆ ಮಿತಿಗಳನ್ನು ಜಾರಿಗೊಳಿಸುವಲ್ಲಿ ಬೀಜಿಂಗ್‌ನ ಅಭೂತಪೂರ್ವ ನಿರ್ಧಾರವು ದೀರ್ಘಾವಧಿಯ ಪ್ರಯೋಜನಗಳಿಗೆ ಕಾರಣವಾಗಬಹುದು’ ಎಂದು ನೋಮುರಾ ಅರ್ಥಶಾಸ್ತ್ರಜ್ಞರಾದ ಟಿಂಗ್ ಲು, ಲಿಶೆಂಗ್ ವಾಂಗ್ ಮತ್ತು ಜಿಂಗ್ ವಾಂಗ್ ಸೋಮವಾರ ತಾವು ನೀಡಿರುವ ವರದಿಯಲ್ಲಿ ತಿಳಿಸಿದ್ದಾರೆ.

ಮಾರುಕಟ್ಟೆಯಿಂದ ₹ 5.03 ಲಕ್ಷ ಕೋಟಿ ಸಂಗ್ರಹಿಸಲಿರುವ ಕೇಂದ್ರ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಕೇಂದ್ರ ಸರ್ಕಾರವು ಒಟ್ಟು ₹ 5.03 ಲಕ್ಷ ಕೋಟಿಯನ್ನು ಮಾರುಕಟ್ಟೆಯಿಂದ ಸಂಗ್ರಹಿಸಲಿದೆ. ಸಾಂಕ್ರಾಮಿಕದಿಂದಾಗಿ ಪೆಟ್ಟು ತಿಂದಿರುವ ಅರ್ಥ ವ್ಯವಸ್ಥೆಯ ಪುಶ್ಚೇತನಕ್ಕೆ ಅಗತ್ಯವಿರುವ ವರಮಾನದ ಕೊರತೆಯನ್ನು ನೀಗಿಸಿಕೊಳ್ಳಲು ಈ ಕ್ರಮ ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿ (ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗಿನ ಅವಧಿ) ಕೇಂದ್ರವು ₹ 7.02 ಲಕ್ಷ ಕೋಟಿ ಮೊತ್ತವನ್ನು ಬಾಂಡ್ ಮೂಲಕ ಸಂಗ್ರಹಿಸಿದೆ. ‘ಒಟ್ಟು ₹ 12.05 ಲಕ್ಷ ಕೋಟಿ ಮೊತ್ತವನ್ನು ಮಾರುಕಟ್ಟೆಯಿಂದ ಸಂಗ್ರಹಿಸಲಾಗುವುದು ಎಂದು 2021–22ನೇ ಸಾಲಿನ ಬಜೆಟ್‌ನಲ್ಲಿ ಹೇಳಲಾಗಿದೆ. ಈ ಪೈಕಿ ₹ 7.24 ಲಕ್ಷ ಕೋಟಿ ಮೊತ್ತವನ್ನು ಮೊದಲಾರ್ಧದಲ್ಲಿ ಸಂಗ್ರಹಿಸುವ ಉದ್ದೇಶವಿತ್ತು. ಆದರೆ, ವಾಸ್ತವದಲ್ಲಿ ₹ 7.02 ಲಕ್ಷ ಕೋಟಿ ಮೊತ್ತವನ್ನು ಪಡೆಯಲಾಗಿದೆ’ ಎಂದು ಸಚಿವಾಲಯ ಹೇಳಿದೆ.

ಆಂಧ್ರ ಪ್ರದೇಶ, ಒಡಿಶಾದಲ್ಲಿಯೂ ಚಂಡಮಾರುತದ ಪರಿಣಾಮ

ಗುಲಾಬ್: ತೆಲಂಗಾಣದಲ್ಲಿ ಮಳೆ ಆರ್ಭಟ

ಹೈದರಾಬಾದ್ / ಅಮರಾವತಿ / ಭುವನೇಶ್ವರ (ಪಿಟಿಐ): ಬಂಗಾಳ ಕೊಲ್ಲಿಯಲ್ಲಿ ಉಂಟಾಗಿರುವ ಗುಲಾಬ್ ಚಂಡಮಾರುತದ ಪರಿಣಾಮವಾಗಿ, ತೆಲಂಗಾಣ, ಆಂಧ್ರಪ್ರದೇಶದಲ್ಲಿ ಸೋಮವಾರ ಭಾರಿ ಮಳೆಯಾಗಿದೆ. ತೆಲಂಗಾಣದ 14 ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ. ಮಳೆ–ಭೂಕುಸಿತದಿಂದ ಒಡಿಶಾದಲ್ಲಿಯೂ ಜನಜೀವನ ಅಸ್ತವ್ಯಸ್ತಗೊಂಡಿದೆ.

ತೆಲಂಗಾಣದ ನಿರ್ಮಲ್, ನಿಜಾಮಾಬಾದ್, ಜಗಿತ್ಯಾಲ, ರಾಜಣ್ಣ ಸಿರಿಸಿಲ್ಲ, ಪೆದ್ದಪಲ್ಲಿ, ಕರೀಂನಗರ, ಭದ್ರಾದ್ರಿ, ವರಂಗಲ್ (ನಗರ), ವರಂಗಲ್ (ಗ್ರಾಮೀಣ), ಸಿದ್ದಿಪೇಟ್, ಕಾಮಾರೆಡ್ಡಿ ಸೇರಿದಂತೆ 14 ಜಿಲ್ಲೆಗಳಲ್ಲಿ, ಮುಂದಿನ 24 ಗಂಟೆಗಳಲ್ಲಿ ತೀವ್ರ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ.

ರಸ್ತೆಗಳು ಹಾಗೂ ಬಹುತೇಕ ತಗ್ಗು ಪ್ರದೇಶಗಳು, ಕೃಷಿ ಜಮೀನು ಜಲಾವೃತಗೊಳ್ಳಬಹುದು. ಗುಡುಗು–ಸಿಡಿಲು ಸಮೇತ ಸುರಿಯುವ ಮಳೆ ಹಾಗೂ ಗಾಳಿಯು ಸಾಕಷ್ಟು ಹಾನಿ ಮಾಡುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿದೆ.



ಗುಲಾಬ್ ಚಂಡಮಾರುತದ ಪರಿಣಾಮವಾಗಿ ಸುರಿದ ಭಾರಿ ಮಳೆಯಲ್ಲಿ ಜಲಾವೃತವಾಗಿದ್ದ ವಿಶಾಖಪಟ್ಟಣದ ರಸ್ತೆಯಲ್ಲಿ ನಡೆದುಹೋದ ಜನರು
–ಪಿಟಿಐ ಚಿತ್ರ

ಸೋಮವಾರ ಮಧ್ಯಾಹ್ನ 3 ಗಂಟೆವರೆಗೆ ಕಮ್ಮಮ್ ಜಿಲ್ಲೆಯ ಬಚೋಡುನಲ್ಲಿ 15 ಸೆಂ.ಮೀ ಹಾಗೂ ವ್ಯಾರಾದಲ್ಲಿ 14 ಸೆಂ.ಮೀ ಮಳೆಯಾಗಿದೆ. ಹೈದರಾಬಾದ್‌ನ ಹಲವು ಭಾಗಗಳಲ್ಲಿಯೂ ಸೋಮವಾರ ಬೆಳಿಗ್ಗೆಯಿಂದ ಮಳೆಯಾಗಿದೆ.

ಚಂಡಮಾರುತದಿಂದಾಗಿ ಭಾರಿ ಮಳೆ ಅನಾಹುತ ಎದುರಿಸಲಿರುವ ಜಿಲ್ಲೆಗಳಲ್ಲಿ ಮುಂದಿನ ಕೆಲ ದಿನಗಳ ಕಾಲ ಕಟ್ಟೆಚ್ಚರ ವಹಿಸುವಂತೆ ಆಯಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಅನಗತ್ಯವಾಗಿ ಮನೆಯಿಂದ ಹೊರಬರದಂತೆ ಸಾರ್ವಜನಿಕರಿಗೆ ಪೊಲೀಸರು ಮನವಿ ಮಾಡಿದ್ದಾರೆ.

ಆಂಧ್ರಪ್ರದೇಶದಲ್ಲಿ ಸೋಮವಾರ ಮಹಿಳೆಯೊಬ್ಬರು ಮೃತಪಟ್ಟಿದ್ದು, ಸತ್ತವರ ಸಂಖ್ಯೆ ಎರಡಕ್ಕೆ ಏರಿದೆ. ಶ್ರೀಕಾಕುಳಂ ಜಿಲ್ಲೆಯಲ್ಲಿ ಚಂಡಮಾರುತಕ್ಕೆ ಸಿಲುಕಿ ಭಾನುವಾರ ಮೀನುಗಾರರೊಬ್ಬರು ಮೃತಪಟ್ಟಿದ್ದರು.

ಹೆಚ್ಚು ಹಾನಿಗೀಡಾದ ಶ್ರೀಕಾಕುಳಂ ಜಿಲ್ಲೆಯಲ್ಲಿ, 1,500 ಜನರಿಗೆ 38 ಕೇಂದ್ರಗಳಲ್ಲಿ ವಸತಿ–ಊಟದ ವ್ಯವಸ್ಥೆ ಮಾಡಲಾಗಿದೆ. ರಸ್ತೆಯಲ್ಲಿ ಉರುಳಿಬಿದ್ದಿರುವ ಮರಗಳನ್ನು ತೆರವುಗೊಳಿಸಲಾಗುತ್ತಿದ್ದು, ವಿದ್ಯುತ್ ಸಂಪರ್ಕ ವ್ಯವಸ್ಥೆಯನ್ನು ಮರುಸ್ಥಾಪಿಸುವ ಕೆಲಸ ನಡೆಯುತ್ತಿದೆ.

ವಿಶಾಖಪಟ್ಟಣದಲ್ಲಿ ಕಳೆದ 24 ಗಂಟೆಯಲ್ಲಿ 33.3 ಸೆಂ.ಮೀ ದಾಖಲೆಯ ಮಳೆಯಾಗಿದೆ. ಇದೇ ಅವಧಿಯಲ್ಲಿ ಶ್ರೀಕಾಕುಳಂ, ವಿಜಯನಗರಂ, ವಿಶಾಖಪಟ್ಟಣ, ಪೂರ್ವ ಗೋದಾವರಿ, ಪಶ್ಚಿಮ ಗೋದಾವರಿ ಹಾಗೂ ಕೃಷ್ಣಾ ಜಿಲ್ಲೆಗಳಲ್ಲಿ 6 ಸೆಂ.ಮೀ ನಿಂದ 33.3 ಸೆಂ.ಮೀ ವರೆಗೆ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಒಡಿಶಾದ ಗಜಪತಿ, ಕೊರಾಪುಟ್ ಹಾಗೂ ಮಲ್ಕನ್‌ಗಿರಿ ಜಿಲ್ಲೆಗಳಲ್ಲಿ ಕೆಲವೆಡೆ ಭೂಕುಸಿತವಾಗಿದ್ದು, ಅಲ್ಲಲ್ಲಿ ಮರಗಳು ಉರುಳಿವೆ. ಹಲವು ಮನೆಗಳು ಜಖಂಗೊಂಡಿವೆ. ಹಳಿಗಳು ಜಲಾವೃತವಾಗಿರುವುದರಿಂದ, ಪೂರ್ವ ಕರಾವಳಿಯ ವಿಶಾಖಪಟ್ಟಣ–ವಿಜಯನಗರ–ರಾಯಗಡ ವಿಭಾಗದ 16 ರೈಲುಗಳ ಸಂಚಾರವನ್ನು ರದ್ದು ಮಾಡಲಾಗಿದೆ.

ಒಡಿಶಾದ ಗೋಪಾಲಪುರದಿಂದ 95 ಕಿ.ಮೀ ದೂರದಲ್ಲಿರುವ, ಆಂಧ್ರಪ್ರದೇಶದ ಸ್ಥಳವೊಂದರಲ್ಲಿ ಭೂಕುಸಿತವಾಗಿದೆ. ಹೀಗಾಗಿ, ಮುನ್ನೆಚ್ಚರಿಕೆ ಕ್ರಮವಾಗಿ 1,500ಕ್ಕೂ ಹೆಚ್ಚು ಗರ್ಭಿಣಿಯರು ಸೇರಿದಂತೆ 46 ಸಾವಿರ ಜನರನ್ನು ತೆರವುಗೊಳಿಸಿ, ಸುರಕ್ಷಿತ ಸ್ಥಳಗಳಿಗೆ ಕಳುಹಿಸಿಕೊಡಲಾಗಿದೆ. ಅವರಿಗೆ ಆಹಾರದ ವ್ಯವಸ್ಥೆಯನ್ನು ಮಾಡಲಾಗಿದೆ. ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಖ್ಯಾಂಶಗಳು

- ತೆಲಂಗಾಣ: 14 ಜಿಲ್ಲೆಗಳಲ್ಲಿ ರೆಡ್ ಅಲರ್ಟ್
- ವಿಶಾಖಪಟ್ಟಣದಲ್ಲಿ 33 ಸೆಂ.ಮೀ ಮಳೆ
- ಒಡಿಶಾ: 46 ಸಾವಿರ ಜನರು ಸುರಕ್ಷಿತ ಸ್ಥಳಕ್ಕೆ

ಫೆಬ್ರುವರಿಯಲ್ಲಿ ಪ್ರವಾಸೋದ್ಯಮ ಹೂಡಿಕೆ ಸಮಾವೇಶ: ಆನಂದ್ ಸಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಪ್ರವಾಸೋದ್ಯಮ ಕ್ಷೇತ್ರದ ಅಭಿವೃದ್ಧಿಗೆ ಬಂಡವಾಳ ಆಕರ್ಷಿಸುವುದಕ್ಕಾಗಿ 2022ರ ಫೆಬ್ರುವರಿ 23ರಿಂದ 25ರವರೆಗೆ ಪ್ರವಾಸೋದ್ಯಮ ಹೂಡಿಕೆದಾರರ ಸಮ್ಮೇಳನ ಆಯೋಜಿಸಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ತಿಳಿಸಿದರು.

ಸೋಮವಾರ ನಡೆದ ವಿಶ್ವ ಪ್ರವಾಸೋದ್ಯಮ ದಿನಾಚರಣೆಯಲ್ಲಿ ಮಾತನಾಡಿದ ಅವರು, ‘ಕರ್ನಾಟಕ ಪ್ರವಾಸೋದ್ಯಮ ಸೊಸೈಟಿ ಸಹಯೋಗದಲ್ಲಿ ಫೆಬ್ರುವರಿ ತಿಂಗಳಿನಲ್ಲಿ ಕರ್ನಾಟಕ ಅಂತರರಾಷ್ಟ್ರೀಯ ಪ್ರವಾಸೋದ್ಯಮ ಎಕ್ಸ್‌ಪೋ (ಕೈಟ್) ಆಯೋಜಿಸಲಾಗುವುದು. ಮೂರು ದಿನಗಳ ಕಾಲ ನಡೆಯುವ ಹೂಡಿಕೆದಾರರ ಸಮ್ಮೇಳನದಲ್ಲಿ ದೊಡ್ಡ ಮೊತ್ತದ ಹೂಡಿಕೆ ಒಪ್ಪಂದಗಳನ್ನು ನಿರೀಕ್ಷಿಸಲಾಗಿದೆ’ ಎಂದರು.

ಕೋವಿಡ್‌ನಿಂದಾಗಿ ರಾಜ್ಯದ ಪ್ರವಾಸೋದ್ಯಮ ಕ್ಷೇತ್ರವೂ ತೊಂದರೆಗೆ ಸಿಲುಕಿದೆ. ಸುಮಾರು ₹ 25,000 ಕೋಟಿಯಷ್ಟು ನಷ್ಟ ಉಂಟಾಗಿದೆ. ಈಗ ಈ ಕ್ಷೇತ್ರವನ್ನು ಸಮಸ್ಯೆಗಳಿಂದ ಹೊರತರುವ ಕೆಲಸ ಆಗಬೇಕಿದೆ. ಹೆಚ್ಚಿನ ಹೂಡಿಕೆ ಹರಿದುಬಂದರೆ ಬದಲಾವಣೆ ಸಾಧ್ಯವಾಗುತ್ತದೆ. ಈ ಕಾರಣದಿಂದಾಗಿ ಹೂಡಿಕೆದಾರರ ಸಮ್ಮೇಳನ ನಡೆಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಪ್ರವಾಸೋದ್ಯಮ ನೀತಿ 2020–2026ರ ಅಡಿಯಲ್ಲಿ ಹಲವು ರೀತಿಯ ಸಹಾಯಧನ, ಪ್ರೋತ್ಸಾಹಧನ ಮತ್ತು ರಿಯಾಯ್ತಿಗಳನ್ನು ನೀಡಲಾಗುತ್ತಿದೆ. ಈ ಸೌಲಭ್ಯಗಳಿಗಾಗಿ ₹ 500 ಕೋಟಿ ಅನುದಾನ ಮೀಸಲಿಡಲಾಗಿದೆ. ಪ್ರವಾಸೋದ್ಯಮ ನೀತಿಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗಿದೆ. ಈ ಅವಕಾಶವನ್ನು ಜನರು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದರು.


ಪ್ರವಾಸೋದ್ಯಮ ಕ್ಷೇತ್ರವು ಅಗಾಧವಾದ ಉದ್ಯೋಗ ಸೃಷ್ಟಿಯ ಅವಕಾಶಗಳನ್ನು ಹೊಂದಿದೆ. ಆದರೆ, ಕೋವಿಡ್ ಲಾಕ್‌ಡೌನ್‌ನಿಂದ ಈ ಕ್ಷೇತ್ರದಲ್ಲೂ ಉದ್ಯೋಗ ನಷ್ಟವಾಗಿದೆ. 2026ರ ವೇಳೆಗೆ ಈ ಕ್ಷೇತ್ರಕ್ಕೆ ₹ 5,000 ಕೋಟಿಯಷ್ಟು ಹೂಡಿಕೆ ನಿರೀಕ್ಷಿಸಲಾಗಿದೆ. ಇದರಿಂದ 10 ಲಕ್ಷಗಳಷ್ಟು ನೇರ ಮತ್ತು ಪರೋಕ್ಷ ಉದ್ಯೋಗಗಳು ಸೃಷ್ಟಿಯಾಗುವ ಸಾಧ್ಯತೆ ಇದೆ ಎಂದು ಆನಂದ್ ಸಿಂಗ್ ಹೇಳಿದರು.

ಚಿತ್ರೀಕರಣಕ್ಕೆ ಅನುಮತಿ ನೀಡಲು ಚಿಂತನೆ

ಪ್ರವಾಸಿ ತಾಣಗಳಲ್ಲಿ ಸಿನಿಮಾ ಚಿತ್ರೀಕರಣಕ್ಕೆ ಅನುಮತಿ ನೀಡಲು ಚಿಂತನೆ ನಡೆದಿದೆ. ಪ್ರವಾಸೋದ್ಯಮ, ಪ್ರಾಚ್ಯವಸ್ತು ಮತ್ತು ಅರಣ್ಯ ಇಲಾಖೆಗಳ ಅಧೀನದ ಸ್ಥಳಗಳಲ್ಲಿ ಚಿತ್ರೀಕರಣಕ್ಕೆ ಅನುಮತಿ ನೀಡಲು ಏಕ ಗವಾಕ್ಷಿ ವ್ಯವಸ್ಥೆ ರೂಪಿಸಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ತಿಳಿಸಿದರು.

‘ಚಿತ್ರೀಕರಣಕ್ಕೆ ಅನುಮತಿ ನೀಡುವ ವಿಷಯದಲ್ಲಿ ಕೆಲವು ನಿರ್ಬಂಧಗಳಿವೆ. ಅವುಗಳನ್ನು ಸಡಿಲಿಕೆ ಮಾಡಲಾಗುವುದು. ಇದರಿಂದ ಪ್ರವಾಸೋದ್ಯಮ ಅಭಿವೃದ್ಧಿಗೂ ನೆರವಾಗಲಿದೆ’ ಎಂದರು.

ಷೇರುಪೇಟೆ ವಹಿವಾಟು 29



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,853
ಇಂದಿನ ಅಂತ್ಯ	17,855
▲	1.9
ದಿನದ ಗರಿಷ್ಠ	17,943

ವಿನಿಮಯ ದರ

$ ಡಾಲರ್	73.83
£ ಪೌಂಡ್	101.16
€ ಯುರೊ	86.38
¥ ಯೆನ್ (100ಕ್ಕೆ)	66.57

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹460
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹460

ಕೊಬ್ಬರಿ ಧಾರಣೆ

ತುರುವೇಕೆರೆ ₹16500-16800

ಎಫ್‌ಟಿಪಿ ಮಾ. 31ರವರೆಗೆ ವಿಸ್ತರಣೆ

ನವದೆಹಲಿ (ಪಿಟಿಐ): ಈಗ ಜಾರಿಯಲ್ಲಿ ಇರುವ ವಿದೇಶ ವ್ಯಾಪಾರ ನೀತಿಯನ್ನು (ಎಫ್‌ಟಿಪಿ) ಮಾರ್ಚ್ 31ರವರೆಗೂ ಮುಂದುವರಿಸಲಾಗುವುದು ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಎಫ್‌ಟಿಪಿ 2015–20ನ್ನು ಕೇಂದ್ರವು ಕೋವಿಡ್–19 ಬಿಕ್ಕಟ್ಟಿನ ಕಾರಣದಿಂದಾಗಿ ಸೆಪ್ಟೆಂಬರ್ 30ರವರೆಗೆ ವಿಸ್ತರಣೆ ಮಾಡಿತ್ತು. ಈ ನೀತಿಯು ಆರ್ಥಿಕ ಬೆಳವಣಿಗೆ ಹಾಗೂ ಉದ್ಯೋಗ ಸೃಷ್ಟಿ ಹೆಚ್ಚಿಸುವ ಉದ್ದೇಶದಿಂದ ರಫ್ತು ಹೆಚ್ಚು ಮಾಡಲು ಮಾರ್ಗಸೂಚಿಗಳನ್ನು ಒದಗಿಸುತ್ತದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಸಕಲೇಶಪುರ	
ಕೊಳೆ	600- 650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000 -1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	- 390
ಅಡಿಕೆ	
ಬಂಟ್ವಾಳ	
ಕೋಕ	10000-25000
ಹೊಸತು	25000-50000
ಹಳತು	46000-51500
ಕಾರ್ಕಳ	
ಹೊಸತು	46000-50000
ಹಳತು	46000-51500
ಕುಮಟಾ	
ಚಿಪ್ಪು	37509-41509
ಕೋಕ	23019-36999
ಫ್ಯಾಕ್ಟರಿ	17569-23169
ಹೊಸಚಾಲಿ	45999-47609
ಪುತ್ತೂರು	
ಕೋಕ	10500-26000
ಹೊಸತು	35500-50000
ಸಾಗರ	
ಬಿಳಿಗೋಟು	19119-39409
ಚಾಲಿ	35699-46599
ಕೋಕ	28299-39699
ಕೆಂಪುಗೋಟು	26899-39199
ರಾಶಿ	35699-52339
ಸಿಪ್ಪೆಗೋಟು	5290-26892
ಶಿವಮೊಗ್ಗ	
ಬೆಟ್ಟೆ	46166-53799
ಗೊರಬಲು	16110-40099
ಹೊಸತು	47000-50599
ರಾಶಿ	46099-52799
ಸರಕು	50100-71609
ಸಿದ್ದಾಪುರ	
ಬಿಳಿಗೋಟು	34609-42099
ಚಾಲಿ	42299-48299
ಕೋಕ	30699-39019
ಕೆಂಪುಗೋಟು	34090-36099
ರಾಶಿ	47899-50899
ತಟ್ಟಿಬೆಟ್ಟೆ	38989-45249
ಶಿರಸಿ	
ಬೆಟ್ಟೆ	34123-48698
ಬಿಳಿಗೋಟು	29669-46599
ಚಾಲಿ	43299-48498
ರಾಶಿ	44899-51399
ಯಲ್ಲಾಪುರ	
ಆಪಿ	54865-54865
ಬಿಳಿಗೋಟು	36212-42379
ಚಾಲಿ	42699-48570
ಕೋಕ	24899-35000
ಕೆಂಪುಗೋಟು	30899-36037
ರಾಶಿ	48340-52500
ತಟ್ಟಿಬೆಟ್ಟೆ	38290-47819
ರೇಷ್ಮೆಗೂಡು ಮಾರುಕಟ್ಟೆ	
ರಾಮನಗರ	
ಮಿಶ್ರ ತಳಿ	330-463
ದ್ವಿತಳಿ	222-566

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13,950	13,000	13,150	194.35ಸೆಂಟ್ಸ್
ಎಸಿ	6,300	4,800	5,200	
ಆರ್‌ಪಿ	6250	6,200	6,300	ಲಂಡನ್
ಆರ್‌ಸಿ	3590	3,500	3,675	2148ಡಾಲರ್ಸ್

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1517 (1530)
ಸೋಯಾ (ರಿಫೈನ್ಡ್)	₹1328(1328)
ಸೂರ್ಯಕಾಂತಿ (ರಿಫೈನ್ಡ್)	₹1360 (1360)
ಪಾಮೋಲಿನ್	₹1210 (1215)

ಮುಂಬೈ ಧಾರಣೆ

ಶೇಂಗಾ 27-9-2021

ಜಾವಾ 70/80(ಹೊಸ)	10750-10800
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	10700-10800
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1527 (1540)
ಒಂದು ವಾರದ ಡೆಲಿವರಿ	1522 (1535)
ಸೋಯಾ ಕಚ್ಚಾ	1290 (1290)
ಪಾಮ್ ವಾರದ ಡೆಲಿವರಿ	1208(1213)
ಸೂರ್ಯಕಾಂತಿ ಎಣ್ಣೆ ಕಚ್ಚಾ	1300 (1300)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
46,100 (46,300)
ಬೆಳ್ಳಿ ಕೆ.ಜಿ
60,400 (60,500)

ಆವರಣದಲ್ಲಿ ಶನಿವಾರದ ಧಾರಣೆ

ಜಿಡಿಪಿ ಬೆಳವಣಿಗೆ ಅಂದಾಜು ಪರಿಷ್ಕರಿಸಿದ ಐಸಿಆರ್‌ಎ

ಮುಂಬೈ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಅರ್ಥ ವ್ಯವಸ್ಥೆಯ ಬೆಳವಣಿಗೆ ಪ್ರಮಾಣ ಏಷ್ಟಿರಬಹುದು ಎಂಬ ಅಂದಾಜನ್ನು ರೇಟಿಂಗ್ಸ್ ಸಂಸ್ಥೆ ಐಸಿಆರ್‌ಎ ಪರಿಷ್ಕರಿಸಿದೆ. ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರವು ಶೇಕಡ 8.5ರಷ್ಟು ಇರಲಿದೆ ಎಂದು ಈ ಮೊದಲು ಅಂದಾಜು ಮಾಡಿದ್ದ ಐಸಿಆರ್‌ಎ, ಈಗ ಅದು ಶೇ 9ರಷ್ಟು ಇರಬಹುದು ಎಂದು ಅಂದಾಜಿಸಿದೆ.

ಕೋವಿಡ್ ಲಸಿಕೆ ನೀಡುವ ಅಭಿಯಾನ ಚುರುಕು ಪಡೆದಿರುವುದು, ಹಿಂಗಾರು ಬೆಳೆ ಚೆನ್ನಾಗಿ ಆಗಬಹುದು ಎನ್ನುವ ಅಂದಾಜು ಮತ್ತು ಸರ್ಕಾರವು ಚುರುಕಿನಿಂದ ವೆಚ್ಚ ಮಾಡುತ್ತಿರುವುದು ಈ ಪರಿಷ್ಕರಣೆಗೆ ಕಾರಣ ಎಂದು ಸಂಸ್ಥೆಯು ಪ್ರಕಟಣೆಯಲ್ಲಿ ತಿಳಿಸಿದೆ. ಆರ್‌ಬಿಐ ಅಂದಾಜಿನ ಪ್ರಕಾರ ಹಾಲಿ ಆರ್ಥಿಕ ವರ್ಷದಲ್ಲಿ ಜಿಡಿಪಿ ಬೆಳವಣಿಗೆ ದರವು ಶೇ 9.5ರಷ್ಟು ಇರಲಿದೆ.

‘ಕೋವಿಡ್ ಲಸಿಕೆ ನೀಡುತ್ತಿರುವುದು ಚುರುಕು ಪಡೆದಿರುವುದು ಜನರ ವಿಶ್ವಾಸ ಹೆಚ್ಚಿಸುವ ಸಾಧ್ಯತೆ ಇದೆ. ಇದರಿಂದಾಗಿ ಜನರ ನಡುವೆ ಸಂಪರ್ಕ ಹೆಚ್ಚಾಗಿರುವ ಸೇವಾ ವಲಯದ ಕೆಲವು ಚಟುವಟಿಕೆಗಳಿಗೆ ಇನ್ನಷ್ಟು ಬೇಡಿಕೆ ಬರಬಹುದು. ಸಾಂಕ್ರಾಮಿಕದಿಂದ ಪೆಟ್ಟು ತಿಂದಿರುವ ಅರ್ಥ ವ್ಯವಸ್ಥೆಯ ಪುನಶ್ಚೇತನಕ್ಕೆ ನೆರವಾಗಬಹುದು’ ಎಂದು ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಎದುರಾಗಬಹುದಾದ ಕೋವಿಡ್ ಮೂರನೆಯ ಅಲೆಯು ಪರಿಷ್ಕೃತ ಅಂದಾಜಿಗೆ ಇರುವ ಪ್ರಮುಖ ಅಪಾಯ ಎಂದು ಐಸಿಆರ್‌ಎ ಹೇಳಿದೆ. ಕೊರೊನಾ ವೈರಾಣುವು ಇನ್ನಷ್ಟು ರೂಪಾಂತರಗಳನ್ನು ಹೊಂದಿ, ಈಗಿರುವ ಲಸಿಕೆಗಳು ಆ ರೂಪಾಂತರಗೊಂಡ ವೈರಾಣುವಿನ ವಿರುದ್ಧ ಪರಿಣಾಮ ಕಳೆದುಕೊಂಡರೆ ತೊಂದರೆ ಆಗಬಹುದು ಎಂದು ಸಂಸ್ಥೆಯು ಹೇಳಿದೆ.

ಆರೋಪಿ ವಿರುದ್ಧ 3 ತಿಂಗಳಲ್ಲಿ ಆರೋಪ ದಾಖಲಿಸಲು ಸೂಚನೆ

ನವದೆಹಲಿ (ಪಿಟಿಐ): ರಾಜಧಾನಿ ಎಕ್ಸ್‌ಪ್ರೆಸ್ ಮತ್ತು ಇತರ ರೈಲುಗಳಲ್ಲಿ 1993ರಲ್ಲಿ ಸಂಭವಿಸಿದ್ದ ಸರಣಿ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ 11 ವರ್ಷಗಳಿಂದ ಜೈಲಿನಲ್ಲಿರುವ ಆರೋಪಿಯ ವಿರುದ್ಧ ಮೂರು ತಿಂಗಳಲ್ಲಿ ಆರೋಪ ಪಟ್ಟಿ ಸಲ್ಲಿಸುವಂತೆ ಸುಪ್ರೀಂಕೋರ್ಟ್ ಸೋಮವಾರ ರಾಜಸ್ಥಾನದ ಅಜ್ಮೀರ್‌ನ ವಿಶೇಷ ಟಾಡಾ ನ್ಯಾಯಾಲಯಕ್ಕೆ ನಿರ್ದೇಶನ ನೀಡಿದೆ.


ಈ ಪ್ರಕರಣಕ್ಕೆ ಸಂಬಂಧಿಸಿದಂತೆ 2010 ರಲ್ಲಿ ಉತ್ತರ ಪ್ರದೇಶದ ಪೊಲೀಸರು ಬಂಧಿಸಿದ್ದ ಹಮೀರ್ ಉಯಿ ಉದ್ದೀನ್ ಅವರ ಜಾಮೀನು ಅರ್ಜಿಯನ್ನು ಸುಪ್ರೀಂ ಕೋರ್ಟ್ ಬಾಕಿ ಉಳಿಸಿಕೊಂಡಿತು. ಆತನ ವಿರುದ್ಧದ ಆರೋಪಗಳನ್ನು ದಾಖಲಿಸಿದ ನಂತರ ಅದನ್ನು ಪರಿಗಣಿಸಲಾಗುವುದು ಎಂದು ಹೇಳಿತು.

ಯಾರಿಸ್ ಮಾರಾಟ ಸ್ಥಗಿತ

ನವದೆಹಲಿ (ಪಿಟಿಐ): ಟೊಯೊಟಾ ಕಿರ್ಲೋಸ್ಕರ್ ಮೋಟರ್ (ಟಿಕೆಎಂ) ಕಂಪನಿಯು ತನ್ನ ಮಧ್ಯಮ ಗಾತ್ರದ ಸೆಡಾನ್ ಕಾರು ‘ಯಾರಿಸ್’ ಮಾರಾಟವನ್ನು ಭಾರತದಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಸ್ಥಗಿತಗೊಳಿಸಲಿದೆ. ಗ್ರಾಹಕರ ಬದಲಾಗುತ್ತಿರುವ ಬೇಡಿಕೆಗಳಿಗೆ ಅನುಗುಣವಾಗಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಕಂಪನಿ ಸೋಮವಾರ ಹೇಳಿದೆ.

ಕಂಪನಿಯು ಯಾರಿಸ್ ಮಾದರಿಯನ್ನು 2018ರ ಮೇ ತಿಂಗಳಿನಲ್ಲಿ ಮಾರುಕಟ್ಟೆಗೆ ಪರಿಚಯಿಸಿತ್ತು. ಇದರ ಬೆಲೆಯು ₹ 8.75 ಲಕ್ಷದಿಂದ ಆರಂಭವಾಗಿ ₹ 14.07 ಲಕ್ಷದವರೆಗೆ (ಎಕ್ಸ್–ಷೋರೂಂ) ಇತ್ತು. ಈ ಕಾರು, ಹೋಂಡಾ ಸಿಟಿ, ಹುಂಡೈ ವರ್ನಾ ಮತ್ತು ಮಾರುತಿ ಸುಜುಕಿ ಸಿಯಾಜ್ ಜೊತೆ ಪೈಪೋಟಿ ನಡೆಸುತ್ತಿತ್ತು.

ಆದರೆ, ಈ ವಾಹನಕ್ಕೆ ಮಾರುಕಟ್ಟೆಯಲ್ಲಿ ಭಾರಿ ಬೇಡಿಕೆಯೇನೂ ಇರಲಿಲ್ಲ. ‘ಹೊಸ ವರ್ಷದಲ್ಲಿ (2022ರಲ್ಲಿ) ಹೊಸ ಮಾದರಿಯ ಕಾರುಗಳನ್ನು ಬಿಡುಗಡೆ ಮಾಡಲು ಸಿದ್ಧತೆಗಳು ನಡೆದಿವೆ’ ಎಂದು ಕೂಡ ಕಂಪನಿ ಹೇಳಿದೆ. ಯಾರಿಸ್ ಕಾರಿನ ಬಿಡಿ ಭಾಗಗಳು ಇನ್ನು ಕನಿಷ್ಠ 10 ವರ್ಷಗಳವರೆಗೆ ಸಿಗಲಿವೆ ಎಂದು ಭರವಸೆ ನೀಡಿದೆ.



ಸುದಿರ್‌ಮನ್ ಕಪ್: ನಾಕೌಟ್ ಪ್ರವೇಶದ ಕನಸು ಭಗ್ನ

ಚೀನಾ ಎದುರು ಸೋತ ಭಾರತ

ವಂಟಾ, ಫಿನ್ಲೆಂಡ್ (ಪಿಟಿಐ): ತಾರಾ ಆಟಗಾರರ ಅನುಪಸ್ಥಿತಿಯಲ್ಲಿ ಕಣಕ್ಕಿಳಿದಿರುವ ಭಾರತ, ಸುದಿರ್‌ಮನ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮತ್ತೆ ನಿರಾಸೆ ಅನುಭವಿಸಿತು. ಸೋಮವಾರ ನಡೆದ ಸೆಣಸಾಟದಲ್ಲಿ 0–5ರಿಂದ ಚೀನಾ ಎದುರು ಸೋಲು ಮೂಲಕ ನಾಕೌಟ್ ಹಂತಕ್ಕೇರುವ ಅವಕಾಶವನ್ನು ಕಳೆದುಕೊಂಡಿತು.

‘ಎ’ ಗುಂಪಿನ ಮೊದಲ ಪಂದ್ಯದಲ್ಲಿ ಭಾರತದ ಆಟಗಾರರು ಭಾನುವಾರ ಥಾಯ್ಲೆಂಡ್ ಎದುರು ಎಡವಿದ್ದರು. ಹೀಗಾಗಿ ಆತಿಥೇಯ ಫಿನ್ಲೆಂಡ್ ಎದುರು ಬುಧವಾರ ನಿಗದಿಯಾಗಿರುವ ಪಂದ್ಯ ಮಹತ್ವ ಕಳೆದುಕೊಂಡಿದೆ.

ಪ್ರಬಲ ಚೀನಾ ತಂಡವನ್ನು ಮಣಿಸುವುದು ಭಾರತಕ್ಕೆ ಸುಲಭವೇನೂ ಆಗಿರಲಿಲ್ಲ. ಆದರೆ ಯುವ ಮತ್ತು ಅನುಭವಿಗಳನ್ನೊಳಗೊಂಡ ತಂಡಕ್ಕೆ ಒಂದೇ ಒಂದು ಪಂದ್ಯವನ್ನೂ ಗೆಲ್ಲಲಾಗಲಿಲ್ಲ.

ಪುರುಷರ ಡಬಲ್ಸ್‌ನಲ್ಲಿ ಎಂ.ಆರ್. ಅರ್ಜುನ್– ಧ್ರುವ ಕಪಿಲ್ ಜಿದ್ದಾಜಿದ್ದಿ ಪೈಪೋಟಿಯಲ್ಲಿ 20-22, 17-21ರಿಂದ ಚೀನಾದ ಲಿವು ಚೆಂಗ್– ಜೊ ಹೊಡಾಂಗ್ ಎದುರು ಮಣಿದರು. ಅದಿತಿ ಭಟ್ ಅವರನ್ನು ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಚೆನ್ ಯು ಫೆ 21–9, 21–8ರಿಂದ ಸುಲಭವಾಗಿ ಸೋಲಿಸಿದಾಗ ಚೀನಾ 2–0 ಮುನ್ನಡೆ ಸಾಧಿಸಿತು. ಪುರುಷರ ಸಿಂಗಲ್ಸ್‌ನಲ್ಲಿ ಬಿ.ಸಾಯಿ ಪ್ರಣೀತ್ 10–21, 10–21ರಿಂದ ಆಲ್ ಇಂಗ್ಲೆಂಡ್ ಮಾಜಿ ಚಾಂಪಿಯನ್ ಶಿ ಯುಕಿ ಎದುರು ಮುಗ್ಗರಿಸಿದರು. ಕೊನೆಯ ಎರಡು ಪಂದ್ಯಗಳಲ್ಲಿ, ಮಹಿಳಾ ಡಬಲ್ಸ್ ಜೋಡಿ ಅಶ್ವಿನಿ ಪೊನ್ನಪ್ಪ– ಎನ್. ಸಿಕ್ಕಿರೆಡ್ಡಿ 16-21, 13-21ರಿಂದ ಜೆಂಗ್ ಯು– ಲಿ ವೆನ್ ಮಿ ಎದುರು, ಮಿಶ್ರ ಡಬಲ್ಸ್ ಜೋಡಿ ಕಿದಂಬಿ ಶ್ರೀಕಾಂತ್– ಋತುಪರ್ಣ ಪಂಡಾ 9-21, 9-21ರಿಂದ ಡು ಯು– ಫೆಂಗ್ ಯಾನ್ ಜೆ ಎದುರು ಸೋಲು ಅನುಭವಿಸಿದರು.


ಈಕ್ವೆಸ್ಟ್ರಿಯನ್: ಚೇತನ್ ಹ್ಯಾಟ್ರಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಈ ವಾರಾಂತ್ಯದಲ್ಲಿ ನಡೆದ ಈಕ್ವೆಸ್ಟ್ರಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಚೇತನ್ ರೆಡ್ಡಿ ಅವರು ಮೂರು ಪ್ರಶಸ್ತಿಗಳನ್ನು ಗೆದ್ದುಕೊಂಡಿದ್ದಾರೆ.

ಆ್ಯಸ್ಟ್ರೈಡ್ ಸ್ಯಾಂಡ್ರಾ ಬ್ಲ್ಯೂ ಕುದುರೆಯೊಂದಿಗೆ ಸ್ಪರ್ಧಿಸಿದ್ದ ಅವರು ಶೋ ಜಂಪಿಂಗ್‌ನ ಎಸ್‌ಜೆ6 120–130 ಸೆ.ಮೀ., ಎಸ್‌ಜೆ5 120 ಸೆ.ಮೀ. ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದರು. ಕ್ಲಿಯೊ ಕುದುರೆಯೊಂದಿಗೆ ಎಸ್‌ಜೆ8 115 ಸೆ.ಮೀ. ವಿಭಾಗದಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿದರು.

ಎಸ್‌ಜೆ4 110 ಸೆ.ಮೀ. ವಿಭಾಗದಲ್ಲಿ ಭರತ್ ಎಂ. (ಕುದುರೆ; ರಿಚ್‌ನೆಸ್) ಚಿನ್ನ ಗೆದ್ದರು.



ಆ್ಯಸ್ಟ್ರೈಡ್ ಸ್ಯಾಂಡ್ರಾ ಬ್ಲ್ಯೂ ಕುದುರೆಯೊಂದಿಗೆ ಚೇತನ್ ರೆಡ್ಡಿ

ಸತತ 2 ದಿನಗಳಿಂದ ಡೀಸೆಲ್ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಲೀಟರ್ ಡೀಸೆಲ್ ದರವನ್ನು ಸೋಮವಾರ 25 ಪೈಸೆಯಷ್ಟು ಹೆಚ್ಚಿಸಿವೆ. ಪೆಟ್ರೋಲ್ ದರದಲ್ಲಿ ಬದಲಾವಣೆ ಆಗಿಲ್ಲ. ಸತತ ಎರಡು ದಿನಗಳಿಂದ ಡೀಸೆಲ್ ದರ ಹೆಚ್ಚಿಸಲಾಗಿದೆ. ಸೆಪ್ಟೆಂಬರ್ 24ರ ನಂತರ ಒಟ್ಟು ಮೂರು ಬಾರಿ ಬೆಲೆ ಹೆಚ್ಚಳ ಆಗಿದೆ.

ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನ ಜಾಲತಾಣದಲ್ಲಿ ಇರುವ ಮಾಹಿತಿ ಪ್ರಕಾರ ಬೆಂಗಳೂರಿನಲ್ಲಿ ಲೀಟರ್ ಡೀಸೆಲ್ ಬೆಲೆ ಸೋಮವಾರ ₹ 94.76 ಆಗಿತ್ತು.



ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಪಂದ್ಯ; ಗಾಯಾಳು ಆ್ಯಂಡ್ರೆ ರಸೆಲ್ ಆಡುವುದು ಸಂದೇಹ

ಡೆಲ್ಲಿಗೆ ಪ್ಲೇ ಆಫ್ ಮೇಲೆ ಕಣ್ಣು

ಶಾರ್ಜಾ (ಪಿಟಿಐ): ಸತತ ನಾಲ್ಕು ಜಯದೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಹಂಚಿಕೊಂಡಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಮಂಗಳವಾರ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಸೆಣಸಲಿದೆ. ಶಾರ್ಜಾ ಕ್ರಿಕೆಟ್ ಅಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಪ್ಲೇ ಆಫ್ ಹಂತಕ್ಕೇರುವ ಕನಸಿನೊಂದಿಗೆ ತಂಡ ಕಣಕ್ಕೆ ಇಳಿಯಲಿದೆ.


ಕೋಲ್ಕತ್ತ ತಂಡದ ಸ್ಪಿನ್ನರ್ ಕುಲದೀಪ್ ಯಾದವ್ ಮೊಣಕಾಲು ಗಾಯದಿಂದ ಭಾರತಕ್ಕೆ ವಾಪಸಾಗಿದ್ದಾರೆ. ಆಲ್‌ರೌಂಡರ್ ಆ್ಯಂಡ್ರೆ ರಸೆಲ್ ಗಾಯಗೊಂಡಿದ್ದು ಮಂಗಳವಾರ ಆಡುವುದು ಸಂದೇಹ. ಇದು ಡೆಲ್ಲಿ ಭರವಸೆಯನ್ನು ಹೆಚ್ಚಿಸಿದೆ. ಈ ಬಾರಿ ಎಲ್ಲ ತಂಡಗಳ ವಿರುದ್ಧವೂ ಅಮೋಘ ಸಾಮರ್ಥ್ಯ ತೋರಿರುವ ತಂಡ ಕೋಲ್ಕತ್ತ ವಿರುದ್ಧವೂ ಜಯಿಸುವ ವಿಶ್ವಾಸದಲ್ಲಿದೆ.

ಎರಡನೇ ಹಂತದ ಆರಂಭದಲ್ಲಿ ಉತ್ತಮ ಆಟವಾಡಿದ್ದ ಕೋಲ್ಕತ್ತ ನೈಟ್ ರೈಡರ್ಸ್ ಸತತ ಎರಡು ಪಂದ್ಯಗಳನ್ನು ಗೆದ್ದುಕೊಂಡಿತ್ತು. ಆದರೆ ಕಳೆದ ಪಂದ್ಯದಲ್ಲಿ ಸವಾಲಿನ ಮೊತ್ತ ಕಲೆ ಹಾಕಿದರೂ ಚೆನ್ನೈ ವಿರುದ್ಧ ಸೋಲಿನ ನಿರಾಸೆಗೆ ಒಳಗಾಗಿತ್ತು. ಹೀಗಾಗಿ ಮತ್ತೆ ಗೆಲುವಿನ ಹಾದಿಗೆ ಮರಳಿ ಪ್ಲೇ ಆಫ್ ಹಂತದ ಕನಸು ಜೀವಂತವಾಗಿರಿಸಿಕೊಳ್ಳುವತ್ತ ಮಂಗಳವಾರ ಪ್ರಯತ್ನಿಸಲಿದೆ. ರಸೆಲ್ ಆಡದೇ ಇದ್ದರೆ ವೇಗದ ಬೌಲಿಂಗ್ ವಿಭಾಗದ ಜವಾಬ್ದಾರಿ ಪ್ರಸಿದ್ಧ ಕೃಷ್ಣ ಅವರ ಹೆಗಲ ಮೇಲೆ ಬೀಳಲಿದೆ.

ನಾಯಕ ಇಯಾನ್ ಮಾರ್ಗನ್, ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ದಿನೇಶ್ ಕಾರ್ತಿಕ್, ನಿತೀಶ್ ರಾಣಾ, ವೆಂಕಟೇಶ್ ಅಯ್ಯರ್ ಮತ್ತು ಶುಭಮನ್ ಗಿಲ್ ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದು ರಾಹುಲ್ ತ್ರಿಪಾಠಿ ಅವರ ಮೇಲೆಯೂ ನಿರೀಕ್ಷೆ ಇದೆ. ಡೆಲ್ಲಿ ತಂಡದ ನಾಯಕ ರಿಷಭ್ ಪಂತ್, ಶ್ರೇಯಸ್ ಅಯ್ಯರ್, ಶಿಖರ್ ಧವನ್, ಪೃಥ್ವಿ ಶಾ ಮತ್ತು ಶಿಮ್ರನ್ ಹೆಟ್ಮೆಯರ್ ಯಾವುದೇ ಬೌಲರ್‌ಗಳ ವಿರುದ್ಧ ಸಿಡಿಯಬಲ್ಲ ತಾಕತ್ತು ಹೊಂದಿದ್ದಾರೆ. ಆ್ಯನ್ರಿಚ್ ನಾರ್ಕಿಯ, ಕಗಿಸೊ ರಬಾಡ ಮತ್ತು ಆವೇಶ್ ಖಾನ್ ಅವರ ವೇಗದ ದಾಳಿಗೆ ರವಿಚಂದ್ರನ್ ಅಶ್ವಿನ್ ಹಾಗೂ ಅಕ್ಷರ್ ಪಟೇಲ್ ಅವರ ಸ್ಪಿನ್ ಬೌಲಿಂಗ್ ಬಲವೂ ಇದೆ.

ಈ ಬಾರಿ ಹೆಚ್ಚು ರನ್ ಗಳಿಸಿದವರು	
ಡೆಲ್ಲಿ ಕ್ಯಾಪಿಟಲ್ಸ್	
ಶಿಖರ್ ಧವನ್	430
ಪೃಥ್ವಿ ಶಾ	329
ರಿಷಭ್ ಪಂತ್	272
ಶಿಮ್ರನ್ ಹೆಟ್ಮೆಯರ್	112
ಸ್ಟೀವ್ ಸ್ಮಿತ್	104
ಕೋಲ್ಕತ್ತ ನೈಟ್ ರೈಡರ್ಸ್	
ರಾಹುಲ್ ತ್ರಿಪಾಠಿ	306
ನಿತೀಶ್ ರಾಣಾ	243
ಶುಭಮನ್ ಗಿಲ್	202
ಆ್ಯಂಡ್ರೆ ರಸೆಲ್	183
ದಿನೇಶ್ ಕಾರ್ತಿಕ್	149

ಹೆಚ್ಚು ವಿಕೆಟ್ ಗಳಿಸಿದವರು	
ಡೆಲ್ಲಿ ಕ್ಯಾಪಿಟಲ್ಸ್	
ಆವೇಶ್ ಖಾನ್	15
ಕಗಿಸೊ ರಬಾಡ	12
ಅಕ್ಷರ್ ಪಟೇಲ್	9
ಅಮಿತ್ ಮಿಶ್ರಾ	8
ಕ್ರಿಸ್ ವೋಕ್ಸ್	5
ಕೋಲ್ಕತ್ತ ನೈಟ್ ರೈಡರ್ಸ್	
ಪ್ರಸಿದ್ಧ ಕೃಷ್ಣ	12
ವರುಣ್ ಚಕ್ರವರ್ತಿ	11
ಆ್ಯಂಡ್ರೆ ರಸೆಲ್	11
ಪ್ಯಾಟ್ ಕಮಿನ್ಸ್	9
ಸುನಿಲ್ ನಾರಾಯಣ್	7


ಶಿಖರ್ ಧವನ್ –ಪಿಟಿಐ

ಒಟ್ಟು ಪಂದ್ಯಗಳು 27	
ಕೋಲ್ಕತ್ತ ಜಯ	14
ಡೆಲ್ಲಿ ಗೆಲುವು	12
ಫಲಿತಾಂಶವಿಲ್ಲ	1
ಆರಂಭ ಮಧ್ಯಾಹ್ನ 3.30	


ನಿತೀಶ್ ರಾಣಾ

ಪಂಜಾಬ್ ಕಿಂಗ್ಸ್‌ಗೆ ಮುಂಬೈ ಸವಾಲು

ಒಟ್ಟು ಪಂದ್ಯಗಳು 27	
ಮುಂಬೈ ಜಯ	14
ಪಂಜಾಬ್ ಗೆಲುವು	13
ಆರಂಭ ಸಂಜೆ 7.30	

ಅಬುಧಾಬಿ (ಪಿಟಿಐ): ಹ್ಯಾಟ್ರಿಕ್ ಸೋಲಿನ ಕಹಿ ಅನುಭವಿಸಿರುವ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ಮಂಗಳವಾರದ ಎರಡನೇ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಸೆಣಸಲಿದೆ. ಐದು ಬಾರಿಯ ಚಾಂಪಿಯನ್ ಮುಂಬೈ ಎರಡನೇ ಹಂತದ ಆರಂಭದಿಂದಲೇ ಮುಗ್ಗರಿಸುತ್ತಿದೆ. ಚೆನ್ನೈ ಸೂಪರ್ ಕಿಂಗ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮೊತ್ತವನ್ನು ಬೆನ್ನತ್ತು-ವಲ್ಲಿ ವಿಫಲವಾಗಿದ್ದ ತಂಡ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಕಟ್ಟಿಹಾಕಲು ಸಾಧ್ಯವಾಗದೇ ಸೋತಿತ್ತು.

ಮುಂಬೈ ಇಂಡಿಯನ್ಸ್‌ಗೆ ಈ ಬಾರಿ ಬ್ಯಾಟಿಂಗ್ ವಿಭಾಗದ್ದೇ ಚಿಂತೆ. ತಂಡದ ಪ್ರಮುಖ ಆಟಗಾರರಾದ ಸೂರ್ಯಕುಮಾರ್ ಯಾದವ್ ಮತ್ತು ಇಶಾನ್ ಕಿಶನ್ ಅವರ ಬ್ಯಾಟಿಂದ ನಿರೀಕ್ಷಿತ ಪ್ರಮಾಣದಲ್ಲಿ ರನ್‌ಗಳು ಬರುತ್ತಿಲ್ಲ. ರೋಹಿತ್ ಶರ್ಮಾ ಅವರಿಗೂ ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ. ಹಿಂದಿನ ಎರಡು ಪಂದ್ಯಗಳಲ್ಲಿ ಅವರು ಕ್ರಮವಾಗಿ 33 ಮತ್ತು 43 ರನ್ ಗಳಿಸಿದ್ದರು. ಫಿಟ್‌ನೆಸ್ ಸಮಸ್ಯೆಯಿಂದಾಗಿ ಎರಡು ಪಂದ್ಯಗಳಲ್ಲಿ ಆಡದೇ ಇದ್ದ ಹಾರ್ದಿಕ್ ಪಾಂಡ್ಯ ಆರ್‌ಸಿಬಿ ಎದುರು ಕಣಕ್ಕೆ ಇಳಿದಿದ್ದರು. ಆದರೆ ಗಮನಾರ್ಹ ಸಾಧನೆ ಮಾಡಲು ಅಗಲಿಲ್ಲ.

ಎರಡನೇ ಹಂತದ ಮೊದಲ ಎರಡು ಪಂದ್ಯಗಳಲ್ಲಿ ನಿರಾಸೆ ಕಂಡಿದ್ದ ಪಂಜಾಬ್ ಕಿಂಗ್ಸ್ ಹಿಂದಿನ ಪಂದ್ಯದಲ್ಲಿ ಕಡಿಮೆ ಮೊತ್ತ ಗಳಿಸಿದ್ದರೂ ಸನ್‌ರೈಸರ್ಸ್ ವಿರುದ್ಧ ಗೆದ್ದಿತ್ತು. ಬೌಲರ್‌ಗಳು ತಂಡಕ್ಕೆ ಜಯದ ಕಾಣಿಕೆ ನೀಡಿದ್ದರು. ತಂಡದಲ್ಲಿ ಭಾರತ ಮತ್ತು ವಿದೇಶದ ಅತ್ಯುತ್ತಮ ಆಟಗಾರರು ಇದ್ದಾರೆ. ಅರಂಭಿಕ ಜೋಡಿ ಕೆ.ಎಲ್.ರಾಹುಲ್ ಮತ್ತು ಮಯಂಕ್ ಅಗರವಾಲ್ ಉತ್ತಮ ಫಾರ್ಮ್‌ನಲ್ಲಿದ್ದು ಕ್ರಿಸ್ ಗೇಲ್, ಏಡನ್ ಮರ್ಕರಮ್ ಮತ್ತು ನಿಕೋಲಸ್ ಪೂರನ್ ಮೇಲೆ ಭರವಸೆ ಇದೆ. ಬೌಲಿಂಗ್ ವಿಭಾಗ ಬಲಿಷ್ಠವಾಗಿದ್ದು ಮೊಹಮ್ಮದ್ ಶಮಿ, ಅರ್ಷದೀಪ್ ಸಿಂಗ್, ರವಿ ಬಿಷ್ಣೋಯಿ ಮುಂತಾದವರು ಎದುರಾಳಿಗಳನ್ನು ಕಾಡಬಲ್ಲರು.


ಮಯಂಕ್ ಅಗರವಾಲ್ –ಪಿಟಿಐ ಚಿತ್ರ

ತವರಿಗೆ ಮರಳಿದ ಕುಲದೀಪ್ ಯಾದವ್

ನವದೆಹಲಿ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡದಲ್ಲಿದ್ದ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಮೊಣಕಾಲಿಗೆ ಗಾಯಗೊಂಡಿದ್ದು ತವರಿಗೆ ವಾಪಸಾಗಿದ್ದಾರೆ. ಈ ಬಾರಿಯ ದೇಶಿ ಕ್ರಿಕೆಟ್‌ನಲ್ಲಿ ಅವರು ಆಡುವುದು ಸಂದೇಹ ಎಂದು ಹೇಳಲಾಗಿದೆ.

ಕುಲದೀಪ್ ಈಚೆಗೆ ಮುಂಬೈಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು ಈಗ ಕಾಣಿಸಿಕೊಂಡಿರುವ ನೋವಿನಿಂದ ಚೇತರಿಸಿಕೊಂಡು ಅಂಗಣಕ್ಕೆ ಮರಳಲು ನಾಲ್ಕರಿಂದ ಆರು ತಿಂಗಳು ಬೇಕಾಗಬಹುದು ಎನ್ನಲಾಗಿದೆ.

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)		
ಆಟಗಾರ	ತಂಡ	ರನ್
ಸಂಜು ಸ್ಯಾಮ್ಸನ್	ರಾಜಸ್ಥಾನ	433
ಶಿಖರ್ ಧವನ್	ಡೆಲ್ಲಿ	430
ಕೆ.ಎಲ್.ರಾಹುಲ್	ಪಂಜಾಬ್	401

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)		
ಆಟಗಾರ	ತಂಡ	ವಿಕೆಟ್
ಹರ್ಷಲ್	ಆರ್‌ಸಿಬಿ	23
ಆವೇಶ್ ಖಾನ್	ಡೆಲ್ಲಿ	15
ಬೂಮ್ರಾ	ಮುಂಬೈ	14

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಚೆನ್ನೈ ಸೂಪರ್ ಕಿಂಗ್ಸ್	10	8	2	00	00	16
ಡೆಲ್ಲಿ ಕ್ಯಾಪಿಟಲ್ಸ್	10	8	2	00	00	16
ಬೆಂಗಳೂರು	10	6	4	00	00	12
ಕೋಲ್ಕತ್ತ ನೈಟ್ ರೈಡರ್ಸ್	10	4	6	00	00	8
ಪಂಜಾಬ್	10	4	6	00	00	8
ರಾಜಸ್ತಾನ	10	4	6	00	00	8
ಮುಂಬೈ ಇಂಡಿಯನ್ಸ್	10	4	6	00	00	8
ಹೈದರಾಬಾದ್	10	2	8	00	00	4

* ಸೋಮವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

‘ಮಿಥಾಲಿ ಶ್ರೇಷ್ಠ ಬ್ಯಾಟರ್’

ನವದೆಹಲಿ (ಪಿಟಿಐ): ಸ್ಟ್ರೈಕ್‌ರೇಟ್ ಏನೇ ಇರಲಿ, ಮಿಥಾಲಿ ರಾಜ್ ಅವರು ಭಾರತ ಮಹಿಳಾ ಕ್ರಿಕೆಟ್ ತಂಡದ ಶ್ರೇಷ್ಠ ಬ್ಯಾಟರ್ ಎಂದು ಮಾಜಿ ನಾಯಕಿ ಹಾಗೂ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಪೆಕ್ಸ್ ಸಮಿತಿ ಸದಸ್ಯೆ ಶಾಂತಾ ರಂಗಸ್ವಾಮಿ ಅಭಿಪ್ರಾಯಪಟ್ಟಿದ್ದಾರೆ.

ಆಸ್ಟ್ರೇಲಿಯಾ ಮಹಿಳಾ ತಂಡದ ಎದುರು ನಡೆದ ಏಕದಿನ ಸರಣಿಯಲ್ಲಿ ಭಾರತ ತಂಡ ಅತ್ಯುತ್ತಮ ಆಟವಾಡಿದೆ ಎಂದು ಹೇಳಿರುವ ಅವರು ಚಾಂಪಿಯನ್ ತಂಡದ ವಿರುದ್ಧ ಪ್ರಬಲ ಪೈಪೋಟಿ ನೀಡಿ 1–2ರಲ್ಲಿ ಸರಣಿ ಸೋತಿದೆ ಎಂದಿದ್ದಾರೆ. ಭಾನುವಾರ ನಡೆದ ಮೂರನೇ ಪಂದ್ಯದಲ್ಲಿ ಜಯಿಸುವ ಮೂಲಕ ಭಾರತ ತಂಡ ಆಸ್ಟ್ರೇಲಿಯಾದ ದಾಖಲೆ ಜಯದ ಓಟಕ್ಕೆ ಬ್ರೇಕ್ ಹಾಕಿತ್ತು. ಆಸ್ಟ್ರೇಲಿಯಾ ಸತತ 26 ಪಂದ್ಯಗಳನ್ನು ಗೆದ್ದುಕೊಂಡಿತ್ತು.

‘ಮಿಥಾಲಿ ಅವರು ಭಾರತ ಕಂಡ ಅತ್ಯುತ್ತಮ ಬ್ಯಾಟರ್. ಈಗಲೂ ಅವರು ಶ್ರೇಷ್ಠ ಆಟಗಾರ್ತಿಯಾಗಿಯೇ ಉಳಿದಿದ್ದಾರೆ. ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ಎದುರಿನ ಸರಣಿಗಳಲ್ಲಿ ಅವರು ಚೆನ್ನಾಗಿ ಆಡಿದ್ದಾರೆ. ಸಂದರ್ಭಕ್ಕೆ ತಕ್ಕಂತೆ ಆಡಲು ಅವರಿಗೆ ಗೊತ್ತು. ಒಂದು ತುದಿಯಲ್ಲಿ ವಿಕೆಟ್‌ಗಳು ಪತನವಾಗುತ್ತಿದ್ದರೆ ಮತ್ತೊಂದು ತುದಿಯಲ್ಲಿರುವವರ ಸ್ಟ್ರೈಕ್ ರೇಟ್ ನಗಣ್ಯ’ ಎಂದು ಶಾಂತಾ ಹೇಳಿದ್ದಾರೆ.


ಶಾಂತಾ ರಂಗಸ್ವಾಮಿ

‘ಭಾರತ ತಂಡ ಫೀಲ್ಡಿಂಗ್‌ನಲ್ಲಿ ಸುಧಾರಣೆ ಕಾಣಬೇಕಾಗಿದೆ. ಹರ್ಮನ್‌ಪ್ರೀತ್ ಪದೇ ಪದೇ ಗಾಯದ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಹೀಗಾಗಿ ವಿದೇಶದಲ್ಲಿ ಲೀಗ್ ಪಂದ್ಯಗಳನ್ನು ಆಡುವ ಬದಲು ಭಾರತಕ್ಕಾಗಿ ಮಾತ್ರ ಆಡಲು ಅವರು ಗಮನಹರಿಸಬೇಕು’ ಎಂದರು ಶಾಂತಾ.

ಶೂಟಿಂಗ್: ಸಂದೀಪ್‌ಗೆ ಎರಡು ಪದಕ

ಬೆಂಗಳೂರು: ನಗರದ ಸಂದೀಪ್ ಪುರುಷೋತ್ತಮ್, ರಾಜ್ಯ ರೈಫಲ್ ಸಂಸ್ಥೆ ಆಯೋಜಿಸಿದ್ದ ರಾಜ್ಯ ಮಟ್ಟದ ಶೂಟಿಂಗ್ ಸ್ಪರ್ಧೆಯಲ್ಲಿ ಎರಡು ಪದಕಗಳನ್ನು ತಮ್ಮದಾಗಿಸಿಕೊಂಡರು.


ಸಂದೀಪ್

ಭಾರತ ಕ್ರೀಡಾ ಪ್ರಾಧಿಕಾರದ ಶೂಟಿಂಗ್ ರೇಂಜ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ 50 ಮೀಟರ್ಸ್ ರೈಫ್ ಪ್ರೋನ್‌ನ ಪುರುಷರ ವೈಯಕ್ತಿಕ ಮತ್ತು ತಂಡ ವಿಭಾಗಗಳಲ್ಲಿ ಪಾರಮ್ಯ ಮೆರೆದರು.

ವೈಯಕ್ತಿಕ ವಿಭಾಗದಲ್ಲಿ 600ರಲ್ಲಿ 562 ಸ್ಕೋರು ಕಲೆ ಹಾಕಿದ ಅವರು ಚಿನ್ನಕ್ಕೆ ಮುತ್ತಿಕ್ಕಿದರು. ತಂಡ ವಿಭಾಗದಲ್ಲಿ 1800ರ ಪೈಕಿ 1636 ಸ್ಕೋರು ಗಳಿಸಲು ನೆರವಾದರು. ವೈಯಕ್ತಿಕ ವಿಭಾಗದಲ್ಲಿ 553 ಸ್ಕೋರುಗಳೊಂದಿಗೆ ಮೊಹಮ್ಮದ್ ಇಸ್ಮಾಯಿಲ್ ಎರಡನೇ ಸ್ಥಾನ ಗಳಿಸಿದರು.

ರಾಯಲ್ಸ್ ಆಸೆಗೆ ಸನ್‌ರೈಸರ್ಸ್ ಅಡ್ಡಿ

ಜೇಸನ್ ರಾಯ್, ಕೇನ್ ವಿಲಿಯಮ್ಸನ್ ಅರ್ಧಶತಕ

ದುಬೈ (ಪಿಟಿಐ): ಸತತ ಸೋಲಿನಿಂದ ಕಂಗೆಟ್ಟಿದ್ದ ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ಸೋಮವಾರ ಗೆಲುವಿನ ಸಂಭ್ರಮ. ರಾಜಸ್ಥಾನ ರಾಯಲ್ಸ್ ವಿರುದ್ಧ ನಡೆದ ಪಂದ್ಯದಲ್ಲಿ ಆರಂಭಿಕ ಬ್ಯಾಟರ್ ಜೇಸನ್ ರಾಯ್ ಮತ್ತು ನಾಯಕ ಕೇನ್ ವಿಲಿಯಮ್ಸ್ ಅವರ ಅಮೋಘ ಆಟದ ನೆರವಿನಿಂದ ತಂಡ ಏಳು ವಿಕೆಟ್‌ಗಳ ಜಯ ಸಾಧಿಸಿತು. ಸೋಲಿನೊಂದಿಗೆ ರಾಜಸ್ಥಾನ ತಂಡದ ಪ್ಲೇ ಆಫ್ ಕನಸಿಗೆ ಅಡ್ಡಿಯಾಯಿತು.

165 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ತಂಡದ ಅಗ್ರ ಕ್ರಮಾಂಕದ ಆಟಗಾರರು ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿದರು. 18.3 ಓವರ್‌ಗಳಲ್ಲಿ ಮೂರು ವಿಕೆಟ್‌ಗಳಿಗೆ 167 ರನ್ ಗಳಿಸಿ ತಂಡ ಸುಲಭವಾಗಿ ದಡ ಸೇರಿತು. ಮೊದಲ ವಿಕೆಟ್‌ಗೆ ಜೇಸನ್ ರಾಯ್ ಮತ್ತು ವೃದ್ಧಿಮಾನ್ ಸಹಾ 57 ರನ್ ಸೇರಿಸಿದರು. ನಂತರ ಜೇಸನ್ ಮತ್ತು ಕೇನ್ ಕೂಡ 57 ರನ್‌ಗಳ ಜೊತೆಯಾಟ ಆಡಿದರು. ಮುರಿಯದ ನಾಲ್ಕನೇ ವಿಕೆಟ್‌ಗೆ ಕೇನ್ ಹಾಗೂ ಅಭಿಷೇಕ್ ಶರ್ಮಾ 48 ರನ್ ಸೇರಿಸಿದರು.

ನಾಯಕ ಸಂಜು ಸ್ಯಾಮ್ಸನ್ ಅವರ ಅಮೋಘ ಅರ್ಧಶತಕದ ಬಲದಿಂದ ರಾಜಸ್ಥಾನ ರಾಯಲ್ಸ್ ತಂಡ ಸವಾಲಿನ ಮೊತ್ತ ಕಲೆ ಹಾಕಿತ್ತು. ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ತಂಡದ ಸಂಜು ಏಳು ಬೌಂಡರಿ ಮತ್ತು ಮೂರು ಸಿಕ್ಸರ್ ಸಿಡಿಸಿದರು. ಯಶಸ್ವಿ ಜೈಸ್ವಾಲ್ ಹಾಗೂ ಮಹಿಪಾಲ್ ಲೊಮ್ರೊರ್ ಕೂಡ ಉತ್ತಮ ಕಾಣಿಕೆ ನೀಡಿದರು. ಮೊತ್ತ 11 ರನ್ ಆಗಿದ್ದಾಗ ಎವಿನ್ ಲ್ಯುಯಿಸ್ ಅವರನ್ನು ಭುವನೇಶ್ವರ್ ಕುಮಾರ್ ವಾಪಸ್ ಕಳುಹಿಸಿದರು. ಈ ಸಂದರ್ಭದಲ್ಲಿ ಯಶಸ್ವಿ ಜೈಸ್ವಾಲ್ ಅವರ ಜೊತೆಗೂಡಿದ ಸಂಜು ಎರಡನೇ ವಿಕೆಟ್‌ಗೆ 56 ರನ್ ಸೇರಿಸಿದರು. ನಂತರ ಲೊಮ್ರೊರ್ ಅವರೊಂದಿಗೆ ಸಂಜು 84 ರನ್‌ಗಳನ್ನು ಸೇರಿಸಿದರು. ಕೊನೆಯ ಓವರ್‌ನಲ್ಲಿ ಸಿದ್ಧಾರ್ಥ್ ಕೌಲ್‌ಗೆ ಬಲಿಯಾದರು.

ಆರಂಭದಲ್ಲಿ ಮೇಲುಗೈ ಸಾಧಿಸಿದ ಸನ್‌ರೈಸರ್ಸ್ ಬೌಲರ್‌ಗಳಿಗೆ ಯುವ ಬ್ಯಾಟರ್ ಯಶಸ್ವಿ ಜೈಸ್ವಾಲ್ ದಿಟ್ಟ ಉತ್ತರ ನೀಡಿದರು. ಅವರ ಬ್ಯಾಟ್‌ನಿಂದ ಐದು ಬೌಂಡರಿ ಮತ್ತು ಒಂದು ಸಿಕ್ಸರ್ ಸಿಡಿಯಿತು. ಸಂದೀಪ್ ಶರ್ಮಾ ಎಸೆತದಲ್ಲಿ ಚೆಂಡನ್ನು ಸಿಕ್ಸ್‌ಗೆ ಅಟ್ಟಿದ ಅವರು ಮುಂದಿನ ಎಸೆತದಲ್ಲಿ ಔಟ್ ಆದರು. ಈ ವೇಳೆ ಒತ್ತಡ ಹೆಚ್ಚಿಸುವ ತಂತ್ರಕ್ಕೆ ಮೊರೆ ಹೋದ ನಾಯಕ ಕೇನ್ ವಿಲಿಯಮ್ಸನ್ ಅವರು ಲೆಗ್ ಸ್ಪಿನ್ನರ್ ರಶೀದ್ ಖಾನ್ ಅವರನ್ನು ದಾಳಿಗೆ ಇಳಿಸಿದರು. ಇದಕ್ಕೆ ಫಲವೂ ಸಿಕ್ಕಿತು. ಲಿಯಾಮ್ ಲಿವಿಂಗ್‌ಸ್ಟೋನ್ ಕೇವಲ ನಾಲ್ಕು ರನ್ ಗಳಿಸಿ ಮರಳಿದರು. ಕೊನೆಯ ಓವರ್‌ನಲ್ಲಿ ಸನ್‌ರೈಸರ್ಸ್ ಎರಡು ವಿಕೆಟ್ ಉರುಳಿಸಿದರೂ ಲೊಮ್ರೊರ್ ಔಟಾಗದೇ ಉಳಿದರು.


ಜೇಸನ್ ರಾಯ್ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ರಾಜಸ್ಥಾನ ರಾಯಲ್ಸ್ 5ಕ್ಕೆ 164 (20 ಓವರ್)
ಎವಿನ್ ಸಿ ಸಮದ್ ಬಿ ಭುವನೇಶ್ವರ್ 6 (4ಎ, 4X1), ಜೈಸ್ವಾಲ್ ಬಿ ಸಂದೀಪ್ 36 (23ಎ, 4X5, 6X1), ಸ್ಯಾಮ್ಸನ್ ಸಿ ಹೋಲ್ಡರ್ ಬಿ ಕೌಲ್ 82 (57ಎ, 4X7, 6X3), ಲಿವಿಂಗ್‌ಸ್ಟೋನ್ ಸಿ ಸಮದ್ ಬಿ ರಶೀದ್ 4 (6ಎ), ಮಹಿಪಾಲ್ ಔಟಾಗದೆ 29 (28ಎ, 4X1, 6X1), ರಿಯಾನ್ ಸಿ ರಾಯ್ ಬಿ ಕೌಲ್ 0 (1ಎ), ತೆವಾಟಿಯಾ ಔಟಾಗದೆ 0 (1ಎ)
ಇತರೆ (ಬೈ 1, ಲೆಗ್‌ಬೈ 3, ವೈಡ್ 3) 7
ವಿಕೆಟ್ ಪತನ: 1–11 (ಎವಿನ್ ಲೂಯಿಸ್, 1.1), 2–67 (ಯಶಸ್ವಿ ಜೈಸ್ವಾಲ್, 8.4), 3–77 (ಲಿಯಾಮ್ ಲಿವಿಂಗ್‌ಸ್ಟೋನ್, 10.1), 4–161 (ಸಂಜು ಸ್ಯಾಮ್ಸನ್, 19.2), 5–162 (ರಿಯಾನ್ ಪರಾಗ್, 19.4)).
ಬೌಲಿಂಗ್: ಸಂದೀಪ್ ಶರ್ಮಾ 3-0-30-1, ಭುವನೇಶ್ವರ್ ಕುಮಾರ್ 4-1-28-1, ಜೇಸನ್ ಹೋಲ್ಡರ್ 4-0-27-0, ಸಿದ್ಧಾರ್ಥ್ ಕೌಲ್ 4–0–36–2, ರಶೀದ್ ಖಾನ್ 4-0-31-1, ಅಭಿಷೇಕ್ ಶರ್ಮಾ 1–0–8–0

ಸನ್‌ರೈಸರ್ಸ್ ಹೈದರಾಬಾದ್ 3ಕ್ಕೆ 167 (18.3 ಓವರ್)
ರಾಯ್ ಸಿ ಸ್ಯಾಮ್ಸನ್ ಬಿ ಸಕಾರಿಯಾ 60 (42ಎ, 4X8, 6X1), ಸಹಾ ಸ್ಟಂಪ್ಡ್ ಸ್ಯಾಮ್ಸನ್ ಬಿ ಮಹಿಪಾಲ್ 18 (11ಎ, 4X2, 6X1), ವಿಲಿಯಮ್ಸನ್ ಔಟಾಗದೆ 51 (41ಎ, 4X5, 6X1), ಪ್ರಿಯಂ ಸಿ ಮತ್ತು ಬಿ ಮುಸ್ತಫಿಜುರ್ 0 (1ಎ), ಅಭಿಷೇಕ್ ಔಟಾಗದೆ 21 (16ಎ, 4X1, 6X1)
ಇತರೆ (ಬೈ 4, ಲೆಗ್‌ಬೈ 4, ವೈಡ್ 9) 17
ವಿಕೆಟ್ ಪತನ: 1–57 (ವೃದ್ಧಿಮಾನ್ ಸಹಾ, 5.1), 2–114 (ಜೇಸನ್ ರಾಯ್, 11.6). 3–119 (ಪ್ರಿಯಂ ಗರ್ಗ್, 12.6).
ಬೌಲಿಂಗ್: ಜೈದೇವ್ ಉನದ್ಕತ್ 2–0–20–0, ಕ್ರಿಸ್ ಮೊರಿಸ್ 3–0–27–0, ಮುಸ್ತಫಿಜುರ್ ರೆಹಮಾನ್ 3.3–0–26–1, ಮಹಿಪಾಲ್ ಲೊಮ್ರೊರ್ 3–0–22–1, ರಾಹುಲ್ ತೆವಾಟಿಯಾ 3–0–32–0, ಚೇತನ್ ಸಕಾರಿಯಾ 4–0–32–1

ಫಲಿತಾಂಶ: ಸನ್‌ರೈಸರ್ಸ್ ಹೈದರಾಬಾದ್‌ಗೆ 7 ವಿಕೆಟ್‌ಗಳ ಜಯ

ಶಿಷ್ಯನ ಕುರಿತು ಮಾತನಾಡಿ ಭಾವುಕರಾದ ಭೀಮಣ್ಣನವರ

ಬಸವರಾಜ ಎಂದರೆ ಓಟದ ನೆನಪು...

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಬಸವರಾಜ ಇಂಗಳಗಿ ಎಂದರೆ ಮೊದಲು ನೆನಪಾಗುವುದು ಓಟ, ಕೊನೆಯಲ್ಲಿ ನೆನಪಾಗುವುದು ಕೂಡ ಓಟವೇ...’

ತಮ್ಮ ಶಿಷ್ಯನನ್ನು ಹೀಗೆ ನೆನಪಿಸಿಕೊಂಡಿದ್ದು ಧಾರವಾಡದ ಜೆಎಸ್‌ಎಸ್ ಕಾಲೇಜಿನಲ್ಲಿ ದೈಹಿಕ ಶಿಕ್ಷಣ ನಿರ್ದೇಶಕರಾಗಿದ್ದ ಕೆ.ಎಸ್. ಭೀಮಣ್ಣನವರ. ಬಸವರಾಜ 1994–95ರಿಂದ ಮೂರು ವರ್ಷ ಇದೇ ಕಾಲೇಜಿನಲ್ಲಿ ಪದವಿ ಪಡೆದಿದ್ದರು.

‘ದಸರಾ ವಿಭಾಗ ಮಟ್ಟದ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಧಾರವಾಡಕ್ಕೆ ಬಂದಿದ್ದ ಬಸವರಾಜ ಸ್ಥಳೀಯ ಪ್ರಮುಖ ಓಟಗಾರ ಚಿನ್ನಪ್ಪ ಅವರನ್ನು ಹಿಂದಿಕ್ಕಿ ಬಹುಮಾನ ಗೆದ್ದದ್ದು ಆಗಿನ ದೊಡ್ಡ ಸಾಧನೆ ಎನಿಸಿತ್ತು. ಅಂದು ಆತ ಬಣ್ಣಬಣ್ಣದ ಚಡ್ಡಿ ಹಾಗೂ ಬನಿಯನ್ ಧರಿಸಿ ಓಡಿದ ರೀತಿ ಈಗಲೂ ಕಣ್ಣುಗಳಲ್ಲಿ ಕಟ್ಟಿದಂತಿದೆ. ಆಗಿನಿಂದ ಆತನ ಬದುಕಿಗೆ ಹೊಸ ದಾರಿ ಸಿಕ್ಕಿತು. ಸ್ಪರ್ಧೆ ಗೆದ್ದ ಬಳಿಕ ಕ್ರೀಡಾ ಉಡುಪು ಕೊಡಿಸಿದ್ದೆ’ ಎಂದು ಭೀಮಣ್ಣನವರ ನೆನಪಿಸಿಕೊಂಡರು.

‘ಆಗ ಕಾಲೇಜಿನ ಪ್ರಾಚಾರ್ಯರಾಗಿದ್ದ ವಜ್ರಕುಮಾರ್ ಅವರು ಕ್ರೀಡಾಪಟುಗಳಿಗೆ ಬಹಳಷ್ಟು ಪ್ರೋತ್ಸಾಹ ನೀಡುತ್ತಿದ್ದರು. ಅದರಲ್ಲಿಯೂ ಗ್ರಾಮೀಣ ಪ್ರದೇಶದಿಂದ ಬಂದವರಿಗೆ ಹೆಚ್ಚಿನ ಆದ್ಯತೆ ಕೊಡುತ್ತಿದ್ದರು’ ಎಂದರು.


ಬಸವರಾಜ ಇಂಗಳಗಿ

‘ಇಟಲಿಯ ಟೊರಿನೊದಲ್ಲಿ ನಡೆದಿದ್ದ 25ನೇ ಐಎಎಎಫ್ ವಿಶ್ವ ಕ್ರಾಸ್ ಕಂಟ್ರಿ ಚಾಂಪಿಯನ್‌ಷಿಪ್‌ಗೆ ಭಾರತ ತಂಡದ ಟ್ರಯಲ್ಸ್‌ಗೆ ಆಯ್ಕೆಯಾಗಿದ್ದ. ಮಾಹಿತಿಯ ಕೊರತೆಯಿಂದಾಗಿ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳದೆ ವಾಪಸ್ ಬಂದಿದ್ದ. ಅಲ್ಲಿ ಅವಕಾಶ ಸಿಕ್ಕಿದ್ದರೆ ಬಸವರಾಜ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಭಾರತಕ್ಕೆ ಪದಕ ತಂದುಕೊಡುವ ಸಾಮರ್ಥ್ಯ ಹೊಂದಿದ್ದ. ಅಂತರ ವಿಶ್ವವಿದ್ಯಾಲಯ ಮಟ್ಟದ ಅನೇಕ ಟೂರ್ನಿಗಳಲ್ಲಿ ಅದನ್ನು ಸಾಬೀತು ಮಾಡಿದ್ದಾನೆ’ ಎಂದು ಭೀಮಣ್ಣನವರ ನೆನಪಿಸಿಕೊಂಡರು.

ಅಂತರರಾಷ್ಟ್ರೀಯ ಮಾಜಿ ಅಥ್ಲೀಟ್ ವಿಲಾಸ ನೀಲಗುಂದ ‘ನಾನು ಜೆಎಸ್‌ಎಸ್ ಕಾಲೇಜು ಸೇರಿದಾಗ ಬಸವರಾಜ ಅವರು ರಾಷ್ಟ್ರೀಯ ಮಟ್ಟದ ಕ್ರಾಸ್‌ಕಂಟ್ರಿಯಲ್ಲಿ ದೊಡ್ಡ ಹೆಸರು ಮಾಡಿದ್ದರು. ನಾವಿಬ್ಬರು ಒಂದೇ ಜಿಲ್ಲೆಯವರಾದ ಕಾರಣ ಉತ್ತಮ ಬಾಂಧವ್ಯವಿತ್ತು. ಆಗಷ್ಟೇ ಸ್ಪರ್ಧಾತ್ಮಕ ಅಥ್ಲೆಟಿಕ್ಸ್‌ಗೆ ಬಂದಿದ್ದ ನನಗೆ ಅವರ ಶಿಸ್ತು ಹಾಗೂ ಬದ್ಧತೆ ಸ್ಫೂರ್ತಿಯಾಗಿತ್ತು’ ಎಂದರು.

ಬಸವರಾಜ ಇಂಗಳಗಿ ನಿಧನ

ಗದಗ: ರಾಷ್ಟ್ರ ಮಟ್ಟದ ಗುಡ್ಡಗಾಡು (ಕ್ರಾಸ್‌ಕಂಟ್ರಿ) ಓಟಗಾರ, ರೈಲ್ವೆ ಉದ್ಯೋಗಿ ಶಿರಹಟ್ಟಿಯ ಬಸವರಾಜ ಇಂಗಳಗಿ (47) ಸೋಮವಾರ ಹೃದಯಾಘಾತದಿಂದ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಹಾಗೂ ತಾಯಿ ಇದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಬೆಳಿಗ್ಗೆ 10.30ಕ್ಕೆ ಶಿರಹಟ್ಟಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಆಪ್ತರು ತಿಳಿಸಿದ್ದಾರೆ.

ಗದಗ ರೈಲ್ವೆ ಕಚೇರಿಯ ಎಂಜಿನಿಯರಿಂಗ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವರು ಲಖನೌದಲ್ಲಿ ನಡೆದಿದ್ದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ಕ್ರಾಸ್ ಕಂಟ್ರಿ ಸ್ಪರ್ಧೆಯಲ್ಲಿ ಚಿನ್ನದ ಪದಕ ಜಯಿಸಿದ್ದರು.

ರಾಜ್ಯ ಈಜು ಚಾಂಪಿಯನ್‌ಷಿಪ್: ಮಿಂಚಿದ ರಿಧಿಮಾ, ನೀನಾ; ರಿಲೆಯಲ್ಲಿ ಬಿಎಸಿಗೆ ಚಿನ್ನ

ಶ್ರೀಹರಿ ನಟರಾಜ್ ‘ಡಬಲ್’ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫ್ರೀಸ್ಟೈಲ್ ಮತ್ತು ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಡಾಲ್ಫಿನ್ ಈಜು ಕೇಂದ್ರದ ಶ್ರೀಹರಿ ನಟರಾಜ್ ದಾಖಲೆಯೊಂದಿಗೆ ಚಿನ್ನ ಗೆದ್ದುಕೊಂಡರು. ಬಾಲಕಿಯರ ವಿಭಾಗದ ಬ್ಯಾಕ್‌ಸ್ಟ್ರೋಕ್ ಮತ್ತು ಬಟರ್‌ಫ್ಲೈನಲ್ಲಿ ಕ್ರಮವಾಗಿ ಬಸವನಗುಡಿ ಈಜುಕೇಂದ್ರದ ರಿಧಿಮಾ ವೀರೇಂದ್ರ ಕುಮಾರ್ ಹಾಗೂ ಡಾಲ್ಫಿನ್ ಈಜುಕೇಂದ್ರದ ನೀನಾ ವೆಂಕಟೇಶ್ ದಾಖಲೆ ಬರೆದರು.


ರಾಜ್ಯ ಈಜು ಸಂಸ್ಥೆಯ ಆಶ್ರಯದಲ್ಲಿ ಬಸವನಗುಡಿಯ ಪಾಲಿಕೆ ಈಜು-ಕೇಂದ್ರದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಶ್ರೀಹರಿ 200 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ 2 ನಿಮಿಷ 6.37 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಕೂಟ ದಾಖಲೆ ಬರೆದರು. 50 ಮೀ ಫ್ರೀಸ್ಟೈಲ್‌ನಲ್ಲಿ 51.36 ಸೆಕೆಂಡುಗಳ ಸಾಧನೆಯೊಂದಿಗೆ ದಾಖಲೆ ನಿರ್ಮಿಸಿದರು.


ಶ್ರೀಹರಿ ನಟರಾಜ್ ಅವರ ಈಜಿನ ಭಂಗಿ – ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

ಐದನೇ ದಿನದ ಫಲಿತಾಂಶಗಳು: ಪುರುಷರು: 50 ಮೀ ಬ್ರೆಸ್ಟ್‌ಸ್ಟ್ರೋಕ್: ಪೃಥ್ವಿಕ್ ಡಿ.ಎಸ್ (ಬಸವನಗುಡಿ)–1. ಕಾಲ: 31.01, ವಿಕ್ರಂ ಗೌಡ (ಬಸವನಗುಡಿ)–2, ಕಾರ್ತಿಕ್ ರವಿ (ಬೆಂಗಳೂರು ಈಜು ಸಂಶೋಧನಾ ಕೇಂದ್ರ-ಬಿಎಸ್‌ಆರ್‌ಸಿ)–3; 200 ಮೀ ಬ್ರೆಸ್ಟ್‌ಸ್ಟ್ರೋಕ್: ಶ್ರೀಹರಿ ನಟರಾಜ್ (ಡಾಲ್ಫಿನ್)–1. ಕಾಲ: 2:06.37 (ಕೂಟ ದಾಖಲೆ), ಶಿವ ಎಸ್ (ಬಸವನಗುಡಿ)–2, ಜತಿನ್ ಬಿ (ಬಿಎಸ್‌ಆರ್‌ಸಿ)–3; 100 ಮೀ ಫ್ರೀಸ್ಟೈಲ್: ಶ್ರೀಹರಿ ನಟರಾಜ್ (ಡಾಲ್ಫಿನ್)–1. ಕಾಲ: 51.36 (ಕೂಟ ದಾಖಲೆ), ತನಿಶ್ ಜಾರ್ಜ್ ಮ್ಯಾಥ್ಯೂ–2, ರಾಜ್ ವಿನಾಯಕ್–3 (ಇಬ್ಬರೂ ಬಸವನಗುಡಿ); 50 ಮೀ ಬಟರ್‌ಫ್ಲೈ: ತನಿಶ್ ಜಾರ್ಜ್ ಮ್ಯಾಥ್ಯೂ–1. ಕಾಲ: 26.05, ಪೃಥ್ವಿ –2 (ಇಬ್ಬರೂ ಬಸವನಗುಡಿ), ಆದಿತ್ಯ ಭಂಡಾರಿ (ಜೈಹಿಂದ್, ಮಂಗಳೂರು)–3. ಮಹಿಳೆಯರ 200 ಮೀ ಬ್ಯಾಕ್‌ಸ್ಟ್ರೋಕ್: ದಾಮಿನಿ ಗೌಡ (ಬಸವನಗುಡಿ)–1. ಕಾಲ: 2:37.96, ಭೂಮಿಕಾ ಕೇಸರಕರ್ (ಬಿಎಸ್‌ಆರ್‌ಸಿ)–2, ಕ್ಷಿತಿಜಾ (ಬಸವನಗುಡಿ)–3; 100 ಮೀ ಫ್ರೀಸ್ಟೈಲ್: ಮಧುರಾ (ಬಸವನಗುಡಿ)–1. ಕಾಲ: 1:03.09, ಪ್ರೀತಾ (ಡಿಕೆವಿ)–2, ಸುನಯನಾ ಮಂಜುನಾಥ (ಬಸವನಗುಡಿ)–3; 50 ಮೀ ಬಟರ್‌ಫ್ಲೈ: ದಾಮಿನಿ ಗೌಡ–1. ಕಾಲ: 31.69, ಮಯೂರಿ ಲಿಂಗರಾಜ್–2, ಸುನಯನಾ ಮಂಜುನಾಥ್–3 (ಮೂವರೂ ಬಸವನಗುಡಿ). ಬಾಲಕರ 50 ಮೀ ಬ್ರೆಸ್ಟ್‌ಸ್ಟ್ರೋಕ್, ಗುಂಪು–1: ವಿಧಿತ್ ಶಂಕರ್ (ಡಾಲ್ಫಿನ್)–1. ಕಾಲ: 30.75, ಪ್ರಣವ್ ಭಾರತಿ–2, ಅದಿತ್ ಸ್ಮರಣ್–3 (ಇಬ್ಬರೂ ಬಸವನಗುಡಿ); ಗುಂಪು2: ಸೂರ್ಯ ಜ್ಯೋತಪ್ಪ (ಬಸನವನಗುಡಿ)–1. ಕಾಲ: 33.57, ಸುಯೋಗ್ ಗೌಡ (ನೆಟ್ಟಕಲ್ಲಪ್ಪ ಈಜುಕೇಂದ್ರ)–2, ಕೃಷ್ಣ ಜಗದಾಳೆ (ಬಸವನಗುಡಿ)–3; 200 ಮೀ ಬ್ಯಾಕ್‌ಸ್ಟ್ರೋಕ್, ಗುಂಪು–1: ಉತ್ಕರ್ಷ್ ಸಂತೋಷ್ (ಬಸವನಗುಡಿ)–1. ಕಾಲ: 2:07.15, ಅಕ್ಷಯ ಶೇಟ್–2, ಮನನ್–3 (ಇಬ್ಬರೂ ಬಿಎಸ್‌ಆರ್‌ಸಿ); ಗುಂಪು2: ಯಶ್ ಕಾರ್ತಿಕ್ (ಬಸವನಗುಡಿ)–1. ಕಾಲ: 2:28.78, ದಿಗಂತ್ (ಡಾಲ್ಫಿನ್)–2, ಅನಂತಜೀತ್ ಮುಖರ್ಜಿ (ಬಿಎಸ್‌ಆರ್‌ಸಿ)–3; 100 ಮೀ ಫ್ರೀಸ್ಟೈಲ್, ಗುಂಪು1: ಸಂಭವ್ (ಬಿಎಸ್‌ಆರ್‌ಸಿ)–1. ಕಾಲ: 52.10, ತರುಣ್ ಅರುಣ್ ಗೌಡ–2, ಸಂಜೀತ್–3 (ಇಬ್ಬರೂ ಬಸವನಗುಡಿ); ಗುಂಪು2: ಸೂರ್ಯ ಜ್ಯೋತಪ್ಪ (ಬಸವನಗುಡಿ)–1. ಕಾಲ: 58.75, ಚಿಂತನ್ ಶೆಟ್ಟಿ (ಮಂಗಳ ಈಜುಕೇಂದ್ರ)–2, ಅನಂತಜೀತ್ ಮುಖರ್ಜಿ (ಬಿಎಸ್‌ಆರ್‌ಸಿ)–3; 50 ಮೀ ಬಟರ್‌ಫ್ಲೈ: ಸಂಭವ್ (ಬಿಎಸ್‌ಆರ್‌ಸಿ)–1. ಕಾಲ: 26.02, ನಯನ್ ವಿಘ್ನೇಶ್ (ನೆಟ್ಟಕಲ್ಲಪ್ಪ ಈಜುಕೇಂದ್ರ)–2, ಸಾಯಿ ಸಮರ್ಥ್ (ವಿಜಯನಗರ ಈಜುಕೇಂದ್ರ)–3; ಗುಂಪು2: ಚಿಂತನ್ ಶೆಟ್ಟಿ (ಮಂಗಳ)–1. ಕಾಲ: 28.63, ನಿರಂಜನ್ ಕಾರ್ತಿಕ್ (ಬಿಎಸ್‌ಆರ್‌ಸಿ)–2, ಸ್ಟೀವ್ ಜೆಫ್ (ಡಾಲ್ಫಿನ್)–3; 4 x 100 ಮೀ ಫ್ರೀಸ್ಟೈಲ್, ಗುಂಪು1: ಬಸವನಗುಡಿ ಈಜುಕೇಂದ್ರ (3:40.03)–1 (ಕೂಟ ದಾಖಲೆ), ಬಸವನಗುಡಿ ಬಿ–2, ಡಾಲ್ಫಿನ್–3; 4 x 200 ಫ್ರೀಸ್ಟೈಲ್: ಡಾಲ್ಫಿನ್–1, ಬಸವನಗುಡಿ–2, ಬಸವನಗುಡಿ ಬಿ–3; ಬಾಲಕಿಯರ 50 ಮೀ ಬ್ರೆಸ್ಟ್‌ಸ್ಟ್ರೋಕ್: ಅನ್ವಿತಾ ಗೌಡ (ಡಾಲ್ಫಿನ್)–1. ಕಾಲ: 36.04, ಸಾನ್ವಿ ರಾವ್ (ಬಿಎಸ್‌ಆರ್‌ಸಿ)–2, ಸಮರ ಚಾಕೊ (ಸ್ವಿಮ್ ಲೈಫ್)–3; ಗುಂಪು2: ಮಾನವಿ ವರ್ಮಾ (ಡಾಲ್ಫಿನ್)–1. ಕಾಲ: 36.45, ವಿಹಿತಾ ನಯನ (ಬಸವನಗುಡಿ)–2, ಲಿನೇಶ್ಯಾ (ಬಿಎಸ್‌ಆರ್‌ಸಿ)–3; 200 ಮೀ ಬ್ಯಾಕ್‌ಸ್ಟ್ರೋಕ್, ಗುಂಪು1: ಋತು ಭರಮರಡ್ಡಿ (ಬಸವನಗುಡಿ)–1. ಕಾಲ: 2:36.1, ನೈಶಾ ಶೆಟ್ಟಿ–2, ಇಮಾನಿ ಜಾಧವ್–3 (ಇಬ್ಬರೂ ಡಾಲ್ಫಿನ್); ಗುಂಪು2: ರಿಧಿಮಾ ವೀರೇಂದ್ರ ಕುಮಾರ್ (ಬಸವನಗುಡಿ)–1. ಕಾಲ: 2:27.74 (ಕೂಟ ದಾಖಲೆ), ಶಾಲಿನಿ ದೀಕ್ಷಿತ್ (ಡಾಲ್ಫಿನ್)–2, ಸುನಿಧಿ (ಸ್ವಿಮ್ಮರ್ಸ್ ಕ್ಲಬ್, ಬೆಳಗಾವಿ)–3; 100 ಮೀ ಫ್ರೀಸ್ಟೈಲ್, ಗುಂಪು1: ನೀನಾ ವೆಂಕಟೇಶ್ (ಡಾಲ್ಫಿನ್)–1. ಕಾಲ: 1:00.27, ಲತೀಶಾ ಮಂದಾನ–2, ಇಂಚರ ಬಿ–3 (ಇಬ್ಬರೂ ಜಿಎಎಫ್‌ಆರ್‌ಎವೈ); ಗುಂಪು2: ರಿಧಿಮಾ ವೀರೇಂದ್ರಕುಮಾರ್ –1. ಕಾಲ: 1:02.22, ಶಿರೀನ್–2 (ಇಬ್ಬರೂ ಬಸವನಗುಡಿ), ಶಾಲಿನಿ ದೀಕ್ಷಿತ್ (ಡಾಲ್ಫಿನ್)–3; 50 ಮೀ ಬಟರ್‌ಫ್ಲೈ: ನೀನಾ ವೆಂಕಟೇಶ್–1. ಕಾಲ: 29.0 (ಕೂಟ ದಾಖಲೆ), ನೈಶಾ ಶೆಟ್ಟಿ–2 (ಇಬ್ಬರೂ ಡಾಲ್ಫಿನ್)–2, ಎ.ಜೆಡಿಡಾ (ಡಿಕೆವಿ)–3; ಗುಂಪು2: ರಿಷಿಕಾ ಮಾಂಗ್ಲೆ (ವಿಜಯನಗರ)–1. ಕಾಲ: 29.87, ಮಾನವಿ ವರ್ಮಾ (ಬಸವನಗುಡಿ)–2, ಮೋನ್ಯಾ ಕೌಸುಮಿ (ನೆಟ್ಟಕಲ್ಲಪ್ಪ ಈಜುಕೇಂದ್ರ)–3; 4 x 100 ಫ್ರೀಸ್ಟೈಲ್: ಡಾಲ್ಫಿನ್–1, ಡಾಲ್ಫಿನ್ ಬಿ–2, ಬಸವನಗುಡಿ–3; 4 x 200 ಫ್ರೀಸ್ಟೈಲ್: ಡಾಲ್ಫಿನ್–1, ಬಸವನಗುಡಿ–2, ವಿಜಯನಗರ–3.

ಟೆಸ್ಟ್: ಮೋಯಿನ್ ವಿದಾಯ

ಲಂಡನ್ (ಎಎಫ್‌ಪಿ): ಇಂಗ್ಲೆಂಡ್‌ನ ಆಲ್‌ರೌಂಡರ್ ಮೋಯಿನ್ ಅಲಿ ಟೆಸ್ಟ್ ಕ್ರಿಕೆಟ್‌ಗೆ ಸೋಮವಾರ ನಿವೃತ್ತಿ ಘೋಷಿಸಿದ್ದಾರೆ. ಸೀಮಿತ ಓವರ್‌ಗಳ ಪಂದ್ಯಗಳತ್ತ ಹೆಚ್ಚು ಗಮನಹರಿಸುವುದಕ್ಕಾಗಿ ಈ ನಿರ್ಧಾರ ತೆಗೆದುಕೊಂಡಿರುವುದಾಗಿ ಅವರು ತಿಳಿಸಿದ್ದಾರೆ.


ಮೋಯಿನ್ ಅಲಿ

‘ಆಡುವ ಬಯಕೆ ಇರುವವರೆಗೂ ಕಣಕ್ಕಿಳಿಯುತ್ತೇನೆ. ಕ್ರಿಕೆಟ್ ಅನ್ನು ಆಸ್ವಾದಿಸುತ್ತೇನೆ. ಟೆಸ್ಟ್ ಮಾದರಿ ಅದ್ಭುತವಾದದ್ದು. ಉತ್ತಮ ಲಯದಲ್ಲಿದ್ದಾಗ ಎಲ್ಲ ಮಾದರಿಗಳಿಗಿಂತ ಇದು ಬಹಳ ಉತ್ತಮವಾಗಿರುತ್ತದೆ’ ಎಂದು ಮೋಯಿನ್ ಇಎಸ್‌ಪಿಎನ್ ಕ್ರಿಕ್‌ಇನ್ಫೊಗೆ ತಿಳಿಸಿದ್ದಾರೆ. 2014ರಲ್ಲಿ ಹೆಡಿಂಗ್ಲೆಯಲ್ಲಿ ನಡೆದ ಶ್ರೀಲಂಕಾ ಎದುರಿನ ಪಂದ್ಯದ ಮೂಲಕ ಅವರು ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದರು.

ಮೋಯಿನ್ ಅಲಿ ಟೆಸ್ಟ್ ಸಾಧನೆ	
ಪಂದ್ಯ	64
ರನ್	2,914
ಗರಿಷ್ಠ	155*
ಬ್ಯಾಟಿಂಗ್ ಸರಾಸರಿ	28.29
ಶತಕ	5
ಗಳಿಸಿದ ವಿಕೆಟ್	195
ಶ್ರೇಷ್ಠ ಬೌಲಿಂಗ್ (ಇನಿಂಗ್ಸ್)	53ಕ್ಕೆ6

ಮಹಿಳಾ ಬಿಗ್‌ಬ್ಯಾಷ್‌ಗೆ ಶಫಾಲಿ

ಸಿಡ್ನಿ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ಯುವ ಬ್ಯಾಟರ್ ಶಫಾಲಿ ವರ್ಮಾ ಮತ್ತು ಎಡಗೈ ಸ್ಪಿನ್ನರ್ ರಾಧಾ ಯಾದವ್ ಅವರು ಮಹಿಳೆಯರ ಬಿಗ್ ಬ್ಯಾಷ್ ಲೀಗ್‌ಗೆ ಪದಾರ್ಪಣೆ ಮಾಡಲು ಸಜ್ಜಾಗಿದ್ದಾರೆ. ಎರಡು ಬಾರಿಯ ಚಾಂಪಿಯನ್ ಸಿಡ್ನಿ ಸಿಕ್ಸರ್ ತಂಡದ ಪರ ಅವರಿಬ್ಬರು ಆಡಲಿದ್ದಾರೆ ಎಂದು ಸಂಘಟಕರು ಸೋಮವಾರ ಖಚಿತಪಡಿಸಿದ್ದಾರೆ.

ಏಳನೇ ಆವೃತ್ತಿಯ ಮೊದಲ ಪಂದ್ಯದಲ್ಲಿ ಸಿಡ್ನಿ ಸಿಕ್ಸರ್ ತಂಡವು ಮೆಲ್ಬರ್ನ್ ಸ್ಟಾರ್ಸ್ ಎದುರು ಸೆಣಸಲಿದೆ.

ಈ ಪಂದ್ಯ ಅಕ್ಟೋಬರ್ 14ರಂದು ಹೋಬರ್ಟ್‌ನಲ್ಲಿ ನಡೆಯಲಿದೆ.